ಮಂಗಳೂರು
ಶನಿವಾರ, 13 ಜೂನ್ 2026
ಸಂಪುಟ 48, ಸಂಚಿಕೆ 86 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಟ್ರಂಪ್ ಹೇಳಿಕೆ ನಂತರ ತೈಲ ಅಗ್ಗ, ಸೆನ್ಸೆಕ್ಸ್ ಜಿಗಿತ |೦೨
ಮೋದಿ ಫ್ರಾನ್ಸ್ ಪ್ರವಾಸ ಇಂದು |೦೨
ಕ್ರಿಕೆಟ್‌ಗೆ ವಿಲಿಯಮ್ಸನ್ ವಿದಾಯ |೧೧

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಕೃತ್ತಿಕೆ

ದಿನದ ಮಾತು

ಸಮಸ್ಯೆಗಳಿಂದ ನುಣುಚಿಕೊಳ್ಳದೆ ಧೈರ್ಯದಿಂದ ಎದುರಿಸಿದಾಗ ಅವು ಚಿಕ್ಕದಾಗಿ ತೋರುತ್ತವೆ.

▲ ರಾಮಕೃಷ್ಣ ಪರಮಹಂಸ

ವಿಷ ಮಂಥನ

ಪೂರ್ಣ ಪರಿಪೂರ್ಣ

• ಪೂರ್ಣಪ್ರಜ್ಞ ಬೇಳೂರು

• ಪುಟ ೬

ಕಿರುಸುದ್ದಿ

ನಾವಿಕರ ಸಾವು: ಅಮೆರಿಕಕ್ಕೆ ಭಾರತ ಖಡಕ್ ಸಂದೇಶ

• **ಹೊಸದಿಲ್ಲಿ:** ಒಮಾನ್ ಕರಾವಳಿಯ ಬಳಿ ಭಾರತೀಯ ನಾವಿಕರನ್ನು ಹೊಂದಿದ್ದ ಮತ್ತೊಂದು ವಾಣಿಜ್ಯ ಹಡಗಿನ ಮೇಲೆ ದಾಳಿ ನಡೆದ ಹಿನ್ನೆಲೆಯಲ್ಲಿ ಭಾರತ ಸರ್ಕಾರ ಅಮೆರಿಕದ ಕಾರ್ಯನಿರ್ವಾಹಕ ರಾಯಭಾರಿ ಜೇಸನ್ ಮಿಕ್ಸ್ ಅವರನ್ನು ಈ ವಾರದಲ್ಲೇ ಎರಡನೇ ಬಾರಿ ವಿದೇಶಾಂಗ ಸಚಿವಾಲಯಕ್ಕೆ ಕರೆಸಿಕೊಂಡು ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದೆ.

• ಪುಟ ೨

ಭಾರತ ವಿರುದ್ಧ ಯುರೋಪ್ ಶಸ್ತ್ರಾಸ್ತ್ರ ಬಳಕೆ!

• ಪುಟ ೨

ಕೇರಳಕ್ಕೆ ಡಾ.ಮೋಹನ್ ಭಾಗವತ್ ಆಗಮನ

• ಪುಟ ೨

ಅಮರನಾಥ ಯಾತ್ರೆ: ಬಹು ಹಂತದ ಭದ್ರತೆ

• ಪುಟ ೨

ಟಿವಿ, ರೇಡಿಯೋ ಏಕ ನಿಯಂತ್ರಣ ಚೌಕಟ್ಟಿಗೆ

• ಪುಟ ೨

ಭಾಗ್ವತ್ ಇದ್ದ ರೈಲಿಗೆ ಕಲ್ಲೆಸೆತ: ಇಬ್ಬರ ಸೆರೆ

• ಪುಟ ೨

ಮಗು ಕೊಲೆ ಕೇಸ್: 3 ಪೊಲೀಸರ ಅಮಾನತು

• ಪುಟ ೫



ತಾವರೆಯ ಬಲವರ್ಧನೆ

ಸತ್ಯವಾಯ್ತು ಅಟಲ್ ಭವಿಷ್ಯವಾಣಿ

• ಪುಟ ೨

ಸುದ್ದಿ ಸಮಗ್ರ

ಯೋಜನೆಗಳಿಗೆ ಅನುಮತಿ, ಅನುದಾನ: ಸಿಎಂ ಡಿಕೆಶಿ ಮನವಿ

ಕೇಂದ್ರಕ್ಕೆ ಜಲ ಪ್ರಸ್ತಾವನೆ

• **ಹೊಸದಿಲ್ಲಿ/ಬೆಂಗಳೂರು:** ಕರ್ನಾಟಕ ರಾಜ್ಯದ ಪ್ರಮುಖ ನೀರಾವರಿ ಯೋಜನೆಗಳಾದ ಮೇಕೆದಾಟು, ಕೃಷ್ಣಾ ಮೇಲ್ದಂಡೆ, ಭದ್ರಾ ಮೇಲ್ದಂಡೆ, ಮಹದಾಯಿ ಯೋಜನೆಗಳಿಗೆ ಅನುಮತಿ ಜತೆ ಅನುದಾನ ನೀಡಬೇಕು ಎಂದು ಸಿಎಂ ಡಿ.ಕೆ. ಶಿವಕುಮಾರ್ ಅವರು ಕೇಂದ್ರ ಜಲಶಕ್ತಿ ಸಚಿವರಿಗೆ ಮನವಿ ಮಾಡಿದ್ದಾರೆ.

ಗುರುವಾರ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಮುಖ್ಯಮಂತ್ರಿ ಡಿಕೆಶಿ ಭೇಟಿ ಮಾಡಿ ಮನವಿ ಸಲ್ಲಿಸಿದ್ದರು. ಶುಕ್ರವಾರ ಕೇಂದ್ರ ಜಲಶಕ್ತಿ ಸಚಿವರನ್ನು ಭೇಟಿ ಮಾಡಿ ನೀರಾವರಿ ಯೋಜನೆಗಳ ಜಾರಿಗೆ ಸಹಾಯ ಹಾಗೂ ಸಹಕಾರ ಕೋರಿದರು.



ಹೊಸದಿಲ್ಲಿ ಪ್ರವಾಸದಲ್ಲಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಶುಕ್ರವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿ ರಾಜ್ಯದ ಪೊಲೀಸ್ ಇಲಾಖೆಗೆ ಮೂಲಸೌಕರ್ಯ ಒದಗಿಸಲು ಸಹಾಯ, ಸಹಕಾರ ನೀಡುವಂತೆ ಮನವಿ ಮಾಡಿದರು.

> ನ್ಯಾಯ ನೀಡುವ ಸ್ಥಾನದಲ್ಲಿ ಕೂತಿರುವ ಜಲಶಕ್ತಿ ಸಚಿವರು ರಾಜ್ಯಕ್ಕೆ ಅನ್ಯಾಯ ಮಾಡುವುದಿಲ್ಲ ಎಂಬ ವಿಶ್ವಾಸ ನಮಗಿದೆ.
>
> ■ ಡಿ.ಕೆ.ಶಿವಕುಮಾರ್, ಸಿಎಂ

ಮುಖ್ಯಮಂತ್ರಿಗಳ ಪ್ರಸ್ತಾವನೆಯ ಪ್ರಮುಖ ಅಂಶಗಳು

1. ಮೇಕೆದಾಟು ಯೋಜನೆಗೆ ಅನುಮತಿ ಕೊಡಿ

ಸುಪ್ರೀಂ ಕೋರ್ಟ್ 13.11.2025 ರಂದು ತಮಿಳುನಾಡು ರಾಜ್ಯದ ವಿವಿಧ ಅರ್ಜಿಗಳನ್ನು ವಜಾಗೊಳಿಸಿದೆ ಮತ್ತು ಮೇಕೆದಾಟು ಯೋಜನೆಯ ಅನುಮತಿಯ ಬಗ್ಗೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಮತ್ತು ಕೇಂದ್ರ ಜಲ ಆಯೋಗ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಅಭಿಪ್ರಾಯಪಟ್ಟಿದೆ. ಸಿಡಬ್ಲ್ಯುಎಂಎ ಈಗಾಗಲೇ ಯೋಜನೆಯನ್ನು ಮೌಲ್ಯಮಾಪನ ಮಾಡಲು ಸಿಡಬ್ಲ್ಯುಸಿಗೆ ಸೂಚಿಸಿರುವುದರಿಂದ, ಈ ಯೋಜನೆಗೆ ಶೀಘ್ರ ಅನುಮತಿ ಸಿಗುವಂತೆ ನೋಡಿಕೊಳ್ಳಬೇಕು.

2. ಕೃಷ್ಣಾ ನ್ಯಾಯಾಧಿಕರಣ ಗೆಜೆಟ್ ಅಧಿಸೂಚನೆ

ಕೃಷ್ಣಾ ನದಿ ನೀರು ಹಂಚಿಕೆಗೆ ಸಂಬಂಧಿಸಿದಂತೆ, ಕೃಷ್ಣಾ ನೀರು ವಿವಾದ ನ್ಯಾಯಾಧಿಕರಣ- ಐ ತೀರ್ಪು ನೀಡಿ ಒಂದು ದಶಕಕ್ಕೂ ಹೆಚ್ಚು ಕಾಲ ಕಳೆದಿದ್ದರೂ, ಕೇಂದ್ರ ಸರ್ಕಾರವು ಇನ್ನು ಸಹ ಈ ತೀರ್ಪನ್ನು ಗೆಜೆಟ್‌ನಲ್ಲಿ ಅಧಿಸೂಚಿಸಿಲ್ಲ. ನಮ್ಮ ಯೋಜನೆಯನ್ನು ಮುಂದುವರಿಸಲು ಹಾಗೂ ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳಲು ಕೇಂದ್ರದ ಬೆಂಬಲದ ಅಗತ್ಯವಿದೆ.

3. ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರದ ನೆರವು

ಭದ್ರಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರವು 2023-24ರ ಕೇಂದ್ರ ಬಜೆಟ್‌ನಲ್ಲಿ 5,300 ಕೋಟಿ ರೂ.ಗಳ ನೆರವನ್ನು ಘೋಷಿಸಿತ್ತು. ಆದರೆ, 3 ವರ್ಷ ಕಳೆದರೂ ರಾಜ್ಯಕ್ಕೆ ಹಣಕಾಸಿನ ನೆರವು ಬಿಡುಗಡೆಯಾಗಿಲ್ಲ. ಈ ಯೋಜನೆಯ 21,167.93 ಕೋಟಿ ರೂ.ಗಳ ಪರಿಷ್ಕೃತ ವೆಚ್ಚದ ಅಂದಾಜಿನ ಪ್ರಸ್ತುತ ಪ್ರಸ್ತಾವನೆಯನ್ನು ಮೌಲ್ಯಮಾಪನ ಮಾಡಿದೆ. PMKSY&AIBP ಯೋಜನೆಯಲ್ಲಿ ಈ ಯೋಜನೆಗೆ ಕೇಂದ್ರದ ನೆರವನ್ನು ಶೀಘ್ರ ಬಿಡುಗಡೆ ಮಾಡಬೇಕು. ➡ಪುಟ ೪

ಖಾಸಗಿ ರೆಸಾರ್ಟ್‌ಗೆ ಕಾಂಗ್ರೆಸ್ ಶಾಸಕರು

ವಿಧಾನ ಪರಿಷತ್ ಚುನಾವಣೆ ಹಿನ್ನೆಲೆಯಲ್ಲಿ ಕಾಂಗ್ರೆಸ್‌ನ ಎಲ್ಲ ಶಾಸಕರನ್ನು ಬಿಡದಿ ಬಳಿಯ ಖಾಸಗಿ ರೆಸಾರ್ಟ್‌ಗೆ ಬರುವಂತೆ ಪಕ್ಷವು ಸೂಚನೆ ನೀಡಿದೆ. ಜೂ.16ರಂದು ಮಂಗಳವಾರ ಸಂಜೆ 6 ಗಂಟೆಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಶಾಸಕಾಂಗ ಪಕ್ಷದ ಸಭೆ ನಡೆಯಲಿದೆ. ಅಂದು ಜೂ.18ರಂದು ವಿಧಾನಪರಿಷತ್ ಚುನಾವಣೆಯಲ್ಲಿ ಯಾವ ಶಾಸಕರು ಯಾರಿಗೆ ಮತ ಹಾಕಬೇಕು, ಅಡ್ಡ ಮತದಾನದ ಬೀತಿ ಇರುವ ಕುರಿತು ಹಾಗೂ ಕಾಂಗ್ರೆಸ್ ಪಕ್ಷದ ಐದನೇ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳುವ ಸಂಬಂಧ ರಣತಂತ್ರ ನಡೆಯಲಿದೆ. ಈ ಸಭೆಯಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ, ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಭಾಗವಹಿಸಲಿದ್ದಾರೆ.

ಭದ್ರಾ ಯೋಜನೆಗೆ 5,300 ಕೋಟಿ ಕೊಡಿ: ಡಿಕೆಶಿ

• ಪುಟ ೪

ಬೆಳ್ಳಿ ಖಡ್ಗ ಅರ್ಪಿಸಿದ ತ.ನಾಡು ಮುಖ್ಯಮಂತ್ರಿ

ಮೂಕಾಂಬಿಕೆ ದರ್ಶನ ಪಡೆದ ಸಿಎಂ ವಿಜಯ್



ತಮಿಳುನಾಡು ನೂತನ ಮುಖ್ಯಮಂತ್ರಿ ಜೋಸೆಫ್ ವಿಜಯ್ ಶುಕ್ರವಾರ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದರು.

• **ಬೈಂದೂರು:** ತಮಿಳುನಾಡು ನೂತನ ಮುಖ್ಯಮಂತ್ರಿ ಜೋಸೆಫ್ ವಿಜಯ್ ಶುಕ್ರವಾರ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನಕ್ಕೆ ಭೇಟಿ ನೀಡಿ ಸಾಂಪ್ರದಾಯಕ ಉಡುಗೆಯಲ್ಲಿ ದೇವಳದ ಮುಂಭಾಗದ ಧ್ವಜಸ್ತಂಭಕ್ಕೆ ನಮಿಸಿ ದೇವರ ದರ್ಶನ ಪಡೆದು ಸಂಕಲ್ಪ ನೆರವೇರಿಸಿ ಪೂಜೆ ಸಲ್ಲಿಸಿದರು.

ದೇವಳದ ತಂತ್ರಿ, ಪ್ರಧಾನ ಅರ್ಚಕ ಡಾ. ರಾಮಚಂದ್ರ ಅಡಿಗ ಅರ್ಗಳಾ ಸ್ತೋತ್ರಂ ಪಟಿಸುತ್ತಾ ಸಿಎಂ ವಿಜಯ್‌ಗೆ ರಕ್ಷಾದಾರ ಕಟ್ಟಿದರು. ಬಳಿಕ ಸಿಎಂ ಅವರು 1,600 ಗ್ರಾಂ ತೂಕದ ಬೆಳ್ಳಿಯ ಖಡ್ಗವನ್ನು ಶ್ರೀ ಮೂಕಾಂಬಿಕಾ ಅಮ್ಮನವರಿಗೆ ಅರ್ಪಿಸಿದರು. ಆರಂಭದಲ್ಲಿ ಸಿಎಂ ವಿಜಯ್ ಅವರಿಗೆ ದೇವಳದ ವತಿಯಿಂದ ಪೂರ್ಣಕುಂಭ ಸ್ವಾಗತ ನೀಡಲಾಯಿತು. ದೇವಳದ ಸಿಇಒ ಪ್ರಶಾಂತ್‌ಕುಮಾರ್ ಶೆಟ್ಟಿ ಹಾಗೂ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೆ. ಬಾಬು ಶೆಟ್ಟಿ ವಿಜಯ್ ಅವರನ್ನು ಗೌರವಿಸಿ, ಈ ಮೊದಲು ಸೇಲಂ, ಕೊಯಂಬತ್ತೂರು ಹಾಗೂ ಚೆನ್ನೈನಿಂದ ಕೊಲ್ಲೂರಿಗೆ ತಮಿಳುನಾಡು ಸರ್ಕಾರಿ ಬಸ್ಸುಗಳ ವ್ಯವಸ್ಥೆಯಿತ್ತು. ತಮಿಳುನಾಡು ಭಕ್ತರ ಅನುಕೂಲಕ್ಕಾಗಿ ಈ ಬಸ್‌ಗಳ ಸೇವೆಯನ್ನು ಪುನರಾರಂಭಿಸುವಂತೆ ಅಧ್ಯಕ್ಷ ಕೆ. ಬಾಬು ಶೆಟ್ಟಿ ಮನವಿ ಮಾಡಿದರು. ಸ್ಪಂದಿಸಿದ ಸಿಎಂ ವಿಜಯ್, ಈ ಬಗ್ಗೆ ಸಂಬಂಧಪಟ್ಟವರಲ್ಲಿ ಚರ್ಚಿಸಿ ಕಾರ್ಯರೂಪಕ್ಕೆ ತರುವ ಪ್ರಯತ್ನ ಮಾಡುವುದಾಗಿ ತಿಳಿಸಿದರು. ವ್ಯವಸ್ಥಾಪನಾ ಸಮಿತಿ ಸದಸ್ಯರಾದ ರಘುರಾಮ ದೇವಾಡಿಗ ಆಲೂರು, ಸುರೇಂದ್ರ ಶೆಟ್ಟಿ ಸಹನಾ, ಯು. ರಾಜೇಶ ಕಾರಂತ್, ಅಭಿಲಾಷ್ ಪಿ. ವಿ., ಧನಾಕ್ಷಿ ವಿಶ್ವನಾಥ, ಸುಧಾ ಕೆ., ಮಾಜಿ ಶಾಸಕ ಕೆ. ಗೋಪಾಲ ಪೂಜಾರಿ ಮೊದಲಾದವರು ಇದ್ದರು.

ಕಾರು ಚಲಾಯಿಸಿದ ಸಿಎಂ!

ಇಪ್ಪತ್ತು ನಿಮಿಷ ದೇವರ ದರ್ಶನ ಪಡೆದು ಹೊರಬಂದ ಸಿಎಂ ವಿಜಯ್ ಸ್ವತಃ ತಾವೇ ಕಾರು ಚಲಾಯಿಸಿಕೊಂಡು ಮಂಗಳೂರು ಏರ್‌ಪೋರ್ಟ್‌ನತ್ತ ತೆರಳಿದರು. ಕೊಲ್ಲೂರು ಪೇಟೆಯ ಇಕ್ಕೆಲಗಳಲ್ಲಿ ನೂರಾರು ಸಂಖ್ಯೆಯಲ್ಲಿ ವಿಜಯ್ ಅಭಿಮಾನಿಗಳು ಸೇರಿದ್ದರು.

ಧರ್ಮಸ್ಥಳ: ಎಸ್‌ಐಟಿ ವರದಿ ಬಹಿರಂಗಕ್ಕೆ ಬಿವೈವಿ ಒತ್ತಾಯ

ಸಮರ್ಪಕ ತನಿಖೆಗೆ ಬಿಜೆಪಿ ಆಗ್ರಹ

• **ಬೆಂಗಳೂರು:** ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿ ಸತ್ಯ ಸಂಗತಿ ಜನರಿಗೆ ಗೊತ್ತಾಗಬೇಕು. ಈ ಹಿನ್ನೆಲೆಯಲ್ಲಿ ಪ್ರಕರಣದ ಸಮರ್ಪಕ ತನಿಖೆಯಾಗಬೇಕು, ಎಸ್‌ಐಟಿ ವರದಿ ಬಹಿರಂಗವಾಗಬೇಕು ಎಂದು ಬಿಜೆಪಿ ಒತ್ತಾಯಿಸಿದೆ.



ಈ ಕುರಿತು ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಧರ್ಮಸ್ಥಳ ಶ್ರೀ ಮಂಜುನಾಥೇಶ್ವರ ಸ್ವಾಮಿಯ ಸನ್ನಿಧಿಗೆ ಕಳಂಕ ತರುವ ಬಹಳ ದೊಡ್ಡ ಷಡ್ಯಂತ್ರ ನಡೆದಿತ್ತು. ಹಿಂದುಗಳ ಧಾರ್ಮಿಕ ಶ್ರದ್ಧೆಗೆ ಕೊಡಲಿ ಪೆಟ್ಟು ಕೊಡುವ ಸಂಚು ನಡೆದಿತ್ತು. ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯಾವುದನ್ನೂ ಪರಾಮರ್ಶೆ ಮಾಡದೆ ಯಾರೋ ಬೀದಿಯಲ್ಲಿ ಹೋಗುವವರು ಹೇಳಿದರೆಂದು ಎಸ್‌ಐಟಿ ತನಿಖೆಗೆ ಆದೇಶಿಸಿದ್ದು ಸಮರ್ಪಕ ನಿರ್ಧಾರ ಆಗಿರಲಿಲ್ಲ ಎಂದು ಆಕ್ಷೇಪಿಸಿದರು. ➡ಪುಟ ೪

ಎಸ್‌ಐಆರ್‌ಗೆ ಅಸಹಕಾರ

ಪಕ್ಷದಲ್ಲಿ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಬಗ್ಗೆ ಚರ್ಚೆಗಳಾಗಿವೆ. ಕೇಂದ್ರ ಚುನಾವಣಾ ಆಯೋಗ ತೀರ್ಮಾನಿಸಿದ ಬಳಿಕ ಎಸ್‌ಐಆರ್ ನಡೆಯುತ್ತಿದ್ದು, ರಾಜ್ಯ ಸರ್ಕಾರ ಇದಕ್ಕೆ ಕಲ್ಲು ಹಾಕುವ ಕೆಲಸ ಮಾಡುತ್ತಿದೆ ಎಂಬ ಅಭಿಪ್ರಾಯ ಎಲ್ಲ ಮುಖಂಡರಿಂದ ವ್ಯಕ್ತವಾಗಿದೆ. ರಾಜ್ಯ ಸರ್ಕಾರವು ಬಿಎಲ್‌ಒಗಳಿಗೆ ಸಮರ್ಪಕ ಆದೇಶ, ಮಾರ್ಗದರ್ಶನ ಮಾಡುತ್ತಿಲ್ಲ. ಡೂಪ್ಲಿಕೇಟ್ ಹೆಸರು, ಸತ್ತವರ ಹೆಸರು ಕೈಬಿಡುವ ಕೆಲಸ ನಡೆಯಬೇಕಿದೆ. ಮುಂದಿನ ದಿನಗಳಲ್ಲಿ ನಮ್ಮ ನಡೆ ಯಾವ ರೀತಿ ಇರಬೇಕೆಂಬ ಬಗ್ಗೆ ಚರ್ಚೆ ಮಾಡಿದ್ದೇವೆ ಎಂದು ವಿಜಯೇಂದ್ರ ವಿವರಿಸಿದರು.

ಮಧ್ಯಪ್ರಾಚ್ಯ ಸಂಘರ್ಷ | ಪ್ರತಿ ವಾಹನಕ್ಕೆ ನಿತ್ಯ 200ಲೀ.

ಡೀಸೆಲ್ ಮಾರಾಟಕ್ಕೆ ಕೇಂದ್ರ ಮಿತಿ

• **ಹೊಸದಿಲ್ಲಿ:** ಮಧ್ಯಪ್ರಾಚ್ಯ ಯುದ್ಧದಿಂದಾಗಿ ಜಾಗತಿಕ ಪೂರೈಕೆ ಸರಪಳಿ ಅಸ್ತವ್ಯಸ್ತಗೊಂಡಿದ್ದು, ಈ ಸಮಸ್ಯೆಯಿಂದ ಹೊರಬರಲು ದೇಶದಲ್ಲಿ ಹಲವು ಕ್ರಮ ಕೈಗೊಳ್ಳಲಾಗಿದೆ. ಇದೀಗ



ಸ್ಥಳೀಯ ಕೊರತೆ ತಡೆಗಟ್ಟುವ ಪ್ರಯತ್ನದಲ್ಲಿ ಕೇಂದ್ರ ಸರ್ಕಾರ ಒಂದು ದಿನದಲ್ಲಿ ವಾಹನಕ್ಕೆ 200 ಲೀಟರ್‌ಗಳಷ್ಟು ಡೀಸೆಲ್ ಮಾರಾಟ ಮಿತಿಗೊಳಿಸಿದೆ. ಅದೇ ರೀತಿ ಕೈಗಾರಿಕೆ, ವಾಣಿಜ್ಯ ಮತ್ತು ಸಾಂಸ್ಥಿಕ ಬಳಕೆದಾರರು ಪೆಟ್ರೋಲ್ ಪಂಪ್‌ಗಳಿಂದ ಪೆಟ್ರೋಲ್ ಮತ್ತು ಡೀಸೆಲ್ ಸಗಟು ಖರೀದಿಗೆ ನಿರ್ಬಂಧಿಸಲಾಗಿದೆ. ಚಿಲ್ಲರೆ ಮಾರಾಟ ಮಳಿಗೆಗಳು ವಾಹನದ ಟ್ಯಾಂಕ್ ಅಥವಾ ಪಿಇಎಸ್‌ಒ-ಅನುಮೋದಿತ ಧಾರಕಕ್ಕೆ ಮಾತ್ರ ಡೀಸೆಲ್ ತುಂಬಿಸಬಹುದು ಮತ್ತು ಪ್ರತಿ ಗ್ರಾಹಕ ಅಥವಾ ವಾಹನಕ್ಕೆ ದಿನಕ್ಕೆ 200 ಲೀಟರ್‌ಗಿಂತ ಹೆಚ್ಚಿರಬಾರದು. ➡ಪುಟ ೪

90 ದಿನಗಳವರೆಗೆ ಚಾಲ್ತಿಯಲ್ಲಿ

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಮೋಟಾರು ಸ್ಪಿರಿಟ್ ಮತ್ತು ಹೈಸ್ಪೀಡ್ ಡೀಸೆಲ್ (ಚಿಲ್ಲರೆ ಮಳಿಗೆಗಳ ಮೂಲಕ ಪೂರೈಕೆಯ ತಾತ್ಕಾಲಿಕ ನಿಯಂತ್ರಣ) ಆದೇಶ ಹೊರಡಿಸಿದ್ದು, ಇಂಧನ ಚಿಲ್ಲರೆ ವ್ಯಾಪಾರಿಗಳು ಮತ್ತು ತೈಲ ಮಾರುಕಟ್ಟೆ ಕಂಪನಿಗಳಿಗೆ 90 ದಿನಗಳವರೆಗೆ ಚಿಲ್ಲರೆ ಮಳಿಗೆಗಳಿಂದ ಬೃಹತ್ ಖರೀದಿಗಳನ್ನು ನಿಗ್ರಹಿಸಲು ನಿರ್ದೇಶಿಸಿದೆ. ಅಂತಾರಾಷ್ಟ್ರೀಯ ಪೆಟ್ರೋಲಿಯಂ ಪೂರೈಕೆ ಸರಪಳಿಗಳು, ಶಿಪ್ಪಿಂಗ್ ಲಾಜಿಸ್ಟಿಕ್ಸ್ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಲಭ್ಯತೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಿದ ವಿಶ್ವದ ಕೆಲವು ಪ್ರದೇಶಗಳ ಮೇಲೆ ಪರಿಣಾಮ ಬೀರುವ ಪ್ರಸ್ತುತ ಭೌಗೋಳಿಕ ರಾಜಕೀಯ ಪರಿಸ್ಥಿತಿಯಿಂದ ಈ ಕ್ರಮವು ಅಗತ್ಯವಾಗಿದೆ ಎಂದು ಸರ್ಕಾರ ಹೇಳಿದೆ. ➡ಪುಟ ೪

ಎಚ್‌ಎಂಟಿಗೆ ಶೀಘ್ರ ಕಾಯಕಲ್ಪ



ಸದ್ಯದಲ್ಲೇ ವಿತ್ತ ಸಚಿವರ ಜತೆ ಚರ್ಚೆ: ಎಚ್‌ಡಿಕೆ

• **ಬೆಂಗಳೂರು:** ಉತ್ಪಾದನೆ ಆಧರಿತ ಕೈಗಾರಿಕೆಗಳಿಗೆ ಉತ್ತೇಜನ ನೀಡುವ ಪ್ರಧಾನಿಗಳ ದೂರದೃಷ್ಟಿ ಹಿನ್ನೆಲೆಯಲ್ಲಿ ಭಾರತದ ಪ್ರತಿಷ್ಠಿತ ಉದ್ಯಮಿಗಳಲ್ಲಿ ಒಂದಾದ ಹಿಂದುಸ್ತಾನ್ ಮಷಿನ್ ಟೂಲ್ಸ್ (ಎಚ್‌ಎಂಟಿ) ಕಂಪನಿಗೆ ಮರುಜೀವ ನೀಡುವ ಯೋಜನೆ ಅಂತಿಮ ಹಂತದಲ್ಲಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದ್ದಾರೆ. ಬೆಂಗಳೂರಿನ ಕೇಂದ್ರೀಯ ಕೈಗಾರಿಕಾ ಉತ್ಪಾದನಾ ಸಂಸ್ಥೆ (ಸಿಎಂಟಿಐ)ಯ 65ನೇ ಸಂಸ್ಥಾಪನಾ ದಿನ ಕಾರ್ಯಕ್ರಮ ಉದ್ಘಾಟಿಸಿದ ಅವರು, ಉತ್ಪಾದನೆ ಮತ್ತು ಸಂಶೋಧನೆಗೆ ಹೆಚ್ಚು ಮಹತ್ವ ನೀಡಲಾಗುತ್ತಿದೆ. ಬೆಂಗಳೂರು ಸೇರಿದಂತೆ ಭಾರತದ ವಿವಿಧ ಭಾಗಗಳಲ್ಲಿ ಕಾರ್ಯಾಚರಣೆ ಮಾಡುತ್ತಿರುವ ಎಚ್‌ಎಂಟಿಯ ಎಲ್ಲಾ ವಿಭಾಗಗಳನ್ನು ಪುನರುಜ್ಜೀವನಗೊಳಿಸುವ ಉದ್ದೇಶ ಕೇಂದ್ರ ಸರ್ಕಾರ ಹೊಂದಿದ್ದು, ಡಿಪಿಆರ್ ಕೂಡ ಅಂತಿಮ ಹಂತದಲ್ಲಿದೆ. ➡ಪುಟ ೪

ಐತಿಹಾಸಿಕ, ಪರಿವರ್ತನಾತ್ಮಕ ನಾಯಕತ್ವ

▸ ಸಿ.ಪಿ. ರಾಧಾಕೃಷ್ಣನ್, ಉಪ ರಾಷ್ಟ್ರಪತಿ



10 ಜೂನ್ 2026ರಂದು ಭಾರತವು ತನ್ನ ಪ್ರಜಾಸತ್ತಾತ್ಮಕ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯ ಬರೆದಿದೆ. ನರೇಂದ್ರ ಮೋದಿ ಅವರು ಪ್ರಧಾನಮಂತ್ರಿಯಾಗಿ 4,399 ದಿನಗಳ ನಿರಂತರ ಸೇವೆಯನ್ನು ಪೂರ್ಣಗೊಳಿಸುವ ಮೂಲಕ, ಭಾರತದ ಇತಿಹಾಸದಲ್ಲೇ ಅತ್ಯಂತ ದೀರ್ಘಕಾಲ ಸತತವಾಗಿ ಅಧಿಕಾರ ವಹಿಸಿಕೊಂಡ ಚುನಾಯಿತ ಪ್ರಧಾನಮಂತ್ರಿಯಾಗಿದ್ದಾರೆ. ಈ ಐತಿಹಾಸಿಕ ಮೈಲಿಗಲ್ಲು ರಾಷ್ಟ್ರ ನಿರ್ಮಾಣದ ಕಡೆಗಿನ ಅವರ ಅಚಲ ಬದ್ಧತೆಯಲ್ಲದೆ, ಭಾರತದ ಜನರು ಅವರ ದೂರದೃಷ್ಟಿಯ ನಾಯಕತ್ವದ ಮೇಲೆ ಇಟ್ಟಿರುವ ಸುದೀರ್ಘ ವಿಶ್ವಾಸ ಮತ್ತು ನಂಬಿಕೆ ಪ್ರತಿಬಿಂಬಿಸುತ್ತದೆ. ಇದು ಅವರ ದೂರದೃಷ್ಟಿಯ ನಾಯಕತ್ವ, ರಾಷ್ಟ್ರೀಯ ಅಭಿವೃದ್ಧಿಗೆ ಅವರ ದಣಿವರಿಯದ ಸಮರ್ಪಣೆ ಮತ್ತು ಭಾರತದ ಜನರ ಕಲ್ಯಾಣ ಹಾಗೂ ಆಕಾಂಕ್ಷೆಗಳಿಗೆ ಅವರ ದೃಢವಾದ ಭಕ್ತಿಯ ಪ್ರತಿಬಿಂಬವಾಗಿ ನಿಂತಿದೆ.

ಪರಿವರ್ತನಾತ್ಮಕ ನಾಯಕತ್ವ: ದೀರ್ಘಾವಧಿ ಮುಂದುವರಿಕೆ

ರಾಷ್ಟ್ರದ ಪ್ರಧಾನ ಸೇವಕರಾಗಿ, ನರೇಂದ್ರ ಮೋದಿ ಅವರು ಉತ್ತಮ ಆಡಳಿತ ಮತ್ತು ರಾಷ್ಟ್ರ ಪ್ರಥಮ(ರಾಷ್ಟ್ರಕ್ಕೆ ಮೊದಲ ಆದ್ಯತೆ) ತತ್ವಗಳಿಂದ ಮಾರ್ಗದರ್ಶಿಸಲ್ಪಟ್ಟು, ಭಾರತದಲ್ಲಿ ಅಭೂತಪೂರ್ವ ಪರಿವರ್ತನೆಯ ಯುಗವನ್ನು ತಂದಿದ್ದಾರೆ. ಮಾನವ ಗುಲಾಮಗಿರಿಯ ಪಿಡುಗನ್ನು ಕೊನೆಗೊಳಿಸಲು ಮತ್ತು ಲಕ್ಷಾಂತರ ಜನರಿಗೆ ಘನತೆಯನ್ನು ಮರಳಿ ತರಲು, ತಮ್ಮ ದೃಢ ನಾಯಕತ್ವಕ್ಕಾಗಿ ಇತಿಹಾಸವು ಅಬ್ರಹಾಂ ಲಿಂಕನ್ ಅವರನ್ನು ಹೇಗೆ ಗೌರವಿಸುತ್ತದೆಯೋ, ಹಾಗೆಯೇ ಮುಂದಿನ ಪೀಳಿಗೆಗಳು 25 ಕೋಟಿಗೂ ಹೆಚ್ಚು ಬಡ ಜನರನ್ನು ಸಂಪೂರ್ಣ ಬಡತನದಿಂದ ಮುಕ್ತಗೊಳಿಸಿದ್ದಕ್ಕಾಗಿ ಪ್ರಧಾನಿ ಮೋದಿಯವರನ್ನು ನೆನಪಿಸಿಕೊಳ್ಳುತ್ತವೆ. ಅವರ ದೂರದೃಷ್ಟಿ, ದಣಿವರಿಯದ ಶ್ರಮ ಮತ್ತು ಪರಿವರ್ತನಾತ್ಮಕ ಆಡಳಿತದ ಮೂಲಕ, ಅಸಂಖ್ಯಾತ ಕುಟುಂಬಗಳಿಗೆ ಅವಕಾಶ, ಘನತೆ ಮತ್ತು ಭರವಸೆಯ



ಸಬಲೀಕರಣ ನೀಡಲಾಗಿದೆ. ಇದು ಆರ್ಥಿಕ ಸ್ವಾತಂತ್ರ್ಯ ಮತ್ತು ಉತ್ತಮ ಭವಿಷ್ಯದ ಭರವಸೆ ಸ್ವೀಕರಿಸಲು ಅವರಿಗೆ ಅನುವು ಮಾಡಿಕೊಟ್ಟಿದೆ. ಮಾನವಕುಲದ ಸೇವೆಯಲ್ಲಿ ಅವರ ಈ ಕೊಡುಗೆಯು ಇತಿಹಾಸದ ಪುಟಗಳಲ್ಲಿ ಒಂದು ಮೈಲುಗಲ್ಲು ಸಾಧನೆಯಾಗಿ ಎಂದೆಂದಿಗೂ ನೆನಪಿನಲ್ಲಿ ಉಳಿಯುತ್ತದೆ.

ಅವರ ಪರಿವರ್ತನಾತ್ಮಕ ಉಪಕ್ರಮಗಳು ಶಿಕ್ಷಣ, ವಸತಿ, ನೈರ್ಮಲ್ಯ, ಆರೋಗ್ಯ ಮತ್ತು ಆಹಾರ ಭದ್ರತೆಯ ಮೂಲಕ ಲಕ್ಷಾಂತರ ಜನರಿಗೆ ಘನತೆ ಮತ್ತು ಸಾಮಾಜಿಕ ಭದ್ರತೆಯನ್ನು ಖಚಿತಪಡಿಸಿವೆ. ವಿಶ್ವದ ಅತಿ ದೊಡ್ಡ ಸಾರ್ವಜನಿಕ ಆರೋಗ್ಯ ಕಾರ್ಯಕ್ರಮಗಳಲ್ಲಿ ಒಂದಾದ ಆಯುಷ್ಮಾನ್ ಭಾರತ ಯೋಜನೆಯ ಮೂಲಕ 44 ಕೋಟಿಗೂ ಹೆಚ್ಚು ನಾಗರಿಕರಿಗೆ ಗುಣಮಟ್ಟದ ಆರೋಗ್ಯ ರಕ್ಷಣೆಯ ಭರವಸೆಯನ್ನು ನೀಡಲಾಗಿದೆ. 'ಜಲ ಜೀವನ್ ಮಿಷನ್' ಮೂಲಕ 12 ಕೋಟಿಗೂ ಹೆಚ್ಚು ಗ್ರಾಮೀಣ ಕುಟುಂಬಗಳು ಸುರಕ್ಷಿತ ಮತ್ತು ವಿಶ್ವಾಸಾರ್ಹ ಕುಡಿಯುವ ನೀರಿನ ಸಂಪರ್ಕ ಪಡೆದುಕೊಂಡಿವೆ. ಇದು ಅಸಂಖ್ಯಾತ ಕುಟುಂಬಗಳಿಗೆ ಘನತೆ ಮತ್ತು ಸುಧಾರಿತ ಜೀವನದ ಗುಣಮಟ್ಟವನ್ನು ತಂದಿದೆ. ➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,48,000(2,40,200) ಅಪರಂಜಿ ಚಿನ್ನ: 14,804(14,831) ಆಭರಣ ಚಿನ್ನ: 13,620(13,645) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 75,527(1695↑) ಎನ್‌ಎಸ್‌ಇ 23,622(461↑)

$1 = ₹95.17

ರಾಯಭಾರಿಗೆ 2ನೇ ಬಾರಿ ಸಮನ್ಸ್ | ಪ್ರತಿಭಟನೆ

ಅಮೆರಿಕಕ್ಕೆ ಭಾರತ ಖಡಕ್ ಸಂದೇಶ



• ಹೊಸದಿಲ್ಲಿ: ಒಮಾನ್ ಕರಾವಳಿಯ ಬಳಿ ಭಾರತೀಯ ನಾವಿಕರನ್ನು ಹೊಂದಿದ್ದ ಮತ್ತೊಂದು ವಾಣಿಜ್ಯ ಹಡಗಿನ ಮೇಲೆ ದಾಳಿ ನಡೆದ ಹಿನ್ನೆಲೆಯಲ್ಲಿ ಭಾರತ ಸರ್ಕಾರ ಅಮೆರಿಕದ ಕಾರ್ಯನಿರ್ವಾಹಕ ರಾಯಭಾರಿ ಜೇಸನ್ ಮಿಕ್ಸ್ ಅವರನ್ನು ಈ ವಾರದಲ್ಲೇ ಎರಡನೇ ಬಾರಿ ವಿದೇಶಾಂಗ ಸಚಿವಾಲಯಕ್ಕೆ ಕರೆಸಿಕೊಂಡು, ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದೆ.

ಕಳೆದ ನಾಲ್ಕು ದಿನಗಳಲ್ಲಿ ಭಾರತೀಯ ಸಿಬ್ಬಂದಿ ಇದ್ದ ಮೂರು ಹಡಗುಗಳು ದಾಳಿಗೆ ಒಳಗಾಗಿರುವುದು ಹೊಸದಿಲ್ಲಿಯ ಆತಂಕವನ್ನು ಹೆಚ್ಚಿಸಿದ್ದು, ಅಮೆರಿಕಕ್ಕೆ ಖಡಕ್ ಸಂದೇಶ ರವಾನಿಸಿದೆ. ಪರಿಸ್ಥಿತಿಯ ಗಂಭೀರತೆಯನ್ನು ಗಮನಿಸಿ, ಭಾರತೀಯ ನೌಕಾಯಾನ ಮಹಾನಿರ್ದೇಶನಾಲಯ (ಡಿಜಿಎಸ್) ಹಾರ್ಮುಜ್ ಜಲಸಂಧಿ, ಒಮಾನ್ ಕೊಲ್ಲಿ ಹಾಗೂ ಸುತ್ತಮುತ್ತಲಿನ ಸಮುದ್ರ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರು 18,000 ಭಾರತೀಯ ನಾವಿಕರಿಗೆ ವಿಶೇಷ ಭದ್ರತಾ ಸಲಹೆ ಜಾರಿಗೊಳಿಸಿದೆ.

ಮೂರು ದಾಳಿ, ಮೂವರು ಸಾವು: ಜೂ.8ರಂದು ಎಂಟಿ ಮಾರಿವೆಕ್ಸ್ ಹಡಗಿನಲ್ಲಿ ಅನುಮಾನಾಸ್ಪದ ದಾಳಿಯ ನಂತರ ಬೆಂಕಿ ಕಾಣಿಸಿಕೊಂಡಿತ್ತು. ಹಡಗಿನಲ್ಲಿದ್ದ 24 ಭಾರತೀಯ ಸಿಬ್ಬಂದಿ ಸುರಕ್ಷಿತರಾಗಿದ್ದರು.

ಜೂ.10ರಂದು ಎಂಟಿ ಸೆಟ್ಟೆಬೆಲ್ಲೊ ಹಡಗಿನ ಮೇಲೆ ಗುಂಡಿನ ದಾಳಿ ನಡೆದಿದ್ದು, 24 ಭಾರತೀಯರಲ್ಲಿ 21 ಮಂದಿಯನ್ನು ರಕ್ಷಿಸಲಾಯಿತು. ಆರಂಭದಲ್ಲಿ ನಾಪತ್ತೆಯಾಗಿದ್ದ ಮೂವರು ಭಾರತೀಯ ನಾವಿಕರು ಮೃತಪಟ್ಟಿರುವುದು ನಂತರ ದೃಢಪಟ್ಟಿತು.

ಇದೀಗ ಎಂಟಿ ಜಲ್ಪೀರ್ ಎಂಬ ಹಡಗು ಒಮಾನ್ ಕರಾವಳಿಯ ಬಳಿ ದಾಳಿಗೆ ಒಳಗಾಗಿದೆ ಎಂದು ವರದಿಯಾಗಿದೆ. ಈ ಹಡಗಿನಲ್ಲಿ 20 ಭಾರತೀಯ ಸಿಬ್ಬಂದಿ ಇದ್ದರು. ದಾಳಿಯ ಸ್ವರೂಪದ ಬಗ್ಗೆ ಅಧಿಕಾರಿಗಳು ಇನ್ನೂ ಅಧಿಕೃತ ಮಾಹಿತಿ ನೀಡಿಲ್ಲ.

ಸಾವಿರಾರು ಭಾರತೀಯ ನಾವಿಕರಿಗೆ ಆತಂಕ: ಅಧಿಕೃತ ಅಂದಾಜಿನ ಪ್ರಕಾರ, ಹಾರ್ಮುಜ್ ಜಲಸಂಧಿಯ ಸುತ್ತಮುತ್ತ 13 ಭಾರತೀಯ ಧ್ವಜದ ಹಡಗುಗಳಲ್ಲಿ 622 ಭಾರತೀಯ ನಾವಿಕರು ಕಾರ್ಯನಿರ್ವಹಿಸುತ್ತಿದ್ದಾರೆ. ಅಲ್ಲದೆ, ಗಲ್ಫ್ ಪ್ರದೇಶದಲ್ಲಿ ನೂರಾರು ವಿದೇಶಿ ಹಡಗುಗಳಲ್ಲಿ ಸುಮಾರು 18,000 ಭಾರತೀಯರು ಸೇವೆ ಸಲ್ಲಿಸುತ್ತಿದ್ದಾರೆ.

ಭಾರತದ ನೌಕೆಗಳ ಮೇಲೆ ದಾಳಿ ನಡೆಸಿದ್ದು ಇರಾನ್!

ಭಾರತೀಯ ಹಡಗುಗಳ ಮೇಲಿನ ಡ್ರೋನ್ ದಾಳಿಯನ್ನು ಇರಾನ್ ನಡೆಸಿರುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆರೋಪಿಸಿದ್ದು, ಇದು ಯಾವುದೇ ಕಾರಣಕ್ಕೂ ಸ್ವೀಕಾರಾರ್ಹವಲ್ಲ ಎಂದು ಶುಕ್ರವಾರ ಹೇಳಿದ್ದಾರೆ. ಬುಧವಾರ ಒಮಾನ್ ಕರಾವಳಿಯಲ್ಲಿ ಭಾರತೀಯ ಸಿಬ್ಬಂದಿಯಿದ್ದ ಮೂರು ಹಡಗುಗಳ ಮೇಲೆ ಡ್ರೋನ್ ದಾಳಿ ನಡೆದಿತ್ತು. ಈ ಅನಿರೀಕ್ಷಿತ ದಾಳಿಗೆ ಮೂವರು ಭಾರತೀಯ ಸಿಬ್ಬಂದಿ ಮೃತಪಟ್ಟಿದ್ದರು. ಹಾರ್ಮುಜ್ ಜಲಸಂಧಿಯನ್ನು ಹಾದುಹೋಗುತ್ತಿದ್ದ ಭಾರತೀಯ ತೈಲ ಹಡಗುಗಳ ಮೇಲೆ ಇರಾನ್ ಡ್ರೋನ್ ದಾಳಿ ನಡೆಸಿರುವುದು ಸ್ವೀಕಾರಾರ್ಹವಲ್ಲ ಎಂದು ಅಧ್ಯಕ್ಷ ಟ್ರಂಪ್ ಟ್ರುತ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಅಂತಿಮ ಹಂತಕ್ಕೆ ಶಾಂತಿ ಒಪ್ಪಂದ: ಟ್ರಂಪ್

ಇರಾನ್ ವಿರುದ್ಧ ಯುದ್ಧ ಅಂತ್ಯ!

• ವಾಷಿಂಗ್ಟನ್: ಇರಾನ್‌ನೊಂದಿಗಿನ ನಮ್ಮ ಯುದ್ಧವು ಕೊನೆಗೊಂಡಿದೆ. ಇನ್ನೇನು ವಾರಾಂತ್ಯ ಯುರೋಪ್‌ನಲ್ಲಿ ಶಾಂತಿ ಒಪ್ಪಂದ ಅಂತಿಮಗೊಳ್ಳಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶುಕ್ರವಾರ ಅಚ್ಚರಿಯ ಹೇಳಿಕೆ ನೀಡಿದ್ದಾರೆ. ಇರಾನ್ ತೈಲ ಉದ್ಯಮವನ್ನು ಸಂಪೂರ್ಣ ಕಬ್ಜಾ ಮಾಡುವುದಾಗಿ ಬೆದರಿಕೆ ಹಾಕಿದ ಬಳಿಕ ಟ್ರಂಪ್ ಸೇನಾ ಕಾರ್ಯಾಚರಣೆಯನ್ನು ತಡೆಹಿಡಿದಿದ್ದಾರೆ.

ಒಂದು ವೇಳೆ ಇರಾನ್‌ನೊಂದಿಗೆ ಶಾಂತಿ ಒಪ್ಪಂದ ಅಂತಿಮವಾದರೆ, ಅದು ಟ್ರಂಪ್ ಅಧ್ಯಕ್ಷತೆಯಲ್ಲಿ ಅಮೆರಿಕದ ದೊಡ್ಡ ಸಾಧನೆಗಳಲ್ಲಿ ಒಂದಾಗಿರಲಿದೆ.

ವಾರಾಂತ್ಯದಲ್ಲಿ ಯುರೋಪ್‌ನಲ್ಲಿ ನಡೆಯುವ ಶಾಂತಿ ಒಪ್ಪಂದ ಸಹಿ ಹಾಕುವ ಕಾರ್ಯಕ್ರಮದಲ್ಲಿ ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಪಾಲ್ಗೊಳ್ಳುವ ಸಾಧ್ಯತೆ ಇದೆ ಎಂದು ಟ್ರಂಪ್ ಹೇಳಿದ್ದಾರೆ. ಇತ್ತೀಚೆಗಿನ ಶಾಂತಿ ಒಪ್ಪಂದ ಬೆಳವಣಿಗೆಯ ಕುರಿತು ಈಗಾಗಲೇ ಕತಾರ್, ಯುಎಇ, ಸೌದಿ ಅರೇಬಿಯಾ, ಬಹ್ರೈನ್, ಕುವೈತ್ ಹಾಗೂ ಪಾಕಿಸ್ತಾನ ರಾಷ್ಟ್ರ ನಾಯಕರೊಂದಿಗೆ ಮಾತನಾಡಿದ್ದಾಗಿ ಹೇಳಿದ್ದಾರೆ. ಇರಾನ್ ತೈಲ ಸಂಪನ್ಮೂಲ ಮತ್ತು ಅನಿಲ ಕ್ಷೇತ್ರಗಳನ್ನು ಹೊಂದಿರುವ ಖಾರ್ಗ್ ದ್ವೀಪದ ಮೇಲೆ ಸೇನಾ ಕಾರ್ಯಾಚರಣೆ ನಡೆಸಿ ಸಂಪೂರ್ಣ ನಿಯಂತ್ರಣವನ್ನು ಪಡೆಯುವುದಾಗಿ ಅಧ್ಯಕ್ಷ ಟ್ರಂಪ್ ಇರಾನ್‌ಗೆ ಬೆದರಿಕೆ ಹಾಕಿದ್ದರು. ವಾರಾಂತ್ಯದ ಶಾಂತಿ ಒಪ್ಪಂದದ ಕುರಿತು ಟ್ರಂಪ್ ಭಾರೀ ನಿರೀಕ್ಷೆ ಹೊಂದಿದ್ದಾರೆ.

ಒಪ್ಪಂದದ ಸುಳಿವು ನೀಡಿದ ಇರಾನ್: ಶಾಂತಿ ಒಪ್ಪಂದ ಹಿಂದೆಂದಿಗಿಂತಲೂ ಬಹಳ ಸನಿಹದಲ್ಲಿದೆ. ಶೀಘ್ರದಲ್ಲಿ ಸಂಪೂರ್ಣ ಮಾಹಿತಿ ನೀಡುವುದಾಗಿ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಹೇಳಿದ್ದಾರೆ.

ಸತ್ಯವಾಯ್ತು ಅಟಲ್ ಭವಿಷ್ಯವಾಣಿ

ತಾವರೆಯ ಬಲವರ್ಧನೆ

ಅಂಧೇರಾ ಛಟೇಗಾ, ಸೂರಜ್ ನಿಕ್ಲೇಗಾ, ಕಮಲ್ ಖಿಲೇಗಾ(ಕತ್ತಲು ಸರಿಯಲಿದೆ, ಸೂರ್ಯ ಉದಯಿಸಲಿದ್ದಾನೆ, ತಾವರೆ ಅರಳುತ್ತದೆ) - ಇದು ಅಜಾತಶತ್ರು ಅಟಲ್ ಬಿಹಾರಿ ವಾಜಪೇಯಿ ಎಂಬ ಮಹಾತ್ಮನ ಮಾತು. ಮಾತು ಎನ್ನುವುದಕ್ಕಿಂತ ಇದನ್ನು ವಾಜಪೇಯಿ ಅವರ ಭವಿಷ್ಯವಾಣಿ. ಅಂದು ವಾಜಪೇಯಿ ಅವರ ಪರಿಶ್ರಮ, ಕನಸು ಇಂದು ನನಸಾಗಿದೆ. ಅಟಲ್ ಭವಿಷ್ಯವಾಣಿ ಸತ್ಯವಾಗಿದೆ. ಇಂದು ಬಿಜೆಪಿ ನೇತೃತ್ವದ ಎನ್‌ಡಿಎ 22 ರಾಜ್ಯಗಳಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿದೆ. ಬಿಜೆಪಿಯ ಈ ಗೆಲುವು ಹೇಗೆ ಸಾಧ್ಯವಾಯಿತು ಎಂಬ ಕುರಿತ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ಗೆಲುವೊಂದೇ ಗುರಿಯಲ್ಲ; ರಾಜ್ಯಮಟ್ಟದ ಪಕ್ಷ ವಿಸ್ತರಣೆ, ಸಂಸತ್ತಿನಲ್ಲಿ ಬಹುಮತ ಸಾಧಿಸುವ ಗುರಿ





ಅಮೃತಕಾಲದಲ್ಲಿ ಅಟಲ್ ಅಮೃತವಾಣಿ ನೆನಪು

ಭಾರತೀಯ ಜನತಾ ಪಕ್ಷ(ಬಿಜೆಪಿ) 1980ರ ಏ.6ರಲ್ಲಿ ಸ್ಥಾಪನೆಯಾಯಿತು. ಅಟಲ್ ಬಿಹಾರಿ ವಾಜಪೇಯಿ ಅವರು ಬಿಜೆಪಿಯ ಸ್ಥಾಪನಾ ಅಧ್ಯಕ್ಷರಾಗಿದ್ದರು. ಪಕ್ಷ ಸ್ಥಾಪನೆಯ ಬಳಿಕ 1980ರ ಡಿಸೆಂಬರ್ ತಿಂಗಳಲ್ಲಿ ಮುಂಬೈನಲ್ಲಿ ನಡೆದ ಬಿಜೆಪಿಯ ಮೊದಲ ರಾಷ್ಟ್ರೀಯ ಅಧಿವೇಶನದಲ್ಲಿ ವಾಜಪೇಯಿ ಹೇಳಿದ್ದ ಮಾತಿದು. 1984ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ 229 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದು, ಕೇವಲ 2 ಸ್ಥಾನಗಳಲ್ಲಿ ಗೆಲುವು ಸಾಧಿಸಿತ್ತು. ಚುನಾವಣೆಯಲ್ಲಿ ಕಾಂಗ್ರೆಸ್ ಪ್ರಚಂಡ ಗೆಲುವು ಸಾಧಿಸಿತ್ತು. ಗುಜರಾತ್‌ನ ಮೆಹ್ಸಾನಾ ಮತ್ತು ಆಂಧ್ರಪ್ರದೇಶದ (ಇಂದಿನ ತೆಲಂಗಾಣ) ಹನುಮಕೊಂಡ ಲೋಕಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಜಯ ಸಾಧಿಸಿತ್ತು. ಆದರೆ ನಾಲ್ಕು ದಶಕಗಳ ಬಳಿಕ ಬಿಜೆಪಿ ಪ್ರಬಲ ರಾಷ್ಟ್ರೀಯ ಶಕ್ತಿಯಾಗಿ ಹೊರಹೊಮ್ಮಿದೆ.

ಬಂಗಾಳದಲ್ಲಿ ಮಹತ್ವದ ಗೆಲುವು

ಬಿಜೆಪಿ ಪಾಲಿಗೆ ಪಶ್ಚಿಮ ಬಂಗಾಳ ಇನ್ನೊಂದು ರಾಜ್ಯವಷ್ಟೇ ಅಲ್ಲ. ಬಂಗಾಳದಲ್ಲಿನ ಗೆಲುವು ಬಿಜೆಪಿಗೆ ಬಹಳ ಮಹತ್ವದ್ದಾಗಿದೆ. ಬಿಜೆಪಿಯ ರಾಷ್ಟ್ರ ಮಟ್ಟದ ಪಕ್ಷ ವಿಸ್ತರಣೆ ಯೋಜನೆಗೆ ಬಂಗಾಳ ಶ್ರೇಷ್ಠ ಉದಾಹರಣೆ. ತೃಣಮೂಲ ಕಾಂಗ್ರೆಸ್(ಟಿಎಂಸಿ) ಪಕ್ಷದ 15 ವರ್ಷಗಳ ಆಡಳಿತವು ಅಂತ್ಯಗೊಂಡಿದ್ದು, 294ರಲ್ಲಿ ಬಿಜೆಪಿ 208 ಸ್ಥಾನಗಳನ್ನು ಗೆದ್ದಿರುವುದು ಅಭೂತಪೂರ್ವ ಸಾಧನೆ. 2021ರಲ್ಲಿ ಬಿಜೆಪಿ 77 ಸ್ಥಾನಗಳನ್ನು ಗೆದ್ದಿದ್ದು, ಐದೇ ವರ್ಷಗಳಲ್ಲಿ 130 ಸ್ಥಾನಗಳನ್ನು ಹೆಚ್ಚಿಸಿದೆ.

ಸಂಸತ್ತಿನ ಪ್ರಾಧಾನ್ಯತೆ

ಕಳೆದೊಂದು ದಶಕದ ಬಿಜೆಪಿಯ ಬೆಳವಣಿಗೆ ಲೋಕಸಭೆಯಲ್ಲಿ ಸ್ಪಷ್ಟವಾಗಿ ಪ್ರತಿಫಲಿಸಿದೆ. 2014ರಲ್ಲಿ ನರೇಂದ್ರ ಮೋದಿ ನೇತೃತ್ವ ವಹಿಸಿಕೊಂಡ ಬಳಿಕ ಶೇ.31.3 ಮತಗಳೊಂದಿಗೆ 282 ಸ್ಥಾನಗಳನ್ನು ಗಳಿಸಿಕೊಟ್ಟಿತು. ಮೂರು ದಶಕಗಳ ನಂತರ ಕಾಂಗ್ರೆಸೇತರ ನಾಯಕರೊಬ್ಬರು ಪೂರ್ಣ ಬಹುಮತವನ್ನು ಪಡೆದಿದ್ದರು. ಐದು ವರ್ಷಗಳ ಬಳಿಕ, ಬಿಜೆಪಿ ಪಡೆದ ಮತ ಶೇ.37.4ಕ್ಕೇರಿದ್ದು, ಒಟ್ಟು 303 ಸ್ಥಾನಗಳನ್ನು ಬಾಚಿಕೊಂಡಿತು. 2024ರ ಲೋಕಸಭಾ ಚುನಾವಣೆ ಬಿಜೆಪಿಗೊಂದು ರಿಯಾಲಿಟಿ ಚೆಕ್ ಆಗಿತ್ತು. ದಾಖಲೆಯ 303 ಸ್ಥಾನಗಳನ್ನು ಗೆದ್ದ ಬಿಜೆಪಿ 240 ಸ್ಥಾನಗಳಿಗೆ ಕುಸಿತ ಕಂಡಿದ್ದನ್ನು ಬಿಜೆಪಿ ನಾಯಕತ್ವವು, ಸರ್ಕಾರ ರಚನೆಗೆ ಬಹುಮತ ಬೇಕಾಗುತ್ತದೆ. ಆದರೆ ಪರಿವರ್ತನಾತ್ಮಕ ಸುಧಾರಣೆಗಳನ್ನು ಅನುಷ್ಠಾನಕ್ಕೆ ತರಬೇಕಾದರೆ ಸಂಸತ್ತಿನಲ್ಲಿ ದೊಡ್ಡ ಬಹುಮತವನ್ನು ಸಾಧಿಸಬೇಕೆಂಬ ಪಾಠವನ್ನಾಗಿ ಪರಿಗಣಿಸಿದಂತಿದೆ.

27 ವರ್ಷ ಬಳಿಕ ದಿಲ್ಲಿ ಗದ್ದುಗೆ

ಬಹುತೇಕ ಮೂರು ದಶಕಗಳ ಬಳಿಕ ದಿಲ್ಲಿಯ 70 ಕ್ಷೇತ್ರಗಳಲ್ಲಿ 48ನ್ನು ಗೆದ್ದುಕೊಂಡು 2025ರಲ್ಲಿ ಬಿಜೆಪಿ ಗದ್ದುಗೆಯನ್ನೇರಿತು. ಆಡಳಿತದಲ್ಲಿದ್ದ ಆಮ್ ಆದ್ಮಿ 22 ಸ್ಥಾನಗಳಿಗೆ ತೃಪ್ತಿ ಕಂಡಿತು. ಅರವಿಂದ ಕೇಜ್ರಿವಾಲ್ ಬೆಳವಣಿಗೆಯಿಂದ ರಾಜ್ಯದಲ್ಲಿ ಆಪ್ ಮತ್ತು ಬಿಜೆಪಿ ಎರಡನೇ ಪಕ್ಷಗಳು ಮುನ್ನೆಲೆಗೆ ಬಂದಿದ್ದವು.

ಬಿಹಾರ: ಜೂನಿಯರ್ ಈಗ ಸೀನಿಯರ್

ಬಿಹಾರದಲ್ಲಿ ಜೆಡಿ(ಯು) ನಾಯಕ ನಿತೀಶ್ ಕುಮಾರ್ ಅವರೊಂದಿಗೆ ಬಿಜೆಪಿ ಮೈತ್ರಿ ಪಕ್ಷವಾಗಿ ಗುರುತಿಸಿಕೊಂಡಿದ್ದು, 2025ರಲ್ಲಿ ಜೆಡಿಯುಗಿಂತ(85) ನಾಲ್ಕು ಸ್ಥಾನಗಳನ್ನು ಹೆಚ್ಚು ಗೆದ್ದ ಬಿಜೆಪಿ ಪ್ರಮುಖ ಪಕ್ಷವಾಯಿತು. ಬಿಜೆಪಿ ನೇತೃತ್ವದ ಎನ್‌ಡಿಎ 243ರಲ್ಲಿ 200 ಸ್ಥಾನಗಳನ್ನು ಗೆದ್ದು ಅಧಿಕಾರಕ್ಕೇರಿತು. ಇದಲ್ಲದೆ, ನಿತೀಶ್ ತಮ್ಮ ಮುಖ್ಯಮಂತ್ರಿ ಸ್ಥಾನವನ್ನು ಬಿಜೆಪಿಗೆ ಬಿಟ್ಟುಕೊಡಬೇಕಾಯಿತು.

ಒಡಿಶಾ: ಪ್ರಾದೇಶಿಕ ಕೋಟೆ ಮುರಿದ ಬಿಜೆಪಿ

ಪ್ರಾದೇಶಿಕ ಪಕ್ಷಗಳ ಕೋಟೆಯಾದ ಒಡಿಶಾದಲ್ಲಿ ರಾಷ್ಟ್ರೀಯ ಪಕ್ಷ ಬಿಜೆಪಿ ತನ್ನ ವ್ಯಾಪ್ತಿ ವಿಸ್ತರಿಸಿಕೊಂಡಿದೆ. ಒಡಿಶಾ ರಾಜ್ಯ, ಬಿಜೆಪಿಯ 21 ಸಂಸದರನ್ನು ಲೋಕಸಭೆಗೆ ಮತ್ತು 10 ಸಂಸದರನ್ನು ರಾಜ್ಯಸಭೆಗೆ ಕಳುಹಿಸಿದೆ.

ಮಹಾ ವಿಕಾಸ್ ಅಘಾಡಿಗೆ ಮುಖಭಂಗ

2024ರ ಲೋಕಸಭಾ ಚುನಾವಣೆಯಲ್ಲಿ ಪ್ರಬಲ ಪ್ರದರ್ಶನ ನೀಡಿದ್ದ ಮಹಾ ವಿಕಾಸ್ ಅಘಾಡಿ ತಿಂಗಳುಗಳ ಬಳಿಕ ನಡೆದ ವಿಧಾನಸಭಾ ಚುನಾವಣೆಯಲ್ಲಿ ಮಕಾಡೆಯಾಗಿ ಮಲಗಿತು. ಬಿಜೆಪಿ ನೇತೃತ್ವದ ಮಹಾಯುತಿ ಮ್ಯಾಜಿಕ್ ನಂ. 145ನ್ನು ಸುಲಭದಲ್ಲಿ ದಾಟಿದ್ದು, 288ರಲ್ಲಿ 235 ಸ್ಥಾನಗಳನ್ನು ಗೆದ್ದಿತು.

ಕ್ಷೇತ್ರ ಪುನರ್ ವಿಂಗಡಣೆಗೆ ಬಲ

ಜನಸಂಖ್ಯೆಯ ಬದಲಾವಣೆಗಳನ್ನು ಆಧರಿಸಿ ಲೋಕಸಭೆ ಮತ್ತು ವಿಧಾನಸಭಾ ಕ್ಷೇತ್ರಗಳ ಗಡಿ ಮರುನಿರ್ಣಯಿಸುವುದು ಮತ್ತು ಕ್ಷೇತ್ರಗಳ ಸಂಖ್ಯೆ ಮರುಹಂಚಿಕೆ ಮಾಡುವುದನ್ನು ಹೀಗೆ ಕರೆಯಲಾಗುತ್ತದೆ. ಈ ಪ್ರಕ್ರಿಯೆಯನ್ನು ಸೀಮಾ ನಿರ್ಣಯ ಆಯೋಗ (ಡಿಲಿಮಿಟೇಶನ್ ಕಮಿಷನ್) ನಡೆಸುತ್ತದೆ. 1976ರಲ್ಲಿ ಸಂವಿಧಾನದ 42ನೇ ತಿದ್ದುಪಡಿಯಲ್ಲಿ 2001ರವರೆಗೆ ಹಾಗೂ 2001ರಲ್ಲಿ 84ನೇ ತಿದ್ದುಪಡಿಯಲ್ಲಿ 2026ರವರೆಗೆ ತಡೆಹಿಡಿಯಲಾಗಿತ್ತು. ಜನಸಂಖ್ಯೆಗೆ ಅನುಗುಣವಾಗಿ ಪ್ರತಿನಿಧಿತ್ವ ಇರಬೇಕೆಂಬುದೇ ಬಿಜೆಪಿಯ ವಾದ. ಇದು ಜಾರಿಗೆ ಬಂದರೆ ಉತ್ತರ ಮತ್ತು ದಕ್ಷಿಣ ಭಾರತದ ವಿವಿಧ ರಾಜ್ಯಗಳಲ್ಲಿ ಕ್ಷೇತ್ರಗಳ ಸಂಖ್ಯೆ ಹೆಚ್ಚಾಗಲಿದೆ.

ಒನ್ ನೇಷನ್ ಒನ್ ಎಲೆಕ್ಷನ್ ಸಲೀಸು

ದೇಶಾದ್ಯಂತ ಲೋಕಸಭೆ ಮತ್ತು ಎಲ್ಲಾ ರಾಜ್ಯಗಳ ವಿಧಾನಸಭಾ ಚುನಾವಣೆಗಳು ಒಂದೇ ಸಮಯದಲ್ಲಿ ನಡೆಸುವ ಚುನಾವಣಾ ವ್ಯವಸ್ಥೆ ಜಾರಿಗೆ ತರಬೇಕೆಂಬುದು ಬಿಜೆಪಿಯ ವಾದ. ಯಾಕೆಂದರೆ ಇದು ಚುನಾವಣಾ ವೆಚ್ಚ ಕಡಿಮೆ ಮಾಡಲಿದ್ದು, ಪದೇ ಪದೆ ಜಾರಿಯಾಗುವ ಚುನಾವಣಾ ನೀತಿ ಸಂಹಿತೆಯ ಪರಿಣಾಮ ಕಡಿಮೆಯಾಗಲಿದೆ.

ರಾಜ್ಯಸಭೆಯಲ್ಲಿ 2/3 ಬಹುಮತ

ಬಿಜೆಪಿ ತನ್ನ ಶಾಸನಾತ್ಮಕ ಬದಲಾವಣೆಗಳು, ಪರಿವರ್ತನಾತ್ಮಕ ಸುಧಾರಣೆಗಳನ್ನು ಅನುಷ್ಠಾನಕ್ಕೆ ತರಬೇಕಾದರೆ ರಾಜ್ಯಸಭೆಯಲ್ಲಿ 2/3 ಪ್ರತಿನಿಧಿತ್ವ ಇರಬೇಕಾಗುತ್ತದೆ. ಲೋಕಸಭೆ ಮತ್ತು ರಾಜ್ಯಸಭೆ ಎರಡರಲ್ಲೂ ದೊಡ್ಡ ಬಹುಮತ ಇದ್ದರೆ, ಬಿಜೆಪಿ ನಿರಾತಂಕವಾಗಿ ತನ್ನ ಅಜೆಂಡಾಗಳನ್ನು ಸಾಧಿಸಬಹುದು. ರಾಜ್ಯಸಭೆ 245 ಸದಸ್ಯರ ಬಲ ಹೊಂದಿದ್ದು, ಗುರುವಾರ 12 ಬಿಜೆಪಿ ಸಹಿತ 20 ಎನ್‌ಡಿಎ ಅಭ್ಯರ್ಥಿಗಳು ಅವಿರೋಧ ಆಯ್ಕೆಯಾಗಿದ್ದು, ಬಿಜೆಪಿ ರಾಜ್ಯಸಭೆ ಸಂಸದರ ಸಂಖ್ಯೆ 125 ತಲುಪಿದೆ. 2/3 ಬಹುಮತ ಆಗಬೇಕಿದ್ದರೆ ಬಿಜೆಪಿ ಸಂಸದರ ಸಂಖ್ಯೆ 163+ ಆಗಬೇಕಿದೆ.

ಏನಾಸಂ ಜಾರಿಗೂ ತಯಾರಿ

ಬಿಜೆಪಿ ಅಜೆಂಡಾಗಳಲ್ಲಿ ಏಕರೂಪ ನಾಗರಿಕ ಸಂಹಿತೆ (ಏನಾಸಂ) ಪ್ರಮುಖವಾದದ್ದು. ದೇಶದ ಎಲ್ಲಾ ನಾಗರಿಕರಿಗೆ ಜಾತಿ, ಧರ್ಮ ಅಥವಾ ಸಮುದಾಯದ ಬೇಧವಿಲ್ಲದೆ ಸಮಾನ ನೀತಿಯ ಕಾನೂನು ಅನ್ವಯಿಸುವ ವ್ಯವಸ್ಥೆ ಇದಾಗಿರಲಿದೆ. ಇದನ್ನು ಬಿಜೆಪಿ ಆಡಳಿತದ ಅಸ್ಸಾಂ ವಿಧಾನಸಭೆ ಅಂಗೀಕರಿಸಿದೆ.

ಕಿರುಸುದ್ದಿ

ಕೇರಳಕ್ಕೆ ಡಾ.ಮೋಹನ್ ಭಾಗವತ್ ಆಗಮನ

• ತಿರುವನಂತಪುರಂ: ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್)ದ ಸರಸಂಘಚಾಲಕ ಮೋಹನ್ ಭಾಗವತ್ ಅವರು ಮೂರು ದಿನಗಳ ಕೇರಳ ಪ್ರವಾಸಕ್ಕಾಗಿ ಶುಕ್ರವಾರ ತಿರುವನಂತಪುರಂಗೆ ಆಗಮಿಸಿದ್ದಾರೆ. ಆರ್‌ಎಸ್‌ಎಸ್‌ನ ಶತಮಾನೋತ್ಸವ ಕಾರ್ಯಕ್ರಮಗಳ ಅಂಗವಾಗಿ ರಾಜ್ಯದ ವಿವಿಧ ಭಾಗಗಳಲ್ಲಿ ನಡೆಯಲಿರುವ ಉಪನ್ಯಾಸ ಹಾಗೂ ಸಂವಾದ ಕಾರ್ಯಕ್ರಮಗಳಲ್ಲಿ ಅವರು ಭಾಗವಹಿಸಲಿದ್ದಾರೆ. ಶುಕ್ರವಾರ ಸಂಜೆ ವಿಮಾನದ ಮೂಲಕ ತಿರುವನಂತಪುರಂ ತಲುಪಿದ ಭಾಗವತ್, ಜೂ.13ರಂದು ಸಂಜೆ 4.30ಕ್ಕೆ ತಿರುವನಂತಪುರಂನ ಉದಯ ಪ್ಯಾಲೇಸ್ ಕನ್ವೆನ್ಷನ್ ಸೆಂಟರ್‌ನಲ್ಲಿ ಆಯೋಜಿಸಿರುವ ಆಹ್ವಾನಿತ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಬಳಿಕ ಆಹ್ವಾನಿತರೊಂದಿಗೆ ಸಂವಾದ ನಡೆಸಿ ಅವರ ಪ್ರಶ್ನೆಗಳಿಗೆ ಉತ್ತರಿಸಲಿದ್ದಾರೆ. ಜೂ.14ರಂದು ಸಂಜೆ 4.30ಕ್ಕೆ ತ್ರಿಶೂರ್ ನಗರದ ಹಯಾತ್ ರೀಜೆನ್ಸಿಯಲ್ಲಿ ಇದೇ ಮಾದರಿಯ ಮತ್ತೊಂದು ಕಾರ್ಯಕ್ರಮ ನಡೆಯಲಿದೆ.

ಅಮರನಾಥ ಯಾತ್ರೆ: ಬಹುಹಂತದ ಭದ್ರತೆ

• ಹೊಸದಿಲ್ಲಿ: ಅಮರನಾಥ ಯಾತ್ರಾ ಮಾರ್ಗದಲ್ಲಿ ಮತ್ತು ಪ್ರವಾಸಿ ಸ್ಥಳಗಳಲ್ಲಿ ಶಾಂತಿಯುತ ತೀರ್ಥಯಾತ್ರೆಯನ್ನು ಖಚಿತಪಡಿಸಿಕೊಳ್ಳಲು ಸಿಎಪಿಎಫ್‌ಗಳು, ಜಮ್ಮು-ಕಾಶ್ಮೀರ ಪೊಲೀಸರು ಮತ್ತು ಎಲ್ಲಾ ಭದ್ರತಾ ಸಂಸ್ಥೆಗಳು ಬಹು ಹಂತದ, ಅಭೇದ್ಯ ಭದ್ರತಾ ಜಾಲವನ್ನು ಸ್ಥಾಪಿಸಬೇಕು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ಹೇಳಿದ್ದಾರೆ. ಜು.3ರಂದು ಪ್ರಾರಂಭವಾಗುವ ಯಾತ್ರೆಯ ಸನ್ನದ್ಧತೆಯ ಕುರಿತ ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಶಾ, ಡ್ರೋನ್‌ಗಳು, ಸಿಸಿಟಿವಿ ಮೇಲ್ವಿಚಾರಣೆ, ಕಣ್ಗಾವಲು ವ್ಯವಸ್ಥೆಗಳು ಮತ್ತು ಇತರ ಆಧುನಿಕ ತಂತ್ರಜ್ಞಾನಗಳ ವ್ಯಾಪಕ ಬಳಕೆಯ ಮೂಲಕ ಸಾಂಪ್ರದಾಯಿಕ ಭದ್ರತಾ ಉಪಕರಣಗಳನ್ನು ಮತ್ತಷ್ಟು ಬಲಪಡಿಸಬೇಕು ಎಂದರು.

ಟಿವಿ, ರೇಡಿಯೋ ಏಕ ನಿಯಂತ್ರಣ ಚೌಕಟ್ಟಿಗೆ

ಹೊಸದಿಲ್ಲಿ: ಕೇಂದ್ರ ದೂರದರ್ಶನ ಮತ್ತು ರೇಡಿಯೋ ಪ್ರಸಾರ ಸೇವೆಗಳಿಗೆ ಒಂದೇ ನಿಯಂತ್ರಕ ಚೌಕಟ್ಟನ್ನು ಪ್ರಸ್ತಾಪಿಸಿದ್ದು, ಟಿವಿ ಚಾನೆಲ್‌ಗಳಿಂದ ಖಾಸಗಿ ರೇಡಿಯೋ ಸೇವೆಗಳಿಗೆ ರಾಷ್ಟ್ರೀಯ ಪ್ರಾಮುಖ್ಯತೆ ಮತ್ತು ಸಾಮಾಜಿಕ ಪ್ರಸ್ತುತತೆಯ ವಿಷಯಗಳ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವ ಬಾಧ್ಯತೆ ವಿಸ್ತರಿಸಿದೆ. ಮಾಹಿತಿ ಮತ್ತು ಪ್ರಸಾರ ಸಚಿವಾಲಯವು ಶುಕ್ರವಾರ ಸಾರ್ವಜನಿಕಗೊಳಿಸಿದ ಕರಡು ದೂರಸಂಪರ್ಕ(ದೂರದರ್ಶನ, ರೇಡಿಯೋ ಮತ್ತು ಸಂಬಂಧಿತ ಸೇವೆಗಳು) ನಿಯಮಗಳು, 2026, ಟಿವಿ ಚಾನೆಲ್‌ಗಳು ಪ್ರತಿದಿನ ಬೆಳಗ್ಗೆ 6ರಿಂದ ರಾತ್ರಿ 11ರವರೆಗೆ ಕನಿಷ್ಠ 30 ನಿಮಿಷಗಳ ಕಾಲ ಈ ವಿಷಯಗಳ ಬಗ್ಗೆ ವಿಷಯವನ್ನು ಪ್ರಸಾರ ಮಾಡಬೇಕಾಗುತ್ತದೆ.

ಭಾಗವತ್ ಇದ್ದ ರೈಲಿಗೆ ಕಲ್ಲೆಸೆತ: ಇಬ್ಬರ ಸೆರೆ

• ಫಿರೋಜಾಬಾದ್: ಲಖನೌ-ಹೊಸದಿಲ್ಲಿ ಸ್ವರ್ಣ ಶತಾಬ್ದಿ ಎಕ್ಸ್‌ಪ್ರೆಸ್ ರೈಲಿಗೆ ಫಿರೋಜಾಬಾದ್ ಬಳಿ ಕಲ್ಲೆಸೆದ ಘಟನೆ ಗುರುವಾರ ಸಂಜೆ ನಡೆದಿದ್ದು, ಈ ಕುಕೃತ್ಯವೆಸಗಿದ ಇಬ್ಬರು ಅಪ್ರಾಪ್ತರನ್ನು ಪೊಲೀಸರು ಬಂಧಿಸಿದ್ದು, ಮೂರನೆಯವನಿಗಾಗಿ ಶೋಧಿಸಲಾಗುತ್ತಿದೆ. ಗುರುವಾರ ಸಂಜೆ 7.20ರ ಸುಮಾರಿಗೆ ಪೇಮೇಶ್ವರ ಗೇಟ್ ಬಳಿ ಈ ಕೃತ್ಯ ನಡೆದಿದ್ದು, ಎಕ್ಸ್‌ಪ್ರೆಸ್ ರೈಲಿನ ಇ1 ಬೋಗಿಯತ್ತ ಕಲ್ಲೆಸೆಯಲಾಗಿತ್ತು. ಇದರಿಂದ ರೈಲಿನ ಕಿಟಕಿಗೆ ಹಾನಿಯಾಗಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ್ ಡಾ. ಮೋಹನ್ ಭಾಗವತ್ ಅವರು ಕಾನ್ಪುರದಲ್ಲಿ ರೈಲನ್ನೇರಿ ಪ್ರಯಾಣಿಸುತ್ತಿದ್ದರು. ಅವರಿಗೆ ಯಾವುದೇ ಹಾನಿಯಾಗಿಲ್ಲ. ಈ ಹೀನ ಕೃತ್ಯವನ್ನು ಗಂಭೀರವಾಗಿ ಪರಿಗಣಿಸಿರುವ ಪೊಲೀಸರು ಮತ್ತು ರೈಲ್ವೆ ಇಲಾಖೆಯು ಆಗ್ರಾ ವಿಭಾಗದ ಅಡಿಶನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಎಸ್.ಕೆ. ಭಗತ್ ನೇತೃತ್ವದಲ್ಲಿ 7 ತಂಡಗಳನ್ನು ರಚಿಸಿತ್ತು. ಬಳಿಕ ನಡೆದ ತನಿಖೆಯ ವೇಳೆ 50 ಸಿಸಿಟಿವಿ ಕ್ಯಾಮೆರಾಗಳ ದಾಖಲೆಗಳನ್ನು ಪರಿಶೀಲಿಸಿದಾಗ ಮೂವರು ಅಪ್ರಾಪ್ತರು ಕಲ್ಲೆಸೆದಿರುವುದು ಕಂಡುಬಂದಿದೆ. ಇವರು ಚಿಂದಿ ಆಯುವವರು ಎನ್ನಲಾಗುತ್ತಿದ್ದು, ಇವರಿಗೆ ಎಲ್ಲಿಂದ ಪ್ರಚೋದನೆ ಲಭಿಸಿತ್ತು ಎಂಬುದರ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ದೇಶದಲ್ಲಿ ಕುಕೃತ್ಯಗಳನ್ನೆಸಗಲು ಅಪ್ರಾಪ್ತರನ್ನು ಬಳಸುವ ಪ್ರಕರಣಗಳು ಇತ್ತೀಚೆಗೆ ಹೆಚ್ಚುತ್ತಿವೆ. ಈ ಹಿನ್ನೆಲೆಯಲ್ಲಿ ಅಪ್ರಾಪ್ತರ ವಿರುದ್ಧವೂ ಕಾನೂನು ಕ್ರಮಕ್ಕೆ ಅಗತ್ಯ ನಿಯಮಗಳನ್ನು ರೂಪಿಸಬೇಕೆಂಬ ಆಗ್ರಹ ವ್ಯಕ್ತವಾಗುತ್ತಿರುವುದಿಲ್ಲಿ ಉಲ್ಲೇಖನೀಯ.

ಗಡಿ ನುಸುಳುವಿಕೆ ಬಗ್ಗೆ ಭಾರತ-ಬಾಂಗ್ಲಾ ಚರ್ಚೆ

• ಹೊಸದಿಲ್ಲಿ: ಭಾರತ ಮತ್ತು ಬಾಂಗ್ಲಾ ದೇಶ ನಡುವೆ ಡಿಜಿ ಮಟ್ಟದ ನಾಲ್ಕು ದಿನಗಳ ಮಾತುಕತೆಯು ಜೂ.11ರಂದು ಸಮಾಪನಗೊಂಡಿದ್ದು, ಗಡಿಯಲ್ಲಿನ ಸಾವುಗಳು ಮತ್ತು ಅಕ್ರಮ, ದುಸ್ಸಾಹಸದ ಮತ್ತು ಬಲವಂತದ ನುಸುಳುವಿಕೆಯಂತಹ ವಿಷಯಗಳ ಬಗ್ಗೆ ಚರ್ಚಿಸಲಾಗಿದೆ ಎಂದು ಶುಕ್ರವಾರ ಬಿಡುಗಡೆಗೊಳಿಸಲಾದ ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ. ಕಟ್ಟೆಚ್ಚರ, ಶಾಂತಿ, ಸಮನ್ವಯ, ಗಡಿ ಸಹಕಾರ, ಪರಸ್ಪರ ವಿಶ್ವಾಸ, ಧನಾತ್ಮಕ ನೆಲೆಗಳಲ್ಲಿ ಸಮನ್ವಯ ಸಾಧಿಸುವುದಕ್ಕೆ ಮಾತುಕತೆಯಲ್ಲಿ ಒತ್ತು ನೀಡಲಾಗಿದೆ.

ಬಾಂಗ್ಲಾ ದೇಶದ ಬಾರ್ಡರ್ ಗಾರ್ಡ್ ಬಾಂಗ್ಲಾದೇಶ್(ಡಿಜಿಬಿ) ಮಹಾನಿರ್ದೇಶಕ ಮೇಜರ್ ಜ.ಮೊಹಮ್ಮದ್ ಅಶ್ರಫುಜ್ಜಮಾನ್ ಸಿದ್ದಿಕಿ ನೇತೃತ್ವದ ನಿಯೋಗವೊಂದು ದಿಲ್ಲಿಗೆ ಆಗಮಿಸಿದ್ದು, ಭಾರತೀಯ ಗಡಿ ಭದ್ರತಾ ಪಡೆ(ಬಿಎಸ್‌ಎಫ್) ಮಹಾನಿರ್ದೇಶಕ ಪ್ರವೀಣ್ ಕುಮಾರ್ ನೇತೃತ್ವದ ನಿಯೋಗದೊಂದಿಗೆ ಮಾತುಕತೆ ನಡೆಸಿದೆ. ಮುಂದಿನ ಮಾತುಕತೆ ನವೆಂಬರ್‌ನಲ್ಲಿ ಢಾಕಾದಲ್ಲಿ ನಡೆಯುವ ನಿರೀಕ್ಷೆಯಿದೆ. ಈ 57ನೇ ದ್ವೈವಾರ್ಷಿಕ ಆವೃತ್ತಿಯ ಡಿಜಿ ಮಟ್ಟದ ಗಡಿ ಸಹಕಾರ ಸಮ್ಮೇಳನವು ಜೂ.8ರಿಂದ 11ರವರೆಗೆ ಬಿಎಸ್‌ಎಫ್‌ನ ಕೇಂದ್ರ ಕಚೇರಿಯಲ್ಲಿ ನಡೆದಿದೆ. ಮಾದಕದ್ರವ್ಯ, ಶಸ್ತ್ರಾಸ್ತ್ರ, ಕಳ್ಳನೋಟು, ಚಿನ್ನ ಮತ್ತಿತರ ನಿಷಿದ್ಧ ವಸ್ತುಗಳ ಕಳ್ಳಸಾಗಣೆ, ಅಕ್ರಮ ಗಡಿ ದಾಟುವಿಕೆ, ಮಾನವ ಕಳ್ಳಸಾಗಣೆಯಂತಹ ಗಡಿಯಾಚೆಯ ಅಪರಾಧಗಳನ್ನು ತಡೆಗಟ್ಟುವ ಬಗ್ಗೆ ಎರಡೂ ಕಡೆಗಳವರು ವಿಸ್ತೃತವಾಗಿ ಚರ್ಚಿಸಿರುವುದಾಗಿ ಬಿಎಸ್‌ಎಫ್ ಹೇಳಿಕೆ ತಿಳಿಸಿದೆ.

ಟ್ರಂಪ್ ಹೇಳಿಕೆ ನಂತರ ತೈಲ ಅಗ್ಗ, ಸೆನ್ಸೆಕ್ಸ್ ಜಿಗಿತ

• ಮುಂಬೈ: ಇರಾನ್ ಜತೆಗಿನ ಯುದ್ಧ ಕೊನೆಗೊಂಡಿದೆ ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆ ಬಳಿಕ ಜಾಗತಿಕ ಕಚ್ಚಾ ತೈಲ ಬೆಲೆ ಕುಸಿತ ಕಂಡಿದ್ದು, ಷೇರುಪೇಟೆ ಸೂಚ್ಯಂಕಗಳೂ ಧನಾತ್ಮಕ ಸ್ಪಂದನೆ ವ್ಯಕ್ತಪಡಿಸಿವೆ. ಭಾರತದಲ್ಲಿ ಬಿಎಸ್‌ಇ ಸೆನ್ಸೆಕ್ಸ್ 1,695 ಅಂಕಗಳ ಏರಿಕೆಯನ್ನು ಕಂಡಿದ್ದು, ಎನ್‌ಎಸ್‌ಇ ನಿಫ್ಟಿ ಸಹ 23,600 ಅಂಕಗಳನ್ನು ದಾಟಿದೆ. ಈ ಮೂಲಕ ಮಾರುಕಟ್ಟೆ ಬಂಡವಾಳ 9.71 ಲಕ್ಷ ಕೋಟಿ ರೂ. ಹೆಚ್ಚಳವಾಗಿದೆ. ಶುಕ್ರವಾರದ ವಹಿವಾಟು ಮುಕ್ತಾಯದ ವೇಳೆಗೆ ಬಿಎಸ್‌ಇ ಸೆನ್ಸೆಕ್ಸ್ 1,695.40 ಅಂಕಗಳ, ಅಂದರೆ



ಶೇ.2.3ರ ಏರಿಕೆಯೊಂದಿಗೆ 75,527.95 ಅಂಕಗಳನ್ನು ತಲುಪಿತ್ತು. ಆದರೆ, ದಿನದ ವಹಿವಾಟಿನ ವೇಳೆ ಸೆನ್ಸೆಕ್ಸ್ 1,775.47 ಅಂಕಗಳ (ಶೇ.2.4) ಏರಿಕೆಯೊಂದಿಗೆ 75,608.02 ಅಂಕಗಳನ್ನು ತಲುಪಿತ್ತು. ಅದೇ ರೀತಿ ಶುಕ್ರವಾರದ ವಹಿವಾಟು ಅಂತ್ಯಗೊಳಿಸಲು ಎನ್‌ಎಸ್‌ಇ ನಿಫ್ಟಿ 461.30 ಅಂಕಗಳ (ಶೇ.1.99) ಏರಿಕೆಯೊಂದಿಗೆ 23,622.90 ಅಂಕಗಳನ್ನು ತಲುಪಿದೆ. ಇಂಟ್ರಾ-ಡೇ ವಹಿವಾಟಿನ ವೇಳೆ ನಿಫ್ಟಿ ಸೂಚ್ಯಂಕ 483.75 ಅಂಕಗಳ (ಶೇ.2) ಏರಿಕೆಯೊಂದಿಗೆ 23,645.35 ಅಂಕಗಳನ್ನು ತಲುಪಿತ್ತು. ಬಜಾಜ್ ಫಿನಾನ್ಸ್, ಲಾರ್ಸನ್ ಆ್ಯಂಡ್ ಟಬ್ರೋ, ಇಂಟರ್‌ಗ್ಲೋಬ್ ಏವಿಯೇಷನ್, ಟೈಟಾನ್, ಎಟರ್ನಲ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಷೇರುಗಳು ಏರಿಕೆ ಕಂಡಿವೆ. ಟೆಕ್ ಮಹೀಂದ್ರ ಮತ್ತು ಪವರ್‌ಗ್ರಿಡ್ ಷೇರುಗಳ ಹಿಂದೆ ಉಳಿದುಕೊಂಡಿವೆ. ಕಚ್ಚಾ ತೈಲ ಬೆಲೆ ಇಳಿಕೆ: ಟ್ರಂಪ್ ಹೇಳಿಕೆಯ ನಂತರ ಕಚ್ಚಾ ತೈಲ ಬೆಲೆ ಶೇ.4ರಷ್ಟು ಇಳಿಕೆಯಾಗಿದ್ದು, ಜಾಗತಿಕ ಮಾರುಕಟ್ಟೆಯಲ್ಲಿ ಪ್ರತಿ ಬ್ಯಾರಲ್‌ಗೆ 90 ಡಾಲರ್‌ಗೂ ಕಡಿಮೆ ಬೆಲೆಗೆ ಮಾರಾಟವಾಗಿದೆ.

ಮೋದಿ ಫ್ರಾನ್ಸ್ ಪ್ರವಾಸ ಇಂದು

• ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರದಿಂದ ಫ್ರಾನ್ಸ್ ಮತ್ತು ಸ್ಲೋವಾಕಿಯಾಗೆ ಅಧಿಕೃತ ಭೇಟಿ ನೀಡಲಿದ್ದಾರೆ. ಫ್ರಾನ್ಸ್‌ನಲ್ಲಿ ನಡೆಯುವ ಜಿ7 ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ. ಪ್ರಧಾನಿ ಮೋದಿ ಹಾಗೂ ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರಾನ್ ಅವರು ಜೂ.14ರಂದು ಫ್ರಾನ್ಸ್‌ನ ನೀಸ್ ನಗರದಲ್ಲಿ ನಡೆಯಲಿರುವ ಭಾರತ್ ಇನ್ನೋವೇಟ್ಸ್ 2026 ಕಾರ್ಯಕ್ರಮವನ್ನು ಜಂಟಿಯಾಗಿ ಉದ್ಘಾಟಿಸಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಭಾರತದ 120 ನವೋದ್ಯಮಿಗಳು, ಸುಮಾರು 15 ಉನ್ನತ ಶಿಕ್ಷಣ ಸಂಸ್ಥೆಗಳು ಹಾಗೂ 500ಕ್ಕೂ ಹೆಚ್ಚು ಹೂಡಿಕೆದಾರರು ಭಾಗವಹಿಸಲಿದ್ದಾರೆ. ಜಾಗತಿಕ ಕಾರ್ಪೊರೇಟ್ ಸಂಸ್ಥೆಗಳು, ವೆಂಚರ್ ಕ್ಯಾಪಿಟಲ್ ಕಂಪನಿಗಳು, ಪ್ರಮುಖ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು(ಸಿಇಒ) ಹಾಗೂ ಕೈಗಾರಿಕಾ ವಲಯದ ನಾಯಕರು ಸಹ ಕಾರ್ಯಕ್ರಮದಲ್ಲಿ ಉಪಸ್ಥಿತರಿರಲಿದ್ದಾರೆ. ಪ್ರವಾಸದ ಎರಡನೇ ಹಂತದಲ್ಲಿ, ಪ್ರಧಾನಿ ಮೋದಿ ಅವರು ಪ್ರಧಾನಿ ರಾಬರ್ಟ್ ಫಿಕೋ ಅವರ ಆಹ್ವಾನದ ಮೇರೆಗೆ ಸ್ಲೋವಾಕಿಯಾಗೆ ಐತಿಹಾಸಿಕ ಅಧಿಕೃತ ಭೇಟಿ ನೀಡಲಿದ್ದಾರೆ.

ಪಾಶ್ಚಿಮಾತ್ಯರ ಬೂಟಾಟಿಕೆ ಬಯಲಿಗೆಳೆದ ವಿದೇಶಾಂಗ ಸಚಿವ ಜೈಶಂಕರ್

ಯುರೋಪ್ ಶಸ್ತ್ರಾಸ್ತ್ರ ಭಾರತ ವಿರುದ್ಧ ಬಳಕೆ!

• ಹೊಸದಿಲ್ಲಿ: ಪದೇ ಪದೆ ರಷ್ಯಾದಿಂದ ತೈಲ ಖರೀದಿ ವಿಚಾರದಲ್ಲಿ ಭಾರತವನ್ನು ಟೀಕಿಸುವ ಯುರೋಪ್ ರಾಷ್ಟ್ರಗಳಿಗೆ ವಿದೇಶಾಂಗ ಸಚಿವ ಎಸ್.ಜೈಶಂಕರ್ ಖಡಕ್ ಪ್ರತ್ಯುತ್ತರ ನೀಡಿದ್ದಾರೆ.

ಇಂದು ನಿನ್ನೆಯ ಕತೆಯಲ್ಲ. ಹಲವು ವರ್ಷಗಳಿಂದ ಯುರೋಪಿಯನ್ನರು ಮಾರಾಟ ಮಾಡಿದ ಶಸ್ತ್ರಾಸ್ತ್ರಗಳು ಭಾರತದ ಮೇಲೆ ದಾಳಿಗೆ ಬಳಕೆಯಾಗುತ್ತಿದ್ದವು. ನಾವು ಭಾರತೀಯರು ಯುರೋಪ್‌ಗೆ ಅಪಾಯ ಆಗುವಂತಹ ಯಾವುದೇ ಕೆಲಸಗಳನ್ನು ಮಾಡಿಲ್ಲ. ನನ್ನ ಪ್ರಕಾರ ಇದು ನ್ಯಾಯವಾದ ಅಂಶ ಎಂದು ಜೈಶಂಕರ್ ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದಾರೆ. ಫಿನ್‌ಲ್ಯಾಂಡ್‌ನಲ್ಲಿ ನಡೆದ ಕುಲ್ತಾರಂತ ಟಾಕ್ಸ್‌ನಲ್ಲಿ ಜಾಗತಿಕ ರಾಜಕೀಯ ಸ್ಪರ್ಧೆ ವಿಷಯದ ಕುರಿತ ಮಾತುಕತೆಯಲ್ಲಿ ಜೈಶಂಕರ್ ಭಾಗವಹಿಸಿದ್ದರು. ಮಾತುಕತೆಯಲ್ಲಿ ಫಿನ್‌ಲ್ಯಾಂಡ್ ಪತ್ರಕರ್ತರೊಬ್ಬರು, ಭಾರತ ರಷ್ಯಾ ಮೇಲೆ ಅತಿಯಾದ ಕಾಳಜಿಯನ್ನು ಹೊಂದಿದೆಯೇ? ಎಂದು ಪ್ರಶ್ನಿಸಿದ್ದಾರೆ.

ಪ್ರಶ್ನೆಗೆ ಉತ್ತರಿಸಿದ ಸಚಿವ ಜೈಶಂಕರ್, ವೆಚ್ಚ ಮತ್ತು ಲಭ್ಯತೆ ಆಧಾರದಲ್ಲಿ ನಾವು ತೈಲ ಖರೀದಿಸುತ್ತೇವೆಯೇ ಹೊರತು ರಾಜಕೀಯ ಒತ್ತಡದ ಆಧಾರದ ಮೇಲೆ



ಅಲ್ಲ. ಯುರೋಪಿಯನ್ನರು ನಮ್ಮ ಸಾಂಪ್ರದಾಯಿಕ ತೈಲ ಪೂರೈಕೆದಾರ ಮಧ್ಯಪ್ರಾಚ್ಯದಿಂದ ತೈಲ ಖರೀದಿಸುತ್ತಿದ್ದಾರೆ. ಈ ವೇಳೆ ರಷ್ಯಾ ತೈಲ ಲಭ್ಯವಿತ್ತು. ಹೀಗಾಗಿ ರಷ್ಯಾದಿಂದ ತೈಲ ಖರೀದಿಸುವ ಅಗತ್ಯ ಎದುರಾಯಿತು ಎಂದು ಮನದಟ್ಟು ಮಾಡಿದ್ದಾರೆ.

ಆಯ್ದ ವಿಚಾರಗಳಲ್ಲಷ್ಟೇ ನೈತಿಕತೆ: ಪಾಶ್ಚಿಮಾತ್ಯ ಶಕ್ತಿಗಳು ಆಯ್ದವಿಚಾರಗಳಲ್ಲಿಮಾತ್ರ ಯಾಕೆನೈತಿಕಮಾನದಂಡವನ್ನು ಪರಿಗಣಿಸುತ್ತವೆ? ಎಂದು ಜೈಶಂಕರ್ ಟೀಕಿಸಿದ್ದಾರೆ. ಜಾಗತಿಕ ತೈಲ ಮಾರುಕಟ್ಟೆಯನ್ನು ಸ್ಥಿರಗೊಳಿಸುವಲ್ಲಿ ಭಾರತ ಪಾತ್ರವನ್ನು ಅಮೆರಿಕ ಶ್ಲಾಘಿಸಿತ್ತೆಂದು ಹೇಳಿದ್ದಾರೆ. ಜಾಗತಿಕ ತೈಲ ಮಾರುಕಟ್ಟೆಯನ್ನು ಸ್ಥಿರಗೊಳಿಸಲು ಭಾರತವು ರಷ್ಯಾದಿಂದ ತೈಲ ಖರೀದಿಸಬೇಕು ಎಂದು ಅಮೆರಿಕ ಹೇಳಿದ್ದನ್ನು ಜನ ಮರೆಯಬಾರದು ಎಂದಿದ್ದಾರೆ.

ನಮ್ಮ ಶಸ್ತ್ರಾಸ್ತ್ರ ನಿಮ್ಮ ವಿರುದ್ಧ ಬಳಕೆ ಆಗಿಲ್ಲ

ಯಾವುದೇ ಯುರೋಪ್ ರಾಷ್ಟ್ರಗಳು ಭಾರತೀಯ ಶಸ್ತ್ರಾಸ್ತ್ರಗಳಿಂದ ದಾಳಿಗೆ ಒಳಗಾಗಿಲ್ಲ. ಶಸ್ತ್ರಾಸ್ತ್ರಗಳ ವಿಷಯದಲ್ಲಿ ಯುರೋಪ್ ರಾಷ್ಟ್ರಗಳೂ ಇದೇ ಮಾತನ್ನು ಭಾರತಕ್ಕೆ ಹೇಳಬಹುದಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂದು ಜೈಶಂಕರ್ ಟೀಕಾಸ್ತ್ರ ಪ್ರಯೋಗಿಸಿದ್ದಾರೆ.

30 ಸಾ.ರೂ. ವೇತನ ಮೌಲ್ಯದ ಕೆಲಸ ಗೃಹಿಣಿಯರದು

ಗೃಹಿಣಿಯರು ರಾಷ್ಟ್ರ ನಿರ್ಮಾತೃಗಳು

• ಹೊಸದಿಲ್ಲಿ: ಗೃಹಿಯರು ಕೇವಲ ಮನೆಯ ನಿರ್ವಹಣೆಗೆ ಸೀಮಿತವಾಗಿರುವವರಲ್ಲ, ಅವರು ದೇಶ ನಿರ್ಮಾಣದ ಪ್ರಮುಖ ಶಕ್ತಿಯಾಗಿದ್ದಾರೆ ಎಂದು ಮಹತ್ವದ ಅಭಿಪ್ರಾಯ ವ್ಯಕ್ತಪಡಿಸಿರುವ ಭಾರತದ ಸುಪ್ರೀಂ ಕೋರ್ಟ್, ಮೋಟಾರು ವಾಹನ ಅಪಘಾತ ಪರಿಹಾರ



ಪ್ರಕರಣಗಳಲ್ಲಿ ಗೃಹಿಯರ ಸೇವೆಯ ಮೌಲ್ಯಮಾಪನಕ್ಕಾಗಿ ಮಾಸಿಕ 30 ಸಾವಿರವನ್ನು ಕನಿಷ್ಠ ಕಾಲ್ಪನಿಕ ಆದಾಯವಾಗಿ ಪರಿಗಣಿಸುವಂತೆ ಐತಿಹಾಸಿಕ ತೀರ್ಪು ನೀಡಿದೆ. ನ್ಯಾಯಮೂರ್ತಿಗಳಾದ ಸಂಜಯ್ ಕರೋಲ್ ಹಾಗೂ ಎನ್. ಕೋಟೀಶ್ವರ್ ಸಿಂಗ್ ಅವರಿದ್ದ ಪೀಠವು, ಗೃಹಿಯರ ಗೃಹ ಆರೈಕೆ ಸೇವೆಯ ನಷ್ಟವನ್ನು ಪ್ರತ್ಯೇಕ ಪರಿಹಾರದ ಶೀರ್ಷಿಕೆಯಾಗಿ ಪರಿಗಣಿಸಬೇಕು ಎಂದು ಸ್ಪಷ್ಟಪಡಿಸಿದೆ. ಗೃಹಿಯರ ಶ್ರಮವನ್ನು ಕೇವಲ ವೇತನದ ಕೆಲಸದ ಮಾನದಂಡಗಳಿಂದ ಅಳೆಯಲು ಸಾಧ್ಯವಿಲ್ಲ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ. ಗೃಹಿಣಿಯರು ಕುಟುಂಬದ ಬೆಳವಣಿಗೆಗೆ ಮಾತ್ರವಲ್ಲ, ರಾಷ್ಟ್ರದ ನಿರ್ಮಾಣಕ್ಕೂ ಕೊಡುಗೆ ನೀಡುತ್ತಾರೆ. ಆದ್ದರಿಂದ ಅವರನ್ನು ರಾಷ್ಟ್ರ ನಿರ್ಮಾತೃಗಳು ಎಂದು ಗುರುತಿಸಬೇಕು ಎಂದು ನ್ಯಾಯಪೀಠ ಹೇಳಿದೆ. 2001ರಲ್ಲಿ ಪಂಜಾಬ್‌ನಲ್ಲಿ ಸಂಭವಿಸಿದ್ದ ರಸ್ತೆ ಅಪಘಾತದಲ್ಲಿ ಮೃತಪಟ್ಟ ಮಹಿಳೆಯೊಬ್ಬರ ಪ್ರಕರಣದ ವಿಚಾರಣೆ ವೇಳೆ ಈ ಮಹತ್ವದ ತೀರ್ಪು ಹೊರಬಿದ್ದಿದೆ. ಗೃಹಿಣಿಯರ ಕೊಡುಗೆ ಮನೆಯ ಸುಗಮ ನಿರ್ವಹಣೆ, ಮಕ್ಕಳ ಪೋಷಣೆ, ಜೀವನ ಸಂಗಾತಿಗೆ ಬೆಂಬಲ ಹಾಗೂ ಹಿರಿಯರ ಆರೈಕೆ ಸೇರಿದಂತೆ ಹಲವು ಆಯಾಮಗಳನ್ನು ಹೊಂದಿದೆ ಎಂದು ಕೋರ್ಟ್ ಉಲ್ಲೇಖಿಸಿದೆ. ಇದುವರೆಗೆ ಗೃಹಿಣಿಯರನ್ನು ಅನೇಕ ಪ್ರಕರಣಗಳಲ್ಲಿ ಕೌಶಲ್ಯರಹಿತ ಅಥವಾ ಅಲ್ಪ ಆದಾಯದ ಕಾರ್ಮಿಕರಿಗೆ ಹೋಲಿಸಿ ಪರಿಹಾರ ನಿಗದಿಪಡಿಸಲಾಗುತ್ತಿತ್ತು. ಆದರೆ ಈ ತೀರ್ಪಿನ ಮೂಲಕ ಗೃಹಿಯರ ವೇತನೇತರ ಶ್ರಮದ ಆರ್ಥಿಕ ಮೌಲ್ಯವನ್ನು ನ್ಯಾಯಾಂಗವು ಅಧಿಕೃತವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೆ, ಮೂರು ವರ್ಷಗಳಿಗೊಮ್ಮೆ ಈ ಮೊತ್ತವನ್ನು ಶೇ.10ರಷ್ಟು ಹೆಚ್ಚಳ ಮಾಡುವ ವ್ಯವಸ್ಥೆಯನ್ನೂ ಕೋರ್ಟ್ ಸೂಚಿಸಿದೆ.

ಕಿರುಸುದ್ದಿ

ಇಂದು ಉಡುಪಿಗೆ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್

• **ಉಡುಪಿ:** ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಜೂ. 13ರಂದು ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಭೇಟಿ ನೀಡಲಿದ್ದಾರೆ. ಶನಿವಾರ ಬೆಳಿಗ್ಗೆಯಿಂದ ಕರಾವಳಿ ಭಾಗದಲ್ಲಿ ವಿವಿಧ ಧಾರ್ಮಿಕ ಹಾಗೂ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಅವರು ಪಾಲ್ಗೊಳ್ಳಲಿದ್ದಾರೆ. ಸಚಿವರು ಶನಿವಾರ ಬೆಳಿಗ್ಗೆ 8.30 ರಿಂದ 9 ಗಂಟೆಯ ಅವಧಿಯಲ್ಲಿ ಉಡುಪಿಯ ಶ್ರೀಕೃಷ್ಣ ಮಠಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆಯಲಿದ್ದಾರೆ. ಬಳಿಕ ಕೃಷ್ಣ ಮಠದಿಂದ ರಸ್ತೆ ಮಾರ್ಗವಾಗಿ ಹೊರಟು ಬೆಳಿಗ್ಗೆ 9.25ಕ್ಕೆ ಉಚ್ಚಿಲ ಶ್ರೀ ಮಹಾಲಕ್ಷ್ಮಿ ದೇವಸ್ಥಾನದ ಹಾಲ್‌ನಲ್ಲಿ ಬೆಳಿಗ್ಗೆ 9.30 ರಿಂದ 10.45 ರವರೆಗೆ ಉಚ್ಚಿಲ ಶ್ರೀ ಮಹಾಲಕ್ಷ್ಮಿ ದೇವಸ್ಥಾನದ ಸಭಾಂಗಣದಲ್ಲಿ ಆಯೋಜಿಸಲಾಗಿರುವ ಬಿಜೆಪಿ ಪಕ್ಷದ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಲಿದ್ದಾರೆ. ಬಳಿಕ ಮಂಗಳೂರಿಗೆ ಪ್ರಯಾಣ ಬೆಳೆಸಲಿದ್ದಾರೆ.



ಜೂ.15: ವಿವೇಕಾನಂದ ಸ್ವಾಯತ್ತ ಕಾಲೇಜಿನ ಸ್ನಾತಕೋತ್ತರ ಪದವಿ ಫಲಿತಾಂಶ

• **ಪುತ್ತೂರು:** ಇಲ್ಲಿನ ವಿವೇಕಾನಂದ ಕಲಾ, ವಿಜ್ಞಾನ ಹಾಗೂ ವಾಣಿಜ್ಯ(ಸ್ವಾಯತ್ತ) ಮಹಾವಿದ್ಯಾಲಯದ ಸ್ನಾತಕೋತ್ತರ ಎಂಎಸ್ಸಿ(ರಸಾಯನ ಶಾಸ್ತ್ರ) ಎಂಕಾಂ ಹಾಗೂ ಜೆಎಂಸಿ ಪದವಿಯ ದ್ವಿತೀಯ ಹಾಗೂ ಚತುರ್ಥ ಸೆಮಿಸ್ಟರ್‌ನ ಫಲಿತಾಂಶ ಜೂ.15ರಂದು ಬೆಳಗ್ಗೆ 10 ಗಂಟೆಗೆ ಕಾಲೇಜಿನ ಯುಯುಸಿಎಂಎಸ್ ಪೋರ್ಟಲ್‌ನಲ್ಲಿ ದೊರೆಯಲಿದೆ. ವಿದ್ಯಾರ್ಥಿಗಳು ತಮ್ಮ ರಿಜಿಸ್ಟ್ರೇಷನ್ ನಂಬರನ್ನು ಹಾಕಿ ಫಲಿತಾಂಶವನ್ನು ಪರಿಶೀಲಿಸಬಹುದು ಎಂದು ಕಾಲೇಜಿನ ಪ್ರಾಂಶುಪಾಲ ಪ್ರೊ. ಶ್ರೀಕೃಷ್ಣ ಗಣರಾಜ ಭಟ್ ಹಾಗೂ ಕಾಲೇಜಿನ ಪರೀಕ್ಷಾಂಗ ಕುಲಸಚಿವ ಪ್ರಕಾಶ್ ಕುಮಾರ್ ಕೆ. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಬಂಧ ಸ್ಪರ್ಧೆಯಲ್ಲಿ ಶ್ರಾವ್ಯ ಕೋಡಿ ತೃತೀಯ


• **ಕುಂದಾಪುರ:** ಸುಶಾನ್ ಟ್ರಸ್ಟ್ ಕೊಡ್ಲಾಡಿ ಇದರ ವತಿಯಿಂದ ಆಯೋಜಿಸಿದ 'ಪ್ಲಾಸ್ಟಿಕ್ ಸಮಸ್ಯೆಗಳು ಮತ್ತು ಪರಿಹಾರಗಳು' ಎನ್ನುವ ವಿಷಯದ ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಕುಂದಾಪುರದ ಶ್ರೀ ವೆಂಕಟರಮಣ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ 10ನೇ ತರಗತಿಯ ವಿದ್ಯಾರ್ಥಿನಿ ಶ್ರಾವ್ಯ ಕೋಡಿ ತೃತೀಯ ಬಹುಮಾನ ಹಾಗೂ 5000 ರೂ. ನಗದು ಬಹುಮಾನ ಪಡೆದುಕೊಂಡಿದ್ದಾಳೆ. ಇವರಿಗೆ ಶಾಲಾ ಆಡಳಿತ ಮಂಡಳಿ, ಮುಖ್ಯ ಶಿಕ್ಷಕರು, ಬೋಧಕ ಮತ್ತು ಬೋಧಕೇತರ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.



ಕಿಡ್ ಅಥ್ಲೆಟಿಕ್ ಮೀಟ್: ವಿದ್ಯಾರ್ಥಿಗಳ ಸಾಧನೆ

• **ಮಂಗಳೂರು:** ಉಡುಪಿಯಲ್ಲಿ ಜೂನ್ 7ರಂದು ನಡೆದ ಕಿಡ್ಸ್ ಅಥ್ಲೆಟಿಕ್ಸ್ ಮೀಟ್‌ನಲ್ಲಿ ಮಂಗಳೂರಿನ ಸಂತ ಆಲೋಶಿಯಸ್ ಗೊನ್ಸಾಗ ಶಾಲೆಯ ವಿದ್ಯಾರ್ಥಿಗಳಾದ ಸ್ವರ ಶೆಟ್ಟಿ ಪಾರಕಂಡಿ ಹಾಗೂ ವಿಹಾನ್ ವಿಶಾಲ್ ಕುಮಾರ್ ಅತ್ಯುತ್ತಮ ಸಾಧನೆ ತೋರಿದ್ದಾರೆ. 8ನೇ ತರಗತಿಯ ವಿದ್ಯಾರ್ಥಿನಿ ಸ್ವರ ಶೆಟ್ಟಿ ಪಾರಕಂಡಿ 4X100 ಮೀ. ರಿಲೇ ಸ್ಪರ್ಧೆಯಲ್ಲಿ ಚಿನ್ನದ ಪದಕ, 200 ಮೀ. ಓಟದಲ್ಲಿ ಬೆಳ್ಳಿ ಪದಕ ಹಾಗೂ 4X100 ಮೀ. ಮಿಕ್ಸ್ಡ್ ರಿಲೇ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದು ಗಮನ ಸೆಳೆದರು. ಹಾಗೂ 7ನೇ ಬಿ ತರಗತಿಯ ವಿದ್ಯಾರ್ಥಿ ವಿಹಾನ್ ವಿಶಾಲ್ ಕುಮಾರ್ ಮಿಕ್ಸ್ಡ್ ರಿಲೇ ಹಾಗೂ 4X100 ಮೀ. ರಿಲೇ ಸ್ಪರ್ಧೆಗಳಲ್ಲಿ ಚಿನ್ನದ ಪದಕಗಳನ್ನು ಹಾಗೂ 80 ಮೀ. ಓಟದಲ್ಲಿ ಬೆಳ್ಳಿ ಪದಕವನ್ನು ಮುಡಿಗೇರಿಸಿಕೊಂಡಿದ್ದಾರೆ. ಇಬ್ಬರ ಕ್ರೀಡಾ ಸಾಧನೆಗೆ ಸಂಸ್ಥೆಯ ಪ್ರಾಂಶುಪಾಲರಾದ ವಂ.ರೆ.ಫಾ ರೋಹನ್ ಡಿ ಅಲ್ಮೇಡಾ ಎಸ್.ಜೆ ಸಂಸ್ಥೆಯ ಪರವಾಗಿ ಅಭಿನಂದಿಸಿದ್ದಾರೆ.





ಅಮೆರಿಕ ನಿವಾಸಿಯಿಂದ ವಿಠೋಭ ದೇವಸ್ಥಾನದಲ್ಲಿ ಭರತನಾಟ್ಯ ಸೇವೆ

• **ಮಂಗಳೂರು:** ನಗರದ ವಿ.ಟಿ.ರಸ್ತೆಯಲ್ಲಿರುವ ಶ್ರೀ ವಿಠೋಭ ರುಕುಮಾಯಿ ದೇವಸ್ಥಾನದಲ್ಲಿ ಅಧಿಕ ಮಾಸದ ಪರಮ ಏಕಾದಶಿಯಂದು ಅಮೆರಿಕದ ಬೋಸ್ಟನ್ ನಿವಾಸಿ ದಿಯಾ ಶೆಣೈ ಅವರು ದೇವರ ಸನ್ನಿಧಿಯಲ್ಲಿ ಭರತನಾಟ್ಯ ಸೇವೆಯನ್ನು ಸಮರ್ಪಿಸಿದರು. ಭಕ್ತಾದಿಯಾಗಿ ಹೆತ್ತವರೊಡನೆ ದೇವಳಕ್ಕೆ ಭೇಟಿ ನೀಡಿದ ದಿಯಾ ಭಕ್ತಿಭಾವಪರವಶರಾಗಿ ತಮ್ಮ ಸೇವಾ ಬಯಕೆಯನ್ನು ಈಡೇರಿಸಲು ಆಡಳಿತ ಮಂಡಳಿಯ ಬಳಿ ವಿನಂತಿಸಿದರು. ಬಳಿಕ ಭರತನಾಟ್ಯದ ವಸ್ತ್ರ ಧರಿಸಿ ತಮ್ಮ ಮನದಿಚ್ಛೆಯನ್ನು ಈಡೇರಿಸಿಕೊಂಡರು. ಅಮೆರಿಕದಲ್ಲಿದ್ದರೂ ಭಾರತದ ನೃತ್ಯ ಪ್ರಾಕಾರವನ್ನು ಅಭ್ಯಸಿಸುತ್ತಿರುವ ದಿಯಾ ಅವರ ಭರತನಾಟ್ಯವನ್ನು ಭಕ್ತಾದಿಗಳು ಕಣ್ತುಂಬಿಕೊಂಡರು. ದೇವಳದಲ್ಲಿ ಇಡೀ ದಿನ ಭಜನಾ ಸಂಕೀರ್ತನೆ ನಡೆದವು. ದೇವಸ್ಥಾನವನ್ನು ಭಕ್ತರು ಸೇವಾರ್ಥವಾಗಿ ನೀಡಿದ ವಿವಿಧ ತರಕಾರಿಗಳು, ಹಣ್ಣುಹಂಪಲು, ಪುಷ್ಪಗಳಿಂದ ಸಿಂಗರಿಸಲಾಗಿತ್ತು ಮತ್ತು ಅದನ್ನು ದೇವರಿಗೆ ನೈವೇದ್ಯವಾಗಿ ಅರ್ಪಿಸಲಾಗಿತ್ತು. ಶ್ರೀ ವಿಠೋಭ ರುಕುಮಾಯಿ ದೇವರಿಗೆ ವಿವಿಧ ಅಭಿಷೇಕ, ವಿಶೇಷ ಅಲಂಕಾರ ಮಾಡಿ ವಿಶೇಷ ಪೂಜೆ ಸಲ್ಲಿಸಲಾಯಿತು. ಭಕ್ತರು ಉಪಸ್ಥಿತರಿದ್ದರು.



ಕೂಲಿ ಕಾರ್ಮಿಕನ ಮೃತದೇಹ ಬಾವಿಯಲ್ಲಿ ಪತ್ತೆ

• **ಕಾಸರಗೋಡು:** ಕೂಲಿ ಕಾರ್ಮಿಕನೋರ್ವ ಬಾವಿಯಲ್ಲಿ ಬಿದ್ದು ಸಾವಿಗೀಡಾದ ಘಟನೆ ನಡೆದಿದೆ. ಮಧೂರು ಕೊಲ್ಯ ನಿವಾಸಿ ಕೃಷ್ಣ(45) ಮೃತಪಟ್ಟವರು. ಗುರುವಾರ ಮಧ್ಯಾಹ್ನದಿಂದ ಅವರು ನಾಪತ್ತೆಯಾಗಿದ್ದರು. ಶುಕ್ರವಾರ ಬೆಳಗ್ಗೆ ಮನೆ ಪರಿಸರದ ಆವರಣವಿಲ್ಲದ ಬಾವಿಯಲ್ಲಿ ಅವರ ಮೃತದೇಹ ಕಂಡುಬಂದಿದೆ. ಮೃತದೇಹವನ್ನು ಅಗ್ನಿಶಾಮಕ ದಳದವರು ಮೇಲಕ್ಕೆತ್ತಿದರು.



ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನಕ್ಕೆ ಶುಕ್ರವಾರ ಭೇಟಿ ನೀಡಿದ ತಮಿಳುನಾಡು ನೂತನ ಮುಖ್ಯಮಂತ್ರಿ ಜೋಸೆಫ್ ವಿಜಯ್ ಅವರನ್ನು ದೇವಳದ ವತಿಯಿಂದ ಗೌರವಿಸಲಾಯಿತು.

ಗೃಹಲಕ್ಷ್ಮೀ ಭಾಗ್ಯ: ಲಕ್ಷಾಂತರ ಮಹಿಳೆಯರ ಮೇಲೆ ಸರ್ಜಿಕಲ್ ಸ್ಟ್ರೈಕ್: ಡಾ.ಭರತ್ ಶೆಟ್ಟಿ

• **ಮಂಗಳೂರು:** 'ಬಿಪಿಎಲ್ ಆದ್ರೂ ಇರ್ಲಿ, ಎಪಿಎಲ್ ಆದ್ರೂ ಇರ್ಲಿ, ನಿಮ್ಮ ಖಾತೆಗೆ ಟಕ ಟಕ್ ಟಕಾ ಟಕ್ ಹಣ ಹಾಕ್ತೀವಿ' ಎಂದು ಚುನಾವಣೆ ಪೂರ್ವದಲ್ಲಿ ರಾಹುಲ್ ಗಾಂಧಿ, ಡಿ.ಕೆ. ಶಿವಕುಮಾರ್ ಭರವಸೆ ನೀಡಿದ್ದರು. ಆದರೆ ಇಂದು ಲಕ್ಷಾಂತರ ಮಹಿಳೆಯರಿಗೆ ಗೃಹಲಕ್ಷ್ಮೀ ಯೋಜನೆಯನ್ನು ಬಿಪಿಎಲ್ ನೆಪ ಒಡ್ಡಿ ಸ್ಥಗಿತಗೊಳಿಸಿ ಬಹುದೊಡ್ಡ ಸರ್ಜಿಕಲ್ ಸ್ಟ್ರೈಕ್ ಮಾಡುವ ಮೂಲಕ ಕಾಂಗ್ರೆಸ್ ಸರ್ಕಾರ ದ್ರೋಹ ಮಾಡಿದೆ ಎಂದು ಶಾಸಕ ಡಾ. ಭರತ್ ಶೆಟ್ಟಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಗೃಹಲಕ್ಷ್ಮೀ ಯೋಜನೆಯಡಿ 1.26 ಕೋಟಿ ಮಹಿಳೆಯರಿಗೆ ಪ್ರತಿ ತಿಂಗಳು 2,000 ರೂ. ನೀಡುವ ಭರವಸೆ ನೀಡಿದ್ದ ಕಾಂಗ್ರೆಸ್, ಈಗ ಫೆಬ್ರವರಿ ಮತ್ತು ಮಾರ್ಚ್ ತಿಂಗಳ ಎರಡು ಕಂತುಗಳ 5,000 ಕೋಟಿ ರೂ. ಹಣವನ್ನು ನೀಡದೆ ಲಕ್ಷಾಂತರ ಫಲಾನುಭವಿಗಳಿಗೆ ಅನ್ಯಾಯ ಮಾಡಿದೆ ಎಂದು ಅವರು ಆರೋಪಿಸಿದ್ದಾರೆ.

ಸರ್ಕಾರ ಈಗ ಫಲಾನುಭವಿಗಳ ದಾಖಲೆಗಳ ಮರುಪರಿಶೀಲನೆ, ತನಿಖೆ ನೆಪದಲ್ಲಿ ಯೋಜನೆಯನ್ನು ಕಡಿತಗೊಳಿಸಲು ಹೊರಟಿದೆ. 1.48 ಲಕ್ಷ ಮೃತ ಫಲಾನುಭವಿಗಳ ಖಾತೆಗೆ ಹಣ ಜಮೆಯಾಗಿದೆ ಎಂಬ ಕಾರಣ ನೀಡಿ, ನೈಜ ಫಲಾನುಭವಿಗಳನ್ನೇ ಯೋಜನೆಯಿಂದ ಕೈಬಿಡುವ ಹುನ್ನಾರ ನಡೆದಿದೆ ಎಂದು ಭರತ್ ಶೆಟ್ಟಿ ದೂರಿದ್ದಾರೆ.

ನಿಕಟಪೂರ್ವ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಆರಂಭದಲ್ಲಿ 'ಆಗಸ್ಟ್‌ವರೆಗೆ ಎಲ್ಲಾ ಕಂತು ಪಾವತಿಯಾಗಿದೆ' ಎಂದು ತಪ್ಪು ಮಾಹಿತಿ ನೀಡಿ, ನಂತರ ಎರಡು ಕಂತು ಬಾಕಿ ಇದೆ ಎಂದು ಒಪ್ಪಿಕೊಂಡಿದ್ದರು. 1.26 ಕೋಟಿ ಮಹಿಳೆಯರಿಗೆ ತಿಂಗಳಿಗೆ 2,000 ರೂ. ಅಂದರೆ ಎರಡು ತಿಂಗಳಿಗೆ 5,000 ಕೋಟಿ ರೂ.ಆಗುತ್ತದೆ. ಈ ಹಣ ಎಲ್ಲಿ ಹೋಯಿತು ಎಂದು ಸರ್ಕಾರ ಉತ್ತರಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಶಿಕ್ಷಕರ ಕೈ ಸುಡುತ್ತಿದೆ ರಾಜ್ಯ ಸರ್ಕಾರದ ಉಚಿತ ಯೋಜನೆ!

ಬಿಸಿಯೂಟದ 'ಮೊಟ್ಟೆ' ಹೊರೆ

ದಿಗಂತ ವಿಶೇಷ

▶ **ಸುದೀಪ್ ರಾಜ್ ಸುಳ್ಯ**

• **ಉಡುಪಿ:** ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ವಿದ್ಯಾರ್ಥಿಗಳಿಗೆ ಪೌಷ್ಟಿಕಾಂಶ ಒದಗಿಸುವ ಉದ್ದೇಶದ 'ಉಚಿತ ಮೊಟ್ಟೆ ವಿತರಣೆ' ಯೋಜನೆ ಈಗ ಶಾಲಾ ಮುಖ್ಯೋಪಾಧ್ಯಾಯರ ಪಾಲಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ಮಾರುಕಟ್ಟೆಯಲ್ಲಿ ಮೊಟ್ಟೆ ಬೆಲೆ ಗಗನಕ್ಕೇರಿದ್ದರೂ ಸರ್ಕಾರ ನೀಡುವ ಅನುದಾನ ಮಾತ್ರ ಪಾತಾಳದಲ್ಲೇ ಉಳಿದಿರುವುದು ಶಿಕ್ಷಕರ ಜೇಬಿಗೆ ನೇರವಾಗಿ ಕತ್ತರಿ ಹಾಕುತ್ತಿದೆ.



ಸದ್ಯ ಮಾರುಕಟ್ಟೆಯಲ್ಲಿ ಒಂದು ಮೊಟ್ಟೆಯ ಬೆಲೆ 7.50 ರೂಪಾಯಿಯಿಂದ 8 ರೂಪಾಯಿಯವರೆಗೆ ಮಾರಾಟವಾಗುತ್ತಿದೆ. ಆದರೆ, ಸರ್ಕಾರ ಮಾತ್ರ ಇನ್ನೂ ಹಳೆಯ ದರದಲ್ಲೇ ಒಂದು ಮೊಟ್ಟೆಗೆ ಕೇವಲ 6 ರೂಪಾಯಿ ಅನುದಾನ ನೀಡುತ್ತಿದೆ. ಇದರಿಂದಾಗಿ ಪ್ರತೀ ಮೊಟ್ಟೆಯ ಮೇಲೆ ಶಿಕ್ಷಕರು ಸ್ವಂತ ಕೈಯಿಂದ 2.50 ರೂಪಾಯಿವರೆಗೆ ಹೆಚ್ಚುವರಿ ಹೊರೆ ಹೊರಬೇಕಾದ ದಾರುಣ ಸ್ಥಿತಿ ನಿರ್ಮಾಣವಾಗಿದೆ.

ಆರು ರೂಪಾಯಿ ಅನುದಾನದ ಒಳಗಿನ ಲೆಕ್ಕಾಚಾರ

ಸರ್ಕಾರ ನೀಡುವ ಆರು ರೂಪಾಯಿ ಮೊತ್ತದಲ್ಲಿ ಕೇವಲ ಮೊಟ್ಟೆ ಖರೀದಿಸುವುದು ಮಾತ್ರವಲ್ಲದೆ, ಇಲಾಖೆಯ ನಿಯಮಾವಳಿಗಳ ಪ್ರಕಾರ, ಸರ್ಕಾರ ನೀಡುವ ಹಣದಲ್ಲಿ 50 ಪೈಸೆ ಮೊಟ್ಟೆ ಬೇಯಿಸಲು ಗ್ಯಾಸ್ ಸಿಲಿಂಡರ್ ಖರೀದಿಗೆ ಮೀಸಲಿಡಬೇಕು. ಇನ್ನು 30 ಪೈಸೆಯನ್ನು ಬೇಯಿಸಿದ ಮೊಟ್ಟೆ ಸುಲಿಯಲು ಅಡುಗೆ ಸಿಬ್ಬಂದಿಗೆ ಗೌರವಧನವಾಗಿ ನೀಡಬೇಕು ಹಾಗೂ 20 ಪೈಸೆಯನ್ನು ಮೊಟ್ಟೆಯನ್ನು ಶಾಲೆಗೆ ತರಲು ತಗಲುವ ಸಾಗಾಣಿಕೆ ವೆಚ್ಚಕ್ಕೆ ಬಳಸಬೇಕು. ಇದೆಲ್ಲವೂ ಕಳೆದು ಕೊನೆಗೆ ಮೊಟ್ಟೆ ಖರೀದಿಸಲು ಶಿಕ್ಷಕರ ಕೈಯಲ್ಲಿ ಉಳಿಯುವುದು ಕೇವಲ 5 ರೂಪಾಯಿ ಮಾತ್ರ. ಕೇವಲ ಐದು ರೂಪಾಯಿಗೆ ಇಂದಿನ ಮಾರುಕಟ್ಟೆಯಲ್ಲಿ ಎಲ್ಲೂ ಮೊಟ್ಟೆ ಸಿಗಲು ಸಾಧ್ಯವೇ ಇಲ್ಲ ಎಂದು ಮುಖ್ಯ ಶಿಕ್ಷಕರು ಅಳಲು ತೋಡಿಕೊಳ್ಳುತ್ತಿದ್ದಾರೆ.

ಈ ವರ್ಷದಿಂದ ಎಲ್ ಕೆ ಜಿ ಹಾಗೂ ಯು ಕೆ ಜಿ ಮಕ್ಕಳಿಗೂ ಮೊಟ್ಟೆ ಭಾಗ್ಯ

ಸರ್ಕಾರವು ಸರ್ಕಾರಿ ಶಾಲೆಗಳ ಸಬಲೀಕರಣ ಹಾಗೂ ದಾಖಲಾತಿ ಹೆಚ್ಚಿಸುವ ನಿಟ್ಟಿನಲ್ಲಿ ಇತ್ತೀಚೆಗೆ ಸರ್ಕಾರಿ ಶಾಲೆಗಳಲ್ಲಿ ಆರಂಭಿಸಿರುವ ಮೇಲ್ದರ್ಜೆಗೆ ಏರಿಸಿದ ಎಲ್ ಕೆ ಜಿ ಮತ್ತು ಯು ಕೆ ಜಿ (ಪ್ರಿ-ಪ್ರೈಮರಿ) ಮಕ್ಕಳಿಗೂ ಈ ವರ್ಷದಿಂದ ಉಚಿತ ಮೊಟ್ಟೆ ವಿತರಿಸುವುದಾಗಿ ಘೋಷಿಸಿದೆ. ಈಗಿರುವ 6 ರೂ.ಯನ್ನು 8 ರೂ. ಗೆ ಏರಿಸಿದರಷ್ಟೇ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನ ಮಾಡಬಹುದು ಎಂಬುದು ಶಿಕ್ಷಕರ ಆಗ್ರಹವಾಗಿದೆ.

ಉಚಿತ ಮೊಟ್ಟೆ ಯೋಜನೆ ಯಾವಾಗ ಆರಂಭವಾಯಿತು?

ಡಿಸೆಂಬರ್ 2021 ರಲ್ಲಿ ಕಲ್ಯಾಣ ಕರ್ನಾಟಕದ ತೀವ್ರ ಅಪೌಷ್ಟಿಕತೆಯಿಂದ ಕೂಡಿದ್ದ ಬೀದರ್, ರಾಯಚೂರು, ಕಲಬುರಗಿ, ಯಾದಗಿರಿ, ಕೊಪ್ಪಳ, ಬಳ್ಳಾರಿ ಮತ್ತು ವಿಜಯಪುರ ಜಿಲ್ಲೆಗಳಲ್ಲಿ 1 ರಿಂದ 8ನೇ ತರಗತಿ ಮಕ್ಕಳಿಗೆ ಪ್ರಾಯೋಗಿಕವಾಗಿ ಈ ಯೋಜನೆ ಜಾರಿಗೆ ತರಲಾಯಿತು. ನಂತರ ಜುಲೈ 2022 ರಲ್ಲಿ ಇದನ್ನು ಇಡೀ ರಾಜ್ಯಕ್ಕೆ ವಿಸ್ತರಿಸಲಾಯಿತು. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಈ ಯೋಜನೆಯನ್ನು 9 ಮತ್ತು 10ನೇ ತರಗತಿಗೂ ವಿಸ್ತರಿಸಿ, ವಾರಕ್ಕೆ ಎರಡು ದಿನ ಮೊಟ್ಟೆ ಕೊಡುವುದಾಗಿ ಘೋಷಿಸಿದರು. ಕೊನೆಗೆ 2024 ರ ಸೆಪ್ಟೆಂಬರ್‌ನಲ್ಲಿ ಕರ್ನಾಟಕ ಸರ್ಕಾರ ಮತ್ತು ಅಜೀಂ ಪ್ರೇಮ್‌ಜೀ ಫೌಂಡೇಶನ್ ನಡುವೆ ಮಹತ್ವದ ಒಪ್ಪಂದವಾಗಿ, ವಾರದ ಎಲ್ಲಾ ಆರು ದಿನಗಳೂ ಮಕ್ಕಳಿಗೆ ಉಚಿತ ಮೊಟ್ಟೆ ನೀಡುವ ಜಂಟಿ ಯೋಜನೆಗೆ ಚಾಲನೆ ನೀಡಲಾಯಿತು.

ಊರಿನ ಆಪತ್ಬಾಂಧವನಿಗೆ ಬೇಕಿದೆ ಎಲ್ಲರ ಸಹಾಯಹಸ್ತ

• **ಕುಂಬಳೆ:** ಕುಂಬಳೆ ಗ್ರಾಮ ಪಂಚಾಯತ್‌ನ ಕಂಚಿಕಟ್ಟೆ ಮಳಿ ದುರ್ಗಾಂಬಾ ರಸ್ತೆ ಬಳಿಯ ದುರ್ಗಾಂಬಾ ನಿಲಯದ ನಿವಾಸಿ ಸುರೇಶ್ ಎಂಬವರ ಮನೆಯ ಅಸ್ತಿತ್ವ ಈಗ ಅಪಾಯಕಾರಿ ಸ್ಥಿತಿಯಲ್ಲಿದೆ. ಕೂಲಿ ಕಾರ್ಮಿಕರಾಗಿರುವ ಸುರೇಶ್ ಅವರು ಅರಣ್ಯ ಇಲಾಖೆಯ ಸರ್ಪ ತಂಡದ ಸದಸ್ಯರಾಗಿದ್ದಾರೆ.

ಕುಂಬಳೆ ಹಾಗೂ ಪರಿಸರ ಪ್ರದೇಶದಲ್ಲಿ ಯಾವುದೇ ಮನೆ ಅಥವಾ ಮನೆ ಪರಿಸರದಲ್ಲಿ ಕಂಡುಬರುವ ವಿಷಪೂರಿತ ಹಾವುಗಳನ್ನು ಹಿಡಿದು ಹಲವಾರು ಕುಟುಂಬಗಳನ್ನು ಅಪಾಯದಿಂದ ಪಾರು ಮಾಡಿ ನೆಮ್ಮದಿಯಿಂದ ಬದುಕಲು ಸಹಾಯ ಮಾಡುವ ಓರ್ವ ಆಪತ್ಬಾಂಧವನಿಗೆ ನೆರವು ನೀಡಬೇಕಾಗಿದೆ.

ರಾತ್ರಿ ಹಗಲೆನ್ನದೆ ಯಾವುದೇ ಸಮಯದಲ್ಲಿ ಕರೆ ಮಾಡಿದರೆ ತಕ್ಷಣ ಧಾವಿಸಿ ಬಂದು ಹಾವುಗಳನ್ನು ಹಿಡಿದು ಸಾಗಿಸುವ ಸುರೇಶ್ ತನ್ನ ಕಾರ್ಯಕ್ಕೆ ಯಾರಿಂದಲೂ ಪ್ರತಿಫಲ ಬಯಸುವವರಲ್ಲ. ಆದರೆ ಇತ್ತೀಚೆಗೆ ಧಾರಾಕಾರವಾಗಿ ಸುರಿದ ಭಾರೀ ಮಳೆಗೆ ಅವರ ಮನೆಯ ಒಂದು ಬದಿಯ ಆವರಣ ಗೋಡೆ ಕುಸಿದು ಮನೆಯ ಅಡಿಪಾಯ ದುರ್ಬಲವಾಗಿದ್ದು ಅತ್ಯಂತ ಅಪಾಯಕಾರಿ ಸ್ಥಿತಿಯಲ್ಲಿದೆ.

ಪ್ರಸ್ತುತ ಮಳೆಗಾಲದ ಅವಧಿಯಲ್ಲಿ ಈ ಮನೆಯಲ್ಲಿ ಅವರ ಕುಟುಂಬ ನೆಮ್ಮದಿಯಿಂದ ವಾಸಿಸುವ ಸ್ಥಿತಿ ಇಲ್ಲವಾಗಿದೆ. ತಕ್ಷಣಕ್ಕೆ ಮನೆಯ ಸುರಕ್ಷೆಯ ಕಾಮಗಾರಿ ಕೈಗೊಳ್ಳುವ ಆರ್ಥಿಕ ವ್ಯವಸ್ಥೆ ಬಡ ಕುಟುಂಬಕ್ಕಿಲ್ಲ. ಹಾಗಾಗಿ ಸಾರ್ವಜನಿಕರ ಸನ್ಮನಸ್ಸಿನ ಕೈಲಾದ ಆರ್ಥಿಕ ಸಹಾಯದ ಅಗತ್ಯವಿದೆ.



ಹಣಕಾಸಿನ ನೆರವು ನೀಡಲಿಚ್ಛಿಸುವ ಸಹೃದಯವಂತರು ಈ ಕೆಳಗಿನ ಬ್ಯಾಂಕ್ ಖಾತೆಗೆ ಧನಸಹಾಯ ಮಾಡಬಹುದಾಗಿದೆ.
Shashikala
W/o Suresh,
Kanchikatte, Kumbla.
A/c No.40517100013446
IFSC : KLGB0040517
(Kerala Grameena Bank, Kumbla)
Mob- 9633733954

ಪುತ್ತೂರಿನಲ್ಲಿ ಮದುವೆಯಾಗದೆ ಮಗು ಕರುಣಿಸಿದ ಪ್ರಕರಣ

ರಾಜಿ ಸಂಧಾನಕ್ಕೆ ಒಪ್ಪಿಗೆ: ನಂಜುಂಡಿ

• **ಮಂಗಳೂರು:** ಪುತ್ತೂರಿನ ಕೃಷ್ಣ ಜೆ. ರಾವ್ ಮದುವೆಯಾಗುವುದಾಗಿ ನಂಬಿಸಿ ಮಗು ಕರುಣಿಸಿ ವಂಚಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜಿ ಸಂಧಾನಕ್ಕೆ ಆರೋಪಿ ಪರ ವಕೀಲರು ಹೈಕೋರ್ಟ್‌ನಲ್ಲಿ ಪ್ರಸ್ತಾಪಿಸಿದ್ದು, ಜೂನ್ 19ರಂದು ಪ್ರಕರಣ ಸುಖಾಂತ್ಯಗೊಳ್ಳುವ ವಿಶ್ವಾಸವಿದೆ ಎಂದು ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ರಾಜ್ಯಾಧ್ಯಕ್ಷ ಕೆ.ಪಿ. ನಂಜುಂಡಿ ತಿಳಿಸಿದರು.



ಪ್ರಕರಣಕ್ಕೆ ಸಂಬಂಧಿಸಿ ಹೈಕೋರ್ಟ್‌ನಲ್ಲಿ ನಡೆದ ವಿಚಾರಣೆ ವೇಳೆ ಆರೋಪಿ ಕೃಷ್ಣ ರಾವ್ ಪರ ವಕೀಲ ಪಿ.ಪಿ. ಹೆಗ್ಡೆ ಅವರು, ಪ್ರಕರಣವನ್ನು ರಾಜಿಸಂಧಾನದ ಮೂಲಕ ಇತ್ಯರ್ಥಪಡಿಸಲು ಸಿದ್ಧ ಎಂದು ತಿಳಿಸಿದ್ದರು. ಈ ಹಿನ್ನೆಲೆಯಲ್ಲಿ ಸಂತ್ರಸ್ತೆಯ ಕುಂಟುಂಬಿಕರು ಹಾಗೂ ಆರೋಪಿಯ ಕುಟುಂಬಿಕರು ಜೂ.19ರಂದು ಮಧ್ಯಸ್ಥಿಕೆ ಕೇಂದ್ರಕ್ಕೆ ಹಾಜರಾಗಬೇಕು ಎಂದು ಹೈಕೋರ್ಟ್ ಸೂಚಿಸಿದೆ. ಮುಂದಿನ ವಿಚಾರಣೆಯನ್ನು ಜೂ.30ಕ್ಕೆ ನಿಗದಿಪಡಿಸಲಾಗಿದೆ. ರಾಜಿ ಸಂಧಾನದ ಮೂಲಕ ಸಂತ್ರಸ್ತೆಗೆ ನ್ಯಾಯ ದೊರೆಯುವ ಭರವಸೆಯಿದೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಹೇಳಿದರು.

ಸಂತ್ರಸ್ತೆ ಹಾಗೂ ಮಗುವಿನ ಆರೈಕೆಗಾಗಿ ಆರೋಪಿ ಪಾವತಿಸಿರುವ, ಹೈಕೋರ್ಟ್‌ನಲ್ಲಿ ಠೇವಣಿ ಇಡಲಾದ 75000 ರೂ. ಮೊತ್ತವನ್ನು ಸಂತ್ರಸ್ತೆಗೆ ನೀಡಬೇಕು, ಎರಡನೇ ಕಂತಿನ ಹಣವನ್ನು ನಾಲ್ಕು ದಿನದ ಒಳಗೆ ಪಾವತಿಸಬೇಕು ಎಂದು ಹೈಕೋರ್ಟ್ ಸೂಚನೆ ನೀಡಿದೆ. ಪ್ರಕರಣದಿಂದ ಎರಡೂ ಕುಟುಂಬಗಳು ತೊಂದರೆ, ಅವಮಾನ ಅನುಭವಿಸಿದ್ದು, ರಾಜಿ ಸಂಧಾನದ ಮೂಲಕ ಸಂತ್ರಸ್ತೆಯನ್ನು ಕೃಷ್ಣ ಜೆ. ರಾವ್ ಕುಟುಂಬಿಕರು ಮನೆ ತುಂಬಿಸಿಕೊಳ್ಳುವ ವಿಶ್ವಾಸವಿದೆ. ಸಂತ್ರಸ್ತೆಗೆ ಗಂಡ, ಮಗುವಿಗೆ ಅಪ್ಪ ಬೇಕು. ಈ ಹಿನ್ನೆಲೆಯಲ್ಲಿ ಜೂ. 17ರಂದು ನಿಗದಿಪಡಿಸಿದ್ದ ಮಗುವಿನ ನಾಮಕರಣವನ್ನು ಮುಂದೂಡಲಾಗಿದೆ ಎಂದು ತಿಳಿಸಿದರು.

ಈ ಪ್ರಕರಣಕ್ಕೆ ಸಂಬಂಧಿಸಿ ಹುಡುಗಿ ಹಾಗೂ ಹುಡುಗ ಸಮಾನವಾಗಿ ತಪ್ಪು ಎಸಗಿದ್ದಾರೆ. ರಾಜಿ ಸಂಧಾನಕ್ಕೆ ಮುಂದಾಗಿರುವ ಕೃಷ್ಣ ಜೆ. ರಾವ್ ಕುಟುಂಬಿಕರ ನಿರ್ಧಾರ ಸ್ವಾಗತಾರ್ಹ. ಇಂತಹಾ ಪ್ರಕರಣ ಯಾವುದೇ ಕುಟುಂಬದಲ್ಲಿ ಮುಂದಕ್ಕೆ ನಡೆಯಬಾರದು. ಈ ಬಗ್ಗೆ ವಿದ್ಯಾರ್ಥಿ ಜೀವನದಲ್ಲಿರುವ ಹುಡುಗ- ಹುಡುಗಿಯರು ಎಚ್ಚರ ವಹಿಸಬೇಕು ಎಂದರು.

ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಬೆಂಗಳೂರು ಇದರ ಪದಾಧಿಕಾರಿಗಳಾದ ಲಗ್ಗೆರೆ ರವಿಕುಮಾರ್, ಜನಾರ್ದನ ಆಚಾರ್, ಲೋಕೇಶ್ ತಿಟ್ಟಹಳ್ಳಿ, ಜಗದೀಶ್ ಪೀಣ್ಯ, ಉಡುಪಿ ಘಟಕ ಉಪಾಧ್ಯಕ್ಷ ಗೋಪಾಲ್, ಗಂಗಾಧರ್ ಆಚಾರ್ ಉಪಸ್ಥಿತರಿದ್ದರು.

ಶಾರದಾ ಪದವಿ ಪೂರ್ವ ಕಾಲೇಜಿನಲ್ಲಿ ಕಾರ್ಯಕ್ರಮ

ರ‍್ಯಾಂಕ್ ವಿಜೇತ ವಿದ್ಯಾರ್ಥಿಗಳಿಗೆ ಸನ್ಮಾನ

• **ಮಂಗಳೂರು:** ಯಾವುದೇ ಗುರಿಯನ್ನು ಸಾಧಿಸಲು ಕಠಿಣ ಪರಿಶ್ರಮ ಮತ್ತು ನಿರಂತರ ಪ್ರಯತ್ನ ಅತ್ಯಗತ್ಯ. ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 600ಕ್ಕೆ 600 ಅಂಕ ಗಳಿಸಿ, ರಾಜ್ಯಕ್ಕೇ ಪ್ರಥಮ ರ‍್ಯಾಂಕ್ ಪಡೆದ ರಚಿತಾ ರಾಘವೇಂದ್ರ ಅವರು ತೋರಿದ ಶ್ರದ್ಧೆ, ಶಿಸ್ತು ಮತ್ತು ಛಲ ನಿಜಕ್ಕೂ ಮಾದರಿಯಾಗಿದೆ. ಈ ಯಶಸ್ಸಿನ ಹಿಂದೆ ಅವರ ಪೋಷಕರ ತ್ಯಾಗ ಮತ್ತು ಮಾರ್ಗದರ್ಶನ ನೀಡಿದ ಕಾಲೇಜಿನ ಶಿಕ್ಷಕರ ಅಪಾರ ಶ್ರಮವಿದೆ ಎಂದು ಎಂಆರ್‌ಪಿಎಲ್ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ ಗಣೇಶ್ ಭಂಡಾರಿ ಹೇಳಿದರು.

ಅವರು ಭೂವರಾಹ ಸಭಾಂಗಣದಲ್ಲಿ ರ‍್ಯಾಂಕ್ ವಿಜೇತ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಮಾತನಾಡಿದರು.

ರಾಜ್ಯಕ್ಕೇ ವಿಜ್ಞಾನ ವಿಭಾಗದಲ್ಲಿ ಪ್ರಥಮ ರ‍್ಯಾಂಕ್ ಗಳಿಸಿದ ರಚಿತಾ ರಾಘವೇಂದ್ರ ಮತ್ತು ವಿಜ್ಞಾನ ವಿಭಾಗದಲ್ಲಿ 14, ವಾಣಿಜ್ಯ ವಿಭಾಗದಲ್ಲಿ 4 ರ‍್ಯಾಂಕ್‌ಗಳನ್ನು ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಶಾರದಾ ಸಮೂಹ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಪ್ರದೀಪಕುಮಾರ ಕಲ್ಕೂರ, ನಿರ್ದೇಶಕ ಹಾಗೂ ವಿಶ್ವಸ್ಥ ಸಮೀರ್ ಪುರಾಣಿಕ್ ಅವರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಮೊದಲಿಗೆ ವಿದ್ಯಾರ್ಥಿನಿಯರಾದ ಮಹಾಲಕ್ಷ್ಮಿ, ಮಾನ್ಯತಾ ಕಾರಂತ್ ಮತ್ತು ಹಿತಾ ಅವರ ಪ್ರಾರ್ಥನೆಯೊಂದಿಗೆ ಆರಂಭಗೊಂಡು, ರಮೇಶ್ ಆಚಾರ್ಯ ಅವರು ಸ್ವಾಗತಿಸಿದರು, ಪ್ರಾಂಶುಪಾಲ ಪ್ರಕಾಶ್ ನಾಯ್ಕ್ ಅವರು ವರದಿ ವಾಚಿಸಿದರು, ಭಾರತಿ ಪ್ರಭು ಅತಿಥಿಗಳನ್ನು ಪರಿಚಯಿಸಿದರು. ಉಪಪ್ರಾಂಶುಪಾಲೆ ಅರುಣಾ ದಿನೇಶ್ ವಂದಿಸಿದರು, ರಶ್ಮಿ ದಿನೇಶ್ ನಿರೂಪಿಸಿದರು.



ನಮ್ಮ ಶಿಕ್ಷಣ ಸಂಸ್ಥೆಯು ಕೇವಲ ಪಾಠಗಳನ್ನು ಕಲಿಯುವ ಸ್ಥಳವಲ್ಲ. ಪಾಠದ ಜೊತೆ ಜೊತೆಗೆ ಸಾಹಿತ್ಯ, ಕಲೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೂ ಸಮಾನ ಅವಕಾಶಗಳಿರುತ್ತದೆ. ಇದು ನಿಮ್ಮ ಭವಿಷ್ಯವನ್ನು ರೂಪಿಸುವ, ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆಯನ್ನು ಹೊರತರುವ ಮತ್ತು ಶಿಸ್ತನ್ನು ಕಲಿಸುವ ಶಿಕ್ಷಣ ಕೇಂದ್ರವಾಗಿದೆ. ಇಲ್ಲಿನ ಶಿಕ್ಷಕ ವೃಂದದವರು ಅತ್ಯುತ್ತಮ ಅನುಭವಸ್ಥರಾಗಿರುತ್ತಾರೆ.

■ **ಡಾ. ಎಂ. ಬಿ. ಪುರಾಣಿಕ್,** ಶಾರದಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ

ರಾಮಕೃಷ್ಣ ಮಿಷನ್ ಅಮೃತ ವರ್ಷ ಆಚರಣೆ | 730 ವಿದ್ಯಾರ್ಥಿಗಳು ಫಲಾನುಭವಿಗಳು | ವಿನೂತನ ಪ್ರಯತ್ನ

ರಾಮಕೃಷ್ಣ ಮಿಷನ್‌ನಿಂದ ಮರುಬಳಕೆ ನೋಟ್‌ಬುಕ್ ವಿತರಣೆ

• **ಮಂಗಳೂರು:** ಶಿಕ್ಷಣಕ್ಕೆ ಉತ್ತೇಜನ ನೀಡುವುದರೊಂದಿಗೆ ಪರಿಸರ ಸಂರಕ್ಷಣೆಯ ಸಂದೇಶವನ್ನು ಸಮಾಜಕ್ಕೆ ತಲುಪಿಸುವ ವಿನೂತನ ಪ್ರಯತ್ನವಾಗಿ ರಾಮಕೃಷ್ಣ ಮಿಷನ್ ಮಂಗಳೂರು ತನ್ನ ಅಮೃತ ವರ್ಷ (75ನೇ ವರ್ಷದ) ಆಚರಣೆಯ ಅಂಗವಾಗಿ ಮರುಬಳಕೆ ನೋಟ್‌ಬುಕ್ ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿತು.

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಅತ್ತಾವರದಲ್ಲಿ ನಡೆದ ಕಾರ್ಯಕ್ರಮವನ್ನು ಮಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿಜಿತಕಾಮಾನಂದಜಿ ಉದ್ಘಾಟಿಸಿದರು. ಈ ಸಂದರ್ಭ ಆಶೀರ್ವಚನ ನೀಡಿದ ಅವರು, ಪರಿಸರ ಸಂರಕ್ಷಣೆ ಮತ್ತು ಸಂಪನ್ಮೂಲಗಳ ಜವಾಬ್ದಾರಿಯುತ ಬಳಕೆ ಇಂದಿನ ಸಮಾಜದ ಪ್ರಮುಖ ಅಗತ್ಯವಾಗಿದ್ದು, ವಿದ್ಯಾರ್ಥಿಗಳು ಬಾಲ್ಯದಿಂದಲೇ ಮಿತವ್ಯಯ, ಮರುಬಳಕೆ ಹಾಗೂ ಪರಿಸರ ಸ್ನೇಹಿ ಜೀವನಶೈಲಿಯ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದರು.



ಈ ಕಾರ್ಯಕ್ರಮದಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಅತ್ತಾವರ, ಪಾಂಡೇಶ್ವರ, ಹೊಯಿಗೆಬಜಾರ್, ಮಣ್ಣಗುಡ್ಡ, ಕುಂಪಲ, ಬೋಳಾರ, ಮಹಾಕಾಳಿಪಡ್ಪು ಹಾಗೂ ಸೂಟರಪೇಟೆ, ಭಗಿನಿ ಸಮಾಜ, ಸೇಂಟ್ ರೀಟಾ ಪ್ರಾಥಮಿಕ ಶಾಲೆ ಮತ್ತು ರಾಮಕೃಷ್ಣ ಮಿಷನ್ ಬಾಲಕಾಶ್ರಮದ ವಿದ್ಯಾರ್ಥಿಗಳಿಗೆ ಮರುಬಳಕೆ ನೋಟ್‌ಬುಕ್‌ಗಳನ್ನು ವಿತರಿಸಲಾಯಿತು.

ಈ ಕಾರ್ಯಕ್ರಮದಿಂದ ಸುಮಾರು 730 ವಿದ್ಯಾರ್ಥಿಗಳು ಪ್ರಯೋಜನ ಪಡೆದರು.

ರಾಮಕೃಷ್ಣ ಮಿಷನ್ ಮಂಗಳೂರು ತನ್ನ ಅಮೃತ ವರ್ಷಾಚರಣೆಯ ಅಂಗವಾಗಿ ಅನೇಕ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಮರುಬಳಕೆ ನೋಟ್‌ಬುಕ್ ವಿತರಣಾ ಕಾರ್ಯಕ್ರಮವು ಅವುಗಳಲ್ಲಿ ವಿಶೇಷ ಮಹತ್ವ ಪಡೆದಿದೆ.

'ಬಳಸಿದ ಪುಟಗಳಿಂದ ಹೊಸ ಭವಿಷ್ಯದತ್ತ' ಎಂಬ ಸಂದೇಶವನ್ನು ಸಾರುವ ಈ ಯೋಜನೆಯು ವಿದ್ಯಾರ್ಥಿಗಳ ಶೈಕ್ಷಣಿಕ ಅಗತ್ಯಗಳಿಗೆ ನೆರವಾಗುವ ಜೊತೆಗೆ ಪರಿಸರ ಜಾಗೃತಿ, ಸಂಪನ್ಮೂಲಗಳ ಸಂರಕ್ಷಣೆ ಹಾಗೂ ಸಾಮಾಜಿಕ ಜವಾಬ್ದಾರಿಯ ಮೌಲ್ಯಗಳನ್ನು ಬಲಪಡಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ.

750 ಮರುಬಳಕೆ ನೋಟ್‌ಬುಕ್

ಈ ಕಾರ್ಯಕ್ರಮದ ಹಿನ್ನೆಲೆಯಾಗಿ ಸುಮಾರು ಮೂರು ತಿಂಗಳ ಹಿಂದೆ ರಾಮಕೃಷ್ಣ ಮಿಷನ್ ವತಿಯಿಂದ ಶಾಲೆಗಳು, ಶಿಕ್ಷಣ ಸಂಸ್ಥೆಗಳು ಹಾಗೂ ಸಾರ್ವಜನಿಕರಿಂದ ಭಾಗಶಃ ಬಳಸಲ್ಪಟ್ಟ ಹಳೆಯ ನೋಟ್‌ಬುಕ್‌ಗಳನ್ನು ಸಂಗ್ರಹಿಸುವ ಅಭಿಯಾನವನ್ನು ಹಮ್ಮಿಕೊಳ್ಳಲಾಗಿತ್ತು. ಸಂಗ್ರಹಿಸಲಾದ ನೋಟ್‌ಬುಕ್‌ಗಳಲ್ಲಿನ ಬಳಕೆಯಾಗದೆ ಉಳಿದಿದ್ದ ಹಾಳೆಗಳನ್ನು ಪ್ರತ್ಯೇಕಿಸಿ, ರಾಮಕೃಷ್ಣ ಮಿಷನ್‌ನ ಸ್ವಯಂಸೇವಕರು ಅವುಗಳನ್ನು ಮರುಸಂಸ್ಕರಿಸಿ ಹೊಸ ನೋಟ್‌ಬುಕ್‌ಗಳ ರೂಪದಲ್ಲಿ ಸಿದ್ಧಪಡಿಸಿದರು. ಪರಿಸರ ಸಂರಕ್ಷಣೆ ಹಾಗೂ ಸಂಪನ್ಮೂಲಗಳ ಸದ್ಬಳಕೆಯ ಉದ್ದೇಶದಿಂದ ಕೈಗೊಂಡ ಈ ವಿನೂತನ ಉಪಕ್ರಮದಡಿ ಸುಮಾರು 750 ಮರುಬಳಕೆ ನೋಟ್‌ಬುಕ್‌ಗಳನ್ನು ತಯಾರಿಸಲಾಯಿತು.

ಗ್ಯಾರಂಟಿ ಪರಿಷ್ಕರಣೆ ನೆಪದಲ್ಲಿ ಬಂದ್ ಹುನ್ನಾರ: ಬಿ.ಶ್ರೀರಾಮುಲು




• **ಬೆಂಗಳೂರು:** ಗ್ಯಾರಂಟಿಗಳ ವಿಚಾರದಲ್ಲಿ ಸುಳ್ಳು ಹೇಳಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಈಗ ಅದೇ ಗ್ಯಾರಂಟಿಗಳನ್ನು ಪರಿಷ್ಕರಣೆ ನೆಪದಲ್ಲಿ ಬಂದ್ ಮಾಡಲು ಹುನ್ನಾರ ನಡೆಸಿದೆ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಆರೋಪಿಸಿದ್ದಾರೆ.

ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಶುಕ್ರವಾರ ಮಾಧ್ಯಮಗಳೊಂದಿಗೆ ಮಾತನಾಡಿ, ಗ್ಯಾರಂಟಿ ಕೊಡಿ ಎಂದು ರಾಜ್ಯದ ಜನರು ಸರ್ಕಾರಕ್ಕೆ ಕೇಳಿರಲಿಲ್ಲ. ಅವರೇ ಸ್ವಾರ್ಥಕ್ಕಾಗಿ ಘೋಷಣೆ ಮಾಡಿದರು. ಉಚಿತ ಬಸ್ ಪ್ರಯಾಣ ಕೊಡಿ ಎಂದು ಹೆಣ್ಣು ಮಕ್ಕಳು ಕೇಳಿರಲಿಲ್ಲ. ಆದರೂ ಸರ್ಕಾರವೇ ಕೊಟ್ಟು ಈಗ ಗ್ಯಾರಂಟಿಗಳನ್ನು ಸ್ಥಗಿತಗೊಳಿಸಲು ಮುಂದಾಗಿದ್ದಾರೆ ಎಂದು ಹೇಳಿದರು.

ಗೃಹಲಕ್ಷ್ಮಿ ಹಣ ಮೃತ ಫಲಾನುಭವಿಗಳ ಖಾತೆಗೆ ಹೋಗುತ್ತಿದೆ ಎಂಬ ವರದಿಗಳಿವೆ. ಸರ್ಕಾರದಲ್ಲಿ ಗ್ಯಾರಂಟಿ ಸಂಬಂಧ ಗೊಂದಲ ಇದೆ. ಎಲ್ಲಾ ಕಡೆ ಲೋಪ ಆಗಿದೆ. ಗ್ಯಾರಂಟಿಗಳು ಕಾಕಾ ಪಾಟೀಲ್‌ಗೆ ಫ್ರೀ, ಸಿದ್ದರಾಮಯ್ಯಗೆ ಫ್ರೀ ಎಂದು ಹೇಳಿದ್ದರು. ಈಗ ಸರಿಯಾಗಿ ಜಾರಿ ಮಾಡದೆ ನಿಲ್ಲಿಸಲು ಮುಂದಾಗಿದ್ದಾರೆ. ಆದ್ದರಿಂದ ಸರ್ಕಾರ ರಾಜ್ಯದ ಜನರ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದರು. ಚುನಾವಣೆ ಬಂತು. ಅದರಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿತು. ಚುನಾವಣೆಗಾಗಿ ಗ್ಯಾರಂಟಿ ಕೊಡಬೇಕಿತ್ತು, ಕೊಟ್ಟರು. ಈಗ ನಿಲ್ಲಿಸುವ ಷಡ್ಯಂತ್ರ ಮಾಡುತ್ತಿದ್ದಾರೆ. ಗೃಹ ಲಕ್ಷ್ಮಿ ಹಣದಲ್ಲಿ ಅಕ್ರಮ ನಡೆದಿದೆ ಎಂದು ಸದನದಲ್ಲೇ ಒಪ್ಪಿಕೊಂಡಿದ್ದರು. ಅಧಿಕಾರಕ್ಕಾಗಿ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರ ನಡುವೆ ಶೀತಲ ಸಮರ ನಡೆಯುತ್ತಿತ್ತು. ಈಗ ಶಿವಕುಮಾರ್ ಅವರು ಮುಖ್ಯಮಂತ್ರಿ ಆದ ನಂತರ ಸಚಿವ ಸಂಪುಟಕ್ಕಾಗಿ ಕಚ್ಚಾಟ ಆರಂಭವಾಯಿತು. ಬೆಂಗಳೂರು ಅಭಿವೃದ್ಧಿ ಖಾತೆಗೆ ಕೃಷ್ಣ ಬೈರೇಗೌಡ ಕ್ಯಾತೆ ತೆಗೆದಿದ್ದಾರೆ ಎಂದರು. ರಾಮಲಿಂಗಾರೆಡ್ಡಿ ಅವರು ಖಾತೆ ಬೇಡವೆಂದು ರಾಜೀನಾಮೆ ನೀಡಿದ್ದರು.

ರಾಮ ಬಾಣ



ಎಚ್‌ಎಂಟಿಗೆ ಶೀಘ್ರ ಕಾಯಕಲ್ಪ

ಪುಟ ೧➡ ಶೀಘ್ರವೇ ವಿತ್ತ ಸಚಿವರನ್ನು ಭೇಟಿಯಾಗಿ ಚರ್ಚೆ ನಡೆಸಲಿದ್ದೇನೆ ಎಂದು ಸಚಿವರು ಹೇಳಿದರು. ಕಳೆದೆರಡು ವರ್ಷಗಳಿಂದ ಎಚ್‌ಎಂಟಿ ಕಂಪನಿಗೆ ಕಾಯಕಲ್ಪ ನೀಡುವ ಉದ್ದೇಶದಿಂದ ಸರ್ಕಾರ ಕೆಲಸ ಮಾಡುತ್ತಿದೆ.

ನೀತಿ ಆಯೋಗದ ಸದಸ್ಯ ಡಾ.ವಿ.ಕೆ.ಸಾರಸ್ವತ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿ ವರದಿಯನ್ನು ಪಡೆದುಕೊಳ್ಳಲಾಗಿದೆ. ಸಮಿತಿಯು ಮೌಲಿಕವಾದ ಅನೇಕ ಶಿಫಾರಸುಗಳನ್ನು ಮಾಡಿದೆ. ಆ ಆಧಾರದ ಮೇಲೆ ಕಂಪನಿಯನ್ನು ಮೇಲೆತ್ತುವ ಯೋಜನೆ ಹಾಕಿಕೊಳ್ಳಲಾಗಿದೆ. ನಮ್ಮ ಪ್ರಯತ್ನಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರ ಪೂರ್ಣ ಸಹಕಾರವಿದ್ದು, ಅವರ ಮಾರ್ಗದರ್ಶನದಲ್ಲಿ ಎಚ್‌ಎಂಟಿ ಅಪೂರ್ವ ವೈಭವವನ್ನು ಮರಳಿ ತರುವ ಕೆಲಸ ಆರಂಭಿಸಿದ್ದೇವೆ ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಉತ್ಪಾದನೆ ಮತ್ತು ಉದ್ಯೋಗ ಆಧರಿತ ಕೈಗಾರಿಕೆಗಳಿಗೆ ಹೆಚ್ಚು ಉತ್ತೇಜನ ನೀಡಲಾಗುತ್ತಿದೆ. ಈ ಮೂಲಕ ಕೈಗಾರಿಕಾ ಕ್ಷೇತ್ರವು ದೊಡ್ಡ ಪ್ರಮಾಣದಲ್ಲಿ ಬೆಳವಣಿಗೆ ಸಾಧಿಸುತ್ತಿದೆ. ಉದ್ಯೋಗ ಸೃಷ್ಟಿ ಅಗಾಧವಾಗಿ ಆಗುತ್ತಿದೆ. ಕಳೆದ ಹನ್ನೆರಡು ವರ್ಷಗಳಲ್ಲಿ ಕೈಗಾರಿಕಾ ಸಂಶೋಧನೆಗೆ ಅತಿ ಹೆಚ್ಚು ಒತ್ತು ಕೊಡಲಾಗಿದೆ ಎಂದರು.

ತಾಂತ್ರಿಕ ಶಿಕ್ಷಣ ಪಡೆಯುವ ಅಭ್ಯರ್ಥಿಗಳಿಗೆ ಉದ್ಯೋಗ ಅಕಾಶ ಸಿಗುವುದು ಕಷ್ಟವೆನ್ನುವ ಪರಿಸ್ಥಿತಿಯ ನಡುವೆ, ಎಂಜಿನಿಯರಿಂಗ್ ಮತ್ತು ಡಿಪ್ಲೊಮಾ ಓದಿರುವ ವಿದ್ಯಾರ್ಥಿಗಳಿಗೆ ವಿಪುಲವಾಗಿ ಉದ್ಯೋಗಗಳನ್ನು ಸೃಷ್ಟಿಸುವ ಕೆಲಸ ನಡೆಯುತ್ತಿದೆ. ಕೌಶಲ ಆಧರಿತ ಉದ್ಯೋಗಗಳನ್ನು ಸೃಷ್ಟಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಒತ್ತು ನೀಡುತ್ತಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸಿಎಂಟಿಐ ನಿರ್ದೇಶಕ ಡಾ. ನಾಗಹನುಮಯ್ಯ ಸೇರಿದಂತೆ ಅನೇಕ ಹಿರಿಯ ಅಧಿಕಾರಿಗಳು ಭಾಗಿಯಾಗಿದ್ದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಕೆಲವರಿಗೆ ಕೇವಲ ಹಿಂದೂ ಧರ್ಮದಲ್ಲಿ ಮಾತ್ರ ಅನ್ಯಾಯಗಳು ಕಾಣುತ್ತವೆ, ಬೇರೆ ಧರ್ಮದ ಯಾವುದೇ ಹುಳುಕುಗಳು ಅವರಿಗೆ ಕಾಣಿಸುವುದಿಲ್ಲ – ವಿಧುಶೇಖರ ಶ್ರೀಗಳು

– ನಿಜವಾಗಿಯೂ ಅವರು ಹಿಂದೂ ಧರ್ಮದ ಬಗ್ಗೆ ಏನು ಹೇಳಿದರೂ ನಡೆಯುತ್ತೆ ಎನ್ನುವ ಧಾರ್ಷ್ಟ್ಯದ ಕೇಡಿಗಳು ಮತ್ತು ಇತರರ ದೋಷಗಳತ್ತ ಕಣ್ಣೆತ್ತಿ ನೋಡಲೂ ಧೈರ್ಯವಿಲ್ಲದ ಹೇಡಿಗಳು!

ದಿನ ಭವಿಷ್ಯ

ಮೇಷ
ವಿರಳಿತ ಎರಡನ್ನೂ ಇಂದು ಎದುರಿಸುವಿರಿ. ಖಾಸಗಿ ಬದುಕು ಮತ್ತು ವೃತ್ತಿ ಮಧ್ಯೆ ಸಮತೋಲನ ಸಾಧಿಸಿ. ಯಾವುದೇ ಒಂದನ್ನು ಕಡೆಗಣಿಸಬೇಡಿ.

ವೃಷಭ
ಯಾರದೋ ದುರ್ವರ್ತನೆ ನಿಮ್ಮ ಮನಸ್ಸು ಕದಡಬಹುದು. ಅನಗತ್ಯ ವಸ್ತುವಿನ ಮೇಲೆ ಹೆಚ್ಚು ಹಣ ವ್ಯಯಿಸದಿರಿ. ಆರೋಗ್ಯ ಸಮಸ್ಯೆ.

ಮಿಥುನ
ಕಚೇರಿ ರಾಜಕೀಯದಿಂದ ದೂರವಿರಿ. ನಿಮ್ಮ ಗಮನ ಉತ್ತಮ ಕಾರ್ಯದೆಡೆಗೆ ಹರಿಸಿ. ಸಣ್ಣ ವಿಷಯಕ್ಕೆ ಸಂಗಾತಿ ಜತೆ ಜಗಳವಾದೀತು.

ಕಟಕ
ಅಚ್ಚರಿಯ ಬೆಳವಣಿಗೆ ಸಂಭವ. ಫಲ ನೀಡದ ಯೋಜನೆ ಕೈಬಿಡಿ. ವ್ಯಕ್ತಿಯೊಬ್ಬರು ಹೆಚ್ಚು ಆಪ್ತರಾಗುವರು. ಖರ್ಚು ಹೆಚ್ಚಳದ ಚಿಂತೆ.

ಸಿಂಹ
ನಿಮ್ಮ ಸಹನೆ ಪರೀಕ್ಷಿಸುವ ಪ್ರಸಂಗ ಉಂಟಾದೀತು. ಸಂಬಂಧದಲ್ಲಿ ಏರುಪೇರು. ವೃತ್ತಿಯ ಗುರಿ ಸಾಧನೆ ಕಷ್ಟ. ಅಡ್ಡಿ ಒದಗಲಿದೆ.

ಕನ್ಯಾ
ಫಲಪ್ರದ ದಿನ. ಉದ್ದೇಶ ಸಫಲ. ಆಹಾರದಲ್ಲಿ ಪಥ್ಯ ಸಾಧಿಸಿ. ಆರೋಗ್ಯ ಕೆಡಿಸುವ ತಿನಿಸಿನಿಂದ ದೂರವಿರಿ. ಬಂಧು ಜತೆ ವಿರಸ.

ತುಲಾ
ವೃತ್ತಿಯಲ್ಲಿ ಯಶಸ್ಸು. ಆರ್ಥಿಕ ಉನ್ನತಿ. ಹಳೆಯ ಹೂಡಿಕೆ ಲಾಭ ತರಲಿದೆ. ವಿದ್ಯಾರ್ಥಿಗಳ ಶ್ರಮಕ್ಕೆ ಸೂಕ್ತ ಫಲ ಸಿಗಲಿದೆ. ಒತ್ತಡ ನಿವಾರಣೆ.

ವೃಶ್ಚಿಕ
ಇಂದು ಕೆಲವು ಪ್ರಮುಖ ನಿರ್ಧಾರ ತಾಳಬೇಕಾಗುವುದು. ಲೋಪ ಕಂಡರೆ ಕೂಡಲೇ ತಿದ್ದಿಕೊಳ್ಳಿ. ಬಿಗುಮಾನ ಬೇಕಿಲ್ಲ. ಧನವ್ಯಯ.

ಧನು
ಇಂದು ಶುಭದಿನ. ಪ್ರೀತಿಯ ಅಹವಾಲಿಗೆ ಸೂಕ್ತ ಸ್ಪಂದನೆ ಸಿಗಲಿದೆ. ಕೌಟುಂಬಿಕ ಸಮಸ್ಯೆ ಪರಿಹಾರ. ಮನಸ್ಸಿಗೆ ನಿರಾಳತೆ, ನೆಮ್ಮದಿ.

ಮಕರ
ಹುಚ್ಚು ಸಾಹಸಕ್ಕೆ ಮುಂದಾಗಬೇಡಿ. ನಿಯಂತ್ರಣ ಅಗತ್ಯ. ಉತ್ಸಾಹದ ನಡೆ ಪ್ರತಿಕೂಲ ಪರಿಣಾಮ ತರಬಹುದು. ವಿರೋಧ ಕಟ್ಟಿಕೊಳ್ಳುವಿರಿ.

ಕುಂಭ
ಮನೆಯವರ ಜತೆ ಹೊಂದಾಣಿಕೆ ಇರಲಿ. ನಿಮ್ಮ ಆದೇಶ ಹೇರಬೇಡಿ. ಖರ್ಚು ನಿಯಂತ್ರಿಸಿ. ಆಪ್ತ ಬಂಧುವಿನ ರೋಷ ಎದುರಿಸುವಿರಿ.

ಮೀನ
ಕೈಗೊಂಡ ಕಾರ್ಯ ಮುಗಿಸಲು ಗಮನ ಕೊಡಿ. ಹದಗೆಟ್ಟ ಸಂಬಂಧ ದೀರ್ಘ ಎಳೆಯಬೇಡಿ. ನಿಮಗೆ ಸೂಕ್ತವೆನಿಸದ ವಿಷಯ ಅಲ್ಲಿಗೇ ಬಿಡಿ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ: 0,4,1,6

ಯಥಾಸ್ಥಿತಿ ಮುಂದುವರಿಸುವ ಮಹತ್ವ ತೀರ್ಮಾನ: ಡಾ.ಶರಣಪ್ರಕಾಶ್ ಪಾಟೀಲ್

ವೈದ್ಯಕೀಯ ಶುಲ್ಕ ಹೆಚ್ಚಳವಿಲ್ಲ

• **ಬೆಂಗಳೂರು:** ಪ್ರಸಕ್ತ ಶೈಕ್ಷಣಿಕ ವರ್ಷದಿಂದ ವೈದ್ಯಕೀಯ, ದಂತ ವೈದ್ಯಕೀಯ, ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳ ಶುಲ್ಕವನ್ನು ಹೆಚ್ಚಳ ಮಾಡದೇ ಯಥಾಸ್ಥಿತಿಯನ್ನೇ ಮುಂದುವರಿಸುವ ಮಹತ್ವದ ತೀರ್ಮಾನವನ್ನು ರಾಜ್ಯಸರ್ಕಾರ ತೆಗೆದುಕೊಂಡಿದೆ.

ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ಖಾಸಗಿ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜು ಆಡಳಿತ ಮಂಡಳಿಯವರೊಂದಿಗೆ ಶುಕ್ರವಾರ ವಿಕಾಸ ಸೌಧದಲ್ಲಿ ನಡೆದ ಸಭೆಯಲ್ಲಿ ಈ ಮಹತ್ವದ ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ. ಈ ನಿರ್ಧಾರದಿಂದಾಗಿ ಈ ಬಾರಿ ವೈದ್ಯಕೀಯ, ದಂತ ವೈದ್ಯಕೀಯ, ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳ ಶುಲ್ಕ ಹೆಚ್ಚಳವಾಗುತ್ತದೆ ಎಂಬ ಆತಂಕದಲ್ಲಿದ್ದ ವಿದ್ಯಾರ್ಥಿಗಳು ಹಾಗೂ ಪೋಷಕರು ನೆಮದಿಯ ನಿಟ್ಟುಸಿರು ಬಿಡುವಂತಾಗಿದೆ.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್, ಖಾಸಗಿ ಕಾಲೇಜು ಆಡಳಿತ ಮಂಡಳಿಗಳ ಶುಲ್ಕವನ್ನು ಹೆಚ್ಚಳ ಮಾಡಬೇಕೆಂಬ ಪ್ರಸ್ತಾವನೆಯನ್ನು ನಾವು ಒಪ್ಪಿಕೊಂಡಿಲ್ಲ. ಈ ಹಿಂದೆ ಅಂದರೆ 2025-26ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿದ್ದ ಶುಲ್ಕವೇ ಮುಂದುವರೆಯಲಿದೆ. ಈ ನಿಯಮವು ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳೆರಡಕ್ಕೂ ಅನ್ವಯಿಸುತ್ತದೆ ಎಂದು ಸ್ಪಷ್ಟಪಡಿಸಿದರು.

ಪೋಷಕರು ಮತ್ತು ವಿದ್ಯಾರ್ಥಿಗಳು ಶುಲ್ಕ ಹೆಚ್ಚಳವಾಗುತ್ತದೆ ಎಂಬ ಆತಂಕಕ್ಕೆ ಒಳಗಾಗಬಾರದು. ಈಗಾಗಲೇ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಾತಿಗೆ ನಡೆದಿದ್ದ ನೀಟ್ ಪ್ರವೇಶ ಪರೀಕ್ಷೆ ರದ್ದಾಗಿ ಮರುಪರೀಕ್ಷೆ ನಡೆಯಬೇಕಿರುವುದರಿಂದ ಒತ್ತಡಕ್ಕೆ ಒಳಗಾಗಿದ್ದಾರೆ. ಇಂತಹ ಸಮಯದಲ್ಲಿ ಶುಲ್ಕ ಹೆಚ್ಚಳ ಮಾಡುವುದು ಸರಿಯಲ್ಲ ಎಂಬ ತೀರ್ಮಾನ ಮಾಡಲಾಗಿದೆ.

ಸಭೆಯಲ್ಲಿ ಕಲಬುರಗಿ ಸಂಸದ ರಾಧಾಕೃಷ್ಣ ದಂತ ವೈದ್ಯಕೀಯ ಕಾಲೇಜುಗಳ ಪರವಾಗಿ ವಿಧಾನಪರಿಷತ್ ಸದಸ್ಯ ನಾಗರಾಜ್ ಯಾದವ್, ಇಲಾಖೆಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮೊಹಮದ್ ಮೋಹ್ಸಿನ್, ಎಂ.ಎಸ್. ರಾಮಯ್ಯ ಕಾಲೇಜಿನ ಜಯರಾಂ ಹಾಗೂ ವಿವಿಧ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳ ಮುಖ್ಯಸ್ಥರು ಭಾಗವಹಿಸಿದ್ದರು.



“ ಖಾಸಗಿ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜು ಮಂಡಳಿಯವರು ಶುಲ್ಕ ಹೆಚ್ಚಳ ಮಾಡುವ ಪ್ರಸ್ತಾವನೆಗೆ ನಾವು ಅವಕಾಶವನ್ನೇ ಕೊಟ್ಟಿಲ್ಲ. ಹೀಗಾಗಿ ವಿದ್ಯಾರ್ಥಿಗಳು, ಪೋಷಕರು ಯಾವುದೇ ರೀತಿಯ ಊಹಾಪೋಹಕ್ಕೆ ಕಿವಿಗೊಡಬಾರದು.

■ ಶರಣಪ್ರಕಾಶ್ ಪಾಟೀಲ್, ವೈದ್ಯಕೀಯ ಶಿಕ್ಷಣ ಸಚಿವ

ಶುಲ್ಕ ವಿವರ

ಎಂಬಿಬಿಎಸ್	
ಸರ್ಕಾರಿ ಕಾಲೇಜು	55,000 ರೂ.
ಕೆಪಿಸಿಎಫ್ ಸರ್ಕಾರಿ ಕೋಟಟ	1,41,621 ರೂ.
ಕೆಆರ್ಎಲ್‌ಎಂಪಿಸಿಎ ಸರ್ಕಾರಿ ಕೋಟ	1,41,621 ರೂ.
ಎಎಂಪಿಸಿಕೆ ಸರ್ಕಾರಿ ಕೋಟ	1,41,621 ರೂ.
ಖಾಸಗಿ ವಿಶ್ವವಿದ್ಯಾನಿಲಯಗಳ	
ಸರ್ಕಾರಿ ಕೋಟ	1,41,621 ರೂ.
ಕೆಪಿಸಿಎಫ್ ಖಾಸಗಿ ಕೋಟ	11,88,167 ರೂ.
ಕೆಆರ್‌ಎಲ್‌ಎಂಪಿಸಿಎ ಖಾಸಗಿ ಕೋಟ	11,88,167 ರೂ.
ಎಎಂಪಿಸಿಕೆ ಖಾಸಗಿ ಕೋಟ	11,88,167 ರೂ.

ದಂತ ವೈದ್ಯಕೀಯ	
ಸರ್ಕಾರಿ ಕಾಲೇಜುಗಳ ಕೋಟ	40,000 ರೂ.
ಕೆಪಿಸಿಎಫ್ ಸರ್ಕಾರಿ ಕೋಟ	83,358 ರೂ.
ಕೆಆರ್‌ಎಲ್‌ಎಂಪಿಸಿಎ ಸರ್ಕಾರಿ ಕೋಟ	83,358 ರೂ.
ಎಎಂಪಿಸಿಕೆ ಸರ್ಕಾರಿ ಕೋಟ	83,358 ರೂ.
ಖಾಸಗಿ ಕೋಟ	
ಕೆಪಿಸಿಎಫ್ ಖಾಸಗಿ ಕೋಟ	7,32,625 ರೂ.
ಕೆಆರ್ಎಲ್‌ಎಂಪಿಸಿಎ ಖಾಸಗಿ ಕೋಟ	7,32,625 ರೂ.
ಎಎಂಪಿಸಿಕೆ ಖಾಸಗಿ ಕೋಟ	7,32,625 ರೂ.

ಮುಖ್ಯಮಂತ್ರಿಗಳ ಪ್ರಸ್ತಾವನೆಯ ಪ್ರಮುಖ ಅಂಶಗಳು

ಪುಟ ೧➡ **4. ಮಹದಾಯಿ ಕಣಿವೆಯ ಕಳಸಾ ಮತ್ತು ಬಂಡೂರಿ ನಾಲಾ ಯೋಜನೆಗಳು:** ಮಹದಾಯಿ ಕಣಿವೆ ವ್ಯಾಪ್ತಿಯ ಕಳಸಾ ಮತ್ತು ಬಂಡೂರಿ ನಾಲಾ ಯೋಜನೆಗಳನ್ನು ಹುಬ್ಬಳ್ಳಿ-ಧಾರವಾಡದ ಕುಡಿಯುವ ನೀರಿನ ಅಗತ್ಯಗಳನ್ನು ಪೂರೈಸಲು ಉದ್ದೇಶಿಸಲಾಗಿದೆ. ಇವುಗಳಿಗೆ ಡಿಸೆಂಬರ್ 2022 ರಲ್ಲಿ ಸಿಡಬ್ಲ್ಯುಸಿ/ಜಲಶಕ್ತಿ ಸಚಿವಾಲಯವು ಅನುಮತಿ ನೀಡಿದ್ದರೂ, ಈ ಯೋಜನೆಗೆ ಯಾವುದೇ ಕಾನೂನು ಅಡಚಣೆಗಳಿಲ್ಲದಿದ್ದರೂ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ (MoEF CC) ಅರಣ್ಯ/ವನ್ಯಜೀವಿ ಅನುಮತಿ ಇನ್ನೂ ಸಿಕ್ಕಿಲ್ಲ. ಹೀಗಾಗಿ ಆದಷ್ಟು ಬೇಗ ಈ ಯೋಜನೆಗಳಿಗೆ ಅನುಮತಿ ಕೊಡಿಸಬೇಕು.

5. ಏತ ನೀರಾವರಿ, ಕಾಲುವೆ ಕಾಮಗಾರಿಗಳಿಗೆ ಎಐಬಿಪಿ/ ಪಿಎಂಕೆಎಸ್‌ವೈ/ಎಫ್‌ಎಂಬಿಎಪಿ ಯೋಜನೆಗಳಲ್ಲಿ ಕೇಂದ್ರದ ನೆರವು: ಕೇಂದ್ರ ಸರ್ಕಾರದ ಸೊಂತಿ ಏತ ನೀರಾವರಿ, ಇಂಡಿ ಶಾಖಾ ಕಾಲುವೆ, ಮಲಪ್ರಭಾ ಕಾಲುವೆ ಬಾಕಿ ಕಾಮಗಾರಿ, ಘಟಪ್ರಭಾ ಬಲದಂಡೆ ಕಾಲುವೆ ಮತ್ತು ಚಿಕ್ಕೋಡಿ ಶಾಖಾ ಕಾಲುವೆ, ತುಂಗಭದ್ರಾ ಎಡದಂಡೆ ಕಾಲುವೆ ಬಾಕಿ ಕಾಮಗಾರಿ, ಬೆಣ್ಣೆಹಳ್ಳ ನದಿಯ ಪ್ರವಾಹ ನಿಯಂತ್ರಣ ಮತ್ತು ಪ್ರವಾಹ ನಿರ್ವಹಣೆ ಯೋಜನೆಗಳಿಗೆ ಕೇಂದ್ರ ಸರ್ಕಾರ ನೆರವು ನೀಡಬೇಕು.

6. ನದಿ ಜೋಡಣೆ ಯೋಜನೆಯಲ್ಲಿ ರಾಜ್ಯಕ್ಕೆ ನ್ಯಾಯಯುತ ಪಾಲು ಹಂಚಿಕೆ: ಕೇಂದ್ರ ಸರ್ಕಾರದ ನದಿಗಳ ಜೋಡಣೆಯ ಪ್ರಸ್ತಾವನೆಗಳ ಅಡಿಯಲ್ಲಿ, ನದಿ ಜೋಡಣೆ ಯೋಜನೆಗಳಿಂದ ಸಮತೆ ಮತ್ತು ಸಮಾನ ಹಂಚಿಕೆಯ ತತ್ವದ ಮೇಲೆ ಕರ್ನಾಟಕ ರಾಜ್ಯಕ್ಕೆ ನ್ಯಾಯಸಮ್ಮತವಾದ ಪಾಲನ್ನು ಹಂಚಿಕೆ ಮಾಡಬೇಕು ಎಂದು ಕೇಂದ್ರ ಜಲಶಕ್ತಿ ಸಚಿವರಿಗೆ ಮನವಿ ಮಾಡಿದ್ದಾರೆ.

ಭದ್ರಾ ಯೋಜನೆಗೆ 5,300 ಕೋಟಿ ಕೊಡಿ: ಡಿಕೆಶಿ

ಸಭೆಯ ಬಳಿಕ ಮಾತನಾಡಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ರಾಜ್ಯದ ನೀರಾವರಿ ಯೋಜನೆಗಳ ಜಾರಿಗೆ ಸಂಬಂಧಿಸಿದಂತೆ ನಾನು, ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಹಾಗೂ ಟಿ.ಬಿ. ಜಯಚಂದ್ರ ಅವರು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದೇವೆ. ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ತೀರ್ಪು, ಕೃಷ್ಣಾ ನೀರು ವಿವಾದ ನ್ಯಾಯಾಧಿಕರಣ ತೀರ್ಪಿನ ಅನ್ವಯ ಅಧಿಸೂಚನೆ, ಮಹದಾಯಿ ನೀರು, ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರದ 5,300 ಕೋಟಿ ರೂ. ಅನುದಾನ ವಿಚಾರವಾಗಿ ಪ್ರಸ್ತಾಪಿಸಿದ್ದೇವೆ ಎಂದು ತಿಳಿಸಿದರು.

ಜೂ.16ರಂದು ಆರೋಗ್ಯ ವಿವಿ 28ನೇ ಘಟಿಕೋತ್ಸವ

• **ಬೆಂಗಳೂರು:** ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ರಾಆವಿವಿ)ಯಿಂದ ಜೂ.16ರಂದು ಬೆಳಗ್ಗೆ 10 ಗಂಟೆಗೆ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ ಸಮಾವೇಶ ಭವನದಲ್ಲಿ 28ನೇ ಘಟಿಕೋತ್ಸವವನ್ನು ಆಯೋಜಿಸಲಾಗಿದೆ ಎಂದು ವಿಶ್ವವಿದ್ಯಾಲಯದ ಕುಲಪತಿ ಡಾ.ಭಗವಾನ್ ಬಿ.ಸಿ. ಮಾಹಿತಿ ನೀಡಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಘಟಿಕೋತ್ಸವದಲ್ಲಿ ಒಟ್ಟು 72,741 ಅಭ್ಯರ್ಥಿಗಳಿಗೆ ವಿವಿಧ ಪದವಿ ಪ್ರದಾನ ಮಾಡಲಾಗುವುದು. ಒಟ್ಟು 103 ವಿದ್ಯಾರ್ಥಿಗಳಿಗೆ 115 ಚಿನ್ನದ ಪದಕಗಳಿಗೆ ಭಾಜನರಾಗಿದ್ದು, ಪದ್ಮಶ್ರೀ ಇನ್‌ಸ್ಟಿಟ್ಯೂಟ್ ಆಫ್ ಫಿಸಿಯೋಥೆರಪಿ, ಬೆಂಗಳೂರಿನ ಸ್ಪಂದನ ಐ ಅವರು 3 ಚಿನ್ನದ ಪದಕಗಳೊಂದಿಗೆ ಅತಿ ಹೆಚ್ಚು ಚಿನ್ನದ ಪದಕ ಪಡೆದ ವಿದ್ಯಾರ್ಥಿಯಾಗಿದ್ದಾರೆ. ವಿಶ್ವವಿದ್ಯಾಲಯದ ಒಟ್ಟಾರೆ, ಫಲಿತಾಂಶ ಶೇ.89.22ರಷ್ಟಿದ್ದು, ಇದು ಆರೋಗ್ಯ ವಿಜ್ಞಾನ ಶಿಕ್ಷಣ ಕ್ಷೇತ್ರದಲ್ಲಿ ವಿಶ್ವವಿದ್ಯಾಲಯದ ಶೈಕ್ಷಣಿಕ ಸಾಧನೆಯನ್ನು ಪ್ರತಿಬಿಂಬಿಸುತ್ತದೆ ಎಂದರು.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವ ಹಾಗೂ ವಿಶ್ವವಿದ್ಯಾಲಯದ ಸಮಕುಲಾಧಿಪತಿ ಡಾ.ಶರಣಪ್ರಕಾಶ್ ಆರ್.ಪಾಟೀಲ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರು ಘಟಿಕೋತ್ಸವದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ವಿವರಿಸಿದರು. ಪ್ರೊ.ಡಾ.ನೈಲಾಡಿ ಶ್ರೀಧರ ಶೆಟ್ಟಿ, ಡಾ.ಹರ್ಷಿಣಿಗಿ ವೀರಭದ್ರಪ್ಪ ಹಾಗೂ ಡಾ.ಎ.ಸಿ. ಷಣ್ಮುಗಂ ಅವರಿಗೆ ಗೌರವ ಡಾಕ್ಟರೇಟ್ ಡಾಕ್ಟರ್ ಆಫ್ ಸೈನ್ಸ್ ಪದವಿ ಪ್ರದಾನ ಮಾಡಲಾಗುವುದು ಎಂದರು.

ಸಮರ್ಪಕ ತನಿಖೆಗೆ ಬಿಜೆಪಿ ಆಗ್ರಹ

ಪುಟ ೧➡ ಇದರಲ್ಲಿ ನೂರಾರು ಕೋಟಿ ರೂ. ಒಳಗೊಂಡದ್ದು ಈಗ ಗೊತ್ತಾಗುತ್ತಿದೆ. ನೂರಾರು ಕೋಟಿ ತೊಡಗಿಸಿಕೊಂಡ ಕಾರಣ ವಿದೇಶಿ ಶಕ್ತಿಗಳ ಕೈವಾಡದ ತನಿಖೆಯೂ ಆಗಬೇಕಿದೆ. ಕಾಂಗ್ರೆಸ್ ಸರ್ಕಾರವು ಇಂಥ ಷಡ್ಯಂತ್ರಗಳಿಗೆ ಶಕ್ತಿ ತುಂಬುವ ಕೆಲಸ ಮಾಡಿರುವುದು ನಮಗೆ ನೋವು ತಂದಿದೆ. ಯಾರ‍್ಯಾರು ಇದರ ಹಿಂದಿದ್ದರು? ಯಾರ‍್ಯಾರು ಬಂಡವಾಳ ಹಾಕಿದ್ದರು? ಅಂದಿನ ಮುಖ್ಯಮಂತ್ರಿ ಯಾಕೆ ಕಣ್ಮುಚ್ಚಿ ಎಸ್‌ಐಟಿಗೆ ಕೊಟ್ಟರು– ಇವೆಲ್ಲದರ ಸತ್ಯಾಸತ್ಯತೆ ಹೊರಕ್ಕೆ ಬರಬೇಕು ಎಂಬುದು ನಾಡಿನ ಜನರ ಮತ್ತು ಹಿಂದುಗಳ ಅಪೇಕ್ಷೆ ಎಂದು ತಿಳಿಸಿದರು.

ವರದಿ ಬಹಿರಂಗಪಡಿಸಲಿ: ಸುನೀಲ್

ಧರ್ಮಸ್ಥಳ ಪ್ರಕರಣದ ತನಿಖೆಗೆ ರಚಿಸಲಾಗಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚನೆ ಆಗಿ ಇಷ್ಟು ತಿಂಗಳು ಕಳೆದರೂ ವರದಿ ಬಹಿರಂಗ ಮಾಡಿಲ್ಲ. ವರದಿಯನ್ನು ಸರ್ಕಾರ ತಕ್ಷಣ ಬಹಿರಂಗ ಮಾಡಬೇಕು. ಈ ಪ್ರಕರಣದ ಹಿಂದೆ ಯಾರ ಕೈವಾಡವಿದೆ ಎಂದು ಸರ್ಕಾರ ತಿಳಿಸಲಿ ಎಂದು ಶಾಸಕ ವಿ.ಸುನೀಲ್ ಕುಮಾರ್ ಆಗ್ರಹಿಸಿದ್ದಾರೆ. ಹಿಂದು ಧಾರ್ಮಿಕ ಕ್ಷೇತ್ರ ಧರ್ಮಸ್ಥಳದ ಬಗ್ಗೆ ವಿನಾಕಾರಣ ಅವಹೇಳನ ಮಾಡಲಾಗುತ್ತಿದೆ. ದೊಡ್ಡ ಷಡ್ಯಂತ್ರ ರೂಪಿಸಿದ್ದ ಗ್ಯಾಂಗಿನ ಆರೋಪಿ ಕೋರ್ಟ್‌ಗೆ ನೀಡಿರುವ ಹೇಳಿಕೆ ಆಘಾತಕಾರಿಯಾಗಿದೆ. ಪ್ರಕರಣದ ಬಗ್ಗೆ ವಿಧಾನಸಭೆ ಹಾಗೂ ಪಕ್ಷದ ವತಿಯಿಂದ ಬೇರೆ ಬೇರೆ ಸಂದರ್ಭದಲ್ಲಿ ಉಲ್ಲೇಖ ಮಾಡಿದ್ದೆವು. ಇದರ ಹಿಂದೆ ಕೇರಳದ ನಂಟಿದೆ, ಬೇರೆ ಬೇರೆ ರಾಜ್ಯದ ನಂಟಿದೆ ಎಂದು ಹೇಳಿದ್ದೆವು. ಆರೋಪಿ ಎಸ್‌ಐಟಿ ಮುಂದೆ ಹೇಳಲಾಗದ್ದನ್ನು ನ್ಯಾಯಾಲಯದ ಮುಂದೆ ಹೇಳಿದ್ದಾನೆಂದರೆ ಎಸ್‌ಐಟಿ ಯಾವ ರೀತಿಯ ತನಿಖೆ ಮಾಡಿತ್ತು. ಇದರ ಹಿಂದಿರುವ ಹುನ್ನಾರ ಏನು? ಎಲ್ಲವೂ ಸಾರ್ವಜನಿಕ ಚರ್ಚೆಗೆ ಬರಬೇಕಾಗಿದೆ ಎಂದರು.

ವಿದ್ಯುತ್ ಕ್ಷೇತ್ರದ ಖಾಸಗೀಕರಣ ಯತ್ನ : ರಾಜ್ಯ ಸರಕಾರಕ್ಕೆ ತರಾಟೆ

• **ಬೆಂಗಳೂರು:** ರಾಜ್ಯ ಸರ್ಕಾರವು ವಿದ್ಯುತ್ ಕ್ಷೇತ್ರದ ಖಾಸಗೀಕರಣಕ್ಕೆ ಮತ್ತು ರೈತರು ಬೀದಿಗಿಳಿದು ಹೋರಾಟ ಮಾಡಲು ಅವಕಾಶ ಕೊಡಬಾರದು ಎಂದು ಸಂಸದ ಗೋವಿಂದ ಕಾರಜೋಳ ಒತ್ತಾಯಿಸಿದ್ದಾರೆ.

ರಾಜ್ಯ ಬಿಜೆಪಿ ಕಾರ್ಯಾಲ ಯದಲ್ಲಿ ಶುಕ್ರವಾರ ಅವರು ಮಾಧ್ಯಮಗಳೊಂದಿಗೆ ಮಾತ ನಾಡಿದರು. ಇದೀಗ ಕೆಇಆರ್‌ಸಿ ಮತ್ತು ಸರ್ಕಾರ ಜತೆಗೂಡಿ ರೈತರಲ್ಲಿ ಆತಂಕ ಸೃಷ್ಟಿಸಿದ್ದಾರೆ. ಟಾಟಾ ಪವರ್‌ನಂಥ ಖಾಸಗಿಯವರಿಗೆ ವಿದ್ಯುತ್ ಸರಬರಾಜಿನ ಅವಕಾಶ ಕೊಡುವ ಯೋಜನೆಯಿಂದ ರೈತರು ಬಂಡಾಯ ಏಳುವ ಸ್ಥಿತಿ ಇದೆ ಎಂದು ತಿಳಿಸಿದರು.

ಡೀಸೆಲ್ ಮಾರಾಟಕ್ಕೆ ಕೇಂದ್ರ ಮಿತಿ

• ಪುಟ ೧➡ ಕೈಗಾರಿಕಾ, ವಾಣಿಜ್ಯ ಮತ್ತು ಸಾಂಸ್ಥಿಕ ಗ್ರಾಹಕರಿಗೆ ಚಿಲ್ಲರೆ ಮಾರಾಟ ಮಳಿಗೆಗಳಿಂದ ಪೆಟ್ರೋಲ್ ಅಥವಾ ಡೀಸೆಲ್ ಖರೀದಿಸಲು ಇನ್ನು ಮುಂದೆ ಅವಕಾಶವಿರುವುದಿಲ್ಲ. ಅವರು ಇಂಧನವನ್ನು ತಮ್ಮ ಸ್ವಂತ ಗ್ರಾಹಕ ಪಂಪ್‌ಗಳಿಂದಲೇ ಪಡೆಯಬೇಕು.

ಭಾರೀ ಬೇಡಿಕೆ ಹಿನ್ನೆಲೆ ಕ್ರಮ: ಬೆಲೆ ಏರಿಕೆಯಿಂದಾಗಿ ದೊಡ್ಡ ಪ್ರಮಾಣದ ಬಳಕೆದಾರರು ಪೆಟ್ರೋಲ್ ಪಂಪ್‌ಗಳಿಂದ ಭಾರೀ ಪ್ರಮಾಣದ ಇಂಧನ ಖರೀದಿಸಲು ಪ್ರಾರಂಭಿಸಿದ ನಂತರ ಆದರಲ್ಲೂ ಮುಖ್ಯವಾಗಿ ಡೀಸೆಲ್‌ನ ಭಾರೀ ಬೇಡಿಕೆಯಿಂದ ಈ ಕ್ರಮ ಕೈಗೊಳ್ಳಲಾಗಿದೆ. ದಿಲ್ಲಿಯಲ್ಲಿ ಪೆಟ್ರೋಲ್ ಪಂಪ್‌ಗಳಲ್ಲಿ ಲೀಟರ್‌ಗೆ 95.20 ರೂ. ಇದ್ದರೆ, ಸಗಟು ಮಾರಾಟದಲ್ಲಿ ಲೀಟರ್‌ಗೆ 134.50 ರೂ. ಇದೆ.

90 ದಿನಗಳವರೆಗೆ ಚಾಲ್ತಿಯಲ್ಲಿ

ಪುಟ ೧➡ ಪ್ರಸ್ತುತ ಪರಿಸ್ಥಿತಿಯಲ್ಲಿ ದೇಶದ ಕೆಲವು ಭಾಗಗಳಲ್ಲಿ ಚಿಲ್ಲರೆ ಮಾರಾಟ ಮಳಿಗೆಗಳ ಮೂಲಕ ಮೋಟಾರ್ ಸ್ಪಿರಿಟ್ (ಪೆಟ್ರೋಲ್), ಹೈಸ್ಪೀಡ್ ಡೀಸೆಲ್ (ಡೀಸೆಲ್) ಮಾರಾಟದಲ್ಲಿ ಭಾರೀ ಹೆಚ್ಚಳವು ಕೈಗಾರಿಕಾ, ವಾಣಿಜ್ಯ ಮತ್ತು ಸಾಂಸ್ಥಿಕ ಗ್ರಾಹಕರನ್ನು ಚಿಲ್ಲರೆ ಮಾರಾಟ ಮಳಿಗೆಗಳಿಗೆ ಸ್ಥಳಾಂತರಿಸುವುದರಿಂದ ಉಂಟಾಗಿದೆ. ಆದ್ದರಿಂದ ಆದೇಶದ ಪ್ರಕಾರ, ಸಾಂಸ್ಥಿಕ, ಕೈಗಾರಿಕಾ, ವಾಣಿಜ್ಯ ಗ್ರಾಹಕರು ಚಿಲ್ಲರೆ ಇಂಧನ ಕೇಂದ್ರಗಳಿಂದ ಪೆಟ್ರೋಲ್, ಡೀಸೆಲ್ ಖರೀದಿಸುವುದನ್ನು ನಿರ್ಬಂಧಿಸಬಹುದು ಮತ್ತು ಬದಲಿಗೆ ತಮ್ಮ ಸ್ವಂತ ಗ್ರಾಹಕ ಪಂಪ್‌ಗಳ ಮೂಲಕ ಸರಬರಾಜು ಮಾಡಬೇಕಾಗುತ್ತದೆ.

ಐತಿಹಾಸಿಕ, ಪರಿವರ್ತನಾತ್ಮಕ ನಾಯಕತ್ವ

ಪುಟ ೧➡ 2020ರಿಂದ, ಉಚಿತ ಆಹಾರ ಧಾನ್ಯಗಳ ನಿರಂತರ ಪೂರೈಕೆಯು ಸುಮಾರು 80 ಕೋಟಿ ಜನರ ಆಹಾರ ಭದ್ರತೆ ರಕ್ಷಿಸಿದೆ. ಯಾವುದೇ ದುರ್ಬಲ ನಾಗರಿಕರು ಇದರಿಂದ ವಂಚಿತರಾಗದಂತೆ ನೋಡಿಕೊಳ್ಳಲಾಗಿದೆ. ಒಟ್ಟಾರೆಯಾಗಿ, ಈ ಉಪಕ್ರಮಗಳು ಸಹಾನುಭೂತಿಯ ಆಡಳಿತದ ಮತ್ತು ಪ್ರತಿ ಭಾರತೀಯನ ಕಲ್ಯಾಣಕ್ಕಾಗಿ ಇರುವ ಅಚಲ ಬದ್ಧತೆಯ ಸುದೀರ್ಘ ಸಂಕೇತಗಳಾಗಿ ನಿಂತಿವೆ.

ಪ್ರಧಾನಿ ಮೋದಿ ಅವರ ದೂರದೃಷ್ಟಿ ಮಹಿಳೆಯರು, ಯುವಕರು, ರೈತರು ಮತ್ತು ಸೌಲಭ್ಯ ವಂಚಿತರು ಸೇರಿ ಸಮಾಜದ ಪ್ರತಿ ವರ್ಗವನ್ನೂ ಸಬಲೀಕರಿಸಿದೆ. 3 ಕೋಟಿಗೂ ಹೆಚ್ಚು ಲಖ್‌ಪತಿ ದೀದಿಯರ ಉಗಮವು ಮಹಿಳಾ ನೇತೃತ್ವದ ಅಭಿವೃದ್ಧಿಯ ಅವರ ದೂರದೃಷ್ಟಿಗೆ ಬಲವಾದ ಸಾಕ್ಷಿಯಾಗಿದೆ. ಹೊಸ ಐಐಟಿಗಳು, ಏಮ್ಸ್, ವೈದ್ಯಕೀಯ ಕಾಲೇಜುಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳ ಸ್ಥಾಪನೆಯ ಮೂಲಕ ಭಾರತದ ಶಿಕ್ಷಣ ಮತ್ತು ಆರೋಗ್ಯ ರಕ್ಷಣೆಯ ಕ್ಷೇತ್ರವು ಗಮನಾರ್ಹವಾಗಿ ವಿಸ್ತರಿಸಿದೆ. ಇದು ದೇಶದ ಯುವಜನರಿಗೆ ಅಭೂತಪೂರ್ವ ಅವಕಾಶಗಳನ್ನು ಸೃಷ್ಟಿಸಿದೆ.

ಭಾರತವು ಗಮನಾರ್ಹವಾದ ಮೂಲಸೌಕರ್ಯ ಕ್ರಾಂತಿಗೆ ಸಾಕ್ಷಿಯಾಗಿದೆ. ವಂದೇ ಭಾರತ್ ರೈಲುಗಳು, ವಿಮಾನ ನಿಲ್ದಾಣಗಳು, ಹೆದ್ದಾರಿಗಳು ಮತ್ತು ರೈಲು ನಿಲ್ದಾಣಗಳ ಕ್ಷಿಪ್ರ ವಿಸ್ತರಣೆಯಿಂದ ಹಿಡಿದು ಅತ್ಯಂತ ದೂರದ ಪ್ರದೇಶಗಳನ್ನು ತಲುಪುವ ಪರಿವರ್ತನಾತ್ಮಕ ಸಂಪರ್ಕ ಯೋಜನೆಗಳವರೆಗೆ, ಅವರ ನಾಯಕತ್ವವು ಆಧುನಿಕ, ಸುಸಂಪರ್ಕಿತ ಮತ್ತು ಆಕಾಂಕ್ಷೆಯ ಭಾರತಕ್ಕೆ ಬಲವಾದ ಬುನಾದಿ ಹಾಕಿದೆ. ಈ ಸಾಧನೆಗಳು ಆರ್ಥಿಕ ಬೆಳವಣಿಗೆಯನ್ನು ವೇಗಗೊಳಿಸಿರುವುದಲ್ಲದೆ, ದೇಶಾದ್ಯಂತ ಲಕ್ಷಾಂತರ ನಾಗರಿಕರ ಜೀವನದ ಗುಣಮಟ್ಟವನ್ನೂ ಹೆಚ್ಚಿಸಿವೆ.

ಭಾರತವು ಡಿಜಿಟಲ್ ನಾವೀನ್ಯತೆ, ಸೆಮಿಕಂಡಕ್ಟರ್ ಬಾಹ್ಯಾಕಾಶ ತಂತ್ರಜ್ಞಾನ, ಲಸಿಕೆ ಅಭಿವೃದ್ಧಿ ಮತ್ತು ಮೊಬೈಲ್ ಉತ್ಪಾದನೆಯಲ್ಲಿ ಜಾಗತಿಕ ನಾಯಕನಾಗಿ ಹೊರಹೊಮ್ಮಿದೆ. ಇದು ಉದಯೋನ್ಮುಖ ತಂತ್ರಜ್ಞಾನಗಳ ಕ್ಷೇತ್ರದಲ್ಲಿ ಅದರ ಜಾಗತಿಕ ಸ್ಥಾನಮಾನವನ್ನು ಮತ್ತಷ್ಟು ಹೆಚ್ಚಿಸಿದೆ.

ವಿಕಾಸ್ ಭೀ, ವಿರಾಸತ್ ಭೀ (ಅಭಿವೃದ್ಧಿಯೂ ಬೇಕು, ಪರಂಪರೆಯೂ ಬೇಕು): ತಮಿಳು ಪರಂಪರೆಗೆ ಗೌರವ, ತಮಿಳುನಾಡಿನ ಪ್ರಗತಿ ಸಮಕಾಲೀನ ನಾಯಕರಲ್ಲಿ ಪ್ರಧಾನಿ ಮೋದಿಯವರನ್ನು ನಿಜವಾಗಿಯೂ ಅನನ್ಯರನ್ನಾಗಿ ಮಾಡುವುದು ಏನೆಂದರೆ, ಪ್ರಗತಿ ಮತ್ತು ಸಂಪ್ರದಾಯಗಳು ಪರಸ್ಪರ ಪೈಪೋಟಿ ನಡೆಸುವ ಆದರ್ಶಗಳಲ್ಲ, ಬದಲಿಗೆ ಪೂರಕ ಶಕ್ತಿಗಳು ಎಂಬ ಅವರ ಅಚಲ ನಂಬಿಕೆ. ತಮ್ಮ ದೂರದೃಷ್ಟಿಯ ವಿಕಾಸ್ ಭೀ, ವಿರಾಸತ್ ಭೀ (ಅಭಿವೃದ್ಧಿಯೂ ಬೇಕು, ಪರಂಪರೆಯೂ ಬೇಕು) ತತ್ವಜ್ಞಾನದ ಮೂಲಕ, ಒಂದು ರಾಷ್ಟ್ರವು ತನ್ನ ನಾಗರಿಕತೆಯ ಪರಂಪರೆಯಲ್ಲಿ ಆಳವಾಗಿ ಬೇರೂರಿರುವ ಜತೆಜತೆಗೇ, ಕ್ಷಿಪ್ರ ಆಧುನೀಕರಣವನ್ನು ಹೇಗೆ ಮುನ್ನಡೆಸಬಹುದು ಎಂಬುದನ್ನು ಅವರು ಪ್ರದರ್ಶಿಸಿದ್ದಾರೆ.

ಅವರ ನಾಯಕತ್ವದಲ್ಲಿ, ಭಾರತವು ಮೂಲಸೌಕರ್ಯ, ತಂತ್ರಜ್ಞಾನ, ಉತ್ಪಾದನೆ ಮತ್ತು ಸಾಮಾಜಿಕ ಕಲ್ಯಾಣದಲ್ಲಿ ಪರಿವರ್ತಕ ಅಭಿವೃದ್ಧಿಗೆ ಸಾಕ್ಷಿಯಾಗಿದೆ. ಅದೇ ಸಮಯದಲ್ಲಿ ತನ್ನ ಪ್ರಾಚೀನ ಸಂಸ್ಕೃತಿ, ಭಾಷೆಗಳು, ಆಧ್ಯಾತ್ಮಿಕ ಸಂಪ್ರದಾಯಗಳು ಮತ್ತು ಐತಿಹಾಸಿಕ ಪರಂಪರೆಯ ಬಗ್ಗೆ ನವಚೇತನದ ಹೆಮ್ಮೆಯನ್ನು ಅನುಭವಿಸುತ್ತಿದೆ. ಪವಿತ್ರ ಸ್ಥಳಗಳ ಜೀರ್ಣೋದ್ಧಾರ ಇರಲಿ, ಸಾಂಸ್ಕೃತಿಕ ಲಾಂಛನಗಳ ಪುನಶ್ಚೇತನ ಇರಲಿ, ಶಾಸ್ತ್ರೀಯ ಭಾಷೆಗಳ ಆಚರಣೆ ಇರಲಿ ಅಥವಾ ಅಮೂಲ್ಯವಾದ ಕಲಾಕೃತಿಗಳ ಸಂರಕ್ಷಣೆ ಇರಲಿ, ಅವರ ಆಡಳಿತವು ಆಧುನಿಕ ಆಕಾಂಕ್ಷೆಗಳು ಮತ್ತು ಶಾಶ್ವತ ಮೌಲ್ಯಗಳ ಅಪರೂಪದ ಸಂಶ್ಲೇಷಣೆಯನ್ನು ಪ್ರತಿಬಿಂಬಿಸುತ್ತದೆ.

ನಿಜವಾದ ಅಭಿವೃದ್ಧಿಯನ್ನು ಕೇವಲ ಆರ್ಥಿಕ ಬೆಳವಣಿಗೆಯಿಂದ ಮಾತ್ರ ಅಳೆಯಲಾಗುವುದಿಲ್ಲ, ಬದಲಿಗೆ ಒಂದು ರಾಷ್ಟ್ರವು ತನ್ನ ಪರಂಪರೆಯನ್ನು ಮುಂದಿನ ಪೀಳಿಗೆಗೆ ಸಂರಕ್ಷಿಸುವ, ಪೋಷಿಸುವ ಮತ್ತು ಹಸ್ತಾಂತರಿಸುವ ಸಾಮರ್ಥ್ಯದ ಮೇಲೂ ಅಳೆಯಲಾಗುತ್ತದೆ ಎಂಬುದನ್ನು ನಿರೂಪಿಸುವ ಮೂಲಕ ಪ್ರಧಾನಿ ಮೋದಿ ಅವರ ವಿಧಾನವು ರಾಷ್ಟ್ರ ನಿರ್ಮಾಣವನ್ನು ಮರುಸಂಯೋಜಿಸಿದೆ. ಅವರ ವಿಕಾಸ್ ಭೀ, ವಿರಾಸತ್ ಭೀ ತತ್ವಜ್ಞಾನವು ಆತ್ಮವಿಶ್ವಾಸ ಮತ್ತು ಪುನರುತ್ಥಾನಗೊಳ್ಳುತ್ತಿರುವ ಭಾರತಕ್ಕೆ ಮಾರ್ಗದರ್ಶಿ ಸೂತ್ರವಾಗಿದೆ. ಇದು ತನ್ನ ವೈಭವಯುತ ಭೂತಕಾಲದಲ್ಲಿ ದೃಢವಾಗಿ ನೆಲೆ ನಿಲ್ಲುವ ಜತೆಗೆ ಭವಿಷ್ಯದತ್ತ ಧೈರ್ಯದಿಂದ ಹೆಜ್ಜೆ ಇಡುತ್ತಿದೆ.

ಚೆನ್ನೈ ಮೆಟ್ರೋ ರೈಲು ವಿಸ್ತರಣೆ, ಚೆನ್ನೈ-ಬೆಂಗಳೂರು ಎಕ್ಸ್‌ಪ್ರೆಸ್‌ವೇ, ತಮಿಳುನಾಡು ರಕ್ಷಣಾ ಕೈಗಾರಿಕಾ ಕಾರಿಡಾರ್, ಬಂದರುಗಳು ಮತ್ತು ವಿಮಾನ ನಿಲ್ದಾಣಗಳ ಆಧುನೀಕರಣ, ರಾಷ್ಟ್ರೀಯ ಹೆದ್ದಾರಿಗಳ ವಿಸ್ತರಣೆ, ರೈಲ್ವೆ ನಿಲ್ದಾಣಗಳ ಪುನರಾಭಿವೃದ್ಧಿ ಮತ್ತು ಹೊಸ ಪಂಬನ್ ರೈಲು ಸೇತುವೆ ಸೇರಿದಂತೆ ಮೋದಿ ಅವರ ನೇತೃತ್ವದ ಪರಿವರ್ತಕ ಉಪಕ್ರಮಗಳಿಂದ ತಮಿಳುನಾಡು ಅಪಾರವಾಗಿ ಪ್ರಯೋಜನ ಪಡೆದಿದೆ. ಭಾರತದ ಮೊದಲ ವರ್ಟಿಕಲ್ ಲಿಫ್ಟ್ ಸಮುದ್ರ ಸೇತುವೆಯಾದ ಹೊಸ ಪಂಬನ್ ರೈಲು ಸೇತುವೆಯ ಉದ್ಘಾಟನೆಯು ರಾಮೇಶ್ವರಂಗೆ ಸಂಪರ್ಕವನ್ನು ಹೆಚ್ಚಿಸುವ ಮತ್ತು ಭಾರತದ ಇಂಜಿನಿಯರಿಂಗ್ ಶ್ರೇಷ್ಠತೆಯನ್ನು ಬಿಂಬಿಸುವ ಒಂದು ಹೆಗ್ಗುರುತಿನ ಸಾಧನೆಯಾಗಿ ನಿಂತಿದೆ. ಸ್ವಾವಲಂಬಿ ಭಾರತದ ದೃಷ್ಟಿಕೋನವನ್ನು ಅಚಲವಾಗಿ ಮುನ್ನಡೆಸಿದ್ದರಿಂದ ತಮಿಳುನಾಡು ಎಲೆಕ್ಟ್ರಾನಿಕ್ಸ್, ಮೊಬೈಲ್ ಫೋನ್‌ಗಳು ಮತ್ತು ಐಫೋನ್ ಉತ್ಪಾದನೆಗೆ ಪ್ರಮುಖ ಕೇಂದ್ರವಾಗಿಯೂ ಹೊರಹೊಮ್ಮಿದೆ.

ಕಾಶಿ ತಮಿಳು ಸಂಗಮಂ ಮತ್ತು ಸೌರಾಷ್ಟ್ರ ತಮಿಳು ಸಂಗಮಂನಂತಹ ಉಪಕ್ರಮಗಳು ಸಾಂಸ್ಕೃತಿಕ ಬಂಧಗಳನ್ನು ಬಲಪಡಿಸಿವೆ. ನಮ್ಮ ಹೊಸ ಸಂಸತ್ ಭವನದಲ್ಲಿ ಸೆಂಗೋಲ್ ಸ್ಥಾಪನೆಯು ಭಾರತದ ಪ್ರಜಾಸತ್ತಾತ್ಮಕ ಮತ್ತು ನಾಗರಿಕತೆಯ ಪರಂಪರೆಗೆ ತಮಿಳುನಾಡು ನೀಡಿದ ಕೊಡುಗೆಗೆ ಸಂದ ಸೂಕ್ತ ಮನ್ನಣೆಯಾಗಿದೆ. ಮೋದಿ ಅವರ ಗಂಗೈಕೊಂಡ ಚೋಳಪುರಂ ಭೇಟಿಯು, ಚೋಳರ ಪರಂಪರೆ ಉಲ್ಲೇಖಿಸುತ್ತದೆ. ವಿದೇಶಗಳಿಂದ ಅಮೂಲ್ಯವಾದ ಕಲಾಕೃತಿಗಳು ಮತ್ತು ಪ್ರಾಚೀನ ವಸ್ತುಗಳನ್ನು ಮರಳಿ ತರುವ ಉಪಕ್ರಮಗಳು, ಅದರಲ್ಲಿಯೂ ಇತ್ತೀಚಿನ ಆನೈಮಂಗಲಂ ಚೋಳರ ಕಾಲದ ತಾಮ್ರದ ಶಾಸನಗಳನ್ನು ಮರಳಿ ತಂದಿರುವುದು ವ್ಯಾಪಕವಾಗಿ ಶ್ಲಾಘಿಸಲ್ಪಟ್ಟಿದೆ.

ದೇವಾಲಯಗಳು, ಪರಂಪರೆಯ ತಾಣಗಳು, ಶಾಸ್ತ್ರೀಯ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಪ್ರದಾಯಗಳ ಸಂರಕ್ಷಣೆಗೆ ಅವರು ನೀಡಿದ ಬೆಂಬಲದೊಂದಿಗೆ, ಈ ಪ್ರಯತ್ನಗಳು ತಮಿಳು ನಾಗರಿಕತೆಯ ಜಾಗತಿಕ ಸ್ಥಾನಮಾನವನ್ನು ಹೆಚ್ಚಿಸಿವೆ ಮತ್ತು ತಮಿಳು ಭಾಷೆ ಹಾಗೂ ಸಂಸ್ಕೃತಿಯ ಬಗ್ಗೆ ಅವರಿಗಿರುವ ಶಾಶ್ವತ ಗೌರವ ಪ್ರತಿಬಿಂಬಿಸುತ್ತವೆ.

ಪ್ರತಿ ಯುಗದಲ್ಲೂ, ಇತಿಹಾಸವು ತಮ್ಮ ಕಾಲದ ಗಡಿಗಳನ್ನು ಮೀರಿ ನಿಲ್ಲುವ ದೂರದೃಷ್ಟಿ ಮತ್ತು ಕಾರ್ಯಗಳನ್ನು ಹೊಂದಿರುವ ನಾಯಕರ ಉಗಮಕ್ಕೆ ಸಾಕ್ಷಿಯಾಗುತ್ತದೆ. ಅಂತಹ ವ್ಯಕ್ತಿಗಳನ್ನು ಯುಗ ಪುರುಷ ಎಂದು ನೆನಪಿಸಿಕೊಳ್ಳಲಾಗುತ್ತದೆ, ಏಕೆಂದರೆ ಅವರು ರಾಷ್ಟ್ರದ ಭವಿಷ್ಯವನ್ನು ರೂಪಿಸುತ್ತಾರೆ ಮತ್ತು ತಲೆಮಾರುಗಳಿಗೆ ಸ್ಫೂರ್ತಿ ನೀಡುತ್ತಾರೆ. ತಮ್ಮ ಪರಿವರ್ತಕ ನಾಯಕತ್ವ, ರಾಷ್ಟ್ರೀಯ ಅಭಿವೃದ್ಧಿಗೆ ಬದ್ಧತೆ ಮತ್ತು ಜನರಿಗೆ ದಣಿವರಿಯದ ಸೇವೆಯ ಮೂಲಕ, ಅವರು ಸಮಕಾಲೀನ ಭಾರತದ ನಿಜವಾದ 'ಯುಗ ಪುರುಷ'ರಾಗಿ ಹೊರಹೊಮ್ಮಿದ್ದಾರೆ. ಅವರ ಸಮರ್ಥ ನಾಯಕತ್ವವು ರಾಷ್ಟ್ರವನ್ನು ವಿಕಸಿತ ಭಾರತ 2047 ಕಡೆಗೆ ಮುನ್ನಡೆಸುತ್ತದೆ ಎಂಬ ವಿಶ್ವಾಸ ನನಗಿದೆ.

ಮಧ್ಯಸ್ಥಿಕೆ ಮೂಲಕ ವಿವಾದ ಇತ್ಯರ್ಥಕ್ಕೆ ಸುಪ್ರೀಂ ಆದೇಶ

• **ಹೊಸದಿಲ್ಲಿ:** ಕರ್ನಾಟಕದ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಮತ್ತು ಐಪಿಎಸ್ ಅಧಿಕಾರಿ ಡಿ. ರೂಪಾ ಮೌದ್ಗಿಲ್ ನಡುವಿನ ದೀರ್ಘಕಾಲದ ಮಾನನಷ್ಟ ಪ್ರಕರಣವನ್ನು ಮಧ್ಯಸ್ಥಿಕೆ ಮೂಲಕ ಬಗೆಹರಿಸಲು ಸುಪ್ರೀಂ ಕೋರ್ಟ್ ಶುಕ್ರವಾರ ಆದೇಶಿಸಿದೆ. ಈ ಸಂಬಂಧ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕುರಿಯನ್ ಜೋಸೆಫ್ ಅವರನ್ನು ಮಧ್ಯವರ್ತಿಯಾಗಿ ನೇಮಿಸಲಾಗಿದೆ.






ನ್ಯಾಯಮೂರ್ತಿ ಸತೀಶ್‌ಚಂದ್ರ ಶರ್ಮಾ, ನ್ಯಾಯಮೂರ್ತಿ ಸಂಜೀವ್ ಸಚ್ದೇವ್ ಅವರಿದ್ದ ವಿಭಾಗೀಯ ಪೀಠವು, ಸುದೀರ್ಘ ನ್ಯಾಯಾಂಗ ಹೋರಾಟದ ಬದಲು ಮಧ್ಯಸ್ಥಿಕೆಯ ಮೂಲಕ ವಿವಾದ ಇತ್ಯರ್ಥವಾಗುವುದು ಸೂಕ್ತ ಎಂದು ಅಭಿಪ್ರಾಯಪಟ್ಟಿತು.

ವೃತ್ತಿ ಜೀವನ ಹಾಳುಮಾಡಿಕೊಳ್ಳಬೇಡಿ: ಇಬ್ಬರೂ ಪರಸ್ಪರ ವೃತ್ತಿಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ ಎಂದು ನ್ಯಾಯಮೂರ್ತಿ ಶರ್ಮಾ ವಿಚಾರಣೆ ವೇಳೆ ಹೇಳಿದರು. ಈ ಪ್ರಕರಣವನ್ನು ಮಧ್ಯಸ್ಥಿಕೆಯ ಮೂಲಕ ಬಗೆಹರಿಸಬಹುದು ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಹೀಗಾಗಿ ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕುರಿಯನ್ ಜೋಸೆಫ್ ಅವರನ್ನು ಮಧ್ಯವರ್ತಿಯಾಗಿ ನೇಮಿಸಲಾಗಿದೆ. ಕಕ್ಷಿದಾರರು ಅವರ ಮುಂದೆ ಹಾಜರಾಗಬೇಕು. ಮಧ್ಯಂತರ ಕ್ರಮವಾಗಿ ಎರಡೂ ಪ್ರಕರಣಗಳ ಮುಂದಿನ ವಿಚಾರಣೆಗೆ ತಡೆ ನೀಡಲಾಗಿದೆ ಎಂದು ಪೀಠ ಆದೇಶದಲ್ಲಿ ತಿಳಿಸಿದೆ.

2023ರಲ್ಲಿ ಇಬ್ಬರು ಅಧಿಕಾರಿಗಳು ಪರಸ್ಪರ ವಿರುದ್ಧ ಸಾರ್ವಜನಿಕವಾಗಿ ಆರೋಪ– ಪ್ರತ್ಯಾರೋಪಗಳನ್ನು ಮಾಡಿದ ಬಳಿಕ ಈ ವಿವಾದ ಆರಂಭವಾಗಿತ್ತು. ಬಳಿಕ ಇಬ್ಬರೂ ಪರಸ್ಪರ ಮಾನನಷ್ಟ ಮೊಕದ್ದಮೆಗಳನ್ನು ದಾಖಲಿಸಿದ್ದರು. ರೂಪಾ ಮೌದ್ಗಿಲ್ ಸಲ್ಲಿಸಿದ್ದ ದೂರಿನ ಆಧಾರದಲ್ಲಿ ತನ್ನ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಮಾನನಷ್ಟ ಪ್ರಕರಣವನ್ನು ರದ್ದುಗೊಳಿಸುವಂತೆ ಕೋರಿ ರೋಹಿಣಿ ಸಿಂಧೂರಿ ಸಲ್ಲಿಸಿದ್ದ ಅರ್ಜಿ ಹೈಕೋರ್ಟ್ ಇತ್ತೀಚೆಗೆ ವಜಾಗೊಳಿಸಿತ್ತು.

ಸಮಾಲೋಚನೆ



ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ರಾಷ್ಟ್ರಪತಿ ಭವನದಲ್ಲಿ ಶುಕ್ರವಾರ ಸೌಜನ್ಯದ ಭೇಟಿ ಮಾಡಿ, ಸಮಾಲೋಚನೆ ನಡೆಸಿದರು.

ಅನುದಾನ ನೀಡಿದ್ದನ್ನು ಸಮರ್ಥಿಸಿದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ

• **ಬೆಂಗಳೂರು:** ರಾಜ್ಯದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವಿವಿಧ ಹಿಂದುಳಿದ ವರ್ಗಗಳ ಸಂಘ ಸಂಸ್ಥೆಗಳು ನೀಡಿರುವ ಮನವಿಗಳನ್ನು ಪರಿಶೀಲಿಸಿ ಸುಮಾರು 155 ಹಿಂದುಳಿದ ವರ್ಗಗಳ ಸಂಘ – ಸಂಸ್ಥೆಗಳಿಗೆ 71.85 ಕೋಟಿ ರೂ.ವೆಚ್ಚದಲ್ಲಿ ಸಮುದಾಯ ಭವನ ಮತ್ತು ವಿದ್ಯಾರ್ಥಿ ನಿಲಯಗಳ ನಿರ್ಮಾಣಕ್ಕೆ ಪೂರ್ವಭಾವಿ ಮಂಜೂರಾತಿ ನೀಡಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮರ್ಥಿಸಿಕೊಂಡಿದ್ದಾರೆ.



ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಈ ಮಾಹಿತಿ ನೀಡಿದ ಅವರು, ಇದೇನು ಫಲಾನುಭವಿಗಳ ಅಂತಿಮ ಪಟ್ಟಿ ಅಲ್ಲ. ಫಲಾನುಭವಿಗಳು ನೀಡಿರುವ ಮನವಿಗಳನ್ನು ಕೂಡಾ ಪರಿಶೀಲಿಸಿ, ಅವುಗಳಿಗೆ ಮುಂದಿನ ದಿನಗಳಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು. ಇಲಾಖೆಗೆ ಸಲ್ಲಿಸಲಾಗಿರುವ ಮನವಿಗಳಲ್ಲಿ ಕುರುಬ ಸಮುದಾಯಕ್ಕೆ ಸೇರಿರುವ ಮನವಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದ ಕಾರಣಕ್ಕೆ ಆ ಸಮುದಾಯಕ್ಕೆ ಹೆಚ್ಚಿನ ಅನುದಾನ ಸಂದಾಯವಾಗಿದೆಯೇ ಹೊರತು ಉದ್ದೇಶಪೂರ್ವಕವಾಗಿ ಯಾವುದೇ ಬಗೆಯ ತಾರತಮ್ಯ ಮಾಡಲಾಗಿಲ್ಲ.

ಕುರುಬ ಜನಾಂಗದ ಜೊತೆಗೆ ಮಡಿವಾಳ, ಲಿಂಗಾಯಿತ, ಒಕ್ಕಲಿಗ, ಬೆಸ್ತ, ಬಲಿಜ, ಗೊಲ್ಲ, ಚೆಟ್ಟಿ, ಕುಂಬಾರ, ಅರಸು, ಹೆಳವ, ಸವಿತಾ ಸಮಾಜ, ಉಪ್ಪಾರ, ಗಾಣಿಗ, ಕುರುಹಿನ ಶೆಟ್ಟಿ, ಹಾಲಕ್ಕಿ, ರೆಡ್ಡಿ ಈ ಜನಾಂಗದವರ ಸಮುದಾಯ ಭವನ ಮತ್ತು ವಿದ್ಯಾರ್ಥಿ ನಿಲಯಗಳ ಕಟ್ಟಡಗಳ ನಿರ್ಮಾಣಕ್ಕೆ ಪೂರ್ವಭಾವಿ ಆದೇಶವನ್ನು ಹೊರಡಿಸಲಾಗಿದೆ. ಈ ಆದೇಶವು ಅನುದಾನದ ಬಿಡುಗಡೆಯ ಆದೇಶ ಅಲ್ಲ. ಅನುದಾನ ಬಿಡುಗಡೆಗೆ ಸಂಘ ಸಂಸ್ಥೆಗಳು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಮುಖಾಂತರ ಜಮೀನು /ನಿವೇಶನ ಅವರ ಹೆಸರಿನಲ್ಲಿ ಇರುವ ಬಗ್ಗೆ ಸ್ಥಳೀಯ ಪುರಸಭೆ / ಪಂಚಾಯತಿಯಿಂದ ಕಟ್ಟಡ ಲೈಸೆನ್ಸ್, ಸಂಘ ಸಂಸ್ಥೆಯ 3 ವರ್ಷದ ಆಡಿಟ್ ವರದಿ ಇತ್ಯಾದಿ ದಾಖಲಾತಿಗಳನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಕಳುಹಿಸಬೇಕಾಗುತ್ತದೆ. ಅನುದಾನ ಬಿಡುಗಡೆ ಮಾಡಲು ಸರ್ಕಾರದಿಂದ ಮಾರ್ಗ ಸೂಚಿಗಳನ್ನು ಹೊರಡಿಸಲಾಗಿದೆ.

ಕಿರುಸುದ್ದಿ

ಬಿಡದಿ ಟೌನ್‌ಶಿಪ್: 3 ಗ್ರಾಮ ಭೂ ಸ್ವಾಧೀನಕ್ಕೆ ಅಧಿಸೂಚನೆ

• **ರಾಮನಗರ:** ರೈತರ ಪರ–ವಿರೋಧದ ನಡುವೆಯೂ ರಾಜ್ಯ ಸರ್ಕಾರ ಭಾರತದ ಮೊದಲ ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ (ಬಿಡದಿ ಟೌನ್ ಶಿಪ್) ಯೋಜನೆಗಾಗಿ 9 ಕಂದಾಯ ಗ್ರಾಮಗಳ ಪೈಕಿ 3 ಗ್ರಾಮಗಳ ಭೂ ಸ್ವಾಧೀನಕ್ಕಾಗಿ ಅಂತಿಮ ಅಧಿಸೂಚನೆ ಹೊರಡಿಸಿದೆ. ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಭಿವೃದ್ಧಿಪಡಿಸುತ್ತಿರುವ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಗಾಗಿ ಮೊದಲ ಹಂತದಲ್ಲಿ ಕೆಂಪಯ್ಯನಪಾಳ್ಯ – 367.15 ಎಕರೆ, ಮಂಡಲಹಳ್ಳಿ – 70.37 ಎಕರೆ ಹಾಗೂ ವಡೇರಹಳ್ಳಿ – 61.2 ಎಕರೆ ಭೂಮಿ ಸ್ವಾಧೀನಕ್ಕೆ ಅಧಿಸೂಚನೆ ಹೊರಬಿದ್ದಿದ್ದು, ಈ ಯೋಜನೆಗೆ ರಾಮನಗರ ತಾಲೂಕು ಬಿಡದಿ ಹೋಬಳಿ ವ್ಯಾಪ್ತಿಯಲ್ಲಿ ಬೈರಮಂಗಲ, ಬನ್ನಿಗಿರಿ, ಹೊಸೂರು, ಕಂಚುಗಾರನಹಳ್ಳಿ, ಕೆಂಪಯ್ಯನಪಾಳ್ಯ, ಕೆ.ಜಿ.ಗೊಲ್ಲರಪಾಳ್ಯ, ಮಂಡಲಹಳ್ಳಿ, ಅರಳಾಳುಸಂದ್ರ ಹಾಗೂ ಹಾರೋಹಳ್ಳಿ ತಾಲೂಕು ಹಾರೋಹಳ್ಳಿ ಹೋಬಳಿಯ ವಡೇರಹಳ್ಳಿ ಸೇರಿ ಒಟ್ಟು 9 ಕಂದಾಯ ಗ್ರಾಮಗಳ ಸುಮಾರು 7,881 ಎಕರೆ ಸ್ವಾಧೀನಕ್ಕೆ ಒಳಪಡಲಿದ್ದು, ಇದರಲ್ಲಿ ಖಾಸಗಿ ಮಾಲೀಕತ್ವದ 6,731 ಎಕರೆ ಜಮೀನು ಇದೆ. ನಗರಾಭಿವೃದ್ಧಿ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಅಂತಿಮ ಅಧಿಸೂಚನೆ ಪ್ರಕಟಿಸುವ ಅವಧಿಯನ್ನು 2027ರ ಮಾ.11ರವರೆಗೆ ವಿಸ್ತರಿಸಿದ್ದರು. ಇದೀಗ 498 ಎಕರೆ 54 ಗುಂಟೆ ಭೂ ಸ್ವಾಧೀನಕ್ಕೆ ಅಂತಿಮ ಅಧಿಸೂಚನೆ ಹೊರಡಿಸಿದೆ.

ಮಾಜಿ ಶಾಸಕ ಆರ್.ಜಿ. ವೆಂಕಟಾಚಲಯ್ಯ ನಿಧನ

• **ದೊಡ್ಡಬಳ್ಳಾಪುರ:** ತಾಲೂಕಿನ ಹಣಬೆ ಗ್ರಾಮದ ಹಿರಿಯ ರಾಜಕಾರಣಿ, ಮಾಜಿ ಶಾಸಕ ಆರ್.ಜಿ.ವೆಂಕಟಾಚಲಯ್ಯ ಶುಕ್ರವಾರ ಬೆಳಗಿನ ಜಾವ ನಿಧನರಾಗಿದ್ದಾರೆ. ಅವರಿಗೆ 90 ವರ್ಷ ವಯಸ್ಸಾಗಿತ್ತು. ಮೃತರಿಗೆ ಮೂರು ಜನ ಪುತ್ರಿಯರು ಇದ್ದಾರೆ. ವಯೋ ಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಶುಕ್ರವಾರ ಮುಂಜಾನೆ ನಿಧನರಾಗಿದ್ದಾರೆ.




ಜನಪ್ರಿಯ ಮಾಜಿ ಶಾಸಕ ಆರ್.ಜಿ. ವೆಂಕಟಾಚಲಯ್ಯ ಅವರಿಗೆ ಸಚಿವ ಕೆ.ಎಚ್.ಮುನಿಯಪ್ಪ, ಮಾಜಿ ಶಾಸಕ ಟಿ.ವೆಂಕಟರಮಣಯ್ಯ, ಬಮೂಲ್ ನಿರ್ದೇಶಕ ಬಿ.ಸಿ. ಆನಂದ್‌ಕುಮಾರ್, ಮುಖಂಡರಾದ ರಕ್ಷಾರಾಮಯ್ಯ, ಎಚ್.ಎಸ್. ಅಶ್ವತ್ಥ್‌ನಾರಾಯಣ ಕುಮಾರ್, ಟಿ.ವಿ. ಲಕ್ಷ್ಮೀನಾರಾಯಣ್, ಶಿವಶಂಕರ್, ಬಿ.ಎಚ್. ಕೆಂಪಣ್ಣ, ನಾರಾಯಣ ಗೌಡ, ಶರತ್ ಪಟೇಲ್, ನಾಗೇಶ್, ಪುನೀತ್ ಗೌಡ ಮಲ್ಲೋಹಳ್ಳಿ, ಯಶವಂತ್ ರಾಜ ಘಟ್ಟ ಮತ್ತಿತ್ತರರು ಅಂತಿಮ ನಮನ ಸಲ್ಲಿಸಿದರು.

ಮಾವಿನಹಣ್ಣು ತಿಂದು ಸಹೋದರಿಯರಿಬ್ಬರ ಸಾವು

• **ಬೀದರ್:** ಊಟದ ನಂತರ ಮಾವಿನ ಹಣ್ಣು ಸೇವಿಸಿ ಅಸ್ವಸ್ಥಗೊಂಡ ಸಹೋದರಿಯಬ್ಬರು ಚಿಕಿತ್ಸೆ ಫಲಕಾರಿಯಾಗದೆ ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿರುವ ಹೃದಯವಿದ್ರಾವಕ ಘಟನೆ ತೆಲಂಗಾಣದ ಹೈದರಾಬಾದ್‌ನಲ್ಲಿ ನಡೆದಿದೆ. ಮೂಲತಃ ಬೀದರ್ ಜಿಲ್ಲೆಯ ಔರಾದ್ ತಾಲೂಕಿನ ಶೆಂಬೆಳ್ಳಿ ಗ್ರಾಮದ ಭವಾನಿ ವೈಜನಾಥ ಮೇತ್ರೆ (17) ಹಾಗೂ ಇವರ ಸಹೋದರಿ ಸಂಧ್ಯಾರಾಣಿ ಮೇತ್ರೆ (14) ಮೃತರು ಎಂದು ತಿಳಿದು ಬಂದಿದೆ.

ನೆರವು ಕೋರಿ ಕೇಂದ್ರ ಗೃಹಸಚಿವ ಅಮಿತ್ ಶಾಗೆ ಮುಖ್ಯಮಂತ್ರಿ ಡಿಕೆಶಿ ಮನವಿ

ಪೊಲೀಸ್ ಭದ್ರತೆಗೆ ಒತ್ತು



ಸಿಎಂ ಡಿ.ಕೆ. ಶಿವಕುಮಾರ್ ಅವರು ಕರ್ನಾಟಕ ಸರಕಾರದ ಬೇಡಿಕೆಗಳ ಕುರಿತು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್ ಅವರಿಗೆ ದೆಹಲಿಯ ಅವರ ನಿವಾಸದಲ್ಲಿ ಮನವಿ ಸಲ್ಲಿಸಿದರು.

• **ಹೊಸದಿಲ್ಲಿ/ಬೆಂಗಳೂರು:** ಎರಡು ಹೆಚ್ಚುವರಿ ಇಂಡಿಯಾ ರಿಸರ್ವ್ ಬೆಟಾಲಿಯನ್ಸ್ ಸೃಷ್ಟಿ, ಪೊಲೀಸ್ ಇಲಾಖೆ ಚಟುವಟಿಕೆಗಳಿಗೆ ಸಿಎಸ್‌ಆರ್ ನಿಧಿ ಬಳಕೆ, ಪೊಲೀಸ್ ತರಬೇತಿ ಸಂಸ್ಥೆಗಳಲ್ಲಿ ಮೂಲಸೌಕರ್ಯ ಮೇಲ್ದರ್ಜೀಕರಣ, ಕಾರಾಗೃಹಗಳ ಆಧುನೀಕರಣ ಸೇರಿದಂತೆ ಕರ್ನಾಟಕ ರಾಜ್ಯದ ಭದ್ರತಾ ಮೂಲಸೌಕರ್ಯ ಮತ್ತು ಪೊಲೀಸ್ ಸಾಮರ್ಥ್ಯ ಸುಧಾರಣೆಗೆ ನೆರವಾಗುವಂತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕೇಂದ್ರ ಗೃಹಸಚಿವ ಅಮಿತ್ ಶಾಗೆ ಮನವಿ ಸಲ್ಲಿಸಿದ್ದಾರೆ.

ಶುಕ್ರವಾರ ಕೇಂದ್ರ ಗೃಹ ಸಚಿವರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿದ ಅವರು, ರಾಜ್ಯದಲ್ಲಿ ಪೊಲೀಸ್ ಇಲಾಖೆ ಮತ್ತಷ್ಟು ಬಲಪಡಿಸಲು ಕೇಂದ್ರದಿಂದ ಸಹಾಯ ನೀಡುವಂತೆ ಮನವಿ ಮಾಡಿದರು.

ಮನವಿಯ ಪ್ರಮುಖ ಅಂಶಗಳು

1 **ಕರ್ನಾಟಕ ರಾಜ್ಯ ಪೊಲೀಸ್‌ಗೆ ಪ್ರೆಸಿಡೆಂಟ್ಸ್ ಕಲರ್ (ರಾಷ್ಟ್ರಪತಿಗಳ ಅತ್ಯುನ್ನತ ಗೌರವ) ಪ್ರಶಸ್ತಿ:** ಕರ್ನಾಟಕ ರಾಜ್ಯ ಪೊಲೀಸ್‌ಗೆ ಪ್ರೆಸಿಡೆಂಟ್ಸ್ ಕಲರ್ ಪ್ರಶಸ್ತಿಯನ್ನು ನೀಡುವ ಕುರಿತಾದ ಪ್ರಸ್ತಾವನೆಯನ್ನು 2024ರಲ್ಲೇ ರಂದು ಕೇಂದ್ರಕ್ಕೆ ಸಲ್ಲಿಸಲಾಗಿದ್ದು, ಪ್ರಸ್ತುತ ಅದು ಪರಿಶೀಲನೆಯಲ್ಲಿದೆ. ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯು ಇನ್ನು ಸಹ ಈ ಪ್ರತಿಷ್ಠಿತ ಗೌರವವನ್ನು ಸ್ವೀಕರಿಸಬೇಕಾಗಿದೆ. ಈ ವಿಷಯವನ್ನು ಶೀಘ್ರವಾಗಿ ಪರಿಶೀಲಿಸಿ ಪ್ರೆಸಿಡೆಂಟ್ಸ್ ಕಲರ್ ಪ್ರಶಸ್ತಿ ನೀಡಲು ಅನುಮೋದನೆ ನೀಡಬೇಕು.

2 **ಎರಡು ಹೆಚ್ಚುವರಿ ಇಂಡಿಯಾ ರಿಸರ್ವ್ ಬೆಟಾಲಿಯನ್ಸ್ ಸೃಷ್ಟಿ :** ವಿಜಯನಗರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಇನ್ನೂ ಎರಡು ಹೆಚ್ಚುವರಿ ಐಆರ್‌ಬಿ ಬೆಟಾಲಿಯನ್‌ಗಳನ್ನು ಸ್ಥಾಪಿಸಲು ಅಂದಾಜು 243.87 ಕೋಟಿ ರೂ.ಗಳ ವೆಚ್ಚದ ಹೊಸ ಪ್ರಸ್ತಾವನೆಯನ್ನು ಗೃಹ ಸಚಿವಾಲಯಕ್ಕೆ ಕಳುಹಿಸಲಾಗಿದೆ. ಇದಕ್ಕೆ ಶೀಘ್ರವಾಗಿ ಮಂಜೂರಾತಿ ನೀಡಬೇಕೆಂದು ನಾನು ವಿನಂತಿಸುತ್ತೇನೆ.

3 **ಪೊಲೀಸ್ ವ್ಯವಸ್ಥೆ ಆಧುನೀಕರಣಕ್ಕಾಗಿ ನೆರವು:** ನಾಲ್ಕು ಪ್ರಮುಖ ನಗರಗಳಲ್ಲಿ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್‌ಗಳು ಹಾಗೂ ಸಂವಹನ ಉಪಕರಣಗಳ ಸ್ಥಾಪನೆಗಾಗಿ ಎಎಸ್‌ಯುಎಂಪಿ ಯೋಜನೆಯಡಿ 280.00 ಕೋಟಿ ರೂ.ಗಳ ಪ್ರಸ್ತಾವನೆಗೆ ಮಂಜೂರಾತಿ ನೀಡಬೇಕು.

4 **ಪೊಲೀಸ್ ಸಂಬಂಧಿತ ಚಟುವಟಿಕೆಗಳ ಸೇರ್ಪಡೆ:** ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್ಆರ್) ನಿಧಿಯಲ್ಲಿ ಪೊಲೀಸ್ ಸಂಬಂಧಿತ ಚಟುವಟಿಕೆಗಳನ್ನು ಸೇರಿಸುವ ಪ್ರಸ್ತಾವನೆ ಸಲ್ಲಿಸಲಾಗುತ್ತಿದ್ದು, ಶೀಘ್ರವಾಗಿ ಅನುಮೋದನೆ ನೀಡಬೇಕು.

5 **ಪೊಲೀಸ್ ತರಬೇತಿ ಸಂಸ್ಥೆಗಳಲ್ಲಿ ಮೂಲಸೌಕರ್ಯ ಮೇಲ್ದರ್ಜೀಕರಣ:** ಪೊಲೀಸ್ ತರಬೇತಿ ಸಂಸ್ಥೆಗಳಲ್ಲಿ ಮೂಲಸೌಕರ್ಯಗಳನ್ನು ಮೇಲ್ದರ್ಜೆಗೆ ಏರಿಸಲು 258.53 ಕೋಟಿ ರೂ.ಗಳ ವಿವರವಾದ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅನುಮೋದನೆ ನೀಡಬೇಕು

6 **ಕಾರಾಗೃಹಗಳ (ಜೈಲುಗಳ) ಆಧುನೀಕರಣ:** ಕಾರಾಗೃಹಗಳ ಆಧುನೀಕರಣ ಯೋಜನೆಯಡಿ ಸಿಸಿಟಿವಿ, ವಾಕಿ–ಟಾಕಿ ಮತ್ತು ಇತರ ಭದ್ರತಾ ಉಪಕರಣಗಳ ಖರೀದಿಗೆ 20 ಕೋಟಿ ರೂ.ಗಳನ್ನು ಬಿಡುಗಡೆ ಮಾಡಬೇಕು.

7 **ಕೇಂದ್ರ ಮೋಟಾರು ವಾಹನಗಳ ನಿಯಮ ಅನುಷ್ಠಾನದ ಗಡುವು ವಿಸ್ತರಣೆ:** ಕರ್ನಾಟಕದಲ್ಲಿ ನಿಯಮ 52–ಎ ಅನ್ನು ಅನುಷ್ಠಾನಗೊಳಿಸಲು ಗಡುವನ್ನು ವಿಸ್ತರಿಸುವಂತೆ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯಕ್ಕೆ ಪತ್ರ ಬರೆಯಲಾಗಿದೆ. ದಯವಿಟ್ಟು ತಾವು ಈ ವಿಷಯವನ್ನು ಸಂಬಂಧಪಟ್ಟ ಸಚಿವಾಲಯದೊಂದಿಗೆ ಚರ್ಚಿಸಿ, ಆದಷ್ಟು ಬೇಗ ಅನುಮೋದನೆ ಕೊಡಿಸಬೇಕು.

8 **ಪೊಲೀಸ್ ಠಾಣೆಗಳಲ್ಲಿ ಸಿಸಿಟಿವಿ/ಕ್ಯಾಮೆರಾಗಳ ಮೇಲ್ದರ್ಜೀಕರಣ:** ಸುಪ್ರೀಂ ಕೋರ್ಟ್ ಮುಂದೆ ನಡೆದ ಚರ್ಚೆಗಳ ಅನುಸಾರ, ಪೊಲೀಸ್ ಠಾಣೆಗಳಲ್ಲಿ ಅಳವಡಿಸಲಾಗಿರುವ ಸಿಸಿಟಿವಿ ಕ್ಯಾಮೆರಾಗಳನ್ನು ಮೇಲ್ದರ್ಜೆಗೆ ಏರಿಸಲು 278.26 ಕೋಟಿ ರೂ.ಗಳ ಅನುದಾನ ನೀಡಬೇಕು.

9 **ಕರ್ನಾಟಕ ಸೈಬರ್ ಕ್ರೈಮ್ ಕಂಟ್ರೋಲ್ ಅಂಡ್ ಕೋಆರ್ಡಿನೇಷನ್ ಯುನಿಟ್ ಸ್ಥಾಪನೆ:** ನಮ್ಮ ಸರ್ಕಾರವು ಅಂದಾಜು 360 ಕೋಟಿ ರೂ.ಗಳ ವೆಚ್ಚದಲ್ಲಿ ಕರ್ನಾಟಕ ಸೈಬರ್ ಕ್ರೈಮ್ ಕಂಟ್ರೋಲ್ ಅಂಡ್ ಕೋಆರ್ಡಿನೇಷನ್ ಯುನಿಟ್‌ನ್ನು ಸ್ಥಾಪಿಸಲು ಉದ್ದೇಶಿಸಿದೆ. ಈ ಯೋಜನೆಗೆ ಅನುಮೋದನೆ ನೀಡಬೇಕು.

ಇದು ನನ್ನ ಕೊನೆ ಪ್ರಮಾಣ ಪತ್ರ: ಮಲ್ಲಿಕಾರ್ಜುನ ಖರ್ಗೆ

• **ಬೆಂಗಳೂರು:** ರಾಜ್ಯಸಭೆಗೆ ಅವಿರೋಧವಾಗಿ ಆಯ್ಕೆಯಾಗಿದ್ದೇನೆ. ಆದರೆ, ಇದು ನನ್ನ ಕೊನೆಯ ಪ್ರಮಾಣಪತ್ರ ಸ್ವೀಕಾರ ಆಗಬಹುದು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ. ಶುಕ್ರವಾರ ಇಲ್ಲಿನ ವಿಧಾನಸೌಧದಲ್ಲಿ ರಾಜ್ಯಸಭೆಗೆ ಅವಿರೋಧವಾಗಿ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿ ಎಂ.ಕೆ.ವಿಶಾಲಾಕ್ಷಿ ಅವರಿಂದ ಪ್ರಮಾಣ ಪತ್ರವನ್ನು ಸ್ವೀಕರಿಸಿ ಪ್ರತಿಕ್ರಿಯಿಸಿದರು. ಇದು ನನ್ನ ಕೊನೆಯ ಪ್ರಮಾಣಪತ್ರ ಸ್ವೀಕಾರ ಆಗಬಹುದು ಎಂದು ನುಡಿದರು.



ಮಧ್ಯಪ್ರದೇಶದಲ್ಲಿ ರಾಜ್ಯಸಭಾ ಸದಸ್ಯರ ಆಯ್ಕೆ ಕುರಿತು ಮಾತನಾಡಿ, ಮೀನಾಕ್ಷಿ ನಟರಾಜನ್ ನಾಮಪತ್ರ ತಿರಸ್ಕೃತ ವಿಶೇಷ ಪ್ರಕರಣ. ಸುಪ್ರೀಂಕೋರ್ಟ್ ಹೇಳಿದಂತೆ ನಾವು ಹೈಕೋರ್ಟ್‌ಗೆ ಹೋಗುತ್ತೇವೆ. ಮಧ್ಯಪ್ರದೇಶದಲ್ಲಿ ನಡೆದಿರುವುದು ಕಾನೂನು ಬಾಹಿರ ಮತ್ತು ಪ್ರಜಾಪ್ರಭುತ್ವ ವಿರೋಧಿ. ಪ್ರಧಾನಿ ನರೇಂದ್ರ ಮೋದಿ ಇಲ್ಲದೇ ಇದು ಆಗುತ್ತಿರಲಿಲ್ಲ, ಬಿಜೆಪಿ ಪ್ರಜಾಪ್ರಭುತ್ವವನ್ನು ಕೊಲ್ಲುತ್ತಿದೆ ಎಂದು ತಿಳಿಸಿದರು.

ನನಗೆ 13ನೇ ಬಾರಿ ಜನಪ್ರತಿನಿಧಿಯಾಗುವ ಅವಕಾಶ ಸಿಕ್ಕಿದೆ. ಕಲಬುರಗಿ ಜನತೆಗೆ ಧನ್ಯವಾದ ಹೇಳುತ್ತೇನೆ. ಜೀವನದಲ್ಲಿ ಸತತವಾಗಿ ಈ ಅವಕಾಶ ಸಿಗುತ್ತಿರುವುದು ಕಾಂಗ್ರೆಸ್ ಕೊಡುಗೆಯಾಗಿದೆ. ಮಾಜಿ ಪ್ರಧಾನಿ ಇಂದಿರಾಗಾಂಧಿಯಿಂದ ಇದುವರೆಗೆ ನನಗೆ ಅವಕಾಶ ನೀಡಿದ್ದಾರೆ ಎಂದರು. ಲೋಕಸಭೆಯ ವಿಪಕ್ಷ ನಾಯಕ ರಾಹುಲ್ ಗಾಂಧಿ ನನ್ನ ಜತೆ ಇದ್ದು ಪ್ರೋತ್ಸಾಹ ನೀಡಿದ್ದಾರೆ. ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಹಾಗೂ ರಾಜ್ಯದ ಜನರು ಕೆಲಸ ಮಾಡಲು ಅವಕಾಶ ನೀಡಿದ್ದಾರೆ. ಯಾವಾಗಲೂ ಯಾವುದೇ ಕೆಲಸದಲ್ಲಿ ಮಾಧ್ಯಮ ಬೆಂಬಲ ಇಲ್ಲದೇ ಯಾರೂ ಕೂಡ ಜನರಿಗೆ ಪರಿಚಿತರಾಗುವುದಿಲ್ಲ ಎಂದು ಅವರು ಹೇಳಿದರು.

> **ಮೀನಾಕ್ಷಿ ನಟರಾಜನ್ ನಾಮಪತ್ರ ತಿರಸ್ಕೃತ ವಿಶೇಷ ಪ್ರಕರಣ. ಸುಪ್ರೀಂಕೋರ್ಟ್ ಹೇಳಿದಂತೆ ನಾವು ಹೈಕೋರ್ಟ್‌ಗೆ ಹೋಗುತ್ತೇವೆ. ಮಧ್ಯಪ್ರದೇಶದಲ್ಲಿ ನಡೆದಿರುವುದು ಕಾನೂನು ಬಾಹಿರ ಮತ್ತು ಪ್ರಜಾಪ್ರಭುತ್ವ ವಿರೋಧಿ.**
> ■ **ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ**

ಅಶೋಕ ಆರೋಪ ಆಧಾರರಹಿತ: ಲಕ್ಷ್ಮಣ್

• **ಬೆಂಗಳೂರು:** ಬೆಂಗಳೂರಿನ ಘನತ್ಯಾಜ್ಯ ವಿಲೇವಾರಿ ಯೋಜನೆಗೆ ಸಂಬಂಧಿಸಿದಂತೆ ಬಿಜೆಪಿ ನಾಯಕರು ಮಾಡುತ್ತಿರುವ 39,000 ಕೋಟಿ ರೂ.ಅಕ್ರಮ ಹಾಗೂ ಲೂಟಿ ಆರೋಪಗಳು ಸಂಪೂರ್ಣ ಆಧಾರರಹಿತವಾಗಿದ್ದು, ಜನರನ್ನು ದಾರಿ ತಪ್ಪಿಸುವ ಪ್ರಯತ್ನವಾಗಿದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದರು

ಘನತ್ಯಾಜ್ಯ ವಿಲೇವಾರಿ ಯೋಜನೆಗೆ 30 ವರ್ಷಗಳ ಅವಧಿಯ ಗುತ್ತಿಗೆ ನೀಡಿರುವುದು ಮೂಲಸೌಕರ್ಯ ಅಭಿವೃದ್ಧಿ, ಸಂಸ್ಕರಣಾ ಘಟಕಗಳ ನಿರ್ಮಾಣ ಹಾಗೂ ದೀರ್ಘಾವಧಿಯ ಹೂಡಿಕೆಯನ್ನು ಗಮನದಲ್ಲಿಟ್ಟುಕೊಂಡ, ಕಸ ಸಂಗ್ರಹಣೆ, ಸಾಗಣೆ ಹಾಗೂ ವೈಜ್ಞಾನಿಕ ವಿಲೇವಾರಿಯ ಜವಾಬ್ದಾರಿಯನ್ನು ಗುತ್ತಿಗೆ ಪಡೆಯುವ ಸಂಸ್ಥೆ ನಿರ್ವಹಿಸಲಿದೆ. ಪೌರ ಕಾರ್ಮಿಕರ ವೇತನವನ್ನು ಬಿಬಿಎಂಪಿಯೇ ಪ್ರತ್ಯೇಕವಾಗಿ ಭರಿಸುತ್ತದೆ ಎಂದು ಸ್ಪಷ್ಟಪಡಿಸಿದರು.

ಪ್ರಸ್ತುತ ಬೆಂಗಳೂರಿನಲ್ಲಿ ಪ್ರತಿದಿನ 6,000 ಟನ್ ಕಸ ಉತ್ಪತ್ತಿಯಾಗುತ್ತಿದ್ದು, ಅದನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ ವಿದ್ಯುತ್ ಉತ್ಪಾದನೆ ಹಾಗೂ ಸಂಪನ್ಮೂಲ ಮರುಬಳಕೆಯ ಉದ್ದೇಶದಿಂದ ಯೋಜನೆ ರೂಪಿಸಲಾಗಿದೆ ಎಂದರು.

ಅಂತಿಮವಾಗಿ ಸ್ಪರ್ಧಾತ್ಮಕ ಪ್ರಕ್ರಿಯೆಯ ಮೂಲಕ ಸಂಸ್ಥೆ ಆಯ್ಕೆಯಾಗಿದೆ ಎಂದರು. ಆಧಾರವಿಲ್ಲದೆ ಸಿಎಂ ಡಿ.ಕೆ. ಶಿವಕುಮಾರ್ ಅವರ ವಿರುದ್ಧ ಆರೋಪ ಮಾಡುವುದು ಸರಿಯಲ್ಲ. ಬಿಜೆಪಿ ನಾಯಕರ ಬಳಿ ದಾಖಲೆಗಳಿದ್ದರೆ ತನಿಖಾ ಸಂಸ್ಥೆಗಳಿಗೆ ಸಲ್ಲಿಸಲಿ. ಇಡಿ, ಐಟಿ ಸೇರಿದಂತೆ ಎಲ್ಲ ತನಿಖಾ ಸಂಸ್ಥೆಗಳು ಕೇಂದ್ರ ಸರ್ಕಾರದ ಅಧೀನದಲ್ಲಿವೆ. ಅಕ್ರಮ ನಡೆದಿದ್ದರೆ ತನಿಖೆ ನಡೆಸಿ ಸತ್ಯವನ್ನು ಹೊರತರಲಿ ಎಂದು ಸವಾಲು ಹಾಕಿದರು.

ಕೇಂದ್ರ ಕಾರಾಗೃಹದ ಜೈಲರ್ ಆತ್ಮಹತ್ಯೆ

• **ಧಾರವಾಡ:** ನಗರದ ಕೇಂದ್ರ ಕಾರಾಗೃಹದ ಜೈಲರ್ ನೇಣಿಗೆ ಶರಣಾದ ಘಟನೆ ಹೊಸ ಬಸ್ ನಿಲ್ದಾಣದ ಬಳಿ ಇರುವ ಕಾರಾಗೃಹದ ವಸತಿ ಗೃಹದಲ್ಲಿ ಶುಕ್ರವಾರ ನಡೆದಿದೆ. ಸಿದ್ಧರಾಮಪ್ಪ ವಡ್ಡರ್ (37) ಆತ್ಮಹತ್ಯೆಗೆ ಶರಣಾದ ಜೈಲರ್. ಎರಡು ತಿಂಗಳ ಹಿಂದೆ ಸಿದ್ಧರಾಮಪ್ಪ ಕರ್ತವ್ಯ ಲೋಪದ ಹಿನ್ನೆಲೆ ಅಮಾನತುಗೊಂಡಿದ್ದು, ಮೈಸೂರು ಕಾರಾಗೃಹಕ್ಕೆ ವರ್ಗಾವಣೆಯಾಗಿದ್ದರು. ಆದರೆ, ಕರ್ತವ್ಯಕ್ಕೆ ವರದಿ ಮಾಡಿಕೊಂಡಿರಲಿಲ್ಲ. ಶುಕ್ರವಾರ ಪತ್ನಿ, ಮಕ್ಕಳು ಬೇರೆ ಊರಿಗೆ ಹೋದಾಗ ಮನೆಯಲ್ಲಿ ಯಾರೂ ಇಲ್ಲದ ವೇಳೆ ನೇಣಿಗೆ ಶರಣಾಗಿದ್ದಾರೆ. ಈ ಕುರಿತು ಉಪನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

ಶ್ರೀ ಕ್ಷೇತ್ರ ವಿರುದ್ಧದ ಪಿತೂರಿಗಾರರ ಮೇಲೆ ಕ್ರಮ ಕೈಗೊಳ್ಳಿ

• **ಬೆಂಗಳೂರು:** ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ಅಸಹಜ ಸಾವು ಪ್ರಕರಣಗಳ ಕುರಿತ ತನಿಖೆಯನ್ನು ಶೀಘ್ರ ಪೂರ್ಣಗೊಳಿಸಲು ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಮತ್ತವರ ಕುಟುಂಬದ ವಿರುದ್ಧ ವ್ಯವಸ್ಥಿತ ಪಿತೂರಿ ನಡೆಸಿರುವವರ ವಿರುದ್ಧ ಕ್ರಮ ಕೈಗೊಂಡು, ತನಿಖೆಯನ್ನು ಶೀಘ್ರ ಪೂರ್ಣಗೊಳಿಸಿ ಅಂತಿಮ ವರದಿ ಸಲ್ಲಿಸಲು ವಿಶೇಷ ತನಿಖಾ ದಳಕ್ಕೆ ನಿರ್ದೇಶಿಸುವಂತೆ ಕೋರಿ ಆರೋಪಿ ಚೆನ್ನಯ್ಯ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.



ಪ್ರಕರಣದಲ್ಲಿ ತನ್ನೊಬ್ಬನನ್ನೇ ಬಲಿಪಶು ಮಾಡಲಾಗಿದ್ದು, ಪಿತೂರಿ ನಡೆಸಿದವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ. ಆದ್ದರಿಂದ, ಈ ನಿಟ್ಟಿನಲ್ಲಿ ಶೀಘ್ರ ಕ್ರಮ ಕೈಗೊಳ್ಳಲು ಎಸ್ಐಟಿಗೆ ನಿರ್ದೇಶಿಸಬೇಕು ಎಂದು ಕೋರಿ ಚೆನ್ನಯ್ಯ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರ ಏಕಸದಸ್ಯ ಪೀಠ ಗುರುವಾರ ವಿಚಾರಣೆ ನಡೆಸಿತು. ಕೆಲ ಕಾಲ ಅರ್ಜಿ ಆಲಿಸಿದ ಪೀಠವು, ಪ್ರತಿವಾದಿಗಳಾದ ರಾಜ್ಯ ಗೃಹ ಇಲಾಖೆ, ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಎಸ್‌ಐಟಿ ಮುಖ್ಯಸ್ಥರು ಹಾಗೂ ಧರ್ಮಸ್ಥಳ ಪೊಲೀಸರಿಗೆ ನೋಟಿಸ್ ಜಾರಿಗೊಳಿಸಿ ವಿಚಾರಣೆಯನ್ನು ಜೂ.29ಕ್ಕೆ ಮುಂದೂಡಿತು.

ಪ್ರಕಾಶ್ ರಾಜ್ ಕೈವಾಡ?

ಕೇರಳದ ರೆಸಾರ್ಟ್ ಒಂದರಲ್ಲಿ ತಂಗಿದ್ದಾಗ, ಗಿರೀಶ್ ಮಟ್ಟಣ್ಣವರ್ ಅವರು ನಟ ಪ್ರಕಾಶ್ ರಾಜ್ ಅವರಿಗೆ ಕರೆ ಮಾಡಿ ನನಗೆ ಮೊಬೈಲ್ ನೀಡಿದ್ದರು. ಪ್ರಕಾಶ್ ರಾಜ್ ಅವರು ತಮಿಳಿನಲ್ಲಿ ಮಾತನಾಡಿ, ಗಿರೀಶ್ ಹೇಳಿಕೊಟ್ಟಂತೆ ಅಧಿಕಾರಿಗಳ ಮುಂದೆ ಹೇಳಿಕೆ ನೀಡು, ನಂತರ ಬಂದು ನಾನು ನಿನ್ನನ್ನು ಕಾಣುತ್ತೇನೆ ಎಂದು ಧೈರ್ಯ ತುಂಬಿದ್ದರು ಎಂದು ಅರ್ಜಿಯಲ್ಲಿ ಚೆನ್ನಯ್ಯ ವಿವರಿಸಿದ್ದಾರೆ.

ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟಣ್ಣವರ್, ವಿಠ್ಠಲ್ ಗೌಡ, ಜಯಂತ್ ಮತ್ತಿತರರು ನನ್ನನ್ನು ಸಂಪರ್ಕಿಸಿ, ಧರ್ಮಸ್ಥಳದಲ್ಲಿ ಸಾವಿರಾರು ಹೆಣಗಳನ್ನು ಹೂಳಲಾಗಿದೆ ಎಂದು ಸುಳ್ಳು ಹೇಳಿಕೆ ನೀಡುವಂತೆ ಒತ್ತಡ ಹೇರಲಾಗಿತ್ತು.

ಬೆಂಗಳೂರಿನ ಸ್ಯಾಟಲೈಟ್ ಬಸ್ ನಿಲ್ದಾಣದ ಬಳಿಯಿಂದ ನನ್ನನ್ನು ಜಯಂತ್ ಎಂಬಾತನ ಮನೆಗೆ ಕರೆದೊಯ್ದು, ಅಲ್ಲಿ ಅಯ್ಯಪ್ಪ ಸ್ವಾಮಿ ಟವಲ್ ಮೇಲೆ ಮಾನವನ ತಲೆಬುರುಡೆ, ಮಣ್ಣು ಮತ್ತು ಅರ್ಧ ಬಾಟಲಿ ನೀರನ್ನು ಇಟ್ಟು, ತಲೆಬುರುಡೆಯನ್ನು ಕೈಯಲ್ಲಿ ಹಿಡಿಯುವಂತೆ ಹೆದರಿಸಲಾಗಿತ್ತು. ತಲೆ ಬುರುಡೆ ಮುಟ್ಟುವ ರೀತಿಯಲ್ಲಿ ಫೋಟೋಗಳನ್ನು ತೆಗೆಯಲಾಗಿತ್ತು. ನಂತರ ವಕೀಲ ಕೆ.ವಿ ಧನಂಜಯ್ ಅವರ ಕಚೇರಿಗೆ ಕರೆದೊಯ್ಯಲಾಗಿತ್ತು ಎಂದು ವಿವರಿಸಿದ್ದಾರೆ.

> **ಧರ್ಮಸ್ಥಳ ಪ್ರಕರಣ ಅತ್ಯಂತ ಸೂಕ್ಷ್ಮ ವಿಷಯವಾಗಿರುವುದರಿಂದ ಮತ್ತು ಕೋಟ್ಯಂತರ ಭಕ್ತರ ನಂಬಿಕೆಯೇ ಸಾಕ್ಷಿಯಾಗಿರುವುದರಿಂದ ಇಂತಹ ಅನುಮಾನಗಳಿಗೆ ಉತ್ತರಿಸುವುದು ನನ್ನ ಕರ್ತವ್ಯ. ಇನ್ನೆರಡು ದಿನಗಳಲ್ಲಿ ನಾನೇ ಉತ್ತರಿಸುತ್ತೇನೆ.**
> ■ **ಪ್ರಕಾಶ್ ರಾಜ್, ನಟ**

ಮಹೇಶ್ ಶೆಟ್ಟಿ ತಿಮರೋಡಿ ಅವರ ಮನೆಯಲ್ಲಿ ನನ್ನನ್ನು ಕೂಡಿಹಾಕಲಾಗಿತ್ತು. ತಪ್ಪಿಸಿಕೊಂಡು ಹೋಗದಂತೆ ಪ್ರದೀಪ್ ಎಂಬಾತ ಕಾವಲು ಕಾಯುತ್ತಿದ್ದನು. ಕುಡ್ಲ ರಾಂಪೇಜ್, ಯೂಟ್ಯೂಬ್ ಚಾನೆಲ್ ಅಜಯ್ ಹಾಗೂ ಯೂಟ್ಯೂಬರ್ ಸಮೀರ್ ನನ್ನಿಂದ ಬಲವಂತವಾಗಿ 30–35 ವಿಡೀಯೊ ಹೇಳಿಕೆಗಳನ್ನು ರೆಕಾರ್ಡ್ ಮಾಡಿಸಿದ್ದರು ಎಂದು ವಿವರಿಸಲಾಗಿದೆ.

ಶ್ರೀಕ್ಷೇತ್ರ ಧರ್ಮಸ್ಥಳ ಮತ್ತು ಡಾ.ವೀರೇಂದ್ರ ಹೆಗ್ಗಡೆ ಮತ್ತವರ ಕುಟುಂಬ ಸದಸ್ಯರ ವಿರುದ್ಧ ಸಾಕ್ಷ್ಯ ನುಡಿಯಲು ಒಪ್ಪಿದಾಗ, ಕೇರಳದಿಂದ ಹಣ ಬರುತ್ತಿದೆ ಹಾಗೂ ಚಿತ್ರದುರ್ಗದ ರಮಾ ನಾಗರಾಜ್ ಎಂಬುವವರು ಧರ್ಮಸ್ಥಳದ ಪಾವಿತ್ರ್ಯತೆಗೆ ಧಕ್ಕೆ ತರಲು ನಿಯಮಿತವಾಗಿ ಫಂಡಿಂಗ್ ಮಾಡುತ್ತಿದ್ದಾರೆ ಎಂದು ಬಹಿರಂಗಪಡಿಸಿದ್ದರು.

ರಾಜ್ಯ ಸರ್ಕಾರದ ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಎಂ.ಮದನ ಗೋಪಾಲ್

ಆರೆಸ್ಸೆಸ್ ಕಾರ್ಯವೈಖರಿ ಅಚ್ಚರಿ ಮೂಡಿಸುವಂಥದ್ದು

• **ಬೆಂಗಳೂರು:** ಯಾವುದೇ ಪ್ರಚಾರ ಬಯಸದೆ ನಿಸ್ವಾರ್ಥ ಸೇವೆ ಸಲ್ಲಿಸುವ ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್)ದ ಸ್ವಯಂಸೇವಕರ ಕಾರ್ಯವೈಖರಿ ಅಚ್ಚರಿ ಮೂಡಿಸುವಂತದ್ದು ಎಂದು ರಾಜ್ಯ ಸರ್ಕಾರದ ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಎಂ.ಮದನ ಗೋಪಾಲ್ ಹೇಳಿದರು.

ನಗರದ ಮಿಥಿಕ್ ಸೊಸೈಟಿ ಸಭಾಂಗಣದಲ್ಲಿ ಥಿಂಕರ್ಸ್ ಫೋರಂ ಕರ್ನಾಟಕ ವತಿಯಿಂದ ನಡೆದ ಡಾ. ಮಾಲಿನಿ ಭಟ್ಟಾಚಾರ್ಜಿ ಅವರ ಸ್ವಯಂಸೇವಕ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಶೇ. 5ರಷ್ಟು ಕೆಲಸ ಮಾಡಿ ಶೇ.90ರಷ್ಟು ಪ್ರಚಾರ ಗಿಟ್ಟಿಸಿಕೊಳ್ಳುವ ಇಂದಿನ ನಾಗರಿಕ ಸಮಾಜದ ಸಂಘಟನೆಗಳ ನಡುವೆ, ಯಾವುದೇ ಪ್ರಚಾರ ಬಯಸದೆ ನಿಸ್ವಾರ್ಥ ಸೇವೆ ಸಲ್ಲಿಸುವ ಸಂಘದ ಸ್ವಯಂಸೇವಕರ ಕಾರ್ಯವೈಖರಿ ಅಚ್ಚರಿ ಮೂಡಿಸುವಂತದ್ದು ಎಂದು ಅಭಿಪ್ರಾಯಪಟ್ಟರು.

ಸಮಾಜವೇ ಸರ್ವಸ್ವ ಎಂಬ ಸೇವೆ: ನಾನು ಮಾಡುತ್ತಿದ್ದೇನೆ ಎಂಬ ಭಾವ ಇಲ್ಲದೆ, ಅದ್ವೈತ ತತ್ವದಂತೆ ನಾನಲ್ಲ, ನಾನಲ್ಲ ಎಂಬ ಭಾವದೊಂದಿಗೆ ಸಮಾಜವೇ ತಾನೆಂದು ನಂಬಿ ಬದುಕುವ ಸ್ವಯಂಸೇವಕರ ನೈಜ ಚಿತ್ರಣವನ್ನು ಜಗತ್ತಿನ ಮುಂದೆ ಸ್ವಯಂಸೇವಕ್ ಪುಸ್ತಕದಲ್ಲಿ ಚಿತ್ರಿಸಲಾಗಿದೆ. ಸಂಘದಲ್ಲಿ ಲಿಂಗ ತಾರತಮ್ಯವಿಲ್ಲ ಎಂಬುದನ್ನು ನಿರೂಪಿಸುವಂತೆ, ಜಮ್ಮು–ಕಾಶ್ಮೀರದಂತಹ ಕಠಿಣ ಸ್ಥಳದಲ್ಲಿ ಪಂಕಜಾವಲ್ಲಿ ಒಬ್ಬ ಪ್ರಚಾರಿಕಾ ಆಗಿ ನಿರ್ವಹಿಸಿದ ಸಾಹಸಮಯ ಪಾತ್ರದವರೆಗೆ, ಮುಂದುವರೆದು ವನವಾಸಿ ಕಲ್ಯಾಣದ ಶಾಂತಾರಾಮ್ ಸಿದ್ದಿ ವರೆಗಿನ ಸ್ವಯಂಸೇವಕರ ಯಶೋಗಾಥೆಯನ್ನು ಕೃತಿಯಲ್ಲಿ ವಿವರಿಸಲಾಗಿದೆ ಎಂದರು.



ಈ ಕೃತಿಯಲ್ಲಿ ಸಂಘದ ಮೈಲಿಗಲ್ಲುಗಳನ್ನು ದಾಖಲಿಸುವುದರ ಜೊತೆಗೆ, ಸಂಘದ ಪರಿಭಾಷೆಗಳಾದ ಅನುಶಾಸನ, ಬೈಠಕ್, ಬಸ್ತಿ, ಪ್ರಚಾರಕ್, ವಿಭಾಗ್ ಮತ್ತು ಸೇವಾ ಬಸ್ತಿಯಂತಹ ಪದಗಳ ಅರ್ಥವನ್ನು ಸಾಮಾನ್ಯ ಜನರಿಗೂ ಅರ್ಥವಾಗುವಂತೆ ಶಬ್ದಕೋಶದ ಮೂಲಕ ವಿವರಿಸಲಾಗಿದೆ ಎಂದು ವಿವರಿಸಿದರು.

> **ಆರ್‌ಎಸ್‌ಎಸ್ ಅಲ್ಪಸಂಖ್ಯಾತ, ಮಹಿಳಾ, ಸಂವಿಧಾನ ವಿರೋಧಿ ಎಂಬ ಮಾತುಗಳೇ ಸದಾ ಚರ್ಚೆಯಾಗುತ್ತಿದ್ದವು. ಈ ವೈರುಧ್ಯವೇ ನನಗೆ ಆರ್‌ಎಸ್‌ಎಸ್ ಬಗ್ಗೆ ಆಳವಾಗಿ ತಿಳಿದುಕೊಳ್ಳುವ ಕುತೂಹಲ ಮೂಡಿಸಿತು.**
> ■ **ಡಾ. ಮಾಲಿನಿ ಭಟ್ಟಾಚಾರ್ಜಿ, ಲೇಖಕಿ**

ಅಪನಂಬಿಕೆಗಳ ಗೋಡೆ ಒಡೆದ ಹತ್ತು ವರ್ಷದ ಪಯಣ: ರಾಜಕೀಯ, ಧಾರ್ಮಿಕ ವಿಶ್ಲೇಷಕ ಜೆರೋಮ್ ಆಂಟೊ ಮಾತನಾಡಿ, ಆರ್‌ಎಸ್‌ಎಸ್ ಎಂದರೆ ಕೆಂಪು ತಿಲಕ ಧರಿಸುವ, ಚರ್ಚ್‌ಗಳ ಮೇಲೆ ದಾಳಿ ಮಾಡುವ ಒಂದು ಸಂಘಟನೆ ಎಂದೇ ನಮಗೆ ಬೋಧಿಸಲಾಗಿತ್ತು. ಆರ್‌ಎಸ್‌ಎಸ್ ಬಗ್ಗೆ ಹೊರಗಿನಿಂದ ಕೇಳಿಬರುವ ಅಪಪ್ರಚಾರಗಳನ್ನು ನಂಬುವ ಮುನ್ನ, ಸಂಘವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಒಮ್ಮೆಯಾದರೂ ಶಾಖೆಗೆ ಬಂದು ಭಾಗವಹಿಸಬೇಕು ಎಂದು ತಿಳಿಸಿದರು.

ಮೂವರು ಪೊಲೀಸ್ ಅಧಿಕಾರಿಗಳ ಅಮಾನತು

• **ಬೆಂಗಳೂರು:** ಕಾಡುಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಐದೂವರೆ ವರ್ಷದ ಮಗುವಿನ ಕೊಲೆ ಪ್ರಕರಣದಲ್ಲಿ ಕರ್ತವ್ಯ ಲೋಪ ಎಸಗಿದ ಆರೋಪದಡಿ ಮೂವರು ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ.

ಎಲೆಕ್ಟ್ರಾನಿಕ್ ಸಿಟಿ ಸಂಚಾರ ಠಾಣೆ ಪೊಲೀಸ್ ಇನ್ಸ್‌ಪೆಕ್ಟರ್, ರಂಗಸ್ವಾಮಿ, ಪಿಎಸ್‌ಐ ನಿಂಗರಾಜು ಹಾಗೂ ಕಾನ್ಸ್‌ಟೇಬಲ್ ಹಾಲೇಶ್ ನಾಯ್ಕ್ ಎಂಬುವರು ಅಮಾನತುಗೊಂಡ ಪೊಲೀಸ್ ಅಧಿಕಾರಿಗಳಾಗಿದ್ದಾರೆ. ಮಾರ್ಚ್ 24ರಂದು ಐದೂವರೆ ವರ್ಷದ ಮಗು ವೆನ್ನೆಲಾಳನ್ನು ತಾಯಿ ಪ್ರಿಯಾಂಕಾ ಹಾಗೂ ಈಕೆಯ ಪ್ರಿಯಕರ ಮೋಹನ್ ಹತ್ಯೆ ಮಾಡಿ ಸಾಕ್ಷ್ಯ ನಾಶಕ್ಕೆ ಯತ್ನಿಸಿದ್ದರು ಎಂದು ಆರೋಪಿಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸದ್ಯ ಮಗುವಿನ ತಾಯಿ ಪ್ರಿಯಾಂಕಾ ಹಾಗೂ ಆಕೆಯ ಪ್ರಿಯಕರ ಸೇರಿದಂತೆ ಇಬ್ಬರನ್ನು ಬಂಧಿಸಲಾಗಿದೆ. ಆರಂಭದಲ್ಲಿ ಅಸಹಜ ಸಾವು ಪ್ರಕರಣ ದಾಖಲಾಗಿತ್ತು. ಮರಣೋತ್ತರ ಪರೀಕ್ಷೆಯಲ್ಲಿ ಮಗುವನ್ನು ಉಸಿರುಗಟ್ಟಿಸಿ ಸಾಯಿಸಲಾಗಿದೆ ಎಂದು ವರದಿ ಬಂದರೂ ಕೊಲೆ ಪ್ರಕರಣ ದಾಖಲಿಸದೇ ಆರೋಪಿಗಳನ್ನು ಬಂಧಿಸದೇ ಪೊಲೀಸರು ನಿರ್ಲಕ್ಷ್ಯ ತೋರಿದ್ದರು ಎಂದು ಆರೋಪಿಸಲಾಗಿದೆ.

ಕೆಕೆಆರ್‌ಟಿಸಿ ಬಸ್ ಜಪ್ತಿ

• **ಬೀದರ್:** ಕೆಕೆಆರ್‌ಟಿಸಿ ಬಸ್ ಹಾಗೂ ಬೈಕ್ ನಡುವೆ ನಡೆದ ಅಪಘಾತದ ಸಂಬಂಧದ ಪರಿಹಾರ ಪ್ರಕರಣದಲ್ಲಿ ನ್ಯಾಯಾಲಯ ಆದೇಶಿಸಿದರೂ ಪರಿಹಾರ ಮೊತ್ತವನ್ನು ಪಾವತಿಸದ ಹಿನ್ನೆಲೆಯಲ್ಲಿ ಔರಾದ್ (ಬಿ) ಡಿಪೋದಲ್ಲಿರುವ ಕೆಕೆಆರ್‌ಟಿಸಿ ಬಸ್ ಜಪ್ತಿ ಮಾಡಲು ಔರಾದ್‌ನ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಲಯ ವಾರಂಟ್ ಹೊರಡಿಸಿತ್ತು. ಅದರಂತೆ ಅರ್ಜಿದಾರರ ಪರ ವಕೀಲ ರವಿಕಾಂತ್ ಎ.ನೌಬಾದೆ ಅವರು ಔರಾದ್ (ಬಿ) ಡಿಪೋದಲ್ಲಿರುವ ಕೆಕೆಆರ್‌ಟಿಸಿ ಬಸ್ ಜಪ್ತಿ ಮಾಡಿದರು.

ಸುವರ್ಣಾ ಅವರು ಸಲ್ಲಿಸಿದ್ದ ದೂರಿನ ಪ್ರಕರಣದಲ್ಲಿ ನ್ಯಾಯಾಲಯವು ಅರ್ಜಿದಾರರ ಪರವಾಗಿ ತೀರ್ಪು ನೀಡಿದ್ದು, ಕೆಕೆಆರ್‌ಟಿಸಿ ಬೀದರ್ ವಿಭಾಗೀಯ ನಿಯಂತ್ರಕರು 31,85,750 ರೂ. ಮೂಲ ಪರಿಹಾರ ಮೊತ್ತ ಹಾಗೂ 4,77,862 ರೂ. ಬಡ್ಡಿ ಸೇರಿದಂತೆ ಒಟ್ಟು 36,63,612 ರೂ. ಪಾವತಿಸುವಂತೆ ಆದೇಶಿಸಿತ್ತು. ಆದರೆ, ನ್ಯಾಯಾಲಯದ ಆದೇಶದಂತೆ ಪರಿಹಾರ ಮೊತ್ತ ಪಾವತಿಸದ ಕಾರಣ, ಡಿಕ್ರಿ ಜಾರಿಗೊಳಿಸುವ ಪ್ರಕ್ರಿಯೆಯ ಭಾಗವಾಗಿ ಕೆಕೆಆರ್‌ಟಿಸಿ ಚರಾಸ್ತಿಯನ್ನು ಜಪ್ತಿ ಮಾಡಲು ನ್ಯಾಯಾಲಯ ಆದೇಶ ಹೊರಡಿಸಿದೆ. ಈ ಹಿನ್ನೆಲೆಯಲ್ಲಿ ಔರಾದ್(ಬಿ) ಡಿಪೋದಲ್ಲಿರುವ ಕೆಕೆಆರ್‌ಟಿಸಿಯ ಯಾವುದೇ ಬಸ್ ಅನ್ನು ಜಪ್ತಿ ಮಾಡುವಂತೆ ನ್ಯಾಯಾಲಯವು ವಾರಂಟ್ ಜಾರಿಗೊಳಿಸಿತ್ತು.

ಸಂಪಾದಕೀಯ

ಖಂಡನೀಯ ದಾಳಿ

ಅಮೆರಿಕನ್ ಪಡೆಗಳಿಂದ ಮೂರು ದಿನಗಳಲ್ಲಿ ಮೂರು ದಾಳಿ. ಎಲ್ಲವೂ ಭಾರತೀಯ ನಾವಿಕರಿದ್ದ ಹಡಗುಗಳ ಮೇಲೆ. ಈ ದಾಳಿಯಲ್ಲಿ ಮೂವರು ಭಾರತೀಯರ ಸಾವು... ಇವೆಲ್ಲ ಭಾರತೀಯರಿಗೆ ಆಘಾತ ತರುವ ಸುದ್ದಿಗಳೆ. ಒಮಾನ್ ಬಳಿಯ ಸಮುದ್ರದಲ್ಲಿ ಅಮೆರಿಕನ್ ಪಡೆಗಳು ನಡೆಸಿರುವ ಈ ದಾಳಿಗಳು ಖಂಡನೀಯವೂ ಹೌದು. ಭಾರತವು ಈ ಕುರಿತಂತೆ ಅಮೆರಿಕದ ರಾಯಭಾರಿಯನ್ನು ಕರೆಸಿಕೊಂಡು ತನ್ನ ಖಂಡನೆಯನ್ನು ವ್ಯಕ್ತಪಡಿಸಿರುವುದು ಯುಕ್ತ ರಾಜತಾಂತ್ರಿಕ ಕ್ರಮವಾದರೂ, ಉದ್ಧಟ ಅಮೆರಿಕಕ್ಕೆ ಇಂತಹ ಖಂಡನೆಗಳು



ನಾಟುವುದು ದೂರವೇ ಉಳಿದಿದೆ. ನೌಕೆಗಳ ಮೇಲೆ ನಡೆಸಿದ ದಾಳಿಯಲ್ಲಿ ಇನ್ನೂ ಅಧಿಕ ಸಾವುನೋವುಗಳಾಗುವ ಸಾಧ್ಯತೆಗಳಿದ್ದು, ಅದೃಷ್ಟವಶಾತ್ ಒಮನ್ ಪಡೆಗಳು 20ಕ್ಕೂ ಅಧಿಕ ಭಾರತೀಯ ನಾವಿಕರನ್ನು ರಕ್ಷಿಸಿದ್ದವು.

ಇರಾನ್ ಹೊರ್ಮುಜ್ ಜಲಸಂಧಿಯ ಮೇಲೆ ನಿರ್ಬಂಧ ಹೇರಿ ಇಸ್ರೇಲ್ ಮತ್ತು ಅಮೆರಿಕದೊಂದಿಗಿನ ತನ್ನ ಸಮರದಲ್ಲಿ ಜಗತ್ತಿನ ಇನ್ನಿತರ ರಾಷ್ಟ್ರಗಳೂ ಸಂಕಷ್ಟ ಅನುಭವಿಸುವಂತೆ ಮಾಡಿದ ಕ್ರಮವು ಎಷ್ಟು ಖಂಡನೀಯವೋ, ಈಗ ಅಮೆರಿಕ ಕೂಡಾ ಇರಾನಿನ ಮೇಲೆ ಸಮುದ್ರ ದಿಗ್ಬಂಧನ ಹೇರುವ ನೆಪದಲ್ಲಿ ಇತರ ದೇಶಗಳ ತೈಲ ಟ್ಯಾಂಕರ್‌ಗಳು ಮತ್ತು ವಾಣಿಜ್ಯ ಹಡಗುಗಳು ಸಂಚರಿಸದಂತೆ ಮಾಡುತ್ತಿರುವುದು ಕೂಡಾ ಅಷ್ಟೇ ಖಂಡನೀಯ. ಇರಾನಿನಿಂದ ತೈಲ ಹಾಗೂ ಇನ್ನಿತರ ವಾಣಿಜ್ಯಿಕ ಸರಕುಗಳು ಹೊರಹೋಗದಂತೆ ನಿರ್ಬಂಧಿಸುವ ಪ್ರಯತ್ನದಲ್ಲಿ ಅಮೆರಿಕವು ಇತರ ದೇಶಗಳ ನೌಕೆಗಳ ಮೇಲೆ ದಾಳಿ ಮಾಡಿ ಸಾವು ನೋವುಗಳಿಗೆ ಕಾರಣವಾಗುತ್ತಿದೆ. ಜಗತ್ತಿನ ಬಹುತೇಕ ವಾಣಿಜ್ಯಿಕ ನೌಕೆಗಳಲ್ಲಿ ಭಾರತೀಯ ನಾವಿಕರು, ಇಂಜಿನಿಯರ್‌ಗಳು, ಅಧಿಕಾರಿಗಳು ದೊಡ್ಡ ಸಂಖ್ಯೆಯಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಸಾಗರದಲ್ಲಿ ಇಂತಹ ನೌಕೆಗಳ ಮೇಲೆ ನಡೆಯುವ ದಾಳಿಯಲ್ಲಿ ಭಾರತೀಯ ಪ್ರಜೆಗಳು ಕಾರಣವಿಲ್ಲದೇ ಬಲಿಪಶುಗಳಾಗುತ್ತಿದ್ದಾರೆ.

ಇದೀಗ ಅಮೆರಿಕವು ಭಾರತೀಯ ನಾವಿಕರ ಸಾವಿಗೆ ಕಾರಣವಾಗಿರುವುದರಿಂದ ಭಾರತವು ಕಠಿಣವಾಗಿ ಪ್ರತಿಕ್ರಿಯಿಸುವುದು ಅನಿವಾರ್ಯವಾಗಿದೆ. ಸದ್ಯಕ್ಕಂತೂ ಭಾರತವು ಕಠಿಣ ಮಾತುಗಳಲ್ಲೇ ತನ್ನ ಖಂಡನೆಯನ್ನು ವ್ಯಕ್ತಪಡಿಸಿದೆಯಾದರೂ ಅಮೆರಿಕದೊಂದಿಗಿನ ಇನ್ನಿತರ ರಾಜತಾಂತ್ರಿಕ ಸಂಬಂಧಗಳಿಗೆ ಧಕ್ಕೆಯೊದಗದ ರೀತಿಯಲ್ಲಿ ವಿವೇಕವನ್ನು ಪ್ರದರ್ಶಿಸಿದೆ. ಇದೇವೇಳೆ, ಅಮೆರಿಕದ ಇಂತಹ ಉಪಕ್ರಮಗಳ ವಿರುದ್ಧವಾಗಿ ಇನ್ನಿತರ ರಾಷ್ಟ್ರಗಳ ಅಭಿಪ್ರಾಯಗಳನ್ನೂ ಕ್ರೋಢೀಕರಿಸಿಕೊಂಡು ಭವಿಷ್ಯದಲ್ಲಿ ಇಂತಹ ಅವಘಡಗಳು ಸಂಭವಿಸದಂತೆ ಅಮೆರಿಕವನ್ನಾಗಲಿ, ಇರಾನನ್ನಾಗಲಿ ಎಚ್ಚರಿಸುವುದು ಕೂಡಾ ಆಗತ್ಯವಾಗಿದೆ.

ನರಕವಾಸಿಗಳ ಗುರುತುಗಳು

ಅತ್ಯಂತಕೋಪಃ ಕುಟಿಲಾ ಚ ವಾಣೀ ದರಿದ್ರತಾ ಚ ಸ್ವಜನೇಷು ವೈರಮ್।
ನೀಚಪ್ರಸಂಗಃ ಕುಲಹೀನಸೇವಾ ಚಿಹ್ನಾನಿ ದೇಹೇ ನರಕಸ್ಥಿತಾನಾಮ್॥

ಅತಿಯಾದ ಸಿಟ್ಟು, ಕೊಂಕುನುಡಿ, ದಾರಿದ್ರ್ಯ, ಸ್ವಜನರಲ್ಲಿ ವೈರ, ನೀಚರ ಸಂಗ, ಕುಲಹೀನರ ಸೇವೆ ಇವುಗಳು ದೇಹದಲ್ಲಿರುವುದು ನರಕವಾಸಿಗಳ ಗುರುತುಗಳಾಗಿರುತ್ತವೆ– ಎಂಬುದು ಶ್ಲೋಕಾರ್ಥ.

ಸ್ವರ್ಗ ನರಕಗಳ ಕಲ್ಪನೆ ನಮ್ಮಲ್ಲಿ ಇಂದೂ ಇದೆ. ನೋಡಿ ಬಂದವರು ಯಾರೂ



ಇಲ್ಲ. ಆದರೂ ನಂಬುತ್ತೇವೆ. ಇದಕ್ಕೆ ಆಪ್ತ ವಾಕ್ಯವೆಂಬ ಪ್ರಮಾಣವೇ ಕಾರಣ. ವಚನಕಾರರು 'ಸ್ವರ್ಗ ನರಕಗಳೆಂಬುದು ಬೇರಿಲ್ಲ ನೋಡಿರೋ' ಎಂದಿದ್ದಾರೆ. ಸತ್ಯವನ್ನು ನುಡಿಯುವುದು, ಧರ್ಮ ಮಾರ್ಗದಲ್ಲಿ ನಡೆಯುವುದು ಸ್ವರ್ಗವೆನಿಸಿದರೆ, ಇದಕ್ಕೆ ವಿರುದ್ಧವಾಗಿ ನಡೆದುಕೊಳ್ಳುವುದು ನರಕ. ಬದುಕನ್ನು ಚೆನ್ನಾಗಿ ನಿರ್ವಹಿಸಬೇಕು. ಪ್ರಾಮಾಣಿಕವಾಗಿ ಬದುಕಬೇಕು. ಇರುವಷ್ಟರಲ್ಲಿ ಸಂತೋಷವನ್ನು ಕಾಣಬೇಕು. ಒಟ್ಟಿನಲ್ಲಿ ನೆಮ್ಮದಿಯ ಜೀವನ ನಡೆಸಬೇಕು ಎಂಬುದು ಸ್ವರ್ಗದ ಕಲ್ಪನೆಯಾಗಿದೆ.

ನಮ್ಮ ಹದ ಮೀರಿದ ವ್ಯವಹಾರಾದಿಗಳೇ ನರಕವೆನಿಸಿಕೊಳ್ಳುತ್ತದೆ. ನಮ್ಮ ಶರೀರದಲ್ಲಿಯೇ ನರಕದ ಕುರುಹುಗಳನ್ನು ಕಾಣಬಹುದು. ನಮ್ಮ ದೇಹದಲ್ಲಿರುವ ಕೆಲವು ಕೆಟ್ಟ ಅಂಶಗಳನ್ನು ನರಕವಾಸಿಗಳು ಎಂಬುದಾಗಿ ಗುರುತಿಸಬಹುದು. ಅಂತಹ ಗುರುತುಗಳು ಯಾವುವು ಎಂಬುದನ್ನು ಈ ಶ್ಲೋಕದಲ್ಲಿ ತಿಳಿಸಲಾಗಿದೆ.

ಮೊದಲನೆಯದಾಗಿ ಅತಿ ಕೋಪವನ್ನು ಕವಿ ಹೇಳಿದ್ದಾನೆ. ಕೋಪದಿಂದ ಯಾರೂ ಒಳ್ಳೆಯವರಾದದ್ದಿಲ್ಲ. ಕೋಪ ಪಾಪಕ್ಕೆ ಮೂಲ. ಕೋಪ ಪಾಪದ ಕೆಲಸಕ್ಕೆ ಎಡೆ ಮಾಡಿಕೊಡುತ್ತವೆ. ಕಡು ಕೋಪಿಷ್ಠನನ್ನು ಯಾರೂ ಒಪ್ಪುವುದಿಲ್ಲ. ಸಹವಾಸವನ್ನೂ ಬಯಸುವುದಿಲ್ಲ. ಅದೇರೀತಿ, ಕೊಂಕುನುಡಿಯುವವನನ್ನು ಜನರು ದೂರವಿಡುತ್ತಾರೆ. ನಂಜಿನ ಮಾತು, ಹೊಟ್ಟೆಕಿಚ್ಚಿನ ಮಾತು ಯಾರಿಗೂ ಒಪ್ಪಿಗೆಯಾಗದು. ಇಂಥವರ ಸಹವಾಸವನ್ನು ಯಾರೂ ಬಯಸರು.

ದಾರಿದ್ರ್ಯ ಬದುಕಿನಲ್ಲಿ ಹತಾಶೆಯನ್ನುಂಟುಮಾಡುತ್ತದೆ. ಯಾವುದೇ ಕೆಲಸ ಮಾಡಲು ದಾರಿದ್ರ್ಯದಿಂದಾಗಿ ಸಾಧ್ಯವಾಗುವುದಿಲ್ಲ. ಬಡವನನ್ನು ಎಲ್ಲರೂ ದೂರವಿರಿಸುತ್ತಾರೆ. ಆಕ್ಷೇಪಕ್ಕೂ, ಆರೋಪಕ್ಕೂ ತಲೆ ಕೊಡಬೇಕಾಗುತ್ತದೆ. ದರಿದ್ರ ನ ಪಾಲಿಗೆ ಎಲ್ಲವೂ ಶೂನ್ಯ. ಇಂಥವರ ಬದುಕು ಸಾಕ್ಷಾತ್ ನರಕವೇ ಸರಿ.

ತನ್ನವರು ಆಪತ್ತಿನಲ್ಲಿ ಜೊತೆಗಿರುವವರು. ಅವರೊಂದಿಗೆ ವೈರ ಎಂದೂ ಸಲ್ಲದು. ಇಲ್ಲ ಸಲ್ಲದ ವಿಚಾರಕ್ಕೆ ಜಗಳ ಕಾಯ್ದು, ದ್ವೇಷ ಮಾಡಿ ಮಾತನಾಡದೆ ಮುಖ ತಿರುಗಿಸಿದರೆ ಸಂಕಟದ ಸಮಯದಲ್ಲಿ ಒದಗಿ ಬರಬೇಕಾದ ಅವರೇ ಬರುವುದಿಲ್ಲ. ಲಾಭಕ್ಕಾಗಿ ಹತ್ತಿರ ಬಂದವರು ಬರುತ್ತಾರೆಯೇ? ಲಾಭವಿಲ್ಲದಲ್ಲಿ ಇವರೂ ಇರುವುದಿಲ್ಲ.

ನೀಚರು ಸಹವಾಸ ಮಾಡುವುದು ಸ್ವಾರ್ಥಕ್ಕಾಗಿಯೇ ವಿನಾ ಇನ್ನಾವ ಉದಾತ್ತ ಉದ್ದೇಶವೂ ಇರುವುದಿಲ್ಲ. ಸಹವಾಸ ಮಾಡಿ ಅವನನ್ನು ಸಂಪೂರ್ಣ ಮುಗಿಸಿಬಿಡುವುದು ನೀಚರ ಸ್ವಭಾವ. ಇವರ ಒಡನಾಟವೂ ನರಕವನ್ನು ಮನೆಗೆ ಕರೆತಂದಂತೆ.

'ಸೇವಾ ಹಿ ಪರಮೋಧರ್ಮ' ಎಂಬುದು ಸತ್ಯ. ಯಾರ ಸೇವೆ ಎಂಬ ಕಲ್ಪನೆ ಇರಬೇಕು. ಸಜ್ಜನರ ಸೇವೆ ಮಾಡಬೇಕಾದದ್ದು ಧರ್ಮ. ಕರ್ತವ್ಯ ಕೂಡ. ಇದರಿಂದ ಇಹಪರಗಳಲ್ಲಿ ಪ್ರಯೋಜನವಿದೆ. ಇದಕ್ಕೆ ಬದಲಾಗಿ ಕುಲಹೀನರ ಸೇವೆ ಮಾಡಿದರೆ ಬೇರೆ ನರಕವಿಲ್ಲ. ಇದೇ ನರಕ. ಜೀವನದಲ್ಲೆಂದೂ ಕುಲಹೀನರ ಸೇವೆ ಮಾಡಬಾರದು. ಒಡನಾಟವೂ ಸಲ್ಲದು. ಹೀಗೆ ಕವಿಯು ನರಕಕ್ಕೆ ಒಯ್ಯುವ ಅಥವಾ ಇಹವನ್ನೇ ನರಕವನ್ನಾಗಿಸುವ ಅಂಶಗಳನ್ನು, ಸನ್ನಿವೇಶಗಳನ್ನು ಹೇಳಿ ಇವುಗಳ ಹತ್ತಿರ ಸುಳಿಯದಂತೆ ಎಚ್ಚರದ ಜೀವನ ನಡೆಸಬೇಕೆನ್ನುತ್ತಾನೆ.

ವಿಷ ಮಂಥನ

ವಿಶುದ್ಧ ಚಕ್ರದ ಸಮತೋಲನವೆಂದರೆ ಸಮುದ್ರ ಮಂಥನದಂತೆ ಒಂದು ಶುದ್ಧತೆಯ ಪ್ರಕ್ರಿಯೆ.

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ವಿಶುದ್ಧ ಚಕ್ರವನ್ನು ಅರ್ಥ ಮಾಡಿಕೊಳ್ಳಲು ಸಮುದ್ರ ಮಂಥನದ ಕತೆಯನ್ನು ಹೇಳಲಾಗುತ್ತದೆ. ದೇವತೆಗಳು ಮತ್ತು ದಾನವರು ತಮ್ಮ ಶಕ್ತಿಯ ವರ್ಧನೆಗಾಗಿ ಶಕ್ತಿಯ ಪಾಕವನ್ನು ಪಡೆಯಲು ಸಮುದ್ರವನ್ನು ಕಡೆದರು. ಆಗ ಮೊದಲಿಗೆ ಬಂದಿದ್ದು ವಿಷ. ಜಗತ್ತನ್ನೇ ನಾಶ ಮಾಡಬಲ್ಲ ಸಾಮರ್ಥ್ಯದ ವಿಷವಾದ ಹಾಲಾಹಲವನ್ನು ತಡೆಯುವುದು ಸುಲಭವಾಗಿರಲಿಲ್ಲ. ಅದು ದ್ರವ ರೂಪದಲ್ಲಿ ಇದ್ದ ಕಾರಣ ಜಗತ್ ಸಂರಕ್ಷಕನಾದ ಶಿವನು ಅದನ್ನು ಗಟಗಟನೆ ಕುಡಿದೇ ಬಿಟ್ಟನು. ಆದರೆ ಆ ವಿಷ ಹೊಟ್ಟೆಗೆ ಹೋಗದಂತೆ ಪಕ್ಕದಲ್ಲೇ ಇದ್ದ ಸಾಕ್ಷಾತ್ ಲಲಿತಾಂಬಿಕೆಯ ಸ್ವರೂಪಿಣಿ ಪಾರ್ವತೀ ದೇವಿಯು ಗಂಟಲನ್ನು ಬಿಗಿ ಹಿಡಿದು ಅಲ್ಲಿಯೇ ನಿಲ್ಲಿಸಿದಳು. ಆಗ ವಿಶುದ್ಧ ಚಕ್ರವು ತನ್ನ ಕೆಲಸವನ್ನು ಆರಂಭಿಸಿತು. ಅದು ವಿಷವನ್ನು ಶುದ್ಧಗೊಳಿಸತೊಡಗಿತು. ಹೀಗೆ ಶುದ್ಧವಾದ ವಿಷವು ಅಮೃತವಾಯಿತು. ವಿಷವು ಗಂಟಲಲ್ಲೇ ಉಳಿದು ಗರಳಕಂಠ ಎಂದು ಶಿವನ ಹೆಸರಾಯಿತು. ಹಾಗೂ ಅವನ ಕಂಠವು ನೀಲಿಯಾಗಿಯೇ ಉಳಿಯಿತು.

ನಿಮ್ಮ ದೈನಂದಿನ ಜೀವನದಲ್ಲಿ ಸಮಾಜದಿಂದ, ಜನರಿಂದ ಸಾಕಷ್ಟು ಅವಮಾನ, ಬೇಸರ ಉಂಟಾಗುತ್ತದೆ. ಅವರ ಕೋಪ, ನಿಂದನೆ, ಟೀಕೆ, ವಿಮರ್ಶೆ ಇವುಗಳನ್ನೆಲ್ಲಾ ನೀವು ಎದುರಿಸಬೇಕಾಗುತ್ತದೆ. ಇವೆಲ್ಲಾ ವಿಷಗಳೇ ಆಗಿವೆ. ವಿಶುದ್ಧ ಚಕ್ರವು ಜಾಗೃತವಾದರೆ ಇವುಗಳನ್ನೆಲ್ಲಾ ತನ್ನ ಮನಸ್ಸಿನಲ್ಲಿ ಉಳಿಸಿಕೊಳ್ಳುವುದಿಲ್ಲ. ಕೆಲವೊಮ್ಮೆ ಅವುಗಳನ್ನೆಲ್ಲಾ ಕಿರುನಗೆಯಿಂದ ಎದುರಿಸುತ್ತಾನೆ. ಕೆಲವೊಮ್ಮೆ ಮೌನದಿಂದ, ಸೂಕ್ತವಾದ ಉತ್ತರವನ್ನು ನೀಡುವುದರಿಂದ, ನಿರ್ಲಕ್ಷ್ಯ ಮಾಡುವುದರಿಂದ ಹೀಗೆ ನಾನಾ ವಿಧಗಳಿಂದ ಅಲ್ಲಿಯೇ ಅದನ್ನು ಪರಿಹರಿಸಿಕೊಳ್ಳುತ್ತಾನೆ. ನಕಾರಾತ್ಮಕವಾದ ವಿಷವನ್ನು ತನ್ನ ಮನಸ್ಸಿಗೆ ಇಳಿಸಿಕೊಳ್ಳದೇ ಅಲ್ಲಿಯೇ ಪರಿಹರಿಸಿ ಕೊಳ್ಳುತ್ತಾನೆ ಮತ್ತು ಕೊಲ್ಲುತ್ತಾನೆ. ಮನಸ್ಸಿಗೆ ಇಳಿಸಿಕೊಳ್ಳದೇ, ಸಮಾಧಾನದಮಾತುಗಳನ್ನಾಗಿ ಬದಲಾಯಿಸುತ್ತಾನೆ. ಪ್ರೀತಿಯ ನುಡಿಯನ್ನಾಗಿಸುತ್ತಾನೆ. ಹೀಗೆ ವಿಷವು ಅಮೃತವಾಗಿ ಬದಲಾಗುತ್ತದೆ.

ಯಾರು ಸದಾ ಕೆಣಕುವುದು, ಇತರರಿಗೆ ಸದಾ ಉಪದೇಶವನ್ನು ನೀಡುತ್ತಾ, ಹಾಗೆ ಮಾಡು ಹೀಗೆ ಮಾಡು ಎನ್ನುತ್ತಿರುವುದು, ಸುಳ್ಳು ಹೇಳುವುದು, ಗಾಳಿಸುದ್ದಿ ಹಬ್ಬಿಸುವುದು, ಮಾತಿನಿಂದ ಚುಚ್ಚುವುದು, ವಟವಟ ಎನ್ನುತ್ತಾ ಇರುವುದು ಹೀಗೆಲ್ಲಾ ಮಾಡುತ್ತಿದ್ದರೆ, ಅವರೊಂದಿಗೆ ಮಾತನ್ನು ಮುಂದುವರಿಸಲೇ ಬಾರದು. ಅವರು ನೀವು ಹೇಳದ್ದನ್ನು, ರೆಕ್ಕೆಪುಕ್ಕ ಸೇರಿಸಿ ಬಾಲ ಕಟ್ಟಿ ಇನ್ನೊಬ್ಬರಿಗೆ ಹೇಳುತ್ತಾರೆ. ವಿಷವನ್ನು ಇನ್ನಷ್ಟು ಕಕ್ಕುತ್ತಾರೆ. ಹೀಗೆ ತಮ್ಮ ಮಾನ ಮರ್ಯಾದೆಯನ್ನೇ ಹೊರ ಹಾಕುತ್ತಾರೆ. ಹೀಗೆ ವಿಶುದ್ಧ ಚಕ್ರವು ಅವರಲ್ಲಿ ಮುಚ್ಚಿಕೊಳ್ಳುತ್ತಾ ಒಂದು ದಿನ ಸಂಪೂರ್ಣವಾಗಿ ಅಡಗಿಹೋಗುತ್ತದೆ. ಅಂತಹವರಿಗೆ ವೇದಿಕೆಯಲ್ಲಿ ಮಾತನಾಡಲು ಆಗುವುದಿಲ್ಲ. ನಾಲ್ಕು ಜನ ಇರುವಾಗ ಧೈರ್ಯದಿಂದ ಎಲ್ಲರ ಮನಮೆಚ್ಚುವ ಮಾತುಗಳನ್ನೂ ಸಹಾ ಆಡಲಾಗುವುದಿಲ್ಲ.

ನೀವು ನಿಮ್ಮೊಳಗೆ ಉಂಟಾಗುವ ವಿಪ್ಲವಗಳನ್ನು ಶಮನ ಮಾಡಿಕೊಂಡು ಮಾತನಾಡುವುದು ಮುಖ್ಯ. ಹಾಗಂತಾ ಖಂಡಿತವಾಗಿ ಸತ್ಯವನ್ನು ಹೇಳದೇ ಉಳಿಯಬಾರದು. ಸತ್ಯವನ್ನು ಕಟುವಾಗಿ ಹೇಳದೇ ಮೃದುವಾಗಿ ನಗುತ್ತಾ ಹೇಳುವುದನ್ನು ಕಲಿಯಿರಿ.

ಉದಾಹರಣೆಗೆ; ಸ್ವಾಮಿ ವಿವೇಕಾನಂದರಲ್ಲಿ ಎಲ್ಲಾ ಚಕ್ರಗಳೂ ಜಾಗೃತವಾಗಿದ್ದವು. ಅದರಲ್ಲೂ ವಿಶುದ್ಧ ಚಕ್ರವಂತೂ ತನ್ನ ಉತ್ತುಂಗತೆಯನ್ನು ತಲುಪಿತ್ತು. ಅವರ ಧ್ವನಿ ಮತ್ತು ಮಾತುಗಳಲ್ಲಿ ಮೂಡುತ್ತಿದ್ದ ಶಬ್ದಗಳ ಜೋಡಣೆ ಅದ್ವಿತೀಯವಾಗಿತ್ತು. ಆಕರ್ಷಣೆಯಂತೂ ಜಗತ್ತನ್ನೇ ಬೆರಗುಗೊಳಿಸಿತ್ತು.

ಲತಾ ಮಂಗೇಶ್ಕರ್‌ರವರ ಕಂಠದಲ್ಲಿ ಸಾಕ್ಷಾತ್ ಸರಸ್ವತಿಯೇ ನೆಲೆಸಿದ್ದಾಳೆ ಎನ್ನುವಷ್ಟರ ಮಟ್ಟಿಗೆ ಆಕೆಯ ಕಂಠ ಜಗತ್ ಪ್ರಸಿದ್ಧಿಯನ್ನು ಪಡೆಯಿತು. ಅದೊಂದು ದೈವಿಕ ಶಕ್ತಿಯಾಗಿ ಬದಲಾಗಿತ್ತು. ಅದು ನೈಸರ್ಗಿಕವಾಗಿ ಸಿಕ್ಕ ಬಳುವಳಿಯಾಗಿತ್ತು. ಆಕೆ ಸಂಗೀತವನ್ನೇ ತಪಸ್ಸಾಗಿ ಮಾಡಿಕೊಂಡು ತಮ್ಮ ಕಂಠವನ್ನು ತಿದ್ದಿ ತೀಡಿ ಮಾಡಿದ್ದರು. ಆ ತಪಸ್ಸಿನ ಫಲವೇ ಕಂಠ ಶುದ್ಧಿ ಮತ್ತು ಸರಸ್ವತಿಯ ನೆಲೆಯಾಗಿ ಮಾರ್ಪಾಟಾಗಿದ್ದು. ವಿಶುದ್ಧ ಚಕ್ರವು ಅವರಲ್ಲಿ ಎಂದಿಗೂ ಅಸಮತೋಲನವಾಗಲೇ ಇಲ್ಲ.

ಕರ್ನಾಟಕ ಸಂಗೀತ ಶಿರೋಮಣಿ ಎಮ್. ಎಸ್. ಸುಬ್ಬುಲಕ್ಷ್ಮಿಯವರ ಸುಪ್ರಭಾತವನ್ನು ಕೇಳದವರೇ ಇಲ್ಲ. ಇಂದಿನ ಪೀಳಿಗೆ ಸಹಾ ಅದೇ ಸುಪ್ರಭಾತವನ್ನೇ ಕೇಳುತ್ತಾ ಬೆಳಕಾಗುವುದನ್ನು ಕಾಣುತ್ತಿದೆ. ಅದನ್ನು ಕೇಳುತ್ತಾ ಬೆಳಗಿನ ಮನಸ್ಸಿನ ಶಾಂತಿಯನ್ನು, ಆಧ್ಯಾತ್ಮಿಕವಾದ ಅನುಭೂತಿಯನ್ನು ನೀವು ಪಡೆಯುತ್ತೀರಿ. ಇದಕ್ಕೆ ಕಾರಣ ಅವರ ಕಂಠದ ಮಹಿಮೆ; ವಿಶುದ್ಧ ಚಕ್ರದ ಪ್ರಭಾವ.

ಭಾರತಕ್ಕೆ ಸಾಹಿತ್ಯದ ನೊಬೆಲ್ ಪ್ರಶಸ್ತಿಯನ್ನು ತಂದು ಕೊಟ್ಟ ಮಹಾ ಕವಿ ರವೀಂದ್ರನಾಥ್ ಟ್ಯಾಗೋರ್‌ರವರು ಸೃಜನಶೀಲತೆಯ ಪ್ರತೀಕ. ಅವರ ಸಂಗೀತವಂತೂ ಇಂದಿಗೂ ಸಹಾ ವಿಭಿನ್ನ ಪ್ರಕಾರವಾಗಿ ಗುರುತಿಸಲಾಗಿದೆ. ವಿಶುದ್ಧ ಚಕ್ರದ ಉತ್ತುಂಗದ ಕಾರಣಕ್ಕೆ ಇವರು ಜಗತ್ಪ್ರಸಿದ್ಧರಾದರು.

ಸತ್ಯದ ಶಕ್ತಿಯನ್ನು ದೇಶವಿದೇಶಗಳಲ್ಲಿ ಪ್ರತಿಪಾದಿಸುತ್ತಾ ಪ್ರಖ್ಯಾತರಾದವರು ಗಾಂಧಿಯವರು. ತಮ್ಮ ಮಾತು ಮತ್ತು ಬರೆಹಗಳ ಮೂಲಕ ಕೋಟ್ಯಾಂತರ ಜನರನ್ನು ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರೆತಂದವರು. ಅಂದು ಉಪ್ಪಿನ ಸತ್ಯಾಗ್ರಹಕ್ಕಾಗಿ ಅರಬ್ಬಿ ಸಮುದ್ರ ತೀರದಲ್ಲಿ ಸೇರಿದ ಜನರನ್ನು ನೋಡಿ ಬ್ರಿಟಿಶ್ ಲೇಖಕಿ ಬರ್ಕ್ ವೈಟ್‌ರವರು ಫೋಟೋ ತೆಗೆಯುತ್ತಾ ಉದ್ಧರಿಸುತ್ತಾರೆ " ಅತ್ತ ಅರಬ್ಬಿ ಸಮುದ್ರ ವಿಶಾಲವಾಗಿ ದಿಗಂತದ ಅಂಚನ್ನು ಮುಟ್ಟಿದರೆ, ಇತ್ತ ಜನ ಸಮುದ್ರ ಅರಬ್ಬಿ ಸಮುದ್ರಕ್ಕಿಂತಲೂ ಹೆಚ್ಚು ಎನ್ನುವಷ್ಟು ವಿಶಾಲವಾಗಿ ಮತ್ತೊಂದು ತುದಿ ಕಾಣದಷ್ಟಿತ್ತು. ಅಬ್ಬಾ ಅವರ ಶಕ್ತಿಯೇ, ಬ್ರಿಟೀಶರೇಕೇ ಇಡೀ ಪ್ರಪಂಚವೇ ಅವರತ್ತ ತಿರುಗಿ ನೋಡುವಂತೆ ಮಾಡಿದ ಸನ್ನಿವೇಶವದು. ಅಂತಹಾ ಶಕ್ತಿಯ ಸಂಚಲನಕ್ಕೆ ಕಾರಣ ಅವರಲ್ಲಿ ಜಾಗೃತವಾದ ವಿಶುದ್ಧ ಚಕ್ರದ ಪವಾಡ. ಪರಿಶುದ್ಧ ವಿಶುದ್ಧ ಚಕ್ರವು ಸತ್ಯದ ಪ್ರತಿಪಾದನೆ ಮತ್ತು ಸತ್ಯಕ್ಕಾಗಿ ಉಪವಾಸ ಸತ್ಯಾಗ್ರಹವನ್ನು ಮಾಡುವುದಕ್ಕೆ ಪ್ರೇರೇಪಣೆಯನ್ನು ನೀಡುತ್ತವೆ.

ಇಂದಿಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಅತ್ಯಂತ ಹೆಚ್ಚು ಅವಧಿಯವರೆಗೆ ಭಾರತವನ್ನು ಆಳಿದ ಪ್ರಧಾನಿಯೆಂದು ದಾಖಲೆ ಬರೆದರು. ಕಾರಣ ತಮ್ಮ ಅದ್ಭುತವಾದ ಭಾಷಣ ಕಲೆ, ಸಂಮೋಹನ ಶೈಲಿಯಿಂದ ಜಗತ್ತನ್ನೇ ಆಕರ್ಷಿಸುತ್ತಿದ್ದಾರೆ. ಜಗತ್ತಿನ ನಾಯಕರಾಗಿದ್ದಾರೆ. ವಿಶುದ್ಧ ಚಕ್ರವು ಪ್ರಬಲವಾಗಿದ್ದರೆ ಮಾತ್ರ ಕೋಟ್ಯಾಂತರ ಜನರನ್ನು ತಮ್ಮ ವರ್ತನೆಯಿಂದ, ಸಂವಹನದಿಂದ, ಮಾತಿನಿಂದ ಸೆಳೆಯಲು ಸಾಧ್ಯ.

ಆಂತರಿಕ ಮಂಥನ

ವಿಶುದ್ಧ ಚಕ್ರವು ನಿಮ್ಮನ್ನು ಮೊದಲಿಗೆ ಒಳ್ಳೆಯ ಕೇಳುಗನನ್ನಾಗಿ ಮಾಡುತ್ತದೆ. ಇತರರ ಮಾತನ್ನು ಅವರದೇ ಅರ್ಥದಲ್ಲಿ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವನ್ನು ಕಲಿಸುತ್ತದೆ. ಅವರ ಆಲೋಚನೆಗಳನ್ನು ನಿಮಗೆ ಸರಿಯಾದ ರೀತಿಯಲ್ಲಿ ಸಂವಹನ ಆಗುವಂತೆ ಮಾಡುತ್ತದೆ. ನೀವು ಅವರನ್ನು ಸಹಾನುಭೂತಿಯಿಂದ, ತಾಳ್ಮೆಯಿಂದ ಕೇಳಿಸಿಕೊಳ್ಳುವುದು ಅಭ್ಯಾಸವಾಗುತ್ತದೆ. ಹೀಗೆ ನಿಮ್ಮ ಮತ್ತು ಜನರ ನಡುವಿನ ಸಂಬಂಧ ಗಟ್ಟಿಯಾಗುತ್ತಾ ಹೋಗುತ್ತದೆ. ನಿಮ್ಮ ಕುರಿತು ಜನರು ಪ್ರೀತಿಯನ್ನು ಬೆಳೆಸಿಕೊಳ್ಳುತ್ತಾರೆ. ನೀವು ನಿಧಾನವಾಗಿ ಜನಪ್ರಿಯರಾಗುತ್ತಾ ಹೋಗುತ್ತೀರಿ.

ನಿಮ್ಮೊಳಗಿನ ಆಂತರಿಕ ಸತ್ಯ ನಿಮಗೆ ಸುಳ್ಳು ಹೇಳಲು ಬಿಡುವುದಿಲ್ಲ. ಇನ್ನೊಬ್ಬರನ್ನು ಮೆಚ್ಚಿಸಲು ನಿಮ್ಮ ಬದುಕು ಇಲ್ಲ ಎನ್ನುವುದು ನಿಮಗೆ ತಾನಾಗಿಯೇ ಅರ್ಥವಾಗುತ್ತದೆ. ನಿಮ್ಮ ನಿಷ್ಠೆಯು ನಿಮಗೆ ಮುಖವಾಡ ಹಾಕಿಕೊಳ್ಳಲು ಬಿಡುವುದಿಲ್ಲ. ನೀವು ನಿಮ್ಮ ತಪ್ಪುಗಳನ್ನು ಒಪ್ಪಿಕೊಳ್ಳುತ್ತೀರಿ ಮತ್ತು ಇತರರನ್ನು ಕ್ಷಮಿಸುವ ಉದಾರ ಗುಣವನ್ನು ಹೊಂದುತ್ತೀರಿ. ನೀವು ಮುಕ್ತರಾಗುತ್ತಾ ಹೋದಂತೆ ವಿಶಾಲತೆ ನಿಮ್ಮನ್ನು ಆಕಾಶದೆತ್ತರಕ್ಕೆ ಬೆಳೆಸುತ್ತದೆ.

ಮನಸ್ಸಿನಲ್ಲಿ ಯಾವುದೂ ಸಹಾ ಉಳಿಯುವುದಿಲ್ಲ. ಅದು ಕೋಪ, ದುಃಖ, ನೋವು, ಹೀಗೆ ಎಲ್ಲವೂ ಹೊರಹೋಗಿ ಬಿಡುತ್ತದೆ. ಇದರಿಂದ ಮನಸ್ಸು ಹಗುರವಾಗುತ್ತದೆ ಹಾಗೂ ನೀವು ಖಿನ್ನತೆಯಿಂದ ದೂರವೇ ಇರುತ್ತೀರಿ. ನಿಮ್ಮ ಬಗ್ಗೆ ನಿಮಗಿರುವ ಕೀಳರಿಮೆ ಶೂನ್ಯವಾಗುತ್ತದೆ. ಯಾರು ಏನನ್ನುತ್ತಾರೋ ಅನ್ನುವ ಆತಂಕ ಲವಲೇಶವೂ ಉಳಿಯುವುದಿಲ್ಲ. ನೀವು ಒಬ್ಬ ಧೀಮಂತ ವ್ಯಕ್ತಿಯಾಗುತ್ತೀರಿ.

ದೈಹಿಕ ಮಂಥನ

ವಿಶುದ್ಧ ಚಕ್ರದ ಸಮತೋಲನವೆಂದರೆ ಸಮುದ್ರ ಮಂಥನದಂತೇ ಒಂದು ಶುದ್ಧತೆಯ ಪ್ರಕ್ರಿಯೆ. ಗಂಟಲಿಗೆ ಸಂಬಂಧಿಸಿದ ನೋವು, ರೋಗಗಳೆಲ್ಲವೂ ನಿವಾರಣೆಯಾಗುತ್ತದೆ. ಧ್ವನಿ ಎಂದಿಗೂ ಕುಂದುವುದೇ ಇಲ್ಲ. ನಿಮಗೆ ಒಂದೊಮ್ಮೆ ಕಫವಾದರೂ ಯಾವುದೇ ತೊಂದರೆ ಕೊಡದೇ ತಕ್ಷಣದಲ್ಲಿ ನಿವಾರಣೆಯಾಗುತ್ತದೆ. ಸೋಂಕು ಹೆಚ್ಚು ಕಾಲ ಉಳಿಯುವುದಿಲ್ಲ. ಕಿವಿ ಸಹಾ ಸದಾ ಚುರುಕಾಗಿ ಇರುತ್ತದೆ. ನೋವು, ಸೋಂಕು, ಕೇಳದಿರುವುದು ಹೀಗೆ ಯಾವುದೇ ತೊಂದರೆಯಾಗುವುದಿಲ್ಲ. ದೇಹದ ವಿಷದ ಅಂಶಗಳನ್ನು ಹೊರಹಾಕುವ ಕಾರಣ ದೇಹವೂ ಸಹಾ ಯಾವುದೇ ನಂಜಿಗೆ ಒಳಗಾಗದೇ ಸುಸ್ಥಿರವಾಗಿ ಇರಲು ಸಹಕರಿಸುತ್ತದೆ. ಗಂಟಲಿನ ಮುಖ್ಯ ಹಾರ್ಮೋನ್ ಥೈರಾಯ್ಡ್. ಈ ಗ್ರಂಥಿಯು ಒಂದು ಹಾರ್ಮೋನನ್ನು ಸ್ರವಿಸುತ್ತದೆ. ಕೇವಲ ಮೂರ್ನಾಲ್ಕು ಮಿಲಿಗ್ರಾಂಗಳಿಂದ ಮೈಕ್ರೋಗ್ರಾಂ ಮತ್ತು ನ್ಯಾನೋ ಗ್ರಾಂಗಳಷ್ಟು ಥೈರಾಕ್ಸಿನ್, ಟ್ರಯೋಡೋಥೈರೋಮಿನ್ ಮತ್ತು ಕ್ಯಾಲ್ಸಿಟೋನಿನ್ ಮಾತ್ರ ಸ್ರವಿಸುವುದು. ಇವುಗಳು ಕಮ್ಮಿಯಾದರೂ ರೋಗ ಬರುತ್ತದೆ. ಹೆಚ್ಚಾದರೂ ರೋಗ ಬರುತ್ತದೆ. ದೇಹದ ಚಯಾಪಚಯ ಕ್ರಿಯೆಗಳ ನಿಯಂತ್ರಣ, ದೇಹದ ಉಷ್ಣತೆ ಮತ್ತು ದೈಹಿಕ ಮತ್ತು ಮಾನಸಿಕ ಬೆಳವಣಿಗೆಗಳನ್ನು ಇದು ನಿಯಂತ್ರಿಸುತ್ತದೆ.

ಶಿಕ್ಷಣದಲ್ಲಿ ಭಾರತೀಯತೆ–ಮೌಲ್ಯಗಳು

ಹಿಂದೆ ಭಾರತ ಜಗತ್ತಿಗೆ ಜ್ಞಾನ–ವಿಜ್ಞಾನಗಳ ಕೊಡುಗೆ ನೀಡಿದೆ. ಮುಂದೆಯೂ ಅಂತಹ ಕೊಡುಗೆ ನೀಡಲು ಯುವಪೀಳಿಗೆಯನ್ನು ಸನ್ನದ್ಧಗೊಳಿಸುವ ಅಗತ್ಯವಿದೆ.

ಒಳನೋಟ
• ಹೆ.ಬಾ. ಮಲ್ಯ



ಇತ್ತೀಚೆಗೆ 'ಜಿರಳೆ ಪಾರ್ಟಿ' (Cockroach Janatha Party -CJP) ಹೆಸರಿನಲ್ಲಿ ನಡೆದ ಕಪಟ ನಾಟಕದ ಬಗ್ಗೆ ಈಗಾಗಲೇ ಜನರಿಗೆ ತಿಳಿದಿದೆ. ಈ ಪ್ರತಿಭಟನೆಯ ಹಿಂದಿರುವ ರಾಜಕಾರಣಿಗಳು, ವಿದೇಶಿ ಭಾರತ ವಿರೋಧಿ ಶಕ್ತಿಗಳ ಷಡ್ಯಂತ್ರವೂ ಬಯಲಾಗಿದೆ. ದಿಲ್ಲಿಯ ಜಂತರ್ ಮಂತರ್‌ನಲ್ಲಿ ಲಕ್ಷಾಂತರ ಯುವಕರ ಬೃಹತ್ ಆಂದೋಲನ ನಡೆಯಲಿದೆ ಎಂದು ಅವರ ನಾಯಕರು ಕೊಚ್ಚಿಕೊಂಡಿದ್ದರು. ಕೊನೆಗೆ ಈ ಪ್ರತಿಭಟನೆ ಹೇಗೆ ಠುಸ್ ಆಯಿತೆಂಬುದನ್ನೂ ದೇಶದ ಜನರು ನೋಡಿದ್ದಾರೆ. ದೇಶಾದ್ಯಂತ ಯುವಕರನ್ನು ಪ್ರಚೋದಿಸಿ, ಅಶಾಂತಿ ಸೃಷ್ಟಿಸಿ, ಮೋದಿ ಸರಕಾರವನ್ನು ಉರುಳಿಸುವ ಸಂಚು ಇದಾಗಿತ್ತು. ಬರೇ ಗಾಳಿಯಿಂದ ಉಬ್ಬಿದ ಈ ಬಲೂನಿಗೆ ಚಿಕ್ಕ ಸೂಜಿಯಿಂದ ಚುಚ್ಚಿ ಅದನ್ನು ಮೋದಿ–ಶಾ ಅವರು ಹೇಗೆ ನಿಷ್ಕ್ರಿಯಗೊಳಿಸಿದರೆಂಬುದನ್ನೂ ಜನ ನೋಡಿದ್ದಾರೆ. ಪೊಲೀಸು, ಬಂಧನ ಯಾವುದೂ ನಡೆಯಲಿಲ್ಲ. ವಿಷಯ ಅದಲ್ಲ, ಭಾರತದ ಹಿಂದು ಯುವಕರೇ ದಾರಿ ತಪ್ಪಲು ಕಾರಣವೇನು ಎಂಬುದರ ಬಗ್ಗೆ ಆಳಕ್ಕೆ ಹೋಗಿ ಚಿಂತಿಸುವ ಅಗತ್ಯವಿದೆ.

ಸ್ವಾತಂತ್ರ್ಯ ಬಂದು ಆರೇಳು ದಶಕಗಳವರೆಗೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರಕಾರ ಶಿಕ್ಷಣ ಕ್ಷೇತ್ರದ ಬಗ್ಗೆ ಗಮನವನ್ನೇ ಕೊಡಲಿಲ್ಲ. ಯುವಕರಲ್ಲಿ ದೇಶಭಕ್ತಿ, ಸಾಮಾಜಿಕ ಪ್ರಜ್ಞೆಗಳನ್ನು ಜಾಗೃತಗೊಳಿಸುವ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಲಿಲ್ಲ. ಸರ್ಕಾರಿ ಶಾಲೆಗಳ ದುರವಸ್ಥೆ ಇದಕ್ಕೆ ಸಾಕ್ಷಿ. ಬಡವರು ಬಡವರಾಗಿಯೇ ಇರಬೇಕು, ಅಶಿಕ್ಷಿತರಾಗಿಯೇ ಇರಬೇಕು, ಅದರಿಂದ ಅವರು ಸದಾ ತಮ್ಮ ಪಕ್ಷಕ್ಕೆ ಮತ ನೀಡಿ ತಾವು ಸದಾ ಅಧಿಕಾರದಲ್ಲಿರುವಂತಾಗಬೇಕು, ತಮ್ಮ ವಂಶವೇ ಸದಾ ಕಾಲಕ್ಕೂ ಆಡಳಿತದಲ್ಲಿರಬೇಕು ಎಂಬುದು ಇದರ ಹಿಂದಿನ ಹುನ್ನಾರ. ಹೀಗೆ ಆರೇಳು ದಶಕಗಳವರೆಗೆ ರಾಷ್ಟ್ರ ಭಾವನೆ ಜಾಗೃತಗೊಳಿಸದ ಕಳಪೆ ಶಿಕ್ಷಣದ ಪರಿಣಾಮವಾಗಿ ಯುವಕರು ದಾರಿತಪ್ಪಿ ಸಮಾಜ ಕಂಟಕರಾಗುವಂತಾಯಿತು. ಆದರೆ ತಮ್ಮ ಮಕ್ಕಳಿಗೆ, ಸರ್ಕಾರಿ ಅಧಿಕಾರಿಗಳು ಹಾಗೂ ಶ್ರೀಮಂತರ ಮಕ್ಕಳಿಗಾಗಿ ಖಾಸಗಿ ಶಾಲೆ–ಕಾಲೇಜುಗಳಿಗೆ ಉತ್ತೇಜನ ನೀಡಲಾಯಿತು. ಕೆಲವು ಯುವಕರು ದಾರಿ ತಪ್ಪಿದರೂ ಅವರಲ್ಲಿ ಸ್ವತಂತ್ರವಾಗಿ ಯೋಚಿಸುವ ಶಕ್ತಿಯೂ ಬೆಳೆಯಲಾರಂಭಿಸಿತು. ದೇಶದ ಎಲ್ಲ ಯುವಕರೂ ದಾರಿತಪ್ಪಿದ್ದಾರೆ ಎನ್ನಲಾಗದು. ಆದರೆ ದೇಶದ ಯುವಕ–ಯುವತಿಯರಲ್ಲಿ ಜಾಗೃತಿ ಮೂಡಿರುವುದು ಕೇವಲ ಖಾಸಗಿ– ವ್ಯಾಪಾರೀ ಶಿಕ್ಷಣ ಸಂಸ್ಥೆಗಳಿಂದಲ್ಲ. ಸಂಘ ಪರಿವಾರ, ವಿದ್ಯಾಭಾರತಿ, ರಾಮಕೃಷ್ಣಾಶ್ರಮ ಹಾಗೂ ಇನ್ನಿತರ ರಾಷ್ಟ್ರವಾದೀ ಸಂಘಟನೆಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆ, ಶಾಲೆಗಳಲ್ಲಿ ನೀಡಲಾಗುತ್ತಿರುವ ಸಂಸ್ಕಾರಯುಕ್ತ, ಮೌಲ್ಯಾಧಾರಿತ ಶಿಕ್ಷಣ ವ್ಯವಸ್ಥೆಯಿಂದ. ಸ್ವಾತಂತ್ರ್ಯಾನಂತರದ ಎಂಭತ್ತು ವರ್ಷಗಳಲ್ಲಿ ಎರಡು ಪೀಳಿಗೆಗಳೇ ಕಳೆದು ಮೂರನೇ ಪೀಳಿಗೆಯ ಯುವಕರು ತಯಾರಾಗಿದ್ದಾರೆ. ಆದರೆ ಗುರುಕುಲ ಶಿಕ್ಷಣದ ಬದಲಾಗಿ ಮೆಕಾಲೆ ಶಿಕ್ಷಣವನ್ನೇ ಮುಂದುವರಿಸಿದ್ದರಿಂದ ಹಿಂದಿನ ಎರಡು ಪೀಳಿಗೆಯ ಜನ ಹಿಂದು ಧರ್ಮ, ಸಂಸ್ಕೃತಿ, ಇತಿಹಾಸ, ಮೌಲ್ಯಗಳನ್ನೇ ಮರೆಯುವಂತಾಯಿತು. ಕೇವಲ ಹಣ ಗಳಿಕೆಯೇ ಮುಖ್ಯವಾಯಿತು. ಮೆಕಾಲೆ ಊಹಿಸಿದಂತೆ ಇವರು ಕರಿತೊಗಲಿನ ಬ್ರಿಟಿಷರಾಗಿ ರೂಪುಗೊಂಡರು. ಆದರೆ ಸಂಘ ಪರಿವಾರ ಹಾಗೂ ಇನ್ನಿತರ ರಾಷ್ಟ್ರೀಯ ಸಂಘಟನೆಗಳ ಪ್ರಯತ್ನದ ಫಲವಾಗಿ ಇಂದಿನ ಮೂರನೇ ಪೀಳಿಗೆಯಲ್ಲಿ ತಮ್ಮ ಅಸ್ಮಿತೆಯ ಜಾಗೃತಿಯಾಗಲಾರಂಭಿಸಿರುವುದು ಸಮಾಧಾನಕರ ಸಂಗತಿ. ಇಂದು ಹಿಂದು ಪರ ಸರಕಾರ ಕೇಂದ್ರದಲ್ಲಿ ಹಾಗೂ 21 ರಾಜ್ಯಗಳಲ್ಲಿ ಆಡಳಿತ ನಡೆಸುತ್ತಿದೆ. ಮೋದಿ ಸರಕಾರ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತಂದಿದೆ. ಶಿಕ್ಷಣದಲ್ಲಿ ಭಾರತೀಯತೆಯನ್ನು ತುಂಬುವ ಪ್ರಯತ್ನ ನಡೆಯುತ್ತಿದೆ. ಜಗತ್ತಿನಲ್ಲಿ ಇಂದು ಅತಿ ಹೆಚ್ಚು ಯುವಕರಿರುವ ದೇಶ ಭಾರತ ಎಂದು ಅಂಕಿ ಅಂಶಗಳು ಹೇಳುತ್ತಿವೆ. ಇಂದಿನ ಭಾರತ ಯುವ ಪೀಳಿಗೆಯ ಭಾರತ ಎನ್ನಬಹುದು. ಇವರೇ ನಾಳಿನ ಭಾರತವನ್ನು ಮುನ್ನಡೆಸುವವರು.



ಮಕ್ಕಳನ್ನು ತಿದ್ದುವುದು ಕೇವಲ ಸರಕಾರ, ಶಾಲೆಗಳು ಹಾಗೂ ಶಿಕ್ಷಕರ ಹೊಣೆಗಾರಿಕೆ ಎಂಬ ಭಾವನೆ ಸರಿಯಲ್ಲ. ಹೆತ್ತವರ ಮೇಲೆಯೂ ಮಕ್ಕಳಿಗೆ ಯೋಗ್ಯ ಸಂಸ್ಕಾರಗಳನ್ನು ನೀಡಿ ಬೆಳೆಸುವ ಜವಾಬ್ದಾರಿ ಇದೆ ಎಂಬುದನ್ನು ಮರೆಯಬಾರದು. 3–4 ವರ್ಷದ ಮಕ್ಕಳು ತಾಯಿಯ ಮಡಿಲಲ್ಲೇ ಬೆಳೆಯುತ್ತವೆ. "ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮಗುವಿನ ಮೊದಲ ಗುರು" ಎಂಬ ಮಾತೊಂದಿದೆ. ಹಾಗೆಯೇ ವ್ಯಾವಹಾರಿಕ ಸಂಗತಿಗಳಲ್ಲಿ ತಂದೆಯ ಜವಾಬ್ದಾರಿಯೂ ಇದೆ. ಮಕ್ಕಳನ್ನು ಹೇಗೆ ಬೆಳೆಸಬೇಕೆಂಬುದರ ಬಗ್ಗೆ ಒಂದು ಸುಭಾಷಿತ ಇದೆ.

ಲಾಲಯೇತ್ ಪಂಚವರ್ಷಾಣಿ ದಶವರ್ಷಾಣಿ ತಾಡಯೇತ್।
ಶೋಡಷವರ್ಷಪ್ರಾಪ್ತೇ ಪುತ್ರಂ ಮಿತ್ರವದಾಚಾರೇತ್॥

ಮಕ್ಕಳನ್ನು 5 ವರ್ಷ ಪ್ರಾಯವಾಗುವವರೆಗೆ ಮುದ್ದು ಮಾಡಬೇಕು. ಆದರೆ ಅತಿ ಮುದ್ದು ಸಲ್ಲದು. ಹೊಡೆಯಬಾರದು. ಪ್ರೀತಿಯಿಂದ ತುಂಟತನ ಮಾಡಬಾರದೆಂದು ತಾಯಿ ಬುದ್ಧಿ ಹೇಳಬೇಕು. ನಂತರವೂ ಅತಿ ತುಂಟತನ ನಡೆಸಿದರೆ ಸ್ವಲ್ಪ ಚುರುಕು ಮುಟ್ಟಿಸಬೇಕು. ಸಿಟ್ಟಿನಿಂದ ಸಿಕ್ಕಾಪಟ್ಟೆ ಹೊಡೆಯುವುದು ಸರಿಯಲ್ಲ. ಇದರಿಂದ ಮಕ್ಕಳು ಉದ್ದಂಡ ಸ್ವಭಾವದವರಾಗುವುದೇ ಹೆಚ್ಚು ಅಥವಾ ಅವರ ಸ್ವಂತದ ಪ್ರತಿಭೆಗಳು ಬೆಳೆಯದಂತಾಗುತ್ತದೆ.

ಮಕ್ಕಳು ತಂದೆ–ತಾಯಂದಿರು ಹೇಳಿದಂತೆ ನಡೆದುಕೊಳ್ಳುವುದಿಲ್ಲ. ಪೋಷಕರ ನಡೆಯನ್ನು ಅನುಕರಿಸುತ್ತವೆ. ಪೋಷಕರು ಹಗಲಿಡೀ ಮೊಬೈಲ್, ವಾಟ್ಸಪ್, ಟಿ.ವಿ.ಗಳಲ್ಲೇ ಮಗ್ನರಾಗಿದ್ದರೆ ಮಕ್ಕಳೂ ಅದನ್ನೇ ಮಾಡುತ್ತವೆ. ಮೊಬೈಲ್ ಕೊಡದಿದ್ದರೆ ಹಟ ಮಾಡುತ್ತವೆ. ಕಿರಿಕಿರಿ ತಪ್ಪಿಸಿಕೊಳ್ಳಲು ಚಿಕ್ಕ ಶಿಶುಗಳ ಕೈಗೆ ತಾಯಿ ಮೊಬೈಲ್ ಕೊಡುವುದರಿಂದ ಮಕ್ಕಳ ಪ್ರತಿಭೆಗಳು, ಮಿದುಳಿನ ಶಕ್ತಿ ಕುಂದುವುದಲ್ಲದೆ, ಚಿಕ್ಕ ಶಿಶುಗಳಿಗೆ ಕಣ್ಣಿನ ಸಮಸ್ಯೆಯಾಗಿ ಕನ್ನಡಕ ಬರುತ್ತದೆ. ಮಕ್ಕಳಿಗೆ ಮೊಬೈಲೇ ಕೊಡಬೇಕೆಂದೇನಿಲ್ಲ, ಬೇರೆ ಆಕರ್ಷಕ ಆಟದ ವಸ್ತುಗಳನ್ನು ಕೊಡುವುದರಿಂದ ಮಗು ಬೊಂಬೆಗಳ ಆಟದಲ್ಲಿ ಮಗ್ನವಾಗುತ್ತದೆ. ಜೊತೆಗೆ ಮಕ್ಕಳ ಮುಂದೆ ತಾವೇ ಸ್ವತಃ ಮೊಬೈಲ್‌ನಲ್ಲಿ ತಲ್ಲೀನರಾಗಿರಕೂಡದು. ಆಗ ಮಕ್ಕಳಿಗೆ ಏನಾದರೂ ಅಪಾಯ ಸಂಭವಿಸಿದರೂ ತಾಯಿಯ ಅರಿವಿಗೇ ಬರುವುದಿಲ್ಲ.

ಇಂದು ವಸ್ತುಸ್ಥಿತಿ ಹೇಗಿದೆಯೆಂದರೆ ತಂದೆತಾಯಿಗಳು ಮೆಕಾಲೆ ಶಿಕ್ಷಣ ಪಡೆದು ಬೆಳೆದವರಾದ್ದರಿಂದ ಅವರಿಗೆ ಹಿಂದು ಧರ್ಮ, ಸಂಸ್ಕೃತಿ, ಪರಂಪರೆ, ಆಚರಣೆಗಳ ಬಗ್ಗೆ ಯಾವುದೇ ಜ್ಞಾನವಿಲ್ಲ. ರಾಮಾಯಣ, ಮಹಾಭಾರತ, ಭಾಗವತ, ಭಗವದ್ಗೀತೆಯನ್ನು ಓದಿರುವುದಿಲ್ಲ. ಮಕ್ಕಳಿಗೆ ಪುರಾಣ ಕತೆಗಳನ್ನು ಹೇಳಿ ಅವರಲ್ಲಿ ಉತ್ತಮ ಗುಣಗಳನ್ನು ಬೆಳೆಸುವಲ್ಲಿ ತಂದೆ ತಾಯಂದಿರು ಸೋಲುತ್ತಾರೆ. ಮಕ್ಕಳು ಹೇಗೆ ಹೇಗೋ ಬೆಳೆದು ಸಮಾಜ ಕಂಟಕರಾಗುತ್ತಾರೆ. ಮುಸ್ಲಿಂ ಮಕ್ಕಳು ಮದ್ರಸಾ ಶಿಕ್ಷಣ ಪಡೆಯುವುದರಿಂದ ಅನೇಕರು ಭಯೋತ್ಪಾದಕರು, ಮತಾಂಧರೂ ಆಗಿ ರೂಪುಗೊಳ್ಳುತ್ತಾರೆ. ಕಾಫಿರರೆಂದು ಹಿಂದುಗಳ ಮೇಲೆ ಹಲ್ಲೆ, ಅತ್ಯಾಚಾರ, ಕಲ್ಲೆಸೆಯುವುದು, ಮೂರ್ತಿ ಭಂಜನೆ, ಕೊಳ್ಳಿ ಇಡುವುದು ತಮ್ಮ ಮತದಂತೆ ಸರಿ ಎಂದು ಭಾವಿಸುತ್ತಾರೆ. ಆದಕ್ಕೇ ಹೇಳುವುದು ಏಕರೂಪ ನಾಗರಿಕ ಸಂಹಿತೆ ಹಾಗೂ ಏಕರೂಪದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕೆಂದು.

ನರೇಂದ್ರ ಮೋದಿಯವರು ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತಂದಿದ್ದಾರೆ. ಇಂಗ್ಲಿಷ್ ಭಾಷೆಯ ಹಾಗೂ ಕಾನ್ವೆಂಟ್ ಶಿಕ್ಷಣದ ಮೋಹವನ್ನು ಬದಿಗೆ ಸರಿಸಿ ರಾಷ್ಟ್ರೀಯ ಸಂಸ್ಕಾರದ ಶಿಕ್ಷಣದತ್ತ ಗಮನಹರಿಸಬೇಕು. ಮಾತೃಭಾಷೆಯಲ್ಲೇ ಶಿಕ್ಷಣ ನೀಡುವ ಅಗತ್ಯವನ್ನು ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳು ಸ್ಪಷ್ಟಪಡಿಸಿವೆ. ಇಂದು ಕ್ರಮೇಣ ಮಕ್ಕಳ ಪಾಲಕರಲ್ಲೂ ಇಂಥ ಸಂಸ್ಕಾರಯುಕ್ತ ಶಿಕ್ಷಣದ ಅವಶ್ಯಕತೆಯ ಬಗ್ಗೆ ಅರಿವು ಮೂಡುತ್ತಿರುವುದು ಒಂದು ಶುಭಲಕ್ಷಣ. ಸಂಘ ಪರಿವಾರ, ರಾಷ್ಟ್ರೋತ್ಥಾನ ಪರಿಷತ್ತು, ವಿದ್ಯಾಭಾರತಿಯ ಶಿಶುಮಂದಿರಗಳು, ಪ್ರಾಥಮಿಕ ಹಾಗೂ ಹೈಸ್ಕೂಲುಗಳಿಗೆ ತಮ್ಮ ಮಕ್ಕಳನ್ನು ಕಳಿಸುವ ಪಾಲಕರ ಸಂಖ್ಯೆ ಹೆಚ್ಚಾಗುತ್ತಿರುವುದೇ ಇದಕ್ಕೆ ಸಾಕ್ಷಿ. ಭಾರತ ಸದ್ಯದಲ್ಲೇ ವಿಶ್ವಗುರುವಾಗುವುದು ಖಚಿತ. ಹಿಂದೂ ಧರ್ಮದಲ್ಲಿ ಅಂಥ ಅವಿನಾಶಿಯಾದ ಅಂತಃಸತ್ವ ಅಡಗಿದೆ. ಸ್ವಾಮಿ ವಿವೇಕಾನಂದರೂ ಇದನ್ನೇ ಹೇಳಿದ್ದರು. ಭಾರತ ಮೇಲೇಳುವುದು. ಹಿಂದೆಯೂ ಭಾರತ ಜಗತ್ತಿಗೆ ಜ್ಞಾನ–ವಿಜ್ಞಾನಗಳ ಕೊಡುಗೆ ನೀಡಿದೆ. ಮುಂದೆಯೂ ಆ ಜ್ಞಾನ–ವಿಜ್ಞಾನದ ಕೊಡುಗೆ ನೀಡಲು ಭಾರತವನ್ನು, ಅದರ ಯುವಪೀಳಿಗೆಯನ್ನು ಸನ್ನದ್ಧಗೊಳಿಸುವ ಅಗತ್ಯವಿದೆ.

'ನವ ಭಾರತ'ದ ಹರಿಕಾರ ನರೇಂದ್ರ ಮೋದಿ

ಡೇವಿಡ್ ಫ್ರಾಲಿ

ನರೇಂದ್ರ ಮೋದಿಯವರು ಈಗ ಭಾರತದ ಅತಿ ದೀರ್ಘಾವಧಿ ಸೇವೆ ಸಲ್ಲಿಸುತ್ತಿರುವ ಚುನಾಯಿತ ಪ್ರಧಾನಿಯಾಗಿದ್ದಾರೆ. ಈ ಸಾಧನೆಯ ಜತೆಗೇ ಭಾರತವನ್ನು ಒಂದು ಆರ್ಥಿಕ ಶಕ್ತಿಯಾಗಿಸಿದ ಮತ್ತು ಭಾರತಕ್ಕೆ ಜಾಗತಿಕ ಮನ್ನಣೆ ದೊರಕಿಸಿದ ಕೀರ್ತಿಯೂ ಅವರದ್ದಾಗಿದೆ. ಭಾರತದ ಮೂಲ ಪ್ರೇರಣೆಯಾದ ಧರ್ಮದ ಮಾರ್ಗದರ್ಶನದೊಂದಿಗೆ ಭವಿಷ್ಯದ ಭಾರತವನ್ನು ನಿರ್ಮಿಸುವಂತಹ ಬದ್ಧತೆಯನ್ನೂ ಮೋದಿ ಪ್ರದರ್ಶಿಸುತ್ತಿದ್ದಾರೆ.

ಭಾರತದ ಪುನರುತ್ಥಾನ

ಮೋದಿಯವರ ಆಳ್ವಿಕೆಯು ನೆಹರೂ ಕಾಲದ ನೀತಿಗಳ ಅಂತ್ಯವನ್ನು ಸೂಚಿಸಿದೆ. ನೆಹರೂ ಅಳವಡಿಸಿದ ನೀತಿಗಳು ಸ್ವಾತಂತ್ರ್ಯೋತ್ತರ ಭಾರತವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಲು ಮತ್ತು ದೇಶದ ಪುರಾತನ ನಾಗರಿಕ ಪರಂಪರೆಯೊಂದಿಗೆ ಹೊಂದಿಕೊಳ್ಳಲು ವಿಫಲವಾಗಿತ್ತು. ಆದರೆ ಮೋದಿಯವರ ಆಡಳಿತದಲ್ಲಿ ಭಾರತವು ಮಹತ್ವದ ಆರ್ಥಿಕ ಪ್ರಗತಿ ಸಾಧಿಸಿದ್ದು, ಜಾಗತಿಕವಾಗಿ ತನ್ನ ಸ್ಥಾನಮಾನ ಹೆಚ್ಚಿಸಿಕೊಂಡಿದೆ. ರಾಜತಾಂತ್ರಿಕ, ಪಾರಿಸರಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿದೆ.

ಮೋದಿಯವರ ನಾಯಕತ್ವದಲ್ಲಿ 'ನವಭಾರತ'ವೊಂದು ಉದಿಸುತ್ತಿದೆ. ಇದು ವಸಾಹತುಶಾಹಿ ನೆರಳಿನಿಂದ ಪೂರ್ಣವಾಗಿ ಹೊರಬಂದ ಹಾಗೂ ತನ್ನ ಐತಿಹಾಸಿಕ ಶ್ರೇಷ್ಠತೆಯನ್ನು, ಸಾಂಸ್ಕೃತಿಕ ಆತ್ಮವಿಶ್ವಾಸವನ್ನು ತುಂಬಿಕೊಂಡ ಭಾರತವಾಗಿದೆ. ಭಾರತವು ತನ್ನ ಧಾರ್ಮಿಕ ಪರಂಪರೆಯ ಆಧಾರದಲ್ಲಿ ಆರ್ಥಿಕ, ಸಾಂಸ್ಕೃತಿಕ ಮತ್ತು ನಾಗರಿಕ ಪುನರುತ್ಥಾನವನ್ನು ಕಾಣುತ್ತಿದೆ.



ಭಾರತವು ವಿಶ್ವದ ಅತ್ಯಂತ ಪುರಾತನ ಮತ್ತು ಅತ್ಯಂತ ಪ್ರಭಾವೀ ನಾಗರಿಕತೆ ಹೊಂದಿತ್ತು ಎಂಬುದನ್ನು ನೆನಪಿಸಿಕೊಳ್ಳಬೇಕು. ಭಾರತವು ಆತ್ಮಜ್ಞಾನ ಮತ್ತು ಆಧ್ಯಾತ್ಮಿಕ ಚಿಂತನೆಯ ತೊಟ್ಟಿಲಾಗಿತ್ತು. ಮೋದಿಯವರ ಅಡಿಯಲ್ಲಿ ಈ ಸಾಂಸ್ಕೃತಿಕ ಭಾರತ ಇನ್ನಷ್ಟು ಶಕ್ತಿ ತುಂಬಿ ಪ್ರಜ್ವಲಿಸುತ್ತಾ ಬೆಳೆಯುತ್ತಿದೆ. ವಸಾಹತುಶಾಹಿ ಬಂಧನಗಳನ್ನೆಲ್ಲಾ ಕಳಚಿಹಾಕುತ್ತಿವೆ. ತನ್ನ ಧಾರ್ಮಿಕ ಮತ್ತು ಯೋಗದ ಪರಂಪರೆಯನ್ನು ಜಗತ್ತಿನೊಂದಿಗೆ ಹಂಚಿಕೊಳ್ಳುತ್ತಿದೆ. ವಿದೇಶಿ ಪ್ರಭಾವವನ್ನು ಕಳಚಿಕೊಂಡು ಜಾಗತಿಕ ನಾಯಕನಾಗಿ ಮತ್ತೆ ಉದಿಸುತ್ತಿದೆ. ನೂತನ ಭಾರತವು ನೆಹರೂ ಮಾದರಿಗಿಂತ ಭಿನ್ನವಾಗಿದೆ. ನೆಹರೂ ಮಾದರಿಯು ವಸಾಹತುಶಾಹಿ ಚೌಕಟ್ಟಿನಲ್ಲೇ ಬೆಳೆದಿದ್ದು ಸಮಾಜವಾದಿ ಮತ್ತು ಮಾರ್ಕ್ಸಿಸ್ಟ್ ಸಿದ್ಧಾಂತಗಳನ್ನು ಅನುಸರಿಸಿಕೊಂಡಿತ್ತು.

ಪ್ರಧಾನಿ ಮೋದಿಯವರು ಭಾರತದ ಪುರಾತನ ಧಾರ್ಮಿಕ ಪರಂಪರೆಗಳನ್ನು, ದೇವಾಲಯಗಳನ್ನು ಮತ್ತು ಪ್ರಾಚೀನ ಚಿಂತನೆಗಳನ್ನು ಉಳಿಸಿಕೊಳ್ಳುವತ್ತ ಮಹತ್ವದ ಹೆಜ್ಜೆ ಇಟ್ಟಿದ್ದಾರೆ. ಭಾರತದ ವೈದಿಕ, ಬೌದ್ಧ, ಜೈನ ಮತ್ತು ಸಿಕ್ಖ್ ಸಂಪ್ರದಾಯಗಳು ಏಷ್ಯಾ ಮತ್ತು ಇನ್ನಿತರ ಪ್ರದೇಶಗಳ ಮೇಲೆ ಪ್ರಭಾವ ಬೀರಿದ್ದು ಮಧ್ಯ ಏಷ್ಯಾ , ಪೂರ್ವ ಏಷ್ಯಾ ಮತ್ತು ಆಗ್ನೇಯ ಏಷ್ಯಾಗಳ ಸಂಸ್ಕೃತಿಗಳನ್ನು ಪ್ರಭಾವಿಸಿವೆ. ಯುರೋಪು ಮತ್ತು ಪಶ್ಚಿಮ ಏಷ್ಯಾದಲ್ಲೂ ಭಾರತದ ಪಾರಂಪರಿಕ ಪ್ರಭಾವವಿದೆ.

ಭಾರತದ ನಾಗರಿಕತೆಯು ಬಹಳ ಪುರಾತನವಾದುದು. 8000 ವರ್ಷಗಳ ಹಿಂದೆ ಸರಸ್ವತಿ ನದಿಯ ದಡದಲ್ಲಿ ಭಾರತದ ನಾಗರಿಕತೆ ಉದಿಸಿತ್ತು. ಆಗಲೇ ಭಾರತವು ವಿದೇಶಗಳೊಂದಿಗೆ ವ್ಯಾಪಾರ ಸಂಬಂಧ, ಸಾಗರ ಸಂಪರ್ಕವನ್ನು ಹೊಂದಿತ್ತು. ಆಧುನಿಕ ಭಾರತದಲ್ಲಿ ಸ್ವಾಮಿ ವಿವೇಕಾನಂದರಂಥ ಮಹನೀಯರು ಪಾಶ್ಚಿಮಾತ್ಯ ಜಗತ್ತಿಗೆ ಯೋಗ ಮತ್ತು ವೇದಾಂತಗಳನ್ನು ಪರಿಚಯಿಸಿದ್ದರು.

ಈ ನಿಟ್ಟಿನಲ್ಲಿ ನೋಡುವುದಾದರೆ ಪ್ರಧಾನಿ ಮೋದಿಯವರು ಸ್ವಾಮಿ ವಿವೇಕಾನಂದರ ರಾಜಕೀಯ ಅಪರವತಾರವೆಂಬಂತೆ ಕಂಡುಬರುತ್ತಾರೆ. ವಿವೇಕಾನಂದರ ಸಾಂಸ್ಕೃತಿಕ ಆತ್ಮವಿಶ್ವಾಸ ಮತ್ತು ನಾಗರಿಕ ಪುನರುಜ್ಜೀವನದ ಕನಸನ್ನು ಮೋದಿಯವರು ಸಾಕಾರ ಮಾಡಲು ಯತ್ನಿಸುತ್ತಿದ್ದಾರೆ. ಸನಾತನ ಧರ್ಮದ ಪುನರುತ್ಥಾನದ ಸಂಕೇತವಾಗಿ ಶ್ರೀರಾಮ ಮಂದಿರ ನಿರ್ಮಾಣವಾಗಿದ್ದು ಇದು ಭಾರತದ ಧಾರ್ಮಿಕ ಪರಂಪರೆಯತ್ತ ಇಡೀ ಜಗತ್ತಿನ ಗಮನ ಸೆಳೆದಿದೆ. ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣವು ದೇಶದ ಸಾಂಸ್ಕೃತಿಕ ಪುನರುತ್ಥಾನದ ಕೇಂದ್ರ ಬಿಂದು ಎಂಬುದಾಗಿ ಭಾವಿಸಬಹುದು.

ನವಭಾರತ ಮತ್ತು ಜಗತ್ತು

ಭಾರತದ ಸಾಕ್ಷಿಪ್ರಜ್ಞೆಯನ್ನು ಸ್ವಾಮಿ ವಿವೇಕಾನಂದ, ಸ್ವಾಮಿ ರಾಮತೀರ್ಥ, ಲೋಕಮಾನ್ಯ ತಿಲಕ್, ಶ್ರೀ ಅರವಿಂದ ಮುಂತಾದವರು ಜಗತ್ತಿಗೆ ಪ್ರಚುರಪಡಿಸಿದ್ದರು. ಈ ಪರಂಪರೆಯನ್ನು ಪ್ರಧಾನಿ ಮೋದಿ ಮುಂದುವರಿಸುತ್ತಿದ್ದಾರೆ.

ಸಾಂಸ್ಕೃತಿಕ ವಿಶ್ವಾಸ, ಆರ್ಥಿಕ ಅಭಿವೃದ್ಧಿ, ಬೌದ್ಧಿಕ ಸ್ವಾತಂತ್ರ್ಯ ಮತ್ತು ರಾಷ್ಟ್ರೀಯ ಬಲದಲ್ಲಿ ಭಾರತದ ಅಸ್ತಿತ್ವ ಅಡಗಿದೆ ಎಂಬುದು ಮೋದಿ ನಿಲುವು. 2014ರಲ್ಲಿ ಅವರು ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದಾಗ ಅವರ ನಾಯಕತ್ವದಲ್ಲಿ ಭಾರತವು ಜಾಗತಿಕವಾಗಿ ಏಕಾಂಗಿಯಾಗಬಹುದು ಹಾಗೂ ಅಭಿವೃದ್ಧಿ ಕುಂಠಿತವಾಗಬಹುದು ಎಂದು ಟೀಕಾಕಾರರು ಎಚ್ಚರಿಸಿದ್ದರು. ಆದರೆ ಈಗ ಜಾಗತಿಕವಾಗಿ ಭಾರತದ ಘನತೆ ಹೆಚ್ಚಿದೆ.ಆರ್ಥಿಕವಾಗಿ ಮಹತ್ವದ ಪ್ರಗತಿ ಸಾಧಿಸಿದೆ. ಭಾರತವೀಗ ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕ ಶಕ್ತಿಗಳಲ್ಲಿ ಒಂದಾಗಿದೆ. ರಾಜತಾಂತ್ರಿಕವಾಗಿ ಭಾರತವನ್ನು ವಿಶ್ವದ ಗೌರವಾನ್ವಿತ ಮತ್ತು ಪ್ರಭಾವಿ ರಾಷ್ಟ್ರಗಳ ಪಟ್ಟಿಗೆ ಮೋದಿಯವರು ಸೇರಿಸಿದ್ದಾರೆ. ಎಲ್ಲಾ ರಾಷ್ಟ್ರಗಳ ಜತೆಗೂ ಭಾರತದ ಸಂಬಂಧವು ಸೌಹಾರ್ದಯುತವಾಗಿರುವಂತೆ ಮಾಡಿದ್ದಾರೆ. ಜಗತ್ತನ್ನೇ ಒಂದು ಕುಟುಂಬವಾಗಿ ಪರಿಗಣಿಸುವ ಮೂಲಕ ತಮ್ಮ ರಾಜಕೀಯ ದೃಷ್ಟಿಕೋನವನ್ನು ಅವರು ವಿಸ್ತರಿಸಿಕೊಂಡಿದ್ದಾರೆ. ಭಾರತವು ಒಂದು ಆರ್ಥಿಕ ಶಕ್ತಿಯಷ್ಟೇ ಅಲ್ಲ, ಜಗತ್ತಿನ ಏಕತೆ ಮತ್ತು ಸಹಕಾರವನ್ನು ಪ್ರತಿಪಾದಿಸುವ ಶಕ್ತಿ ಎಂಬ ಸಂದೇಶವನ್ನು ಸಾರಿದ್ದಾರೆ.

ಪ್ರಸ್ತುತ ಮೋದಿಯವರು ಭಾರತದ ಅತ್ಯಂತ ಪ್ರಭಾವೀ ಪ್ರಧಾನಿಯಷ್ಟೇ ಅಲ್ಲದೆ ಮಹತ್ವದ ಜಾಗತಿಕ ನಾಯಕರೂ ಆಗಿದ್ದಾರೆ. ಅವರ ಸಾಧನೆಯನ್ನು ಕೇವಲ ಅವರ ದೀರ್ಘಕಾಲದ ಆಳ್ವಿಕೆಯಿಂದಷ್ಟೇ ಅಳೆಯಲಾಗುವುದಿಲ್ಲ. ದೇಶದ ಪುನರುತ್ಥಾನ ದಲ್ಲಿ ಮತ್ತು ಜಾಗತಿಕ ಶಕ್ತಿಗಳ ಜತೆಗೆ ಭಾರತವನ್ನು ಸೇರಿಸುವಲ್ಲಿ ಸಾಧಿಸಿದ ಸಾಫಲ್ಯದಲ್ಲೂ ಅವರ ಸಾಧನೆ ಅಡಗಿದೆ.

ಕಿರುಸುದ್ದಿ

ಇಂದು ಗೌಡ ವಧು-ವರರ ಸಮಾವೇಶ

ಮಡಿಕೇರಿ: ಕೊಡಗು ಗೌಡ ನಿವೃತ್ತ ನೌಕರರ ಸಂಘದ ವತಿಯಿಂದ ಜೂ.13 ರಂದು ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮುದಾಯದ ವಧು- ವರರ ಸಮಾವೇಶ ನಡೆಯಲಿದೆ. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಸಂಘದ ಅಧ್ಯಕ್ಷ ಚೊಕ್ಕಾಡಿ ಎನ್.ಅಪ್ಪಯ್ಯ ಅವರು, ಶನಿವಾರ ಬೆಳಗ್ಗೆ 10 ಗಂಟೆಗೆ ಮಡಿಕೇರಿಯ ಕೊಡಗು ಗೌಡ ಸಮಾಜದ ಸಭಾಂಗಣದಲ್ಲಿ ಸಮಾವೇಶ ನಡೆಯಲಿದ್ದು, 9.30ಕ್ಕೆ ವಧು- ವರರ ನೋಂದಣಿ ಪ್ರಕ್ರಿಯೆ ಆರಂಭಿಸಲಾಗುವುದು ಎಂದರು. ವಧು- ವರರು ಕಡ್ಡಾಯವಾಗಿ ಭಾಗವಹಿಸಬೇಕು, ವಧುವಿಗೆ 18 ಹಾಗೂ ವರನಿಗೆ 21 ವರ್ಷವಾಗಿರಬೇಕು, ಪೋಸ್ಟ್ ಕಾರ್ಡ್ ಅಳತೆಯ ಫೋಟೋ, ಜಾತಕ, ಆಧಾರ್ ಕಾರ್ಡ್, ವಿದ್ಯಾರ್ಹತೆ, ಉದ್ಯೋಗ ಮತ್ತಿತರ ಮಾಹಿತಿ ನೀಡಬೇಕು. ಈ ಸಮಾವೇಶದಲ್ಲಿ ವಿಶೇಷ ಚೇತನರು, ವಿದುರ, ವಿಧವೆಯರು, ಮರು ವಿವಾಹ ಬಯಸುವವರು, ವಿಚ್ಛೇದಿತರು ಭಾಗವಹಿಸಬಹುದು. ವಿದೇಶಗಳಲ್ಲಿ ಅಥವಾ ಹೊರ ರಾಜ್ಯಗಳಲ್ಲಿ ನೆಲೆಸಿರುವ ಜನಾಂಗದ ಬಂಧುಗಳೂ ಪಾಲ್ಗೊಳ್ಳಬಹುದು ಎಂದು ತಿಳಿಸಿದರು.

ಹೆಚ್ಚಿನ ಮಾಹಿತಿಗೆ 9448884673, 9844440266 ನ್ನು ಸಂಪರ್ಕಿಸಬಹುದಾಗಿದೆ. ಕೃಷಿಕರನ್ನು ವಿವಾಹವಾಗಿ: ಗೌಡ ಸಮುದಾಯದಲ್ಲಿ ಕೃಷಿಕ ವರನನ್ನು ವಿವಾಹವಾಗುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಕೃಷಿ ಕಾಯಕದಲ್ಲಿ ತೊಡಗಿರುವ ಯುವಕರು ವಿವಾಹದಿಂದ ವಂಚಿತರಾಗುತ್ತಿದ್ದಾರೆ. ಯುವತಿಯರು ನಗರದೆಡೆಗೆ ಆಕರ್ಷಿತರಾಗುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದ ಚೊಕ್ಕಾಡಿ ಎನ್.ಅಪ್ಪಯ್ಯ, ಕೃಷಿಕ ಯುವಕರನ್ನು ವಿವಾಹವಾಗುವಂತೆ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷ ಶೆಟ್ಟಿಜನ ಗಣಪತಿ, ಖಜಾಂಚಿ ಕುಯ್ಯಮುಡಿ ಅಶ್ವಿನಿ ಕುಮಾರ್, ಕಾರ್ಯದರ್ಶಿ ಕುಂಜಿಲನ ರತ್ನ ಕುಮಾರಿ, ಸಹ ಕಾರ್ಯದರ್ಶಿ ಕಟ್ರತನ ಲಲಿತಾ ಅಯ್ಯಣ್ಣ ಹಾಗೂ ನಿರ್ದೇಶಕ ಸೂರ್ತಲೆ ರಾಮಚಂದ್ರ ಉಪಸ್ಥಿತರಿದ್ದರು.

ಆಪ್ತ ಸಲಹಾ ಕೇಂದ್ರ ಉದ್ಘಾಟನೆ

ಉಪ್ಪಿನಂಗಡಿ: ಉದಯೋನ್ಮುಖ ಮನಃಶಾಸ್ತ್ರಜ್ಞೆ ರಾಜೇಶ್ವರಿ ಅವರ ಆಪ್ತ ಸಲಹಾ ಕೇಂದ್ರ ಉಪ್ಪಿನಂಗಡಿಯ ಧನ್ವಂತರಿ ಆಸ್ಪತ್ರೆಯಲ್ಲಿ ಬುಧವಾರ ಉದ್ಘಾಟನೆಗೊಂಡಿತು. ಉದ್ಘಾಟನೆಯನ್ನು ನೆರವೇರಿಸಿದ ಡಾ. ನಿರಂಜನ್ ರೈ ಮಾತನಾಡಿ, ದೊಡ್ಡ ದೊಡ್ಡ ನಗರಗಳಲ್ಲಿ ಬಹು ಬೇಡಿಕೆ ಇದ್ದರೂ ತನ್ನ ಹುಟ್ಟೂರಿನ ಮಂದಿಗೆ ಸೇವೆ ಸಲ್ಲಿಸಬೇಕೆಂಬ ಮನೋಭಿಲಾಷೆಯಿಂದ ಗ್ರಾಮೀಣ ಭಾಗವಾಗಿರುವ ಇಲ್ಲಿ ಆಪ್ತ ಸಲಹಾ ಕೇಂದ್ರವನ್ನು ಪ್ರಾರಂಭಿಸಿರುವ ರಾಜೇಶ್ವರಿಯವರ ನಿರ್ಧಾರ ಸ್ವಾಗರ್ತಾಹವಾಗಿದೆ. ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವಲ್ಲಿ ಇಂತಹ ಆಪ್ತ ಸಲಹಾ ಕೇಂದ್ರಗಳು ಪರಿಣಾಮಕಾರಿ ಎಂದರು. ಈ ಸಂಧರ್ಭದಲ್ಲಿ ಖ್ಯಾತ ದಂತ ವೈದ್ಯೆ ಡಾ. ಸುಪ್ರಿತಾ ಎನ್. ರೈ, ಸಾಮಾಜಿಕ ಮುಂದಾಳು ಕೈಲಾರ್ ರಾಜಗೋಪಾಲ ಭಟ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖಾ ನಿವೃತ್ತ ಅಧಿಕಾರಿ ಭಾರತಿ, ಪ್ರಗತಿಪರ ಕೃಷಿಕ ಹರಿನಾರಾಯಣ ಭಟ್ ಮತ್ತಿತರರು ಉಪಸ್ಥಿತರಿದ್ದು ಶುಭ ಹಾರೈಸಿದರು.

ಕುಕ್ಕೆ: ದೇವಳದ ಭದ್ರತಾ ಸಿಬ್ಬಂದಿಗಳಿಗೆ ಉಚಿತ ಕೊಡೆ ವಿತರಣೆ

ಸುಬ್ರಹ್ಮಣ್ಯ: ರೋಟರಿ ಕ್ಲಬ್ ಸುಬ್ರಹ್ಮಣ್ಯ ಇದರ ಪೂರ್ವಾಧ್ಯಕ್ಷ ಗೋಪಾಲ ಎಣ್ಣೆಮಜಲ್ ಅವರು ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ 50 ಭದ್ರತಾ ಸಿಬ್ಬಂದಿಗಳಿಗೆ ಮಂಗಳವಾರ ಉಚಿತವಾಗಿ ಕೊಡೆಗಳನ್ನು ವಿತರಣೆ ಮಾಡಿದರು. ರೋಟರಿ ಕ್ಲಬ್ ಅಧ್ಯಕ್ಷ ಜಯಪ್ರಕಾಶ್ ಆರ್. ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ರೋಟರಿ ಜಿಲ್ಲೆಯ ಅಸಿಸ್ಟೆಂಟ್ ಗವರ್ನರ್‌ಗಳಾದ ಅಬ್ದುಲ್ ರಜಾಕ್ ಕಭಾಕರ್, ಬಾಲಕೃಷ್ಣ ಪೈ, ವಲಯ ಸೇನಾನಿಗಳಾದ ವಿಜಯ ಕುಮಾರ್ ಅಮ್ಮೈ, ಚಂದ್ರಶೇಖರ ನಾಯರ್, ಸುಬ್ರಹ್ಮಣ್ಯ ರೋಟರಿ ಕ್ಲಬ್ ನಿಯೋಜಿತ ಅಧ್ಯಕ್ಷ ರೋಹಿತ್ ಬಿ.ಬಿ., ಕಾರ್ಯದರ್ಶಿಗಳಾದ ಭವಾನಿಶಂಕರ ಪೈಲಾಜೆ, ಪ್ರಶಾಂತ ಕೋಡಿಬೈಲ್, ಪೂರ್ವ ಎ.ಜಿ.ಗಳಾದ ಆಸ್ಕರ್ ಆನಂದ್, ರಾಮಕೃಷ್ಣ ಮಲ್ಲಾರ ಉಪಸ್ಥಿತರಿದ್ದರು.

ವಿಟ್ಲ: ಪೋಕ್ಸೊ ಕುರಿತು ಮಾಹಿತಿ ಕಾರ್ಯಾಗಾರ

ವಿಟ್ಲ: ಇಲ್ಲಿನ ವಿಟ್ಠಲ ಎಜುಕೇಶನ್ ಸೊಸೈಟಿ ಆಶ್ರಯದಲ್ಲಿ ಸಂಸ್ಥೆಯ ವಿದ್ಯಾರ್ಥಿಗಳಿಗೆ ಡ್ರಗ್ಸ್ ಜಾಗೃತಿ, ಮಹಿಳಾ ರಕ್ಷಣೆ ಮತ್ತು ಪೋಕ್ಸೊ ಕುರಿತು ಮಾಹಿತಿ ಕಾರ್ಯಾಗಾರ ಪದವಿ ಪೂರ್ವ ಕಾಲೇಜಿನ ಸುವರ್ಣ ರಂಗ ಮಂದಿರದಲ್ಲಿ ನಡೆಯಿತು.ಈ ಕಾರ್ಯಕ್ರಮದಲ್ಲಿ ದ.ಕ. ಜಿಲ್ಲೆ ಮಂಗಳೂರು ಹೆಚ್ಚುವರಿ ಪೊಲೀಸ್ ಅಧೀಕ್ಷಕ ಅನಿಲ್ ಕುಮಾರ್ ಭೂಮರೆಡ್ಡಿ ಮಾಹಿತಿ ಕಾರ್ಯಾಗಾರ ನಡೆಸಿಕೊಟ್ಟರು. ವಿಟ್ಲ ಸರ್ಕಲ್ ಇನ್ಸ್ಪೆಕ್ಟರ್ ಪ್ರಕಾಶ್ ದೇವಾಡಿಗ, ವಿಟ್ಠಲ ಎಜುಕೇಶನ್ ಸೊಸೈಟಿ ಅಧ್ಯಕ್ಷ ಮುಗುಳಿ ತಿರುಮಲೇಶ್ವರ ಭಟ್, ಸಂಚಾಲಕ ರಾಧಾಕೃಷ್ಣ ನಾಯಕ್ ಕಾರ್ಯದರ್ಶಿ ಶಂಕರನಾರಾಯಣ ಪ್ರಸಾದ್, ಪಾಂಶುಪಾಲ ಆದರ್ಶ ಚೊಕ್ಕಾಡಿ, ಉಪಪ್ರಾಂಶುಪಾಲ ಕಿರಣ್ ಕುಮಾರ್,ಸದಸ್ಯ ನಿತ್ಯಾನಂದ ನಾಯಕ್, ಸುದರ್ಶನ ಪಡಿಯಾರ್, ಉಪನ್ಯಾಸಕರು, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಕೇರಳ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ಶುಕ್ರವಾರ ಶಿವಗಿರಿ ಮಠ ಮತ್ತು ಶ್ರೀ ನಾರಾಯಣ ಗುರು ಸಮಾಧಿಗೆ ಭೇಟಿ ನೀಡಿದರು. ಈ ಸಂದರ್ಭ ಅವರನ್ನು ವಿವಿಧ ಯತಿವರ್ಯರು ಆತ್ಮೀಯವಾಗಿ ಬರಮಾಡಿಕೊಂಡರು.

ಪೆರಂಪಳ್ಳಿ ರೈಲ್ವೇ ಮೇಲ್ಸೇತುವೆ, ಕಲ್ಮಾಡಿ ಬಂಕೇರಕಟ್ಟ ಸೇತುವೆಗೆ 15 ಕೋಟಿ ರೂ. ಅನುದಾನ ಮಂಜೂರು

ಉಡುಪಿ: ಕಲ್ಮಾಡಿ ಬಂಕೇರಕಟ್ಟ ನೂತನ ಸೇತುವೆ ಹಾಗೂ ಪೆರಂಪಳ್ಳಿ ರೈಲ್ವೆ ಮೇಲ್ಸೇತುವೆ ಅಗಲೀಕರಣ ಕಾಮಗಾರಿಗೆ ಸುಮಾರು 15 ಕೋಟಿ ಅನುದಾನ ರಾಜ್ಯ ಲೋಕೋಪಯೋಗಿ ಇಲಾಖೆಯಿಂದ ಮಂಜೂರಾಗಿದೆ ಎಂದು ಉಡುಪಿ ಶಾಸಕ ಯಶ್ ಪಾಲ್ ಸುವರ್ಣ ಹೇಳಿದ್ದಾರೆ.

ಅಂಬಾಗಿಲು-ಮಣಿಪಾಲ ರಸ್ತೆಯ ವಾಹನ ದಟ್ಟಣೆಯಿಂದ ಕೂಡಿದ್ದು, ರಸ್ತೆಯು ಚತುಷ್ಪಥವಾದ ನಂತರ ಪೆರಂಪಳ್ಳಿ ರೈಲ್ವೇ ಮೇಲ್ಸೇತುವೆಯಲ್ಲಿ ವಾಹನ ಸವಾರರಿಗೆ ಹಾಗೂ ಪಾದಚಾರಿಗಳ ಸುಗಮ ಸಂಚಾರಕ್ಕೆ ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ ಅಗಲೀಕರಣ ಅತೀ ಅವಶ್ಯಕವಾಗಿತ್ತು.

ಕಲ್ಮಾಡಿ ಬಂಕೇರಕಟ್ಟ ಸೇತುವೆಯೂ ಹಳೆಯದಾಗಿದ್ದು ಪ್ರತಿ ವರ್ಷ ಮಳೆಗಾಲದಲ್ಲಿ ಕೃತಕ ನೆರೆ ಹಾಗೂ ವಾಹನಗಳ ಸಂಚಾರಕ್ಕೆ ಸಮಸ್ಯೆ ಉಂಟಾಗುತ್ತಿತ್ತು.

ಕಳೆದ ಬಾರಿ ಲೋಕೋಪಯೋಗಿ ಸಚಿವರಾದ ಸತೀಶ್ ಜಾರಕಿಹೊಳಿ ಅವರು ಉಡುಪಿ ಜಿಲ್ಲೆಗೆ ಆಗಮಿಸಿದ್ದ ಸಂದರ್ಭದಲ್ಲಿ ಸಚಿವರಿಗೂ ಮನವಿ ಸಲ್ಲಿಸಲಾಗಿತ್ತು.

ಅನುದಾನ ಮಂಜೂರು



ಈ ಹಿನ್ನಲೆಯಲ್ಲಿ ಲೋಕೋಪಯೋಗಿ ಇಲಾಖೆಯ ಮೂಲಕ ಸಲ್ಲಿಸಿದ ಪ್ರಸ್ತಾವನೆಗೆ ಪೆರಂಪಳ್ಳಿ ರೈಲ್ವೇ ಮೇಲ್ಸೇತುವೆ ಅಗಲೀಕರಣಕ್ಕೆ ರೂ. 9.95 ಕೋಟಿ ಹಾಗೂ ಕಲ್ಮಾಡಿ ಬಂಕೇರಕಟ್ಟದಲ್ಲಿ ನೂತನ ಸೇತುವೆ ನಿರ್ಮಾಣಕ್ಕೆ ರೂ. 5 ಕೋಟಿ ಅನುದಾನವನ್ನು ಲೋಕೋಪಯೋಗಿ ಇಲಾಖೆಯ ಮೂಲಕ ಮಂಜೂರುಗೊಂಡಿದ್ದು, ಶೀಘ್ರದಲ್ಲೇ ಕಾಮಗಾರಿ ಆರಂಭಗೊಳ್ಳಲಿದೆ ಎಂದು ಶಾಸಕರು ತಿಳಿಸಿದ್ದಾರೆ.

ಅನುದಾನ ಬಿಡುಗಡೆಗೆ ವಿಶೇಷ ಸಹಕಾರ ನೀಡಿದ ಮುಖ್ಯಮಂತ್ರಿಗಳು ಹಾಗೂ ಸಚಿವರಿಗೆ ವಿಶೇಷ ಧನ್ಯವಾದ ಸಲ್ಲಿಪುದಾಗಿ ಶಾಸಕ ಯಶ್ ಪಾಲ್ ಸುವರ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ‘ಉಮ್ಮತ್ತಾಟ್’ ಕೊಡವ ಸಾಕ್ಷ್ಯಚಿತ್ರ ಆಯ್ಕೆ

ಕೊಡವ ಚಿತ್ರರಂಗಕ್ಕೊಂದು ಹೆಗ್ಗಳಿಕೆಯ ಗರಿ

ಮಡಿಕೇರಿ: ಮುಂಬೈನ ಎನ್‌ಎಫ್‌ಡಿಸಿ-ಎಫ್‌ಡಿ ಕ್ಯಾಂಪಸ್‌ನಲ್ಲಿ ಜೂ.15 ರಿಂದ ಜೂ.21 ರವರೆಗೆ ನಡೆಯುವ 19ನೇ ಮುಂಬೈ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ‘ಉಮ್ಮತ್ತಾಟ್’ ಕೊಡವ ಸಾಕ್ಷ್ಯಚಿತ್ರ ಆಯ್ಕೆಯಾಗಿದೆ.

ದಕ್ಷಿಣ ಏಷ್ಯಾದ ಸಾಕ್ಷ್ಯಚಿತ್ರಗಳು, ಕಿರುಚಿತ್ರಗಳು ಮತ್ತು ಅನಿಮೇಷನ್ ಚಿತ್ರಗಳಿಗಾಗಿ ಮೀಸಲಾದ ಅತ್ಯಂತ ದೊಡ್ಡ ಚಲನಚಿತ್ರೋತ್ಸವ ಇದಾಗಿದ್ದು, ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿರುವ ಕೊಟ್ಟುಕತ್ತೀರ ಪ್ರಕಾಶ್ ಕಾರ್ಯಪ್ಪ ಹಾಗೂ ಕೊಟ್ಟುಕತ್ತೀರ ಯಶೋದಾ ಪ್ರಕಾಶ್ ದಂಪತಿಗೆ ಮುಂಬೈ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ‘ಉಮ್ಮತ್ತಾಟ್’ ಪ್ರದರ್ಶನಗೊಳ್ಳುತ್ತಿರುವುದು ಮತ್ತೊಂದು ಹೆಗ್ಗಳಿಕೆಯಾಗಿದೆ.

ಕೊಡವ ಚಿತ್ರರಂಗದ ಖ್ಯಾತಿಯನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದ ಹೆಗ್ಗಳಿಕೆಯ ರಾಷ್ಟ್ರ ಪ್ರಶಸ್ತಿ ವಿಜೇತ ನಿರ್ದೇಶಕಿ ಕೊಟ್ಟುಕತ್ತೀರ ಯಶೋದಾ ಪ್ರಕಾಶ್ ಅವರು ಸ್ವಸ್ತಿಕ್ ಎಂಟರ್‌ಟೈನ್‌ಮೆಂಟ್ ಬ್ಯಾನರ್ ಅಡಿಯಲ್ಲಿ ನಿರ್ಮಿಸಿ, ಕೊಟ್ಟುಕತ್ತೀರ ಪ್ರಕಾಶ್ ಕಾರ್ಯಪ್ಪ ಅವರು ನಿರ್ದೇಶಿಸಿರುವ ‘ಉಮ್ಮತ್ತಾಟ್’ ಕೊಡವ ಜಾನಪದ ನೃತ್ಯ ಪ್ರಕಾರದ ಮೇಲೆ ಬೆಳಕು ಚೆಲ್ಲಿದೆ.

ಹಲವು ವರ್ಷಗಳ ಇತಿಹಾಸ ಹೊಂದಿರುವ ಈ ಕಲೆಯ ಒಟ್ಟು 13 ನೃತ್ಯ ಪ್ರಕಾರಗಳನ್ನು ಚಿತ್ರೀಕರಿಸಲಾಗಿದ್ದು, 153 ಕಲಾವಿದರು ನೃತ್ಯ ಮಾಡಿದ್ದಾರೆ. ‘ಯೂ’ ಅರ್ಹತಾ ಪತ್ರ ಪಡೆದಿರುವ ‘ಉಮ್ಮತ್ತಾಟ್’ ಜನಪದದಲ್ಲಿ ಸಿಬಿಎಫ್‌ಸಿ ದಾಖಲಾತಿ ಹೊಂದಿದ ಸಾಕ್ಷ್ಯಚಿತ್ರವಾಗಿದೆ. ಮುಂಬೈ ಅಂತರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ‘ಉಮ್ಮತ್ತಾಟ್’ ಸಿನಿ ಪ್ರಿಯರನ್ನು ಆಕರ್ಷಿಸಲಿದೆ ಎಂದು ಸಾಕ್ಷ್ಯಚಿತ್ರದ ನಿರ್ದೇಶಕ ಕೊಟ್ಟುಕತ್ತೀರ ಪ್ರಕಾಶ್ ಕಾರ್ಯಪ್ಪ ಅವರು ಹರ್ಷ ವ್ಯಕ್ತಪಡಿಸಿದ್ದಾರೆ.



ಕೊಡಗು ಜಿಲ್ಲೆಯ ಮುಟ್ಲುವಿನಿಂದ ಕುಟ್ಟದವರೆಗಿನ ವಿವಿಧೆಡೆಯ ಸುಂದರ ಪ್ರದೇಶದಲ್ಲಿ ‘ಉಮ್ಮತ್ತಾಟ್’ ಸಾಕ್ಷ್ಯಚಿತ್ರ ಚಿತ್ರೀಕರಣಗೊಂಡಿದ್ದು, ಛಾಯಾಗ್ರಾಹಕ ವಿನಾಯಕ ರೇವಡಿ ಅವರ ಛಾಯಾಗ್ರಹಣ ಹಾಗೂ ಟಿ.ಮುತ್ತುರಾಜು ಅವರ ಸಂಕಲನವಿದೆ. ತಂತಿಪಾಲ, ದೇವಸ್ತೂರು, ಬಲಮುರಿ, ಕಾಕೋಟುಪರಂಬು, ನೀರುಕೊಲ್ಲಿ, ಮುಟ್ಲು, ಬಾಳೆಲೆ ಆದೆಂಗಡ ಐನ್ ಮನೆ, ಗುಯ್ಯ ಅಗಸ್ತೇಶ್ವರ ದೇವಾಲಯ, ಚೇರಂಬಾಣೆಯ ಗೋಪಾಲಕೃಷ್ಣ ದೇವಾಲಯ ಮುಂತಾದೆಡೆ ಚಿತ್ರೀಕರಿಸಲಾಗಿದೆ. ಈ ಸಾಕ್ಷ್ಯಚಿತ್ರಕ್ಕೆ ‘ಉಮ್ಮತ್ತಾಟ್’ ತರಬೇತುದಾರರಾದ ಕಲಾವಿದೆ ಬೊಳ್ಳಜಿರ ಯಮುನಾ ಅಯ್ಯಪ್ಪ ಅವರ ಸಹ ನಿರ್ದೇಶನವಿದ್ದು, ನಿರೂಪಣೆಯನ್ನು ಕೂಡಾ ಮಾಡಿದ್ದಾರೆ. ಅಲ್ಲದೆ ವಸ್ತ್ರ ವಿನ್ಯಾಸ ಮತ್ತು ನೃತ್ಯ ಪ್ರದರ್ಶನಕ್ಕೆ ಸಹಕಾರ ನೀಡಿದ್ದಾರೆ.

ರಾಜ್ಯ ಪ್ರಶಸ್ತಿ ವಿಜೇತೆ, ನೃತ್ಯ ಮತ್ತು ನೃತ್ಯ ಸಂಗೀತ ಭರತನಾಟ್ಯದ ಕುರಿತು ಮಂಡಿಸಿದ ಪ್ರಬಂಧಕ್ಕೆ ಕೇಂದ್ರ ಸರಕಾರದ ಜೂನಿಯರ್ ಫೆಲೋಶಿಪ್ ಪಡೆದಿರುವ ಅಂತಾರಾಷ್ಟ್ರೀಯ ಮಟ್ಟದ ಖ್ಯಾತ ಭರತನಾಟ್ಯ ಕಲಾವಿದೆ ಮುಕ್ಕಾಟಿರ ಶಿಲ್ಪಾ ನಂಜಪ್ಪ ಅವರು ನೃತ್ಯ ಪ್ರಕಾರಗಳನ್ನು ನಿರೂಪಣೆ ಮಾಡಿದ್ದಾರೆ.

ಹಿರಿಯ ಸಾಹಿತಿ ಬಾಚರಣಿಯಂಡ ಅಪ್ಪಣ್ಣ, ಜಾನಪದ ಕಲಾವಿದೆ ಪದ್ಮಶ್ರೀ ಐಮುಡಿಯಂಡ ರಾಣಿ ಮಾಚಯ್ಯ, ಜನಪದ ನೃತ್ಯ ಅಧ್ಯಯನ ಗ್ರಂಥ ರಚಿಸಿರುವ ಸಾಹಿತಿ ಡಾ.ರೇವತಿ ಪೂವಯ್ಯ, ಸಾಹಿತಿ ಹಾಗೂ ಕಲಾವಿದೆ ಮೊಣ್ಣಂಡ ಶೋಭಾ ಸುಬ್ಬಯ್ಯ, ‘ತಾಯಿ ಬೇರು’ ಪುಸ್ತಕದ ರಚನೆಕಾರರಾದ ಬೆಂಗಳೂರಿನ ಸ್ನೇಹ ಕಪ್ಪಣ್ಣ ಅವರುಗಳ ಸಹಕಾರ ಮತ್ತು ಸಲಹೆಯನ್ನು ಪಡೆದು ಸಾಕ್ಷ್ಯಚಿತ್ರ ‘ಉಮ್ಮತ್ತಾಟ್’ ನ್ನು ತಯಾರಿಸಲಾಗಿದೆ ಎಂದು ಕೊಟ್ಟುಕತ್ತೀರ ಯಶೋದಾ ಪ್ರಕಾಶ್ ತಿಳಿಸಿದ್ದಾರೆ.

> **ಮೊದಲ ಸಾಕ್ಷ್ಯಚಿತ್ರ**
> ಕಳೆದ ವರ್ಷ ಗೋವಾದಲ್ಲಿ ನಡೆದ 56ನೇ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡ ‘ಉಮ್ಮತ್ತಾಟ್’ ಇಂಡಿಯನ್ ಪನೋರಮಾಗೆ ಆಯ್ಕೆಯಾದ ಮೊದಲ ಕೊಡವ ಭಾಷಾ ಸಾಕ್ಷ್ಯಚಿತ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. ನಂತರ ಇದೇ ಜನವರಿಯಲ್ಲಿ 17ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಆಯ್ಕೆಯಾಗಿತ್ತು. ಇದೀಗ 19ನೇ ಮುಂಬೈ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ‘ಉಮ್ಮತ್ತಾಟ್’ ಆಯ್ಕೆಯಾಗಿರುವುದರಿಂದ ನಮ್ಮ ಜವಾಬ್ದಾರಿ ಮತ್ತಷ್ಟು ಹೆಚ್ಚಾಗಿದೆ
> ■ ಕೊಟ್ಟುಕತ್ತೀರ ಪ್ರಕಾಶ್ ಕಾರ್ಯಪ್ಪ

ಕಲಾಯ ಗುತ್ತು: ಕ್ರಾಂತಿವೀರ ಮಂಜ ಬೈದ್ಯ ಸಂಸ್ಮರಣೆ, ಪುಸ್ತಕ ಪ್ರಸ್ತುತಿ ಸಮಾರಂಭ



ಉಪ್ಪಿನಂಗಡಿ: ಬೆಳ್ತಂಗಡಿಯ ಕ್ರಾಂತಿವೀರ ಮಂಜ ಬೈದ್ಯ ಸಂಸ್ಮರಣಾ ಸಮಿತಿ ಮತ್ತು ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನದ ಆಶ್ರಯದಲ್ಲಿ 200 ವರ್ಷಗಳಷ್ಟು ಹಳೆಯ ಪ್ರಸಿದ್ಧ ಗುತ್ತಿನ ಮನೆ ಪುತ್ತಿಲದ ಕಲಾಯ ಗುತ್ತುವಿನಲ್ಲಿ ಕ್ರಾಂತಿವೀರ ಮಂಜ ಬೈದ್ಯ ಸಂಸ್ಮರಣೆ ಮತ್ತು ಪುಸ್ತಕ ಪ್ರಸ್ತುತಿ ಸಮಾರಂಭ. ಹಾಗೂ ಸಾವಿರದ ಸಾಧಕರು ಕಾರ್ಯಕ್ರಮದಲ್ಲಿ ಏಳು ಮಂದಿ ಮೌನ ಸಾಧಕರಿಗೆ ಮನೆ-ಮನದ ಸಮ್ಮಾನ ಸಮಾರಂಭ ಜರುಗಿತು.

ಕಾರ್ಯಕ್ರಮದಲ್ಲಿ ಸಂಸ್ಮರಣಾ ಸಮಿತಿಯ ಅಧ್ಯಕ್ಷ ಸಂಪತ್ ಬಿ. ಸುವರ್ಣ ಅವರು ಮಂಜ ಬೈದ್ಯರ ಹೋರಾಟ, ಬಲಿದಾನದ ತ್ಯಾಗವನ್ನು ನೆನೆದು, ಅವರ ಪ್ರತಿಮೆ ಅನಾವರಣ ಆಗಬೇಕೆಂದು ಸರ್ಕಾರಕ್ಕೆ ಮನವಿ ಮಾಡಿದರು. ಮಂಜ ಬೈದ್ಯರ ಕುರಿತಾಗಿ ಹೊರತಂದ ಪುಸ್ತಕವನ್ನು ಸಭೆಗೆ ಹಂಚಲಾಯಿತು.

ಕಾರ್ಯಕ್ರಮದಲ್ಲಿ ಸ್ಥಳೀಯ ಮೌನ ಸಾಧಕರಾದ ಬಾಲಕೃಷ್ಣ ಶೆಟ್ಟಿ ಕುಂಡಡ್ಕ (ಸಮಾಜಸೇವೆ) ವಿನೋದ ಪ್ರವೀಣ್ ಪೂಜಾರಿ ಕರ್ಲ(ನಾಟಿ ವೈದ್ಯೆ), ಶಿವಪ್ಪ ಪರವ(ದೈವ ನರ್ತಕ), ಚಿದಾನಂದ ಪೂಜಾರಿ ಕಲಾಯ(ಗುತ್ತು ಮನೆ ಯಜಮಾನ), ಸುರೇಶ್ ಪೂಜಾರಿ ಕಲಾಯ(ಅಧ್ಯಕ್ಷರು, ವಿಘ್ನೇಶ್ವರ ಭಜನಾ ಮಂಡಳಿ, ಪುತ್ತಿಲ) ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ವೇದಿಕೆಯಲ್ಲಿ ಪ್ರಮುಖರಾದ ಪ್ರಸನ್ನ ಗೌಡ, ಸಂಜೀವ ಪೂಜಾರಿ ಕಲಾಯ, ವಿಶ್ವನಾಥ್ ಪೂಜಾರಿ ಕೇರ್ಯ ಗುತ್ತು, ವಿಶ್ವನಾಥ್ ಪೂಜಾರಿ ಕಲಾಯ, ನಾಣ್ಯಪ್ಪ ಪೂಜಾರಿ ಕಲಾಯ, ಉಮೇಶ್ ಪೂಜಾರಿ ಕಲಾಯ, ಸುರೇಶ್ ಕಲಾಯ, ಪಾರ್ಶ್ವನಾಥ ಪೂಜಾರಿ ಕಲಾಯ, ಪ್ರಭಾಕರ್ ಪೂಜಾರಿ ಕಲಾಯ ಗಣೇಶ ಪೂಜಾರಿ ಬೆದ್ರಾಡಿ, ತಾಲೂಕು ಸಮಿತಿ ಸಂಚಾಲಕರಾದ ಶಶಿಧರ ಕಲ್ಮಂಜ, ಬಾಲಕೃಷ್ಣ ಶೆಟ್ಟಿ ಉಜಿರೆ, ವಿಶ್ವನಾಥ ಪೂಜಾರಿ ಮಡಂತ್ಯಾರು ಮತ್ತು ಕಲಾಯಗುತ್ತಿನ ಕುಟುಂಬದವರು ಉಪಸ್ಥಿತರಿದ್ದರು.

ವಿಕೇಶ ಮಾನ್ಯ ಸ್ವಾಗತಿಸಿದರು. ಸತೀಶ್ ಪೂಜಾರಿ ಕಲಾಯ ಗುತ್ತು ಮತ್ತು ರೋಹಿತ್ ಕಾರ್ಯಕ್ರಮ ನಿರ್ವಹಿಸಿದರು.

ಕಣಚೂರು ವೈದ್ಯಕೀಯ ಕಾಲೇಜಿನಲ್ಲಿ ಇಂದು ವಿಶೇಷ ನಿರಂತರ ವೈದ್ಯಕೀಯ ಶಿಕ್ಷಣ ಸಮ್ಮೇಳನ

ಉಳ್ಳಾಲ: ದೇರಳಕಟ್ಟೆಯ ಕಣಚೂರು ವೈದ್ಯಕೀಯ ಕಾಲೇಜಿನ ಮಕ್ಕಳ ವಿಭಾಗ ಹಾಗೂ ಚರ್ಮರೋಗ ವಿಭಾಗದ ಸಂಯುಕ್ತ ಆಶ್ರಯದಲ್ಲಿ ಮಕ್ಕಳ ಚರ್ಮರೋಗಶಾಸ್ತ್ರ ವಿಷಯದ ಕುರಿತ ವಿಶೇಷ ನಿರಂತರ ವೈದ್ಯಕೀಯ ಶಿಕ್ಷಣ ಸಮ್ಮೇಳನವನ್ನು ಜೂ. 13ರಂದು ಬೆಳಿಗ್ಗೆ 9 ಗಂಟೆಗೆ ಕಣಚೂರು ವೈದ್ಯಕೀಯ ಕಾಲೇಜಿನ ಕಾನ್ಫರೆನ್ಸ್ ಡ್ರೋಮ್ ಹಾಲ್‌ನಲ್ಲಿ ಆಯೋಜಿಸಲಾಗಿದೆ ಎಂದು ಪ್ರೊಫೆಸರ್ ಎಮೆರಿಟಸ್ ಡಾ.ಶಂಶಾದ್ .ಎ. ಖಾನ್ ತಿಳಿಸಿದ್ದಾರೆ.

ತೊಕ್ಕೊಟ್ಟುವಿನ ಉಳ್ಳಾಲ ಪ್ರೆಸ್‌ಕ್ಲಬ್‌ನಲ್ಲಿ ಬುಧವಾರ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಸಮ್ಮೇಳನದ ಉದ್ಘಾಟನಾ ಸಮಾರಂಭವು ಬೆಳಿಗ್ಗೆ 10.30ಕ್ಕೆ ನಡೆಯಲಿದ್ದು, ಕಣಚೂರು ಸಮೂಹ ಸಂಸ್ಥೆಗಳ ಅಧ್ಯಕ್ಷ ಹಾಜಿ ಯು.ಕೆ. ಮೋನು ಅವರು ಉದ್ಘಾಟನೆ ನೆರವೇರಿಸಲಿದ್ದಾರೆ. ಸಂಸ್ಥೆಯ ನಿರ್ದೇಶಕ ಅಬ್ದುಲ್ ರಹಿಮಾನ್ ಅಧ್ಯಕ್ಷತೆ ವಹಿಸಲಿದ್ದಾರೆಂದರು.

ಕಾರ್ಯಕ್ರಮದಲ್ಲಿ ಡೀನ್ ಡಾ.ಶಹನವಾಝ್ ಮಾಣಿಪ್ಪಾಡಿ, ವೈದ್ಯಕೀಯ ಅಧೀಕ್ಷಕ ಡಾ. ಅಂಜನ್ ಕುಮಾರ್, ಆರೋಗ್ಯ ವಿಜ್ಞಾನ ಸಲಹಾ ಮಂಡಳಿಯ ಅಧ್ಯಕ್ಷ ಡಾ.ಮೊಹಮ್ಮದ್ ಇಸ್ಮಾಯಿಲ್ ಹೆಜಮಾಡಿ, ಕೌನ್ಸಿಲ್ ಸದಸ್ಯ ಡಾ. ಎಂ.ವಿ.ಪ್ರಭು ಹಾಗೂ ಮುಖ್ಯ ಆಡಳಿತಾಧಿಕಾರಿ ಡಾ.ರೋಹನ್ ಎಸ್.ಮೋನಿಸ್ ಉಪಸ್ಥಿತರಿರಲಿದ್ದಾರೆ.



ಮಕ್ಕಳಲ್ಲಿ ಕಂಡುಬರುವ ಚರ್ಮ ಸಂಬಂಧಿತ ಕಾಯಿಲೆಗಳು ಒಟ್ಟು ಮಕ್ಕಳ ವೈದ್ಯಕೀಯ ಪ್ರಕರಣಗಳಲ್ಲಿ ಸುಮಾರು ಶೇ.10ರಷ್ಟಿದ್ದು, ಅದರ ತಡೆ, ರೋಗನಿರ್ಣಯ ಮತ್ತು ಚಿಕಿತ್ಸೆಯಲ್ಲಿ ವೈದ್ಯರಿಗೆ ಇತ್ತೀಚಿನ ಮಾಹಿತಿ ಹಾಗೂ ನವೀನ ಚಿಕಿತ್ಸಾ ವಿಧಾನಗಳನ್ನು ಪರಿಚಯಿಸುವ ಉದ್ದೇಶದಿಂದ ಈ ಸಮ್ಮೇಳನವನ್ನು ಆಯೋಜಿಸಲಾಗಿದೆ. ಸಮ್ಮೇಳನದಲ್ಲಿ ಮಕ್ಕಳ ಚರ್ಮರೋಗಗಳ ಇತ್ತೀಚಿನ ಚಿಕಿತ್ಸಾ ವಿಧಾನಗಳು, ರೋಗನಿರ್ಣಯ ತಂತ್ರಜ್ಞಾನಗಳು ಹಾಗೂ ವೈದ್ಯಕೀಯ ಕ್ಷೇತ್ರದಲ್ಲಿನ ಹೊಸ ಬೆಳವಣಿಗೆಗಳ ಕುರಿತು ತಜ್ಞರು ಉಪನ್ಯಾಸ ನೀಡಲಿದ್ದಾರೆ ಎಂದು ತಿಳಿಸಿದರು.

ಬೆಂಗಳೂರು ಹಾಗೂ ಮಣಿಪಾಲದ ಖ್ಯಾತ ಚರ್ಮರೋಗ ತಜ್ಞರು ಮತ್ತು ಅನುಭವಿ ವೈದ್ಯಕೀಯ ಅಧ್ಯಾಪಕರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಉಪನ್ಯಾಸ ಹಾಗೂ ಸಂವಾದಾತ್ಮಕ ಚರ್ಚೆಗಳನ್ನು ನಡೆಸಲಿದ್ದಾರೆ. ಕಾರ್ಯಕ್ರಮವನ್ನು ಮಕ್ಕಳ ವಿಭಾಗದ ಮುಖ್ಯಸ್ಥ ಡಾ. ಓನಿಯಲ್ ಫೆರ್ನಾಂಡಿಸ್ ಹಾಗೂ ಚರ್ಮರೋಗ ವಿಭಾಗದ ಮುಖ್ಯಸ್ಥೆ ಡಾ.ಶ್ರುತಕೀರ್ತಿ ಡಿ. ಶೆಣೈ ಅವರ ಮಾರ್ಗದರ್ಶನದಲ್ಲಿ ಆಯೋಜಿಸಲಾಗಿದ್ದು, ಸಹಾಯಕ ಪ್ರಾಧ್ಯಾಪಕ ಡಾ.ಚೇತನ್ ಎಸ್. ಟಂಡೆಲ್ ಸಂಘಟನಾ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಶಂಶಾದ್ ಖಾನ್ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಕ್ಕಳ ವಿಭಾಗದ ಮುಖ್ಯಸ್ಥ ಡಾ.ಓನಿಯಲ್ ಫೆರ್ನಾಂಡಿಸ್ ಹಾಗೂ ಸಹಾಯಕ ಪ್ರಾಧ್ಯಾಪಕ ಡಾ.ಚೇತನ್ ಎಸ್. ಟಂಡೆಲ್ ಉಪಸ್ಥಿತರಿದ್ದರು.

ಶ್ರೀನಿವಾಸ ವಿಶ್ವವಿದ್ಯಾಲಯಗಳಿಗೆ ಜಾಗತಿಕ ಶ್ರೇಷ್ಠತಾ ಪ್ರಶಸ್ತಿ

ಮಂಗಳೂರು: ಶ್ರೀನಿವಾಸ ವಿಶ್ವವಿದ್ಯಾಲಯಗಳಿಗೆ ಉನ್ನತ ಶಿಕ್ಷಣ ಮತ್ತು ಸಂಶೋಧನೆಯಲ್ಲಿ ಜಾಗತಿಕ ಶ್ರೇಷ್ಠತಾ ಪ್ರಶಸ್ತಿ, ಉತ್ಕೃಷ್ಟ ಕೈಗಾರಿಕಾ ಸಂಯೋಜಿತ ತಾಂತ್ರಿಕ ಶಿಕ್ಷಣಕ್ಕಾಗಿ ಶ್ರೀನಿವಾಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗೆ ಪ್ರಶಸ್ತಿ ಹಾಗೂ ಪ್ರಾಂಶುಪಾಲ ಡಾ.ಶ್ರೀನಿವಾಸ ಮಯ್ಯ ಡಿ. ಅವರಿಗೆ ದಾರ್ಶನಿಕ ಶೈಕ್ಷಣಿಕ ನಾಯಕ ಪ್ರಶಸ್ತಿ ಲಭಿಸಿದೆ ಎಂದು ಶ್ರೀನಿವಾಸ್ ವಿವಿಯ ಕುಲಾಧಿಪತಿ ಡಾ.ಎ.ಶ್ರೀನಿವಾಸ್ ರಾವ್ ತಿಳಿಸಿದರು.

ಶಿಕ್ಷಣ ಮತ್ತು ಸಂಶೋಧನೆ ಕ್ಷೇತ್ರದಲ್ಲಿ ನಿರಂತರ ಸಾಧನೆ ಮಾಡುತ್ತಿರುವ ಶ್ರೀನಿವಾಸ ವಿಶ್ವವಿದ್ಯಾಲಯ ಥೈಲ್ಯಾಂಡ್‌ನ ಬ್ಯಾಂಕಾಕ್‌ನಲ್ಲಿ ಆಯೋಜಿಸಲಾದ ಪ್ರತಿಷ್ಠಿತ ಜಾಗತಿಕ ಶಿಕ್ಷಣ ಶೃಂಗಸಭೆಯಲ್ಲಿ ಮೂರು ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದುಕೊಂಡಿದೆ ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾಹಿತಿ ನೀಡಿದರು.

ಸಮಾವೇಶದ ಅಂಗವಾಗಿ ಶ್ರೀನಿವಾಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಪ್ರಾಂಶುಪಾಲ ಡಾ. ಶ್ರೀನಿವಾಸ ಮಯ್ಯ ಡಿ. ಹಾಗೂ ತರಬೇತಿ ಮತ್ತು ನೇಮಕಾತಿ ಅಧಿಕಾರಿ ಡಾ.ಧೀರಜ್ ಹೆಬ್ರಿ ಅವರು ಥೈಲ್ಯಾಂಡ್‌ನ ಪ್ರಮುಖ ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡಿ ಅಲ್ಲಿನ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮಗಳು, ಸಿಬ್ಬಂದಿ ವಿನಿಮಯ, ಸಂಯುಕ್ತ ಸಂಶೋಧನೆ, ಜಾಗತಿಕ ಇಂಟರ್ನ್‌ಶಿಪ್‌ಗಳು, ಉದ್ಯೋಗಾವಕಾಶಗಳು, ಆಧುನಿಕ ಪ್ರಯೋಗಾಲಯಗಳು ಮತ್ತು ಅತ್ಯಾಧುನಿಕ ಶೈಕ್ಷಣಿಕ ಸೌಲಭ್ಯಗಳ ಕುರಿತು ಸಮಗ್ರ ಮಾಹಿತಿಯನ್ನು ಪಡೆದುಕೊಂಡರು. ಈ ಜಾಗತಿಕ ಸಂಪರ್ಕಗಳು ಮತ್ತು ಸಹಭಾಗಿತ್ವಗಳು ಶ್ರೀನಿವಾಸ ಸಂಸ್ಥೆಗಳ ವಿದ್ಯಾರ್ಥಿಗಳಿಗೆ ಅಂತಾರರಾಷ್ಟ್ರೀಯ ಮಟ್ಟದ ಶಿಕ್ಷಣ, ಜಾಗತಿಕ ಅನುಭವ, ಸಂಶೋಧನಾ ಅವಕಾಶಗಳು ಮತ್ತು ಉತ್ತಮ ಉದ್ಯೋಗಾವಕಾಶಗಳನ್ನು ಒದಗಿಸಲು ನೆರವಾಗಲಿವೆ ಎಂದು ತಿಳಿಸಿದರು.

ಸ್ಥಳೀಯ ವಿದ್ಯಾರ್ಥಿಗಳಿಗೆ ಜಾಗತಿಕ ಶಿಕ್ಷಣ, ಜಾಗತಿಕ ಅನುಭವ ಮತ್ತು ಜಾಗತಿಕ ಉದ್ಯೋಗಾವಕಾಶಗಳನ್ನು ತಲುಪಿಸುವುದು ಶ್ರೀನಿವಾಸ ಸಂಸ್ಥೆಗಳ ಧ್ಯೇಯವಾಗಿದ್ದು, ಬ್ಯಾಂಕಾಕ್‌ನಲ್ಲಿ ದೊರೆತ ಈ ಮೂರು ಅಂತಾರಾಷ್ಟ್ರೀಯ ಪ್ರಶಸ್ತಿಗಳು ಆ ಧ್ಯೇಯದ ಯಶಸ್ಸಿಗೆ ದೊರೆತ ಜಾಗತಿಕ ಮುದ್ರೆಯಾಗಿದೆ. ಮುಂದೆ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮದಡಿಯಲ್ಲಿ ಇಲ್ಲಿನ ವಿದ್ಯಾರ್ಥಿಗಳು ಥೈಲ್ಯಾಂಡ್‌ಗೆ ಹಾಗೂ ಅಲ್ಲಿನ ವಿವಿಗಳಿಂದ ವಿದ್ಯಾರ್ಥಿಗಳು ಶ್ರೀನಿವಾಸ್ ವಿವಿಗೆ ಆಗಮಿಸಲಿದ್ದಾರೆ ಎಂದು ತಿಳಿಸಿದರು.



ಶ್ರೀನಿವಾಸ್ ವಿವಿಯು ಟಿಸಿಎಸ್, ಮೈಕ್ರೋಸಾಫ್ಟ್, ಐಬಿಎಂ, ಗೂಗಲ್, ಇಂಟೆಲ್, ಯುಐಪಾತ್ ಮುಂತಾದ ಅನೇಕ ಬಹುರಾಷ್ಟ್ರೀಯ ಸಂಸ್ಥೆಗಳೊಂದಿಗೆ ಶೈಕ್ಷಣಿಕ ಸಹಭಾಗಿತ್ವ ಹೊಂದಿದೆ. ಕರ್ನಾಟಕದಲ್ಲೇ ಮೊದಲ ಬಾರಿಗೆ ಏರ್ ಕ್ರಾಫ್ಟ್ ಮೈಂಟನೆನ್ಸ್ ಎಂಜಿನಿಯರಿಂಗ್ ನಲ್ಲಿ ನಾಲ್ಕು ವರ್ಷದ ಬಿ.ಟೆಕ್ ಕಾರ್ಯಕ್ರಮವನ್ನು ಆರಂಭಿಸಿದೆ. ಎಥ್ನೋಟೆಕ್ ಹಾಗೂ ಎನ್‌ಎಸ್ ಡಿಸಿ ಸಹಯೋಗದಲ್ಲಿ ಸ್ಥಾಪಿತವಾದ ಸಿ.ಎ. ರಾಘವೇಂದ್ರ ರಾವ್ ಸೆಂಟರ್ ಫಾರ್ ಫ್ಯೂಚರ್ ಸ್ಕಿಲ್ ಲ್ಯಾಬ್ ವಿದ್ಯಾರ್ಥಿಗಳಿಗೆ ಜಾಗತಿಕ ಮಟ್ಟದ ಕೌಶಲ್ಯ ತರಬೇತಿಯನ್ನು ಒದಗಿಸುತ್ತಿದೆ. ಸಂಶೋಧನಾ ಕ್ಷೇತ್ರದಲ್ಲಿಯೂ ಶ್ರೀನಿವಾಸ್ ವಿಶ್ವವಿದ್ಯಾಲಯವು 593 ಕಾಪಿರೈಟ್‌ಗಳು, 28 ಪೇಟೆಂಟ್‌ಗಳು, 157ಕ್ಕೂ ಅಧಿಕ ಪೇಟೆಂಟ್ ಪ್ರಕಟಣೆಗಳು ಹಾಗೂ 2000ಕ್ಕೂ ಹೆಚ್ಚು ಅಂತರರಾಷ್ಟ್ರೀಯ ಸಂಶೋಧನಾ ಪ್ರಕಟಣೆಗಳನ್ನು ದಾಖಲಿಸಿದೆ ಎಂದು ಕುಲಪತಿ ಡಾ.ಸತ್ಯನಾರಾಯಣ ರೆಡ್ಡಿ ತಿಳಿಸಿದರು.

ಶ್ರೀನಿವಾಸ್ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ.ಅನಿಲ್ ಕುಮಾರ್, ಡಾ.ಶ್ರೀನಿವಾಸ್ ಮಯ್ಯ ಡಿ, ಅಭಿವೃದ್ಧಿ ಕುಲಸಚಿವ ಡಾ. ಅಜಯ್ ಕುಮಾರ್, ಡಾ.ಧೀರಜ್ ಹೆಬ್ರಿ ಉಪಸ್ಥಿತರಿದ್ದರು.

> ಥೈಲ್ಯಾಂಡ್‌ನ ಬ್ಯಾಂಕಾಕ್‌ನಲ್ಲಿ ಆಯೋಜಿಸಲಾದ ಪ್ರತಿಷ್ಠಿತ ಜಾಗತಿಕ ಶಿಕ್ಷಣ ಶೃಂಗಸಭೆಯಲ್ಲಿ ಮೂರು ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದುಕೊಂಡಿದೆ

ಜೂ.20ರಿಂದ ಗುಂಡ್ಮಿಯಲ್ಲಿ ಉಚಿತ ಯಕ್ಷಗಾನ ತರಬೇತಿ

ಕೋಟ: ಕಳೆದ 54 ವರ್ಷಗಳಿಂದ ಉಚಿತ ಯಕ್ಷಗಾನ ತರಬೇತಿ ತರಗತಿಯನ್ನು ನಡೆಸುತ್ತಾ ಬಂದಿರುವ ಸಂಸ್ಥೆ ಯಕ್ಷಗಾನ ಕಲಾಕೇಂದ್ರ ಹಂಗಾರಕಟ್ಟೆ-ಐರೋಡಿ. ಸಂಸ್ಥೆಯ ಈ ವರ್ಷದ ಯಕ್ಷಗಾನ ತರಬೇತಿ ತರಗತಿಯು ಜೂನ್ 20 ರಂದು ಶನಿವಾರ ಮಧ್ಯಾಹ್ನ ಗಂಟೆ 4 ಕ್ಕೆ ಉಡುಪಿ ಜಿಲ್ಲೆಯ ಸಾಲಿಗ್ರಾಮದ ಗುಂಡ್ಮಿಯಲ್ಲಿರುವ ಸದಾನಂದ ರಂಗ ಮಂಟಪದಲ್ಲಿ ಉದ್ಘಾಟನೆಗೊಳ್ಳಲಿದೆ.

ಭಾಗವತಿಗೆ, ಮದ್ದಲೆ, ಚಂಡೆ ಮತ್ತು ಹೆಜ್ಜೆ ತರಗತಿಯು ಪ್ರಾರಂಭವಾಗಲಿದ್ದು ಭಾಗವತಿಗೆಯನ್ನು ಪ್ರಾಚಾರ್ಯ ಸದಾನಂದ ಐತಾಳ, ಗಣೇಶ ಶೆಣೈ ಚಂಡೆ, ಮದ್ದಲೆಯನ್ನು ಕೇಶವ ಆಚಾರ್, ರಾಘವೇಂದ್ರ ಮಟಪಾಡಿ ಯಕ್ಷಗಾನ ಹೆಜ್ಜೆ ತರಗತಿಯನ್ನು ನೀಡಲಿದ್ದಾರೆ. ಕಲಾಕೇಂದ್ರವು ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಮಾನ್ಯತೆಯನ್ನು ಪಡೆದಿದ್ದು ವಿಶ್ವವಿದ್ಯಾನಿಲಯದ ನಿಯಮದಂತೆ ಎಕ್ಯಾಡೆಮಿಕಲ್ ಶಿಕ್ಷಣದೊಂದಿಗೆ ಒಂದು ವರ್ಷದ ಸರ್ಟಿಫಿಕೇಟ್ ಕೋರ್ಸ್ ಮತ್ತು ಎರಡು ವರ್ಷ ಶಿಕ್ಷಣದ ಡಿಪ್ಲಮೋ ಕೋರ್ಸನ ಮಾನ್ಯತೆಯ ಸರ್ಟಿಫಿಕೇಟ್ ನೀಡಲಾಗುವುದು. ಬೆಳೆಯುತ್ತಿರುವ ಯಕ್ಷಗಾನ ಕ್ಷೇತ್ರದಲ್ಲಿ ಈ ಪದವಿಗಳು ಕಲಾವಿದರಿಗೆ ಅತೀ ಅಗತ್ಯವಾಗಲಿದ್ದು ಕಲಾವಿದರ ಕಲಾ ಗುಣಮಟ್ಟ ಹೆಚ್ಚಲಿದ್ದು ಒಂದಿಗೆ ಸರಕಾರದಿಂದ ಕಲಾವಿದರಿಗೆ ನೀಡಲ್ಪಡುವ ಸವಲತ್ತುಗಳಿಗೆ ಇದು ಸಹಕಾರಿಯಾಗಲಿ ದೆಯೆಂದು ಕಲಾಕೇಂದ್ರದ ಕಾರ್ಯದರ್ಶಿ ಐರೋಡಿ ರಾಜಶೇಖರ ಹೆಬ್ಬಾರ್ ತಿಳಿಸಿದ್ದು, ಈ ಅವಕಾಶದ ಸದುಪಯೋಗ ಪಡೆಯಲು ಕೋರಲಾಗಿದೆ.

IN THE COURT OF THE SENIOR CIVIL JUDGE AND JMFC BANTWAL, D.K.
Crl. Mis. Case No.: 228/2026

Between:
Bhavani and Others ...Petitioners
AND
The Thashildar, Bantwal ...Respondent

NOTICE

Please Take Notice that in the above case the petitioners has filed the petition before this court seeking direction to the respondent to register the death of the Grand Mother of petitioners No.1,2,3,4 and 5 and the Mother of petitioner No.6 **Late PUTTAMMA.** The case is posted to **4th day of July 2026** before this court at **11.00 A.M.** Any person who has any objection may appear either in person or through advocate and file objection, otherwise the matter will be decided exparte.

Given under my hand and seal of the Court on this 11th day of June 2026.

(By order of court)
Sd/- Chief Ministerial Officer
Civil Judge & J.M.F.C. Court, Bantwal Taluk, D.K.)
Sd/- (Smt. Keshavi Girish)
Advocate for the Petitioners

ಮಾನ್ಯ ಜೆ.ಎಮ್.ಎಫ್.ಸಿ. 4ನೇ ನ್ಯಾಯಾಲಯ, ಮಂಗಳೂರು, ದ.ಕ.
Crl. MC 462/26

ಇವರೊಳಗೆ:
ಮರಿಯನ್ ಡಿಸೋಜಾ & ಇತರರು ...ಅರ್ಜಿದಾರರು
ಮತ್ತು
ರಿಜಿಸ್ಟ್ರಾರ್ ಜನನ ಮತ್ತು ಮರಣ, ಉಳ್ಳಾಲ ತಾಲೂಕು, ಮಂಗಳೂರು ...ಪ್ರತಿವಾದಿ

ಸಾರ್ವಜನಿಕ ಪ್ರಕಟಣೆ

ಮೇಲಿನ ಪ್ರಕರಣದಲ್ಲಿ ಎದ್ರಿದಾರರ ಕಾರ್ಯವ್ಯಾಪ್ತಿಗೊಳಪಟ್ಟ ಉಳ್ಳಾಲ ತಾಲೂಕಿನ ಹೊೖಗೆ, ಪೆರಮನ್ನೂರು, ಮಂಗಳೂರು-575017 ಎಂಬಲ್ಲಿ ವಾಸವಾಗಿರುವ ಚಾರ್ಲಿಸ್ ಡಿಸೋಜಾರವರ ಮಗನಾದ ದಿವಂಗತ **ಅರ್ಥರ್ ಡಿಸೋಜಾ** ದಿನಾಂಕ: 10-09-1976ರಂದು ಮೃತಪಟ್ಟಿದ್ದು ಎದ್ರಿದಾರರ ಮರಣ ನೋಂದಣಿ ವಹಿಯಲ್ಲಿ ತಡ ನೋಂದಣಿ ಮಾಡುವರೇ ವಿಳಂಬ ವಿನಾಯಿತಿ ಕೋರಿ ಅರ್ಜಿದಾರರು ಮಾನ್ಯ ನ್ಯಾಯಾಲಯದಲ್ಲಿ ಜನನ ಮರಣ ನೋಂದಣಿ ಕಾಯ್ದೆ 13(3)ರಂತೆ ಅರ್ಜಿ ಸಲ್ಲಿಸಿರುತ್ತಾರೆ,

ಈ ವಿಷಯದ ಬಗ್ಗೆ ಯಾರದ್ದಾದರೂ ಆಕ್ಷೇಪಗಳಿದ್ದಲ್ಲಿ ಮಾನ್ಯ ನ್ಯಾಯಾಲಯಕ್ಕೆ **ದಿನಾಂಕ:16-07-2026ರಂದು** ವೈಯಕ್ತಿಕವಾಗಿ ಅಥವಾ ವಕೀಲರ ಮೂಲಕ ಹಾಜರಾಗತಕ್ಕದ್ದು.

ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ತಾರೀಕು 11.06.2026 ರಂದು ಕೊಡಲಾಗಿದೆ.

(ನ್ಯಾಯಾಲಯದ ಆದೇಶದ ಮೇರೆಗೆ)
ಸಹಿ/-ಮುಖ್ಯ ಲಿಪಿಕಾಧಿಕಾರಿ
ಜೆ.ಎಮ್.ಎಫ್.ಸಿ. 4ನೇ ನ್ಯಾಯಾಲಯ, ಮಂಗಳೂರು, ದ.ಕ.
ಸಹಿ/- ಮಣಿ ಕೆ.ವಿ.
ಅರ್ಜಿದಾರರ ಪರ ವಕೀಲರು

IN THE COURT OF THE ADDL SENIOR CIVIL JUDGE & JMFC, PUTTUR (D.K.)
In Execution case No.78/2022

Between:
Syndicate Bank now by Canara Bank ...Petitioner
Vs
Sundari and others ...Respondents

To,
Respondent No.1
1. Smt Sundari
W/o Late Anni Naik
R/o Nellithadka Nellyadi Village
Now Kadaba Taluk-574229

NOTICE

Take notice that the above execution case filed relating to immoveable property bearing S.No.237/2 measuring 2.90 acres of Nellyadi village, now in Kadaba Taluk has been attached by the court and now is proposed to be sold through court for non-payment of the decretal amount in the above execution case and now is posted to 16.07.2026 regarding sale proclamation. However earlier sale notice was not served on you at your last known address and hence the Hon'ble Court had directed to issue sale notice to you through paper publication.

Therefore this is to call upon you to appear before this Hon'ble Court on **16.07.2026 at 11.00 A.M.** either in person or through your counsel. In case you fail to appear case will be proceeded exparte.

Given under my hand and seal.

(By Order of Court)
Sd/- Sheristedar
Office of Addl. Senior Civil Judge & JMFC, Puttur, D.K.
Sd/- Divakara K Nidvannaya
Advocate for Plaintiff, Puttur

IN THE COURT OF THE ADDL SENIOR CIVIL JUDGE AND JMFC, PUTTUR, D.K.
In FDP No. 5/2013

Between:-
Mr. Ananda @ Ammi Poojary ...Petitioner
Vs
Monappa Poojary and another ...Respondants

To,
Respondent No. 1
1. Akshatha
Aged 28 years
W/o Surendra Kotian
D/o. Late Monappa Poojary
No.1(c) r/o. Callitsto chs,
Flat No.904, Plot No.260,
Sector-17, ULWE,
MAHARASTRA- 410206

NOTICE

Take notice that the above Final petition case filed against you and others is posted to 24.07.2025 for your appearance. However notice was not served on you at your last known address and hence the Hon'ble Court had directed to issue notice to you through paper publication.

Therefore this is to call upon you to appear before this Hon'ble Court on **24.07.2026 at 11.00 A.M.** either in person or through your counsel. In case you fail to appear case will be proceeded exparte.

Given under my hand and seal.

(By Order of Court)
Sd/- Sheristedar
Office of Addl Senior Civil Judge & JMFC, Puttur, D.K.
Sd/- Divakara K. Nidvannaya
Advocate for Plaintiff, Puttur

ಪುತ್ತೂರು ಮಾರುಕಟ್ಟೆ ಧಾರಣೆ

12-06-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	420 - 470
ಚೋಲ್ ಅಡಿಕೆ	525 - 550
ಡಬಲ್ ಚೋಲ್	525 - 550
ಹೊಸ ಪಟೋರ	340 - 390
ಹಳೆ ಪಟೋರ	360 - 390
ಹೊಸ ಉಳ್ಳಿ	140 - 285
ಹಳೆ ಉಳ್ಳಿ	130 - 285
ಹೊಸ ಕೋಕಾ	315 - 335
ಹಳೆ ಕೋಕಾ	315 - 335
ಹೊಸ ಕರಿಗೋಟು	245 - 275
ಹಳೆ ಕರಿಗೋಟು	245 - 275
ಹಸಿ ಕೊಕ್ಕೋ	70 - 105
ಒಣ ಕೊಕ್ಕೋ	270 - 320

ಕಾಳುಮೆಣಸು ಧಾರಣೆ

ಕಾಳುಮೆಣಸು	450 - 675

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	264.50
ಆರ್‌ಎಸ್‌ಎಸ್ 2	211.00
ಸ್ಕ್ರಾಪ್ 1	152.50
ಸ್ಕ್ರಾಪ್ 2	140.00

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ – 590018, ಕರ್ನಾಟಕ

ಸಂಖ್ಯೆ: VTU/BGM/SAP/CW1/T-748/2026-27/1153 ದಿನಾಂಕ: 12–06–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಕ್ಕೆ (ದ್ವಿ–ಲಕೋಟೆ ಪದ್ಧತಿಯಲ್ಲಿ) ಇ–ಟೆಂಡರ್ ಮೂಲಕ ಮೊಹರ ಬಂದ ದರಖಾಸ್ತುಗಳನ್ನು ಅರ್ಹ ತಯಾರಕರು / ಪೂರೈಕೆದಾರರಿಂದ ಆಹ್ವಾನಿಸಲಾಗಿದೆ. ಕೆಲಸದ ಹೆಸರು: **Tender for Establishment of M. Tech Laboratory in Quantum Technologies at VTU-VRIF-TCOE Centre, VTU Regional Office, Bengaluru.** ಟೆಂಡರ್ ಪ್ರೀ ಬಿಡ್ ಮೀಟಿಂಗ್ ದಿನಾಂಕ: **17–06–2026** ರಂದು ಬೆಳಿಗ್ಗೆ **11.00** ಗಂಟೆಗೆ ಆನ್‌ಲೈನ್ ಮೂಲಕ. ಟೆಂಡರಿಗಿಟ್ಟ ಮೊತ್ತ: **ರೂ. 4,99,87,160/–,** ಮುಂಗಡ ಠೇವಣಿ ಮೊತ್ತ: **ರೂ. 7,50,000/–.** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **27–06–2026** ರಂದು ಮಧ್ಯಾಹ್ನ **2.30** ಗಂಟೆವರೆಗೆ. ಟೆಂಡರ್ ತೆರೆಯುವ ದಿನಾಂಕ: **29–06–2026** ರಂದು ಬೆಳಿಗ್ಗೆ **11.00** ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: **www.vtu.ac.in** ಮತ್ತು **www.kppp.karnataka.gov.in** ನೋಡಬಹುದು.

ಸಹಿ/–
ಕುಲಸಚಿವರು

ವಾಸಾಸಂಇ/ಬೆಳಗಾವಿ/421/ಅಡ್ವಟೋರ್/2026–27

ಕೃಷಿ ಮಾರಾಟ ಇಲಾಖೆ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ರಾಣೇಬೆನ್ನೂರು

ಕ.ಸಂ:ಕೃಮಾಇ/ಕೃಉಮಾಸ(ರಾ)/ಭ.ಸಿ–ಸ್ವಚ್ಛತೆ/434–435/2026–27 ದಿನಾಂಕ : 09–06–2026

ಪ್ರಕಟಣೆ

2026–27 ನೇ ಸಾಲಿನ ಅವಧಿಗೆ (ಕೆಲಸದ ಆದೇಶ ನೀಡಿದ ದಿನಾಂಕದಿಂದ 31–05–2027 ರವರೆಗೆ) ಈ ಸಮಿತಿಯ ಭದ್ರತಾ ವ್ಯವಸ್ಥೆಗಾಗಿ ಹಾಗೂ ಈ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣ, ತರಕಾರಿ ಮಾರುಕಟ್ಟೆ ಉಪ ಪ್ರಾಂಗಣ, ಜಾನುವಾರು ಮಾರುಕಟ್ಟೆ ಉಪ ಪ್ರಾಂಗಣ, ಹಲಗೇರಿ ಉಪ ಮಾರುಕಟ್ಟೆ ಹಾಗೂ ಹೂಲಿಹಳ್ಳಿ ಕೋನಬೇವು ಉಪ ಮಾರುಕಟ್ಟೆ ಪ್ರಾಂಗಣಗಳ ಸ್ವಚ್ಛತಾ ವ್ಯವಸ್ಥೆಗಾಗಿ ಅರ್ಹ ಅನುಭವ ಹೊಂದಿದ ಮತ್ತು ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಸಂಸ್ಥೆ / ಏಜೆನ್ಸಿಯವರಿಂದ ಚಾಲ್ತಿಯಲ್ಲಿರುವ ಮೀಸಲಾತಿ ನೀತಿಯಂತೆ ಕನಿಷ್ಠ ವೇತನ ಕಾಯ್ದೆಯನ್ವಯ ಈ ಕೆಳಗಿನ ಸೇವೆಗೆ ಪ್ರತ್ಯೇಕವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, ಮುಖಾಂತರ ದ್ವಿ–ಲಕೋಟೆ ಪದ್ಧತಿಯಂತೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರ ಸಂ.	ಕೆಲಸದ ಹೆಸರು	ಭದ್ರತಾ ಠೇವಣಿ ರೂ.
1	ಸಮಿತಿಗೆ ಅವಶ್ಯಕ ವಿರುವ ವಿವಿಧ ವರ್ಗದ 34 ಜನ ಭದ್ರತಾ ಸಿಬ್ಬಂದಿ ಪೂರೈಸುವ ಸೇವೆ Indent No: APMC/2026-27/SE0886	ರೂ. 7,00,000/–
2	ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣ, ತರಕಾರಿ ಮಾರುಕಟ್ಟೆ ಉಪ ಪ್ರಾಂಗಣ, ಜಾನುವಾರು ಮಾರುಕಟ್ಟೆ ಉಪ ಪ್ರಾಂಗಣ, ಹಲಗೇರಿ ಉಪ ಮಾರುಕಟ್ಟೆ ಹಾಗೂ ಹೂಲಿಹಳ್ಳಿ ಕೋನಬೇವು ಉಪ ಮಾರುಕಟ್ಟೆ ಪ್ರಾಂಗಣಗಳ ಸ್ವಚ್ಛತಾ ಸೇವೆಗೆ 08 ಜನ ಸ್ವಚ್ಛತಾ ಸಿಬ್ಬಂದಿ ಮತ್ತು ಒಬ್ಬ (01) ಸಫಾಯಿ ಕರ್ಮಚಾರಿ ಸೇವೆಯನ್ನು ಪೂರೈಸುವುದು ಹಾಗೂ ತ್ಯಾಜ್ಯವನ್ನು ಪ್ರಾಂಗಣದಿಂದ ಟ್ರಾಕ್ಟರ್ ಮೂಲಕ ಹೊರಗಡೆ ಸಾಗಿಸಿ ವೈಜ್ಞಾನಿಕವಾಗಿ ವಿಲೇವಾರಿ ಮಾಡುವುದು. Indent No: APMC/2026-27/SE0887	ರೂ. 3,00,000/–

ಈ–ವೆಬ್ ಸೈಟ್ https://kppp.karnataka.gov.in ಪೋರ್ಟಲ್ ನಲ್ಲಿ ಭರ್ತಿ ಮಾಡಿದ ಟೆಂಡರನ್ನು ದಿನಾಂಕ : **30–06–2026** ರ ಸಾಯಂಕಾಲ 5.30 ಗಂಟೆಯೊಳಗಾಗಿ ಸಲ್ಲಿಸುವುದು ಸಾಧ್ಯವಾದಲ್ಲಿ ದಿನಾಂಕ : **02–07–2026** ರಂದು ತಾಂತ್ರಿಕ ಬಿಡ್‌ನ್ನು ಹಾಗೂ ದಿನಾಂಕ : **04–07–2026** ರಂದು ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು. ಟೆಂಡರ್ ಷರತ್ತು–ವ–ನಿಬಂಧನೆಗಳನ್ನು ಈ–ಪೋರ್ಟಲ್ ಮೂಲಕ ಹಾಗೂ ಸಮಿತಿಯ ಕಛೇರಿ ದೂರವಾಣಿ **08373–266456** ರ ಮೂಲಕ ಪಡೆಯಬಹುದಾಗಿದೆ.

ಯಾವುದೇ ಕಾರಣವನ್ನು ನೀಡದೆ ಎಲ್ಲಾ ಟೆಂಡರ್‌ಗಳನ್ನು ಅಥವಾ ಯಾವುದೇ ಟೆಂಡರನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿದೆ.

ಸಹಿ/– (ಎಂ. ವಿ. ಶೈಲಜಾ)
ಕಾರ್ಯದರ್ಶಿ, ಕೃ.ಉ.ಮಾ.ಸ., ರಾಣೇಬೆನ್ನೂರು

ಸಹಿ/– (ಆರ್. ಎಂ. ಕುಮಾರಸ್ವಾಮಿ)
ಆಡಳಿತಾಧಿಕಾರಿಗಳು, ಕೃ.ಉ.ಮಾ.ಸ., ರಾಣೇಬೆನ್ನೂರು

ವಾಸಾಸಂಇ/ಹಾವೇರಿ/154/ಕೆಎಸ್‌ಎಂಸಿಎ/2026–27

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರರ ಕಚೇರಿ, ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ, ಕೆ.ಸಿ.ಡಿ. ವೃತ್ತ, ಗಣಪತಿ ದೇವಸ್ಥಾನದ ಹಿಂದುಗಡೆ, ದಾಸನಕೊಪ್ಪ ಮುಖ್ಯ ರಸ್ತೆ , ಧಾರವಾಡ–580008.
E-mail id: eesliddwd@gmail.com Ph No. 0836-2461218

No. KNNL/SLID/DWD/PB-2/Tender/2026-27/213 Date: 11-06-2026

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಉಲ್ಲೇಖ: 1) ಈ ಕಚೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: 900 ದಿನಾಂಕ: 28.01.2026 (First call)
2) ಈ ಕಚೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: 97, ದಿನಾಂಕ: 08.05.2026 (Second Call)

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ, ಶಿಗ್ಗಾಂವ ಏತ ನೀರಾವರಿ ವಿಭಾಗ ಧಾರವಾಡ ರವರು, ಅರ್ಹ ಸಿವಿಲ್ ನೋಂದಾಯಿತ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯ ಮುಖಾಂತರ ಈ ಕೆಳಗೆ ನಮೂದಿಸಿದ ಕಾಮಗಾರಿಗಳಿಗೆ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಲಾಗಿದೆ.

Sl. No.	Name of Work	Tender Amount (Rs. in Lakhs)	
1	"Improvement and Development of Belavalkoppa Tank in Belavalkoppa village of Shiggaon Taluk of Haveri district".	252.00	3rd Call
2	"Improvement and Development of Nala from Mouneshwara Temple in Hulagur village to Madapura Tank in Shiggaon Taluk Haveri District."	417.68	3rd Call
3	"Improvement And Development Of Gaddihalla And Construction Of CD Across Nala Near Hiremalluru Village, Shiggaon Taluk Of Haveri District"	420.08	1st Call
4	"Improvement And Development Of Gaddihalla From Hiremallur Village To Chikkamalluru Village And Construction Of CD Across Nala In Shiggaon Taluk Of Haveri District"	419.97	1st Call
5	"Improvement And Development Of Belagatti Tank, Construction Of Causeway Across Yerikere Nala Crossing At Halebankapur To Bommanahalli Road Construction Of Check Dam And Improvement Of Gaddihalla In Shiggaon And Savanur Taluk Of Haveri Disctrict"	355.88	1st Call
6	"Improvement And Development Of Nala From Veeraktha Matha To Hadi Matha And Construction Of Box Culvert Across Nala In Bommanahalli Village, Shiggaon Taluk Of Haveri District"	418.63	1st Call
7	"Improvement And Development Of Hiremanakatti, Belagali, Hungund, Kursapur And Madhapur Tanks In Shiggaon Taluk Of Haveri District".	419.09	1st Call

ಸದರಿ ಟೆಂಡರ್ ದಾಖಲೆಗಳನ್ನು ಇ–ಪ್ರೋಕ್ಯೂರ್‌ಮೆಂಟ್‌ನ ವೆಬ್‌ಸೈಟ್ (http://kppp.karnataka.gov.in) ಮುಖಾಂತರವೇ **ದಿನಾಂಕ: 18.06.2026 ಬೆಳಿಗ್ಗೆ 11.00** ರಿಂದ ಡೌನಲೋಡ್ ಮಾಡಿಕೊಂಡು **ದಿನಾಂಕ: 17.07.2026ರ ಸಂಜೆ 4.00 ಗಂಟೆಯವರೆಗೆ** ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ಪೂರ್ವಭಾವಿ ಸಭೆಯನ್ನು **ದಿನಾಂಕ 24.06..2026 ರಂದು ಬೆಳಿಗ್ಗೆ 11.00 ರಿಂದ 1.00 ಗಂಟೆಯವರೆಗೆ** ಕಾರ್ಯನಿರ್ವಾಹಕ ಇಂಜನೀಯರರು, ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ ಧಾರವಾಡ ಇವರ ಕಚೇರಿಯಲ್ಲಿ ಜರುಗಿಸಲಾಗುವುದು. ತಾಂತ್ರಿಕ ಟೆಂಡರ್‌ಗಳನ್ನು **ದಿನಾಂಕ: 18.07.2026 ರಂದು ಸಂಜೆ 4.30 ಗಂಟೆಗೆ** ಹಾಗೂ ಆರ್ಥಿಕ ಟೆಂಡರ್‌ಗಳನ್ನು **ದಿನಾಂಕ: 22.07.2026 ರಂದು ಬೆಳಿಗ್ಗೆ 11.00 ಗಂಟೆಗೆ** ಅಥವಾ ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು.

ಟೆಂಡರ್‌ನಲ್ಲಿ ಯಾವುದೇ ಬದಲಾವಣೆ/ತಿದ್ದುಪಡಿಗಳು ಇದ್ದಲ್ಲಿ ವಿದ್ಯುನ್ಮಾನ ಸಂಗ್ರಹಣೆ (KPP portal) ವೇದಿಕೆಯಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

ಸಹಿ/–
(ಮಂಜುನಾಥ ಬಿ.)
ಕಾರ್ಯಪಾಲಕ ಇಂಜಿನೀಯರ್,
ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ, ಧಾರವಾಡ.

ವಾ.ಸಾ.ಇ./ಧಾರವಾಡ/300/2026–27/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನಿಯರ್‌ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

ಅಲ್ಪಾವಧಿ ಟೆಂಡರ್ ಪ್ರಕಟಣೆ – ಕೆ.ಪಿ.ಪಿ. ಪೋರ್ಟಲ್ ಮುಖಾಂತರ

ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂ: ಕಾಸಮಂ/ತಾ.ಶಾ./ಸ.ಇ./ಟೆಂಡರ್–08 /2026/1639 ದಿ: 10.06.2026

ಉಲ್ಲೇಖಿತ ಪ್ರಕಟಣೆಯನ್ವಯ ಆಹ್ವಾನಿಸಲಾದಂತೆ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಕಾಮಗಾರಿಗಳಿಗೆ ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮದನ್ವಯ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲ್ಯೂನಲ್ಲಿರುವ ಕಲಂನನ್ವಯ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟಂತೆ ಐಟಂವಾರು ಟೆಂಡರ್‌ಗಳನ್ನು, ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್ಮೆಂಟ್ ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ https://kppp.karnataka.gov.in ನಲ್ಲಿ ಅರ್ಹ ಗುತ್ತಿಗೆದಾರರಿಂದ ಕ್ರಸಂ 1ರ ಕಾಮಗಾರಿಯ ಟೆಂಡರ್‌ನ್ನು ದಿ: 23.06.2026ರ ಸಂಜೆ 4.00 ಗಂಟೆಯವರೆಗೆ ಹಾಗೂ ಕ್ರಸಂ 2ರ ಹಾಗೂ ಕ್ರಸಂ 3ರ ಕಾಮಗಾರಿಗಳ ಟೆಂಡರ್‌ಗಳನ್ನು ದಿ: 19.06.2026ರ ಸಂಜೆ 4.00 ಗಂಟೆಯವರೆಗೆ ಸ್ವೀಕರಿಸಲಾಗುವುದು. ಟೆಂಡರ್‌ದಾರರು ಕರ್ನಾಟಕ ಸರಕಾರದ ಕೆ.ಪಿ.ಪಿ. ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ ಮುಖಾಂತರ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಪಡೆಯಬಹುದಾಗಿದೆ. (Download) ಹೆಚ್ಚಿನ ವಿವರವನ್ನು ಕಛೇರಿ ಸಮಯದಲ್ಲಿ ಪಡೆಯಬಹುದು. (ದೂರವಾಣಿ ಸಂ: 0824–2440720)

ಸಹಿ/– ಕಾರ್ಯನಿರ್ವಾಹಕ ಇಂಜನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

DIPR/DK/KSMCA/357/26-27 dt. 12.06.2026

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜನೀಯರವರ ಕಚೇರಿ, ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ, ಕೆ.ಸಿ.ಡಿ. ವೃತ್ತ , ಗಣಪತಿ ದೇವಸ್ಥಾನದ ಹಿಂದುಗಡೆ, ದಾಸನಕೊಪ್ಪ ಮುಖ್ಯ ರಸ್ತೆ , ಧಾರವಾಡ–580 001.
E-mail id: eesliddwd@gmail.com Ph No. 0836-2955347

No.KNNL/SLID/DWD/PB-1/Shiggaon-Additional/ Tender/2026-27/215 Dt:11-06-2026

ಅಲ್ಪಾವಧಿ ಟೆಂಡರ್ ಪ್ರಕಟಣೆ (4 ನೇ ಕರೆ)
(ಕೆ.ಪಿ.ಪಿ.ಪೋರ್ಟಲ್ ಮುಖಾಂತರ ಮಾತ್ರ)

ಉಲ್ಲೇಖ : **1. KNNL/SLID/DWD/PB-1/Savanur Additional/ Tender/2025-26/884, Dated: 21-01-2026**
2. KNNL/SLID/DWD/PB-1/Shiggaon-Additional/Tender/ 2025-26/968 , Dated:16-02-2026
3. KNNL/SLID/DWD/PB-1/Shiggaon-Additional/Tender/ 2026-27/45 , Dated:18-04-2026

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜನಿಯರ್, ಕ.ನೀ.ನಿ.ನಿ, ಶಿಗ್ಗಾಂವ ಏತ ನೀರಾವರಿ ವಿಭಾಗ ಧಾರವಾಡ ರವರು, ಅರ್ಹ ಸಿವಿಲ್ ನೋಂದಾಯಿತ ಗುತ್ತಿಗೆದಾರರಿಂದ

" Filling up of Additional 26 Tanks under Shiggaon Lift Irrigation Scheme"(Extension of Hotanhalli and Chandapura Tank Filling Scheme) (i) Package–1 : Pumping Machinery and Construction of Sump Cum Pump House and Construction of substation & Construction of tapping point and erection of 11kV SC Line and O & M for 5 years (Amount put to tender Rs.349.86 Lakhs) (ii) Package–2 : Construction of Rising main for a length of 7.760 Km of HDPE Pipe for extension of Hothanahalli tank filling scheme and O & M for 5 years (Amount put to tender Rs.413.25 Lakhs) (iii) Package–3 : Construction of Bleeder 1,2,3,4,5,6,7 & 8 Distribution of HDPE and Construction of Gravity Distribution Network of Chandapura Tank Filling Scheme and O & M for 5 years (Amount put to tender Rs.420.70 Lakhs).

ಒಟ್ಟು 3 ಸಂಖ್ಯೆಯ ಕಾಮಗಾರಿಗಳಿಗೆ ಟರ್ನಕೀ ಆಧಾರದ ಮೇಲೆ ದ್ವಿ–ಲಕೋಟೆ ಪದ್ಧತಿಯ ಮುಖಾಂತರ ಕೆ.ಪಿ.ಪಿ.–ಪೋರ್ಟಲ್‌ನಲ್ಲಿ ಪ್ರತ್ಯೇಕವಾಗಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆಗಳನ್ನು ಕೆ.ಪಿ.ಪಿ.–ಪೋರ್ಟಲ್ ವೆಬ್‌ಸೈಟ್ (http://kppp.karnataka.gov.in) ಮುಖಾಂತರವೇ ದಿನಾಂಕ: **17–06–2026** ಬೆಳಿಗ್ಗೆ **11.00** ರಿಂದ ಡೌನಲೋಡ್ ಮಾಡಿಕೊಂಡು ದಿನಾಂಕ: **29–06–2026** ರ ಸಂಜೆ **4.00** ಗಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ಪೂರ್ವಭಾವಿ ಸಭೆಯನ್ನು ದಿನಾಂಕ: **20–06–2026** ರಂದು ಬೆಳಿಗ್ಗೆ **11.00** ರಿಂದ **1.00** ಗಂಟೆಯವರೆಗೆ ಕಾರ್ಯನಿರ್ವಾಹಕ ಇಂಜನೀಯರರು, ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ ಧಾರವಾಡ ಇವರ ಕಚೇರಿಯಲ್ಲಿ ಜರುಗಿಸಲಾಗುವುದು. ತಾಂತ್ರಿಕ ಟೆಂಡರ್‌ಗಳನ್ನು, ದಿನಾಂಕ: **30–06–2026** ರಂದು ಸಂಜೆ **4.30** ಗಂಟೆಗೆ ಹಾಗೂ ಆರ್ಥಿಕ ಟೆಂಡರ್‌ಗಳನ್ನು, ದಿನಾಂಕ: **04–07–2026** ರಂದು ಬೆಳಿಗ್ಗೆ **11.00** ಗಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು.

ಟೆಂಡರ್‌ನಲ್ಲಿ ಯಾವುದೇ ಬದಲಾವಣೆ/ತಿದ್ದುಪಡಿಗಳು ಇದ್ದಲ್ಲಿ ವಿದ್ಯುನ್ಮಾನ ಸಂಗ್ರಹಣೆ (KPP-portal) ವೇದಿಕೆಯಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

ಸಹಿ/– (ಮಂಜುನಾಥ. ಬಿ)
ಕಾರ್ಯಪಾಲಕ ಇಂಜನೀಯರರು
ಕನೀನಿನಿ ಶಿಗ್ಗಾಂವ ಏತ ನೀರಾವರಿ ವಿಭಾಗ, ಧಾರವಾಡ.

ಡಿಐಪಿಆರ್/ಧಾರವಾಡ/303/ಮಣಿಪಾಲ್/2026–27

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜನೀಯರವರ ಕಛೇರಿ ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ, ಕೆ.ಸಿ.ಡಿ. ವೃತ್ತ, ಗಣಪತಿ ದೇವಸ್ಥಾನದ ಹಿಂದುಗಡೆ, ದಾಸನಕೊಪ್ಪ ಮುಖ್ಯ ರಸ್ತೆ, ಧಾರವಾಡ–580 001. ಫೋನ: 0836–2955347
ಇ–ಮೇಲ್: eesliddwd@gmail.com

No.EE/KNNL/SLID/DWD/PB-1/O&M-Manpower/Tender/2026-27/211 Date : 11/06/2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜನೀಯರ್, ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ ಧಾರವಾಡ ರವರು, "Operation and Maintenance of Micro Irrigation system for 9900Ha command Area Comes under Shiggaon Lift Irrigation System includes intake canal,Jackwell/pumphouse,M. S Raising Main pipeline, Delivery Chambers,110/6.6 Kv Substation,and Micropipeline with HDPE/ PVC pipe line network, Discharge control valve, Air valve, Panel cum Store rooms, 119 No's Sumps , 110/33 kV (1No) and 33/11 kV (2 No's) Electrical sub-stations, electrical distribution network . Diversion weir and Gates , DG Room for one year (From 2026-27 to 2027-28)" ಕಾಮಗಾರಿಗೆ (ಟೆಂಡರಗಿಟ್ಟ ಮೊತ್ತ ರೂ. **279.93** ಲಕ್ಷಗಳು) ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿ ಮುಖಾಂತರ ನಿರ್ವಹಿಸಲು ಶೇಕಡಾವಾರು ಟೆಂಡರ್‌ನ್ನು ಕೆ.ಪಿ.ಪಿ–ಪೋರ್ಟಲ್‌ನಲ್ಲಿ ಆಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರು ಟೆಂಡರ್ ದಾಖಲೆಗಳನ್ನು ಕೆ.ಪಿ.ಪಿ.–ಪೋರ್ಟಲ್‌ನ ವೆಬ್‌ಸೈಟ್ (http://kppp.karnataka.gov.in) ಮುಖಾಂತರವೇ ದಿನಾಂಕ : **17/06/2026** ಬೆಳಿಗ್ಗೆ 11.00 ರಿಂದ ಡೌನಲೋಡ್ ಮಾಡಿಕೊಂಡು ದಿನಾಂಕ: **29/06/2026** ರ ಸಂಜೆ 4.00 ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. Pre-bid ಸಭೆಯನ್ನು ದಿನಾಂಕ : **20/06/2026** ರಂದು ಬೆಳಿಗ್ಗೆ 11.00 ಘಂಟೆಯಿಂದ ಮಧ್ಯಾಹ್ನ 1.00 ಘಂಟೆವರೆಗೆ ಕಾರ್ಯಪಾಲಕ ಇಂಜನೀಯರರು, ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ, ಧಾರವಾಡ ಇವರ ಕಚೇರಿಯಲ್ಲಿ ಜರುಗಿಸಲಾಗುವುದು. ತಾಂತ್ರಿಕ ಅರ್ಹತೆಯ ಟೆಂಡರ್ ತೆರೆಯುವ ದಿನಾಂಕ : **30/06/2026** ರಂದು ಸಂಜೆ 4.30 ಘಂಟೆಗೆ ಹಾಗೂ ಆರ್ಥಿಕ ಟೆಂಡರ್‌ಗಳನ್ನು ದಿನಾಂಕ : **04/07/2026** ರಂದು ಬೆಳಿಗ್ಗೆ 11.00 ಘಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಟೆಂಡರನಲ್ಲಿ ಯಾವುದೇ ಬದಲಾವಣೆ/ತಿದ್ದುಪಡಿಗಳು ಇದ್ದಲ್ಲಿ ವಿದ್ಯುನ್ಮಾನ ಸಂಗ್ರಹಣೆ (KPP-portal) ವೇದಿಕೆಯಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗೀಕರಿಸುವ, ಮಾರ್ಪಡಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

ಸಹಿ/– (ಮಂಜುನಾಥ.ಬಿ.) ಕಾರ್ಯಪಾಲಕ ಇಂಜನಿಯರ್,
ಕನೀನಿನಿ ಶಿಗ್ಗಾಂವ ಏತ ನೀರಾವರಿ ವಿಭಾಗ, ಧಾರವಾಡ

ವಾಸಾಸಂಇ/ಧಾ/299/ಕೆಎಸ್‌ಎಂಸಿಎ/2026–27

ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಉರ್ವಾಸ್ಟೋರ್ಸ್, ಅಶೋಕನಗರ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ

ಸಂಖ್ಯೆ: ಮನಪ್ರಾ: ತಾಂತ್ರಿಕ : ಜೆಇ(71) : 2026–27 ದಿನಾಂಕ: 12–06–2026

ಟೆಂಡರು ಪ್ರಕಟಣೆ (2ನೇ ಕರೆ)

ಈ ಕೆಳಗೆ ತಿಳಿಸಿದ ಕಾಮಗಾರಿಗೆ ಸಂಬಂಧಿಸಿದಂತೆ ಇ–ಟೆಂಡರನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಪಿಪಿ ಪೋರ್ಟಲ್ ಅಂತರ್‌ಜಾಲದ ವೆಬ್‌ಸೈಟ್ http://kppp.karnataka.gov.in ನಲ್ಲಿ ಆಯುಕ್ತರು, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು ಇವರು ಅರ್ಹ ಗುತ್ತಿಗೆದಾರರಿಂದ Standard Tender Document KW-1 & KC ರ ಪ್ರಕಾರ ಆಹ್ವಾನಿಸಲಾಗಿರುತ್ತದೆ. ಟೆಂಡರುದಾರರು ಟೆಂಡರ್ ನಿಯಮಾವಳಿಯಂತೆ ಕನಿಷ್ಠ ಅರ್ಹತೆಯನ್ನು ಪಡೆದಿರಬೇಕು ಎಂಬುದನ್ನು ಗಮನಿಸಲು ಸೂಚಿಸಲಾಗಿದೆ. ಟೆಂಡರುದಾರರು ಕರ್ನಾಟಕ ಸರಕಾರದ ಕೆಪಿಪಿ ಪೋರ್ಟಲ್ ಅಂತರ್‌ಜಾಲದ ಮುಖಾಂತರ ಟೆಂಡರು ಡಾಕ್ಯುಮೆಂಟ್‌ಗಳನ್ನು ಪಡೆಯಬಹುದಾಗಿರುತ್ತದೆ. ಟೆಂಡರುದಾರರು ಈ ಕೆಳಗೆ ನೀಡಲಾದ ವಿವರದಂತೆ ಕಾಮಗಾರಿಗೆ ನಿಗದಿಪಡಿಸಿದ ಇ.ಎಂ.ಡಿ. ಯನ್ನು ಕೆಪಿಪಿ ಪೋರ್ಟಲ್‌ನಲ್ಲಿ ಸೂಚಿಸಿರುವಂತೆ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸಬೇಕಾಗಿರುತ್ತದೆ. ಇಂಡೆಟ್ ಸಂಖ್ಯೆ 114/CALL-2 ಕಾಮಗಾರಿ ಹಾಗೂ 2026–27 ಸಾಲಿಗೆ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ವಿಭಾಗಕ್ಕೆ ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿಗಳನ್ನು ಒದಗಿಸುವುದಕ್ಕೆ SE0011/CALL-2ರ ಸರ್ವಿಸ್‌ಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 29–06–2026 ಅಪರಾಹ್ನ 4.00 ಗಂಟೆ (16–00 ಗಂಟೆ) ಒಳಗೆ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಕ್ಯಾಲೆಂಡರ್ ಅನ್ನು ಮುಂದೂಡುವುದು (ಯಾವುದಾದರೂ ಇದ್ದರೆ) ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಅಧಿಸೂಚಿಸಲಗುವುದು ಮತ್ತು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/– ಆಯುಕ್ತರು,
ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು

DIPR/DK/KSMCA/366/26-27 dt. 12.06.2026

ಮಾಲೂರು ನಗರ ಯೋಜನಾ ಪ್ರಾಧಿಕಾರ
ಮಾಲೂರು, ಮಾರುತಿ ಬಡಾವಣೆ 2ನೇ ಹಂತ, ಮಾಡ್ರನ್ ಶಾಲೆ ಹತ್ತಿರ, ತಿರುಮಲ ಕಲ್ಯಾಣ ಮಂಟಪ ರಸ್ತೆ, ಮಾಲೂರು–563 130, ಕೋಲಾರ ಜಿಲ್ಲೆ, ಕಛೇರಿ ದೂರವಾಣಿ ಸಂಖ್ಯೆ: 08151–299920,
Web Site: www.malur.tpa.gov.in,
Email: ms.malur.planning.authority@gmail.com

ಸಂಖ್ಯೆ: ಮಾಯೋಪ್ರಾ/ಭೂ.ಬ/2026–27/ ದಿನಾಂಕ:10.06.2026

ತಿದ್ದುಪಡಿ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಮಾಲೂರು ತಾಲ್ಲೂಕು ಕಸಬಾ ಹೋಬಳಿ, ತೊರ್ನಹಳ್ಳಿ ಗ್ರಾಮದ ಸ.ನಂ. 134/3, 134/2, 285/3, 285/1, 277/1, 277/2, 277/3, 277/4, 278/1, 278/2 ಹಾಗೂ ಇತರೆ ಜಮೀನುಗಳನ್ನು "ಕೃಷಿ" ವಲಯದಿಂದ "ವಾಣಿಜ್ಯ" ವಲಯಕ್ಕೆ ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಿ, ದಿನಾಂಕ: 30.05.2026 ರಂದು ನೀಡಲಾಗಿರುವ ಪತ್ರಿಕಾ ಪ್ರಕಣೆಯಲ್ಲಿ "ಸದರಿ ಪ್ರದೇಶವನ್ನು ವಸತಿ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು" ಎಂದು ಕೈ ತಪ್ಪಿನಿಂದ ನಮೂದಾಗಿದ್ದು, "ವಸತಿ" ಎನ್ನುವುದರ ಬದಲು ಹಿಂದಿನ ಪ್ರಕಟಣೆಯಲ್ಲಿ ಮೇಲೆ ನಮೂದಿಸಿರುವಂತೆ "ಕೃಷಿ" ಎಂದು ಓದಿಕೊಳ್ಳುವುದು, "ಸದರಿ ಪ್ರದೇಶವನ್ನು ಕೃಷಿ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು" ಎಂದು ತಿದ್ದುಪಡಿ ಮಾಡಿ ನಮೂದಿಸುತ್ತಾ ಈ ವಿಷಯಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಮಾಲೂರು ಯೋಜನಾ ಪ್ರಾಧಿಕಾರ, ಮಾಲೂರು ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಸಹಿ/– ಸದಸ್ಯ ಕಾರ್ಯದರ್ಶಿ
ಮಾಲೂರು ಯೋಜನಾ ಪ್ರಾಧಿಕಾರ ಮಾಲೂರು

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:113/ಕೆಎಸ್‌ಎಂಸಿಎ/2026–27

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸುವರ್ಣ ಕೇರಳಂ (ನಂ.SK-56) ಡ್ರಾ ಜೂನ್ 12ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
RW 195668 (ERNAKULAM)

Consolation Prize Rs.5,000/-
RN 195668 RO 195668 RP 195668 RR 195668
RS 195668 RT 195668 RU 195668 RV 195668
RX 195668 RY 195668 RZ 195668

2nd Prize Rs.30,00,000/- [30 Lakhs]
RX 213640 (KOTTAYAM)

3rd Prize Rs.5,00,000/- [5 Lakhs]
RU 421712 (WAYANADU)

FOR THE TICKETS ENDING WITH THE FOLLOWING NUMBERS

4th Prize Rs.5,000/-
1395 1637 1898 2140 2539 3080 3507 5444 5494 5513 5567 5802 7123 8517 8565 8574 9262 9748 9826

5th Prize Rs.2,000/-
0392 4224 4591 4635 5110 6957

6th Prize Rs.1,000/-
0024 0190 0721 1913 2740 2907 2951 3216 3796 4101 4238 5954 5981 6449 6627 7441 7728 7854 7928 8823 9160 9851 9900 9966 9978

7th Prize Rs.500/-
0101 0366 0517 0639 0929 0959 0974 1048 1119 1486 1618 1713 1735 2128 2133 2192 2196 2465 2498 2551 2628 2636 2924 3224 3330 3506 4229 4248 4307 4349 4538 4632 4653 4916 4974 5158 5186 5324 5655 5668 5785 5814 5824 5875 6020 6130 6424 6456 6598 6645 6795 6926 7020 7229 7577 7657 8304 8442 8505 8546 8601 8717 8783 8854 8899 8949 9282 9338 9422 9467 9596 9676 9696 9704 9800 9971

8th Prize Rs.200/-
0040 0097 0114 0178 0217 0411 0439 0555 0580 0875 1109 1146 1368 1447 1480 1602 1788 2151 2314 2534 2567 2687 2777 2782 2890 2962 3183 3297 3390 3398 3471 3667 3874 3910 3966 4106 4279 4548 4666 4735 4990 5046 5191 5300 5456 5701 5743 5756 5790 5799 6027 6060 6121 6137 6300 6397 6539 6617 6788 6841 6854 7041 7300 7346 7369 7460 7579 7688 7813 8021 8022 8157 8171 8383 8414 8459 8518 8564 8598 8725 8726 9062 9064 9109 9214 9324 9362 9513 9604 9697 9913 9942

9th Prize Rs.100/-
0025 0038 0071 0183 0212 0464 0482 0529 0633 0781 0784 0809 0837 0840 0918 0935 0952 0988 1031 1043 1090 1203 1246 1444 1496 1529 1554 1724 1796 1888 1955 2101 2163 2211 2235 2370 2425 2643 2721 2949 3110 3119 3143 3253 3291 3379 3420 3464 3531 3567 3585 3604 3687 3778 3861 4072 4133 4257 4305 4425 4431 4456 4481 4496 4713 4741 4773 4815 4917 5028 5073 5226 5255 5302 5323 5400 5429 5534 5540 5591 5623 5837 5849 5889 6167 6220 6406 6409 6431 6508 6570 6672 6691 6706 6738 6933 7003 7024 7034 7090 7120 7204 7259 7319 7485 7531 7536 7555 7680 7729 7805 7809 7831 7852 7960 8042 8142 8163 8192 8242 8273 8560 8593 8689 8701 8739 8785 8959 8970 8983 9179 9215 9342 9354 9395 9407 9498 9586 9790 9821 9832 9950 9959 9976

ಮಾದಕ ದ್ರವ್ಯ ಮಾರಾಟ : ಆರು ಮಂದಿಯ ಬಂಧನ

ಮಂಗಳೂರು: ಮಂಗಳೂರು ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯ ವಿವಿಧ ಕಡೆ ಮಾದಕ ಮಾರಾಟ ಮತ್ತು ಸೇವನೆ ಮಾಡಿದ ಆರೋಪದಲ್ಲಿ ಒಟ್ಟು 6 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ನಗರದ ಬಲ್ಲಾಳ್‌ಬಾಗ್ ಶ್ರೀದೇವಿ ಕಾಲೇಜು ರಸ್ತೆ ಬಳಿ ಮಾದಕ ಸೇವನೆ ಆರೋಪದ ಮೇಲೆ ಮೂವರನ್ನು ಬರ್ಕೆ ಪೊಲೀಸರು ಬಂಧಿಸಿದ್ದಾರೆ. ಕೇರಳ ಎರ್ನಾಕುಳ ನಿವಾಸಿ ಅಮಲ್ ಥಾಮಸ್ (23), ಕಣ್ಣೂರು ಮುಠಿಯಂಗ ನಿವಾಸಿ ಇಸ್ರತುಲ್ ಇಬಾದ್ (21), ಎರ್ನಾಕುಳಂ ಸಿರಿಯನ್ ಚರ್ಚ್ ರಸ್ತೆ ನಿವಾಸಿ ಮಾರ್ಟಿನ್ ಸ್ಟೀವಿನ್ ಪೈವಾ (20) ಪ್ರಕರಣದ ಆರೋಪಿಗಳು. ಆರೋಪಿಗಳನ್ನು ಖಾಸಗಿ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆ ನಡೆಸಿದಾಗ ಮಾದಕ ಸೇವನೆ ಮಾಡಿರುವುದು ದೃಢಪಟ್ಟಿದೆ.

ನಗರದ ಕೋರ್ಟ್‌ಗೆ ಹೋಗುವ ರಸ್ತೆ ಬದಿಯಲ್ಲಿ ಮಾದಕ ವಸ್ತು ಎಂಡಿಎಂಎ ಮಾರಾಟ ಮಾಡುತ್ತಿದ್ದ ಆರೋಪದ ಮೇಲೆ ಎಫ್. ಸೈಫುಲ್ ಫರಾರುಖ್ (26) ಎಂಬಾತನನ್ನು ಬಂಧಿಸಲಾಗಿದೆ. ಜೂ.11ರಂದು ಮಧ್ಯಾಹ್ನ 1.30ರ ವೇಳೆಗೆ ಆರೋಪಿಗಳು ಸಾರ್ವಜನಿಕರ ಎಂಡಿಎಂಎ ಮಾರಾಟ ಮಾಡಲು ಗಿರಾಕಿಗಳನ್ನು ಕಾಯುತ್ತಿದ್ದ. ಈ ಬಗ್ಗೆ ಮಾಹಿತಿ ಪಡೆದ ಬಂದರು ಪೊಲೀಸರು ದಾಳಿ ನಡೆಸಿ ಸುಮಾರು 13ಸಾವಿರ ರೂ. ಮೌಲ್ಯದ 1.30ಗ್ರಾಂ ತೂಕದ ಎಂಡಿಎಂಎ ಮಾದಕ ವಸ್ತು, 2 ಮೊಬೈಲ್, 1 ಆಟೋರಿಕ್ಷಾ ಹಾಗೂ ಇತರ ಸೊತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಮೂಡುಬಿದಿರೆ ಪುತ್ತಿಗೆ ಗ್ರಾಮದ ಮುಲ್ಕಿ ಕ್ರಾಸ್ ಬಳಿ ನಿರ್ಜನ ಪ್ರದೇಶದಲ್ಲಿ ಅಮಲು ಪದಾರ್ಥ ಸೇವನೆ ಆರೋಪದಲ್ಲಿ ಯುವಕನನ್ನು ಬಂಧಿಸಲಾಗಿದೆ. ಮೂಡುಬಿದಿರೆ ಮಾರೂರು ನಿವಾಸಿ ವಿಜಯ ಪೂಜಾರಿ (25) ಬಂಧಿತ ಆರೋಪಿ. ಆರೋಪಿಯನ್ನು ವಶಕ್ಕೆ ಪಡೆದು ವೈದ್ಯಕೀಯ ತಪಾಸಣೆ ನಡೆಸಿದಾಗ ಆತನೂ ಗಾಂಜಾ ಸೇವನೆ ಮಾಡಿರುವುದು ದೃಢಪಟ್ಟಿದೆ. ಮೂಡುಬಿದಿರೆ ಠಾಣೆಯಲ್ಲಿ ಕೇಸು ದಾಖಲಾಗಿದೆ.

ಮೂಡುಬಿದಿರೆ ಕೋಟೆಬಾಗಿಲುವಿನ ನಿರ್ಜನ ಪ್ರದೇಶದಲ್ಲಿ ಅಮಲು ಪದಾರ್ಥ ಸೇವನೆ ಮಾಡಿದ ಆರೋಪದಲ್ಲಿ ಕರಿಂಜೆ ಕಲ್ಲಬೆಟ್ಟು ನಿವಾಸಿ ಆರೀಫ್ (27) ಎಂಬಾತನನ್ನು ಬಂಧಿಸಲಾಗಿದೆ. ವೈದ್ಯಕೀಯ ತಪಾಸಣೆಯಲ್ಲಿ ಮಾದಕ ಸೇವನೆ ಮಾಡಿರುವುದು ದೃಢಪಟ್ಟಿದೆ. ಮೂಡುಬಿದಿರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕರಾವಳಿಯಲ್ಲಿ ಉತ್ತಮ ಮಳೆ

ಮಂಗಳೂರು: ದಕ್ಷಿಣ ಕನ್ನಡ, ಉಡುಪಿ ಜಿಲ್ಲೆ ಸೇರಿದಂತೆ ಕರಾವಳಿಯ ಬಹುತೇಕ ಕಡೆಗಳಲ್ಲಿ ಶುಕ್ರವಾರ ಉತ್ತಮ ಮಳೆಯಾಗಿದೆ. ಮಂಗಳೂರಿನಲ್ಲಿ ಬೆಳಗ್ಗೆ ಮತ್ತು ಸಂಜೆ ಉತ್ತಮ ಮಳೆ ಸುರಿದಿದೆ. ಹವಾಮಾನ ಇಲಾಖೆ ನೀಡಿರುವ ಮಾಹಿತಿಯ ಪ್ರಕಾರ, ಶುಕ್ರವಾರ ಬೆಳಗ್ಗೆ 8.30ರಿಂದ ಮೊದಲ್ಗೊಂಡು ಹಿಂದಿನ 24 ಗಂಟೆಗಳ ಅವಧಿಯಲ್ಲಿ ಕರಾವಳಿಯಲ್ಲಿ ಸರಾಸರಿ 10.1 ಮಿ.ಮೀ ಮಳೆಯಾಗಿದೆ. ಮೂಡುಬಿದಿರೆ 7.5 ಮಿ.ಮೀ ಹಾಗೂ ಸುಳ್ಯದಲ್ಲಿ 9.6 ಮಿ.ಮೀ, ಪುತ್ತೂರಿನಲ್ಲಿ 11.9 ಮಿ.ಮೀ, ಮಂಗಳೂರು 10.7 ಮಿ.ಮೀ, ಬೆಳ್ತಂಗಡಿ 9.6 ಮಿ.ಮಿ, ಕಡಬ 11.3 ಮಿ.ಮಿ, ಬಂಟ್ವಾಳ 9.1 ಮಿ.ಮೀ ಮಳೆಯಾಗಿದೆ.

ಹವಾಮಾನ ಮುನ್ಸೂಚನೆ

ಶನಿವಾರ ಕಾಸರಗೋಡಿನ ಹೆಚ್ಚಿನ ಭಾಗಗಳಲ್ಲಿ ಸಾಮಾನ್ಯ ಮಳೆಯಾಗುವ ಸಾಧ್ಯತೆಯಿದೆ. ಇದರೊಂದಿಗೆ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಅಲ್ಲಲ್ಲಿ ಒಂದೆರಡು ಕಡೆಗಳಲ್ಲಿ ಸಾಧಾರಣ ಮಳೆಯ ಮುನ್ಸೂಚನೆ ನೀಡಲಾಗಿದೆ.

ಇಂದು ಹಿರಿಯರ ಆರೋಗ್ಯ ಜಾಗೃತಿ

ಮಂಗಳೂರು: ಹಿರಿಯ ನಾಗರಿಕರ ಆರೋಗ್ಯ ಹಾಗೂ ತುರ್ತು ವೈದ್ಯಕೀಯ ಪರಿಸ್ಥಿತಿಗಳ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಕೆಎಂಸಿ ಆಸ್ಪತ್ರೆ, ಮಂಗಳೂರು ವತಿಯಿಂದ 'ನಮ್ಮನ್ನು ಬೆಳೆಸಿದವರ ಆರೈಕೆ' ಎಂಬ ವಿಶೇಷ ಸಾರ್ವಜನಿಕ ಜಾಗೃತಿ ಕಾರ್ಯಕ್ರಮವನ್ನು ಜೂ.13ರಂದು ಮಧ್ಯಾಹ್ನ 3.30ರಿಂದ 4.30ರವರೆಗೆ ನಗರದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿರುವ ಕೆಎಂಸಿ ಆಸ್ಪತ್ರೆಯಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ನರವಿಜ್ಞಾನ ತಜ್ಞ ಡಾ. ಶಿವಾನಂದ ಪೈ ಹಾಗೂ ತುರ್ತು ವೈದ್ಯಕೀಯ ವಿಭಾಗದ ಕ್ಲಸ್ಟರ್ ಮುಖ್ಯಸ್ಥ ಡಾ. ಜೀಧು ರಾಧಾಕೃಷ್ಣನ್ ಉಪನ್ಯಾಸ ನೀಡಲಿದ್ದಾರೆ ಎಂದು ಕೆಎಂಸಿ ಆಸ್ಪತ್ರೆ ಮಂಗಳೂರು ಕ್ಲಸ್ಟರ್ ನಿರ್ದೇಶಕ ಪ್ರಮೋದ್ ಕುಂದರ್ ತಿಳಿಸಿದ್ದಾರೆ. ಈ ಕಾರ್ಯಕ್ರಮ ಸಾರ್ವಜನಿಕರಿಗೆ ಮುಕ್ತವಾಗಿದೆ. ನೋಂದಣಿ ಉಚಿತ, ಆದರೆ ಕಡ್ಡಾಯ. 91082 33978 ಗೆ ಕರೆ ಮಾಡಬಹುದು.

ನೆಟ್ಟಾರ್ ಹತ್ಯೆ ಆರೋಪಿಗೆ ಮಧ್ಯಂತರ ಜಾಮೀನು

ಸುಳ್ಯ: ಬಿಜೆಪಿ ಯುವ ಮೋರ್ಚಾ ಮುಖಂಡ ಪ್ರವೀಣ್ ನೆಟ್ಟಾರ್ ಹಂತಕರ ತಂಡದ ಮತ್ತೋರ್ವ ಆರೋಪಿಗೆ ಹೈಕೋರ್ಟ್ ಮಧ್ಯಂತರ ಜಾಮೀನು ಮಂಜೂರು ಮಾಡಿದೆ. ಕೊಲೆ ಪ್ರಕರಣದ 18ನೇ ಆರೋಪಿ ಝಾಕೀರ್ ಸವಣೂರು (35) ಜಾಮೀನು ಪಡೆದ ಆರೋಪಿಯಾಗಿದ್ದಾನೆ. ಪ್ರವೀಣ್ ನೆಟ್ಟಾರ್ ಹತ್ಯೆ ಸಂಚಿನಲ್ಲಿ ನೇರವಾಗಿ ಭಾಗಿಯಾದವರಲ್ಲಿ ಈತನೂ ಒಬ್ಬನಾಗಿದ್ದು ಪ್ರಕರಣದಲ್ಲಿ ಆರಂಭದಲ್ಲೇ ಬಂಧಿಸಲ್ಪಟ್ಟ ಇಬ್ಬರು ಪ್ರಮುಖ ಶಂಕಿತರಲ್ಲಿ ಝಾಕೀರ್ ಸವಣೂರು ಕೂಡ ಒಬ್ಬನಾಗಿದ್ದು ಈತನನ್ನು 2022 ಜುಲೈ 28ರಂದು ಬೆಳ್ಳಾರೆಯ ಶಫೀಕ್ ನೊಂದಿಗೆ ಪೊಲೀಸರು ವಶಕ್ಕೆ ಪಡೆದಿದ್ದರು.

ಮಾನಭಂಗ ಯತ್ನ

ಮೂಡುಬಿದಿರೆ: ವಿವಾಹಿತನೊಬ್ಬ ಅಪ್ರಾಪ್ತ ವಿದ್ಯಾರ್ಥಿನಿಯ ಮಾನಭಂಗ ನಡೆಸಲು ಯತ್ನಿಸಿದ ಘಟನೆ ಶಿರ್ತಾಡಿ ಗ್ರಾಮದ ಕಜೆ ಎಂಬಲ್ಲಿ ಶುಕ್ರವಾರ ನಡೆದಿದೆ. ಕಜೆಯ ವಿವಾಹಿತ ವ್ಯಕ್ತಿ ಲೋಕೇಶ್ ಎಂಬಾತನೇ ಆರೋಪಿಯಾಗಿದ್ದು, ಮೂಡುಬಿದಿರೆ ಪೊಲೀಸರು ಈತನನ್ನು ಬಂಧಿಸಿದ್ದಾರೆ.

ಜಿಲ್ಲಾ ಪಂಚಾಯತ ಉತ್ತರ ಕನ್ನಡ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ

Email: dhoukannada@gmail.com
Phone: 08382-226339, Fax: 08382-222452

ನಂ:ಜಿಆಕುಕ/ಜಯೋಕಾಸಾಂ/ಡಿಎಂಎಫ್/ವಿವ-59(3)/2025-26
ದಿನಾಂಕ: 12-06-2026

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ

(ಇ-ಪ್ರೊಕ್ಯರಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ವಿಷಯ : 2025-26ನೇ ಸಾಲಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧೀನ ಸಂಸ್ಥೆಗಳಾದ ಆಯ್ದ ತಾಲ್ಲೂಕು ಆಸ್ಪತ್ರೆಗಳಿಗೆ ಅವಶ್ಯಕವಿರುವ ಶವಗಳನ್ನಿಡುವ ಡೀಪ್ ಫ್ರಿಜರ್ ಸಲಕರಣೆಯನ್ನು ಪೂರೈಸಲು ಇ-ಟೆಂಡರ್ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧೀನ ಸಂಸ್ಥೆಗಳಾದ ಆಯ್ದ ತಾಲ್ಲೂಕು ಆಸ್ಪತ್ರೆಗಳಿಗೆ 2025-26 ನೇ ಸಾಲಿಗೆ ಅವಶ್ಯಕವಿರುವ ಶವಗಳನ್ನಿಡುವ ಡೀಪ್ ಫ್ರಿಜರ್ ಸಲಕರಣೆಗಳನ್ನು ಪೂರೈಸಲು ಈ ಕೆಳಕಾಣಿಸಿದಂತೆ ಅರ್ಹ ಸಂಸ್ಥೆ/ಏಜೆನ್ಸಿಗಳಿಂದ ಈ ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಅಲ್ಪಾವಧಿ ಮರು ಇ-ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ವೆಬ್‌ಸೈಟ್ www.kppp.karnataka.gov.in ನಲ್ಲಿ ನೋಡಬಹುದಾಗಿದೆ.

ಇ- ಪ್ರೋಕ್ಯೂರ್‌ಮೆಂಟ್ ಮುಖಾಂತರ ಟೆಂಡರ್

ಕ್ರ. ಸಂ	ವಿವರಗಳು	ದಿನಾಂಕ
1	ಇ.ಎಂ.ಡಿ ಮೊತ್ತ 2.5%	ರೂ. 60,000/-
2	ಇ-ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರ್ ಫಾರಂ ಡೌನಲೋಡ್ ಆರಂಭ ದಿನಾಂಕ	ದಿನಾಂಕ: 12-06-2026, ಬೆಳಿಗ್ಗೆ 10.00 ಘಂಟೆಯಿಂದ
3	ಟೆಂಡರ್‌ನಲ್ಲಿ ಆಕ್ಷೇಪಣೆಗಳಿದ್ದಲ್ಲಿ ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 16-06-2026 4-30 ಘಂಟೆಯವರೆಗೆ
4	ಇ-ಪ್ರೊಕ್ಯೂರ್‌ಮೆಂಟ್ ವೇದಿಕೆಯ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 20-06-2026 ರ ಸಾಯಂಕಾಲ 5-00 ಘಂಟೆಯವರೆಗೆ
5	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ: 22-06-2026 ಸಾಯಂಕಾಲ 5-00 ಘಂಟೆಗೆ
6	ಟೆಂಡರ ಅಂದಾಜು ಮೊತ್ತ	ರೂ. 24,00,000/- ಮಾತ್ರ

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳು,
ಉ.ಕ. ಕಾರವಾರ.

ಮಹಾನಗರ ಪಾಲಿಕೆ, ಕಲಬುರಗಿ

ದೂರವಾಣಿ: 08472-278675, ಫ್ಯಾಕ್ಸ್ : 08472-260776, ಇ-ಮೇಲ್:itstaff_ulb_gulbarga@yahoo.com

No: KMP/TS-01/KKRDB GARDEN/01/2026-27 Date :12.06.2026

ಇ-ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ.

1) ಕಾಮಗಾರಿಯ ವಿವರ : 1. Development of Meheboob Gulshan Garden in Kalburagi City (Call-2) 2. Development of Rajiv Gandhi Theme park at Dariyapur in Kalaburagi City (cal-2) 2) ಲೆಕ್ಕ ಶೀರ್ಷಿಕೆ : **2024-25 & 2025-26 Macro KKRDB,** 3) ಟೆಂಡರರಿಗಿಟ್ಟ ಮೊತ್ತ **1. ರೂ.3,00,00,000.00, 2.ರೂ.3,00,00,000.00,** 4) ಗುತ್ತಿಗೆದಾರರ ಅರ್ಹತೆ : Class-II & above, 5) ಪೂರ್ವಭಾವಿ ಸಭೆ ದಿನಾಂಕ ಮತ್ತು ಸಮಯ : **22.06.2026 ಬೆಳಿಗ್ಗೆ 11:00,** 6) ಟೆಂಡರ ಸಲ್ಲಿಸಲು ಅಂತಿಮ **ದಿನಾಂಕ 29.06.2026** ಸಾಯಂಕಾಲ **4:30** ಗಂಟೆಯವರೆಗೆ, 7) ಟೆಂಡರ್ ತೆರೆಯುವ ದಿನಾಂಕ ತಾಂತ್ರಿಕ : **30.06.2026 ಸಾಯಂಕಾಲ 4:35 ಗಂಟೆಯ ವರೆಗೆ,** 8) ಟೆಂಡರ್ ತೆರೆಯುವ ದಿನಾಂಕ ಆರ್ಥಿಕ : **01.07.2026 ಬೆಳಿಗ್ಗೆ 11:30 ಗಂಟೆಗೆ,** 9) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ: 1.ಟೆಂಡರ ಫಾರಂ ಬೆಲೆ As per e- portal EMD ಮೊತ್ತ **ರೂ.4,50,000.00,** 2.ಟೆಂಡರ ಫಾರಂ ಬೆಲೆ As per e- portal EMD ಮೊತ್ತ **ರೂ.4,50,000.00,** 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಮತ್ತು ಮೊ.ನಂ.:ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ. 8095986929, 11) ಅಂತರಜಾಲ ತಾಣದ ವಿಳಾಸ: **www.kppp.karnataka.gov.in**

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ

ವಾ.ಸಾ.ಸಂ.ಇ.ಕಲಬುರಗಿ/211/ದೇಶಪಾಂಡೆ ಪಬ್ಲಿಸಿಟಿ/2025-26

PUBLIC NOTICE
NOTICE TO WHOMSOEVER IT MAY CONCERN

Notice is hereby given to the general public that my clients, **Mr. Shripathi Prabhu and Mrs. Akshatha P.,** are proposing to purchase the Schedule Property more particularly described hereunder from Mr. Krishnappa Derebail @ Derebail Krishnappa. The Vendor claims title to the Schedule Property under a registered Sale Deed.

Any person(s), institution(s), bank(s), financial institution(s), company(ies), society(ies), trust(s), legal heir(s), claimant(s) or authority(ies) having any right, title, interest, share, claim, demand, lien, charge, mortgage, lease, tenancy, licence, easement, agreement for sale, inheritance right, encumbrance, court proceeding, attachment, acquisition claim or objection of whatsoever nature in respect of the Schedule Property described hereinbelow are hereby called upon to intimate the same in writing to the undersigned Advocate, together with documentary proof in support thereof, within Fifteen (15) days from the date of publication of this notice.

Failing such intimation within the aforesaid period, it shall be presumed that no person has any claim or objection in respect of the Schedule Property, and my clients shall proceed with the proposed transaction relying upon the title of the Vendor without any further reference to such claims or objections.

SCHEDULE (Description of the Property): Non-Agricultural immovable property situated at Surathkal Village, of Mangalore Taluk, Dakshina Kannada District and comprised in:

Old Sy no.	Katha. No.	Sy. No.	Extent A – C
308/3A	39_DN7535TC_1/27	308/3P27	0-40
Converted Non-Agricultural Land		Total	0-40

Above property, along with the right of water, and all other easements and appurtenances relating thereto. Butted and **bounded by: East:** Portion of Sy. No. 308/3, **South:** Portion of Sy no. 308/3, **West:** Road, **North:** Portion of Sy no. 308/3.

Place: Mangalore
Date: 10-06-2026

Sd/-, **Vishwas Prakash Shetty,** Advocate,
Manar Complex, Balmatta New Road, Mangaluru – 575001
Ph: 8971514101

ಕರ್ನಾಟಕ ಸರ್ಕಾರ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಸಾಮಾಜಿಕ ಅರಣ್ಯ ಉಪ-ವಿಭಾಗ, ವಿಜಯಪುರ

ಸಂಖ್ಯೆ: ವಿಜೆಪಿ/ಸಾಅವಿ/ಇ-ಪ್ರೊಕ್ಯೂರ್‌ಮೆಂಟ್/ಕ.ಟೆಂ/2026-27
ದಿನಾಂಕ: 09.06.2026

ಸಂಕ್ಷಿಪ್ತ ಮರು ಟೆಂಡರ್ ಪ್ರಕಟಣೆ

ವಿಜಯಪುರ ಸಾಮಾಜಿಕ ಅರಣ್ಯ ಉಪ-ವಿಭಾಗದ ಅಧೀನ ಸಾಮಾಜಿಕ ಅರಣ್ಯ ವಲಯಗಳಲ್ಲಿ 2026-27 ನೇ ಸಾಲಿನಲ್ಲಿ ಕೈಗೊಳ್ಳುವ ವಿವಿಧ ಯೋಜನೆಗಳಡಿ ಅನುದಾನ ನಿರೀಕ್ಷೆಯ ಮೇರೆಗೆ ನೆಡುತೋಪು ನಿರ್ಮಾಣ ಹಾಗೂ 14x20 ಅಳತೆಯ ಸಸಿಗಳನ್ನು ಬೆಳೆಸುವ ಕಾಮಗಾರಿಗಳಿಗೆ ಮರು ಟೆಂಡರ್‌ನ್ನು ದಿನಾಂಕ: 11.06.2026 ರಿಂದ 18.06.2026 ರವರೆಗೆ ಅರ್ಹ ನೋಂದಾಯಿತ ಅರಣ್ಯ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಅರಣ್ಯೀಕರಣ ಕಾಮಗಾರಿಗಳಿಗೆ ಮರು ಟೆಂಡರ್‌ನ್ನು ಕರೆಯಲಾಗಿದೆ ಹಾಗೂ **(ಟೆಕ್ನಿಕಲ್ ಮತ್ತು ಫೈನಾನ್ಸಿಯಲ್ ಬಿಡ್ ತೆರೆಯುವ ದಿನಾಂಕ: 20.06.2026 ರಂದು ಬೆಳಿಗ್ಗೆ 11.00 ಘಂಟೆಗೆ)** ಭಾಗವಹಿಸಲಿಚ್ಛಿಸುವವರು ತಮಗೆ ಅನುಕೂಲವಾಗುವ ಟೆಂಡರ್ ವಿವರಗಳನ್ನು www.kppp.karnataka.gov.in ಮೂಲಕ ಟೆಂಡರ್ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಸಹಿ/-ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ಉಪ ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/151/ಕೆಎಸ್‌ಎಂಸಿಎ/2026-27

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು

ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ:(11ಇ)2026-27:ಜೆಇ-3 ದಿನಾಂಕ: 11.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಲೆಕ್ಕಶೀರ್ಷಿಕೆ: 5054-03-337-0-17-154 ರಾಜ್ಯ ಹೆದ್ದಾರಿ ರಸ್ತೆಗಳು ಸುಧಾರಣೆ" ಅಡಿಯಲ್ಲಿ ಇಂಡೆಂಟ್ ನಂ: 36281 ಕಾಮಗಾರಿಗೆ ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 30.06.2026** ಆಗಿದ್ದು, ಈ ಕಾಮಗಾರಿಗೆ ಈ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, **(ಅಪರಾಹ್ನ 5.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

ಈ ಕಾಮಗಾರಿಯ ಅಂದಾಜು ಮೊತ್ತ ರೂ.1300.00 ಲಕ್ಷ ಆಗಿರುತ್ತದೆ. ಮೇಲಿನ ಕಾಮಗಾರಿಗೆ KW-4 ಪ್ರಮಾಣಿತ ಟೆಂಡರ್ ಪ್ರಮಾಣಿತ ಟೆಂಡರ್ ದಾಖಲೆಯ ಪ್ರಕಾರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಮೇಲಿನ ಕಾಮಗಾರಿಗಳ ಕೆಲಸದ ಮೌಲ್ಯ, ಟೆಂಡರ್‌ಗೆ ಹಾಕಲಾದ ಮೊತ್ತ, ಇ.ಎಮ್.ಡಿ. ಮೊತ್ತ ಇತ್ಯಾದಿ ಕುರಿತು ಹೆಚ್ಚಿನ ವಿವರಗಳನ್ನು ಕೆ.ಪಿ.ಪಿ ಪೋರ್ಟಲ್ **(www.kppp.karnataka.gov.in)** ನಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ ವಿಷಯ ನಿರ್ವಾಹಕರು, ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು ಇವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 0824-2423169.

DIPR/DK/KSMCA/358/26-27 dt.12.06.2026

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋ.ಇ ವಿಭಾಗ, ಶಿವಮೊಗ್ಗ

ಟೆಂಡರ್ ಪ್ರಕಟಣೆ ಸಂಖ್ಯೆ ಕಾಪಾಲಿ/ಶಿವಿಶಿ/ಜೆಇ-2/ಐಎಫ್‌ಟಿ-08/ತಿ-01/2026-27
ದಿನಾಂಕ:12-06-2026

ತಿದ್ದುಪಡಿ ಟೆಂಡರ್ ಪ್ರಕಟಣೆ

ಉಲ್ಲೇಖ ಸಂ: ಕಾಪಾಅ/ಶಿವಿಶಿ/ಎಇ-1&2/ಜೆಇ-1&2/ಐಎಫ್‌ಟಿ-08/ಮು-01/2026-27 ದಿನಾಂಕ:06-06-2026

ಉಲ್ಲೇಖಿತ ಟೆಂಡರ್ ಪ್ರಕಟಣೆ ಅನ್ವಯ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಾಗರ ತಾಲ್ಲೂಕಿಗೆ ಸಂಬಂಧಿಸಿದಂತೆ ಇ.ನಂ.:36346 ಕಾಮಗಾರಿಯ ನಿಬಂಧನೆಗಳಲ್ಲಿ ಎಸ್.ಸಿ ಎಂಬುದಾಗಿ ಮೀಸಲಾಗಿ ಪ್ರಚುರಗೊಂಡಿದ್ದು, ಅದನ್ನು ಎಸ್.ಟಿ ಮೀಸಲು ಎಂಬುದಾಗಿಯೂ ಮತ್ತು ಇ.ನಂ:36337 ಕಾಮಗಾರಿಯ ನಿಬಂಧನೆಗಳಲ್ಲಿ ಎಸ್.ಟಿ ಎಂದು ಮೀಸಲಾಗಿ ಪ್ರಚುರಗೊಂಡಿದ್ದು, ಅದನ್ನು ಎಸ್.ಸಿ ಮೀಸಲು ಎಂಬುದಾಗಿ ಓದಿಕೊಳ್ಳತಕ್ಕದ್ದು. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿದ್ದುಪಡಿ ಮಾಡಲಾಗಿದ್ದು, ಸದರಿ ನಿಬಂಧನೆಗಳನ್ನು ಅಪ್‌ಲೋಡ್ ಸಹ ಮಾಡಲಾಗಿರುತ್ತದೆ.

ಇನ್ನುಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182-274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080-23010900/23010901 ರಿಂದ ಮಾಹಿತಿ ಪಡೆಯಬಹುದು.

ಸಹಿ/- ಕಾ.ಇಂ, ಲೋಕೋಪಯೋಗಿ ಇಲಾಖೆ, ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/54/06/363

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ. ದೂ.: 08137-283336.

ಸಂಖ್ಯೆ : ಕಾ.ಇಂ./ಲೋ.ಇ.ವಿ./ಮಧು/ಸ.ಇಂ.-1/ಟೆಂಡರ್/2026-27/321
ದಿನಾಂಕ : 08-06-2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ - 9/2026-27

(ಕೆ.ಪಿ.ಪಿ.ಪಿ. ಪೋರ್ಟಲ್ ಮೂಲಕ) ದ್ವಿ-ಲಕೋಟೆ ಟೆಂಡರ್

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು ಕೆ.ಡಬ್ಲ್ಯೂ - 3 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು ಕೆ.ಪಿ.ಪಿ. ಆ್ಯಕ್ಟ್ 1999 ಮತ್ತು ಕೆ.ಟಿ.ಪಿ.ಪಿ. ಕಾಯ್ದೆ 2000 ರಲ್ಲಿ **ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಲೋಕೋಪಯೋಗಿ ಇಲಾಖೆ, ಶಿರಾ ಹಾಗೂ ಮಧುಗಿರಿ ಉಪ ವಿಭಾಗ ವ್ಯಾಪ್ತಿಯಲ್ಲಿನ ಕಾಮಗಾರಿಗೆ** ಟೆಂಡರ್‌ನ್ನು ಕೆ.ಪಿ.ಪಿ.ಪಿ. ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.

1) ಟೆಂಡರ್‌ಗಿಟ್ಟ ಸರಿಸುಮಾರು ಮೊಬಲಗು : ರೂ. 80.55 ಲಕ್ಷಗಳವರೆಗೆ, 2) ಕೆ.ಪಿ.ಪಿ.ಪಿ. ಪೋರ್ಟಲ್ ಮೂಲಕ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 16-06-2026 ರ ಸಂಜೆ 4.00 ಗಂಟೆಯವರೆಗೆ, 3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 17-06-2026 ರ ಸಂಜೆ 4.15 ಗಂಟೆಯ ನಂತರ, 4) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 18-06-2026 ರ ಸಂಜೆ 4.15 ಗಂಟೆಯ ನಂತರ, 4) ವಿಚಾರಣೆ / ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ : 12-06-2026 ರ ಸಂಜೆ 4.00 ಗಂಟೆಗೆವರೆಗೆ.

ಹೆಚ್ಚಿನ ವಿವರಗಳಿಗೆ **https://kppp.karnataka.gov.in** ಹಾಗೂ ಕೆಳ ಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. **ದೂರವಾಣಿ ಸಂಖ್ಯೆ : 08137 – 283336.**

ಸಹಿ/- ಕಾರ್ಯಪಾಲಕ ಅಭಿಯಂತರರು,
ಲೋ.ಇ., ವಿಭಾಗ ಮಧುಗಿರಿ.

ಡಿಐಪಿಆರ್/ತುಮಕೂರು/33/ಮಹೇಪಾಲ್/2026-27

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಮುಧೋಳ

ಕ್ರಮ ಸಂಖ್ಯೆ: ಕೃಉಮಾಸ (ಮ):91/2026-27 ದಿನಾಂಕ: 11-06-2026

ಅಲ್ಪಾವಧಿ ಟೆಂಡರ ಪ್ರಕಟಣೆ

ಈ ಮೂಲಕ ಪೇಟೆಕಾರ್ಯಕರ್ತರಿಗೆ ಹಾಗೂ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಮುಧೋಳ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ವಿವಿಧ ಕಟ್ಟಡಗಳಿಗೆ ಸಮಿತಿಯಿಂದ ಲೈಸನ್ಸ ಪಡೆದ ಅರ್ಹ ಪೇಟೆಕಾರ್ಯಕರ್ತರಿಗೆ ನಿಯಮ 13 ರಡಿ ಮತ್ತು ಸಾರ್ವಜನಿಕರಿಗಾಗಿ ನಿಯಮ 14 ರಡಿ ನಿಯಮಾನುಸಾರ ಲೀವ್& ಲೈಸನ್ಸ ಫೀಆಧಾರದ ಮೇಲೆ 55 ತಿಂಗಳ ಅವಧಿಗೆ 11 ತಿಂಗಳಿಗೊಮ್ಮೆ ನವೀಕರಿಸುವ ಹಾಗೂ 33 ತಿಂಗಳ ನಂತರ ಪ್ರತಿಶತ 5 ರಷ್ಟು ಲೀವ್& ಲೈಸನ್ಸ ಫೀ ದರಗಳನ್ನು ಹೆಚ್ಚಿಸುವ ಷರತ್ತಿಗೊಳಪಟ್ಟು ಗರಿಷ್ಠ 55 ತಿಂಗಳ ಅವಧಿಗೆ ಕೇಳಿದಾಗ ಬಿಟ್ಟುಕೊಡುವ ಷರತ್ತಿಗೊಳಪಟ್ಟು ಈ ಕೆಳಗಿನ ಕಟ್ಟಡಗಳಿಗೆ ಸಮಿತಿಯು ನಿಗದಿಪಡಿಸಿದ ನಮೂನೆಯಲ್ಲಿ ಅರ್ಜಿಗಳನ್ನು ದ್ವಿಪ್ರತಿಯಲ್ಲಿ ಆಹ್ವಾನಿಸಲಾಗಿದೆ.

ಅ ನಂ	ಕಟ್ಟಡಗಳ ವಿವರ	ನಿಗದಿ ಪಡಿಸಿದ ಮಾಸಿಕ ಲೀ&ಲೈ ಫೀದರ	ಇ.ಎಂ.ಡಿ. ಮೊತ್ತ ರೂ.ಗಳಲ್ಲಿ	ಷರಾ
	ಮುಖ್ಯ ಮಾರುಕಟ್ಟೆ ಪ್ರಾಂಗಣ ಮುಧೋಳ			
1	ಮುಖ್ಯ-ಮಾರುಕಟ್ಟೆ ಮುಧೋಳದಲ್ಲಿ ಹರಾಜುಕಟ್ಟೆ ನಂ.3 ಭಾಗ 2 ಅರ್ಧಭಾಗ ಮೀಸಲಾತಿ : ಪರಿಶಿಷ್ಟ ಜಾತಿ	ದರ ರೂ.13,803=00	ರೂ. 28,000=00	ನಿಯಮ 13 ರಡಿಯಲ್ಲಿ ಅರ್ಹ ಪೇಟೆ ಕಾರ್ಯಕರ್ತರಿಗೆ ಜೇಷ್ಠತಾ ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು.
2	ಮುಖ್ಯ-ಮಾರುಕಟ್ಟೆ ಮುಧೋಳದಲ್ಲಿರುವ ಚಿಕ್ಕಅಂಗಡಿ-ವ-ಗೋದಾಮು ಸಂಖ್ಯೆ.2 ಮೀಸಲಾತಿ : ಸಾಮಾನ್ಯ ವರ್ಗ	ದರ ರೂ.8,595=00	ರೂ. 16,000=00	
3	ಬಾಳೆಹಣ್ಣಿನ ಅಂಗಡಿ 1,3,4,5 ಮೀಸಲಾತಿ ಬಾ ಅಂಗಡಿ : 1 ಎಫ್‌ಫಿಒ ಇತರೆ ಬಾ ಅಂಗಡಿ : 3 ಸಾಮಾನ್ಯ ಮಹಿಳೆ ಬಾ ಅಂಗಡಿ : 4 ಸಾಮಾನ್ಯ ವರ್ಗ ಬಾ ಅಂಗಡಿ : 5 ಪರಿಶಿಷ್ಟ ಜಾತಿ	ದರ ರೂ.4,352=00	ರೂ.8,800=00 (ಪ್ರತಿಯೊಂದಕ್ಕು)	
4	ಮುಖ್ಯ-ಮಾರುಕಟ್ಟೆ ಮುಧೋಳದಲ್ಲಿರುವ ಟೀ ಸ್ಟಾಲ್ (ಪರಿವರ್ತಿತ ಗೋದಾಮು) ಮೀಸಲಾತಿ:ಪರಿಶಿಷ್ಟ ವರ್ಗ	ದರ ರೂ.5,939=00	ರೂ. 12,000=00	
	ಮುಖ್ಯ-ಮಾರುಕಟ್ಟೆ ಮುಧೋಳ ಚಿಕ್ಕ ಮಳಿಗೆಗಳ ವಿವರ			
5	ಸಿಂಗಲ್ ಚಿಕ್ಕ ಮಳಿಗೆಗಳ ಸಂಖ್ಯೆ : 32 ಮೀಸಲಾತಿ: ಸಾಮಾನ್ಯ ವರ್ಗ	ದರ ರೂ. 2,835=00	ರೂ. 6,000=00	ನಿಯಮ 14 ರಡಿಯಲ್ಲಿ ಟೆಂಡರ-ಕಂ-ಬಹಿರಂಗ ಹರಾಜಿನ ಮೂಲಕ ಹಂಚಿಕೆ ಮಾಡಲಾಗುವುದು
6	ಚಿಕ್ಕ ಮಳಿಗೆ ಸಂಖ್ಯೆ: 80 ಮೀಸಲಾತಿ: ಪರಿಶಿಷ್ಟ ಜಾತಿ	ದರ ರೂ.6,250=00	ರೂ. 12,500=00	
	ಉಪ-ಮಾರುಕಟ್ಟೆ ಲೋಕಾಪುರ			
1	ಉಪ-ಮಾರುಕಟ್ಟೆ ಲೋಕಾಪುರದಲ್ಲಿರುವ ಗೋದಾಮು ಸಂಖ್ಯೆ : 02	ದರ ರೂ. 34,708=00	ರೂ. 70,000=00	ನಿಯಮ 13 ರಡಿಯಲ್ಲಿ ಅರ್ಹ ಪೇಟೆಕಾರ್ಯಕರ್ತರಿಗೆ ಜೇಷ್ಠತಾ ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು.

ನೊಂದಣಿ ಶುಲ್ಕ ರೂ.500=00 ಹಾಗೂ ಫಾರ್ಮ ಶುಲ್ಕ ರೂ.1000=00 ಗಳನ್ನು ತೆರಿಗೆ ಪ್ರತ್ಯೇಕ ರೂ.ಗಳಲ್ಲಿ ನಗದು ರೂಪದಲ್ಲಿ ಸಲ್ಲಿಸತಕ್ಕದ್ದು.ಇ.ಎಂ.ಡಿ. ಮೊತ್ತವನ್ನುಡಿಡಿ/ನಗದು ಮುಖಾಂತರ SECRETARY APMC MUDHOL ಇವರ ಹೆಸರಿನಲ್ಲಿ ಪಾವತಿಸತಕ್ಕದ್ದು. ಇ.ಎಂ.ಡಿ. ಮೊತ್ತವನ್ನುಡಿ.ಡಿ ಮುಖಾಂತರ ಸಲ್ಲಿಸಿದ ನಂತರವೇ ಫಾರ್ಮನ್ನು ಪೂರೈಸಲಾಗುವುದು. ಖಾಲಿ ಟೆಂಡರ ಫಾರ್ಮಗಳನ್ನು ಪಡೆಯಲು ಖುದ್ದಾಗಿ ಕಛೇರಿ ವೇಳೆಯಲ್ಲಿ ದಿ:30-06-2026 ರಂದು ಬೆಳಿಗ್ಗೆ 10.30 ರಿಂದ ದಿ:06-07-2026 ಸಂಜೆ 5.30 ರವರೆಗೆ ಪಡೆಯತಕ್ಕದ್ದು. ಮೊಹರು ಮಾಡಿದ ಲಕೋಟೆಯ ಮೇಲೆ ಸಮಿತಿಯಿಂದ ಪಡೆಯಲಿಚ್ಛಿಸುವ ಕಟ್ಟಡದ ಹೆಸರುಗಳನ್ನು ನಮೂದಿಸಬೇಕು. ಭರ್ತಿ ಮಾಡಿದಟೆಂಡರ ಫಾರ್ಮಗಳನ್ನು ಸ್ವೀಕರಿಸುವ ಕೊನೆಯ ದಿ:-18-07-2026 ರಂದು ಸಂಜೆ 5:00 ಗಂಟೆಯೊಳಗೆ ಸಲ್ಲಿಸತಕ್ಕದ್ದು. ದಿ:21-07-2026 ರಂದು ಬಹಿರಂಗ ಹರಾಜಿನಲ್ಲಿ ಗೈರು ಹಾಜರಾದ ಅಧಿಭೋಗದಾರರ ಟೆಂಡರ ಅರ್ಜಿಯನ್ನು ಸಮಿತಿಯು ಪರಿಗಣಿಸುವುದಿಲ್ಲ.

ನಿಯಮಾನುಸಾರ ಮೀಸಲಾತಿಯನ್ನು ಕಲ್ಪಿಸಲಾಗಿದೆ. ಮೀಸಲಾತಿ ಪಡೆಯಲಿಚ್ಛಿಸುವವರು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ನಿಗದಿತ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು. ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿದೆ.

ಸಹಿ/-(ಡಿ.ಜಿ.ಪಟ್ಟಣಶೆಟ್ಟಿ)
ಕಾರ್ಯದರ್ಶಿ
ಕೃ.ಉ.ಮಾ.ಸ. ಮುಧೋಳ

DIPR/BGK/RO-NO-89/KSMCA/2026-27

ಸಹಿ/-(ಸಂಗಪ್ಪ ಶಂಕ್ರೆಪ್ಪ ಇಮ್ಮನ್ನವರ)
ಅಧ್ಯಕ್ಷರು
ಕೃ.ಉ.ಮಾ.ಸ. ಮುಧೋಳ

ನಗರಸಭಾ ಕಾರ್ಯಾಲಯ, ಪುತ್ತೂರು, ದ.ಕ

ಕಿಲ್ಲೆ ಮೈದಾನ ಹತ್ತಿರ, ಕೋರ್ಟ್ ರಸ್ತೆ, ಪುತ್ತೂರು, ದಕ್ಷಿಣ ಕನ್ನಡ-574201
ವೆಬ್‌ಸೈಟ್: www.putturcity.mrc.gov.in ಇಮೇಲ್: co.puttur@gmail.com

ನಂ. ಬನಿಕೋ.ವಿನಿ3.ಸಿಆರ್/4/2026-27 ದಿ: 11/06/2026

ಅಲ್ಪಾವಧಿ ಕೊಟೇಶನ್ ಪ್ರಕಟಣೆ

ಪುತ್ತೂರು ನಗರಸಭೆಯಿಂದ ಡೇ-ನಲ್ಮ್ ಯೋಜನೆಯಡಿ ಪ್ರಧಾಮಂತ್ರಿ ಬೀದಿ ಬದಿ ವ್ಯಾಪಾರಿಗಳ ಆತ್ಮನಿರ್ಭರ್ ನಿಧಿ ಯೋಜನೆಯಡಿ ಗುರುತಿಸಲ್ಪಟ್ಟ ಬೀದಿ ವ್ಯಾಪಾರಸ್ಥರಿಗೆ ಕಿರುಸಾಲ ಸೌಲಭ್ಯಗಳು ಮತ್ತು ಕ್ರೆಡಿಟ್ ಕಾರ್ಡ್ ಅರ್ಜಿ ಸಲ್ಲಿಸಿ ಪಡೆಯಲು ಸುಲಭಗೊಳಿಸುವುದು, ಡಿಜಿಟಲ್ ಸಲೀಕರಣವನ್ನು ಉತ್ತೇಜಿಸಲು, ಸಾಮಾಜಿಕ ಭದ್ರತಾ ಯೋಜನೆಗಳನ್ನು ಕಲ್ಪಿಸಲು, ಬ್ಯಾಂಕ್ ಗಳು - ಬೀದಿ ಬದಿ ವ್ಯಾಪಾರಿಗಳಿಗೆ ಅಂತಿಮ ಹಂತದ ಸೇವೆಯನ್ನು ಒದಗಿಸಲು ಲೋಕ ಕಲ್ಯಾಣ ಮೇಳವನ್ನು, ದಿನಾಂಕ **19-06-2026** ರಂದು ಪುತ್ತೂರು ನಗರಸಭೆಯಲ್ಲಿ ಜರಗುವ ಕಾರ್ಯಕ್ರಮಗಳಿಗೆ ಬೆಳಗ್ಗಿನ ಉಪಹಾರ ಹಾಗೂ ಮದ್ಯಾಹ್ನದ ಊಟದ ವ್ಯವಸ್ಥೆಗೆ ದರಪಟ್ಟಿಯನ್ನು ಕರೆಯಲಾಗಿದೆ. ಆಸಕ್ತಿಯುಳ್ಳವರು ತಮ್ಮ ದರಪಟ್ಟಿಯನ್ನು ಪೌರಾಯುಕ್ತರು ನಗರಸಭೆ, ಪುತ್ತೂರು,ಇವರಿಗೆ ದಿನಾಂಕ: 17.06.2026 ಅಪರಾಹ್ನ 4.00 ಗಂಟೆಯೊಳಗೆ ಸಲ್ಲಿಸಬೇಕು. ನಂತರ ಬಂದ ದರಪಟ್ಟಿಗಳನ್ನು ಸ್ವೀಕರಿಸಲಾಗುವುದಿಲ್ಲ. ಇದರ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ನಗರಸಭಾ ಕಛೇರಿಯ ಡೇ-ನಲ್ಮ್ ವಿಭಾಗವನ್ನು ಸಂಪರ್ಕಿಸಬಹುದು.

ಸಹಿ/-, ಪೌರಾಯುಕ್ತರು,
ನಗರಸಭೆ ಪುತ್ತೂರು, ದ.ಕ

DIPR/DK/KSMCA/370/26-27 dt. 12.06.2026

ಫಾರ್ಮ್ ಜಿ

ತೆಲಂಗಾಣದಲ್ಲಿ ರಿಫೈನ್ಡ್ ಗೋಧಿ ಹಿಟ್ಟು, ಸೆಮೋಲಿನಾ, ಇಡೀ ಗೋಧಿಯ ಹಿಟ್ಟು ಮತ್ತು ಹೊಟ್ಟು ಉತ್ಪಾದನೆ ಮತ್ತು ಪ್ಯಾಕೇಜಿಂಗ್‌ನಲ್ಲಿ ತೊಡಗಿಸಿಕೊಂಡಿರುವ

ಮೆಸರ್ಸ್ ಮಹರ ಪುಷ್ಪಾ ಆಗ್ರಿ ಪ್ರಾಡಕ್ಟ್ಸ್ ಪ್ರೈವೇಟ್ ಲಿಮಿಟೆಡ್‌ಗೆ ನಿರ್ಣಯ ಯೋಜನೆಯನ್ನು ಸಲ್ಲಿಸಲು ಆಸಕ್ತಿ ಅಭಿವ್ಯಕ್ತಿಯ ಆಹ್ವಾನ

[ಭಾರತದ ದಿವಾಳಿತನ ಮತ್ತು ಪಾಪರಿಕೆ (ಕಾರ್ಪೊರೇಟ್ ವ್ಯಕ್ತಿಗಳ ದಿವಾಳಿತನ ನಿರ್ಣಯ ಪ್ರಕ್ರಿಯೆ) ಮಂಡಳಿ ನಿಬಂಧನೆಗಳು-2016ರ ನಿಬಂಧನೆ 36ಎ(1) ಅಡಿಯಲ್ಲಿ]

	ಸೂಕ್ತ ವಿವರಗಳು	
1.	ಕಾರ್ಪೊರೇಟ್ ಸಾಲಗಾರರ ಹೆಸರು, ಪಾನ್ & ಸಿಐಎನ್/ಎಲ್‌ಎಲ್‌ಪಿ ನಂಬರ್ ಸಹಿತ	ಮೆಸರ್ಸ್ ಮಹರ ಪುಷ್ಪಾ ಆಗ್ರಿ ಪ್ರಾಡಕ್ಟ್ ಪ್ರೈವೇಟ್ ಲಿಮಿಟೆಡ್ ಸಿಐಎನ್: ಯು15400ಟಿಜಿ2015ಪಿಟಿಸಿ082028 ಪಾನ್: ಎಎಐಸಿಪಿ2898ಎನ್
2.	ನೋಂದಾಯಿತ ಕಚೇರಿ ವಿಳಾಸ.	ಕೋಶಲ್ ನಿವಾಸ್, ನಂ. 55/ಇ, 15ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು- 560040
3.	ವೆಬ್‌ಸೈಟ್‌ನ ಯುಆರ್‌ಎಲ್	ಸಿ.ಡಿಯ ವೆಬ್‌ಸೈಟ್ ಲಭ್ಯವಿಲ್ಲ
4.	ಬಹುತೇಕ ನಿಶ್ಚಿತ ಆಸ್ತಿಗಳು ಇರುವ ಸ್ಥಳದ ವಿವರಗಳು	ಪ್ಲಾಂಟ್ ಸ್ಥಳ: ಚಿನ್ನಾಯಿಕೆಚೆರ್ಲಾ, ಕೊಂದುರ್ಗ್, ರಂಗಾರೆಡ್ಡಿ, ತೆಲಂಗಾಣ-509207 ವಿಳಾಸದಲ್ಲಿದೆ.
5.	ಮುಖ್ಯ ಉತ್ಪನ್ನ/ ಸೇವೆಗಳ ಸಂಸ್ಥಾಪಿತ ಸಾಮರ್ಥ್ಯ	ದಿನಕ್ಕೆ 600 ಮೆಟ್ರಿಕ್ ಟನ್
6.	ಕಳೆದ ಹಣಕಾಸು ವರ್ಷದಲ್ಲಿ ಮಾರಾಟವಾದ ಮುಖ್ಯ ಉತ್ಪನ್ನ/ ಸೇವೆಗಳ ಪ್ರಮಾಣ ಮತ್ತು ಮೌಲ್ಯ	ಹಣಕಾಸು ವರ್ಷ 2022-23- ರೂ. 116.42 ಕೋಟಿ (ಪರಿಶೋಧಿತ) ಹಣಕಾಸು ವರ್ಷ 2023-24- ರೂ. 57.69 ಕೋಟಿ (ಪರಿಶೋಧಿತ) ಪ್ರಸ್ತುತ ಈ ಘಟಕವು ಕಾರ್ಯಾಚರಣೆ ನಡೆಸುತ್ತಿಲ್ಲ
7.	ಉದ್ಯೋಗಿಗಳು/ ಕಾರ್ಮಿಕರ ಸಂಖ್ಯೆ	ಸಮಾಪನಾ ದಿನಾಂಕ ಆರಂಭಕ್ಕೆ ಇದ್ದಂತೆ 4
8.	ಕೊನೆಯದಾಗಿ ಕಳೆದ ಎರಡು ವರ್ಷಗಳಲ್ಲಿ ಲಭ್ಯವಿರುವ ಹಣಕಾಸು ಹೇಳಿಕೆಗಳು (ವೇಳಾಪಟ್ಟಿ ಸಹಿತ), ಸಾಲದಾರರ ಪಟ್ಟಿ, ಪ್ರಕ್ರಿಯೆಯ ಆ ಬಳಿಕದ ಘಟನಾವಳಿಗಳ ಸೂಕ್ತ ದಿನಾಂಕಗಳು ಈ ಯುಆರ್‌ಎಲ್‌ನಲ್ಲಿ ಲಭ್ಯ:	ವಿವರವಾದ ಆಸಕ್ತಿ ಅಭಿವ್ಯಕ್ತಿ ಆಹ್ವಾನ (ಪ್ರೊಸೆಸ್ ಡಾಕ್ಯುಮೆಂಟ್) ಅನ್ನು mahara.cirp@gmail.com ಇ-ಮೇಲ್‌ಗೆ ಸಂಪರ್ಕಿಸುವ ಮೂಲಕ ಮಾಹಿತಿಗಳನ್ನು ಪಡೆಯಬಹುದಾಗಿದೆ.
9.	ಸಂಹಿತೆಯ ಸೆಕ್ಷನ್ 25(2)(ಎಚ್) ಅಡಿಯಲ್ಲಿ ನಿರ್ಣಯ ಅರ್ಜಿದಾರರಿಗೆ ಅರ್ಹತೆ ಈ ಯುಆರ್‌ಎಲ್‌ನಲ್ಲಿ ಲಭ್ಯವಿದೆ:	www.ibbi.gov.in ನಲ್ಲಿ ಲಭ್ಯವಿದೆ ಅಥವಾ mahara.cirp@gmail.com ಗೆ ಇ-ಮೇಲ್ ಕಳುಹಿಸುವ ಮೂಲಕವೂ ಪಡೆಯಬಹುದಾಗಿದೆ.
10.	ಆಸಕ್ತಿ ಅಭಿವ್ಯಕ್ತಿ ಸ್ವೀಕರಿಸಲು ಕೊನೆಯ ದಿನಾಂಕ	ಮೂಲ ಕೊನೆಯ ದಿನಾಂಕ:18.05.2026 ವಿಸ್ತರಿತ ಕೊನೆಯ ದಿನಾಂಕ: 28.06.2026
11.	ಸಂಭಾವ್ಯ ನಿರ್ಣಯ ಅರ್ಜಿದಾರರ ತಾತ್ಕಾಲಿಕ ಪಟ್ಟಿ ಪ್ರಕಟಣೆಯ ದಿನಾಂಕ	08.07.2026ಅಥವಾ ಇಒಐ ಸ್ವೀಕರಿಸುವ ಕೊನೆಯ ದಿನಾಂಕದ ಬಳಿಕ ಹತ್ತು ದಿನಗಳ ಒಳಗಾಗಿ (ಯಾವುದು ಮೊದಲೋ ಅದು)
12.	ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ	13.07.2026 ಅಥವಾ ತಾತ್ಕಾಲಿಕ ಸಂಭಾವ್ಯ ನಿರ್ಣಯ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕದ ಬಳಿಕ ಐದು ದಿನಗಳ ಒಳಗಾಗಿ (ಯಾವುದು ಮೊದಲೋ ಅದು)
13.	ಸಂಭಾವ್ಯ ನಿರ್ಣಯ ಅರ್ಜಿದಾರರ ಅಂತಿಮ ಪಟ್ಟಿ ಬಿಡುಗಡೆಯ ದಿನಾಂಕ	23.07.2026 ಅಥವಾ ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕದ ಬಳಿಕ ಹತ್ತು ದಿನಗಳ ಒಳಗಾಗಿ (ಯಾವುದು ಮೊದಲೋ ಅದು)
14.	ಮಾಹಿತಿ ಒಡಂಬಡಿಕೆ, ಮೌಲ್ಯಮಾಪನ ಮ್ಯಾಟ್ರಿಕ್ಸ್ ಮತ್ತು ನಿರ್ಣಯ ಯೋಜನೆಗಳ ಮನವಿಯನ್ನು ಸಂಭಾವ್ಯ ನಿರ್ಣಯ ಅರ್ಜಿದಾರರಿಗೆ ನೀಡುವ ದಿನಾಂಕ	28.07.2026 ಅಥವಾ ಸಂಭಾವ್ಯ ನಿರ್ಣಯ ಅರ್ಜಿದಾರರ ಅಂತಿಮ ಪಟ್ಟಿ ಬಿಡುಗಡೆಯ ದಿನಾಂಕದ ಬಳಿಕ ಐದು ದಿನಗಳ ಒಳಗಾಗಿ (ಯಾವುದು ಮೊದಲೋ ಅದು)
15.	ನಿರ್ಣಯ ಯೋಜನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ	27.08.206 ಅಥವಾ ಮಾಹಿತಿ ಒಡಂಬಡಿಕೆ, ಮೌಲ್ಯಮಾಪನ ಮ್ಯಾಟ್ರಿಕ್ಸ್ ಮತ್ತು ಆರ್‌ಎಫ್‌ಆರ್‌ಪಿಗಳನ್ನು ಸಂಭಾವ್ಯ ನಿರ್ಣಯ ಅರ್ಜಿದಾರರಿಗೆ ನೀಡುವ ದಿನಾಂಕದ ಬಳಿಕ ಮೂವತ್ತು ದಿನಗಳ ಒಳಗಾಗಿ (ಯಾವುದು ಮೊದಲೋ ಅದು)
16.	ಇಒಐ ಸಲ್ಲಿಕೆಗೆ ಪ್ರೊಸೆಸ್ ಇ-ಮೇಲ್ ಐಡಿ	mahara.cirp@gmail.com
17.	ಎಂಎಸ್‌ಎಂಇ ಆಗಿ ಕಾರ್ಪೊರೇಟ್ ಸಾಲದಾರರ ನೋಂದಣಿ ಸ್ಥಿತಿಗತಿ	ಉದ್ಯಮ್-ಟಿಎಸ್-09-0051937 ದಿನಾಂಕ: 30.12.2022

ದಿನಾಂಕ: 13.06.2026
ಸ್ಥಳ: ಹೈದರಾಬಾದ್

ಸಹಿ/-
ರಾಜೇಶ್ ಚಿಲ್ಲಾಳೆ, ನಿರ್ಣಯ ವೃತ್ತಿಪರರು
ಮೆಸರ್ಸ್ ಮಹರ ಪುಷ್ಪಾ ಆಗ್ರಿ ಪ್ರಾಡಕ್ಟ್ಸ್ ಪ್ರೈವೇಟ್ ಲಿಮಿಟೆಡ್
ಐಬಿಬಿಐ/ಐಪಿಎ-001/ಐಪಿ-ಪಿ00699/2017-2018/11226
ಎಎಫ್‌ಎ ವಿವರಗಳು: 31.12.2026ರವರೆಗೆ ಮಾನ್ಯತೆ ಹೊಂದಿದೆ
ಬಿ-725, ಪಶ್ಚಿಮ ಪ್ಲಾಝಾ, ಓಯು ಕಾಲೋನಿ, ಎಚ್‌ಎಸ್ ದರ್ಗಾ, ಓಯು ಕಾಲೋನಿ, ಹೈದರಾಬಾದ್- 500008

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

49, 'ಪರಿಸರ ಭವನ', 1 ರಿಂದ 5ನೇ ಅಂತಸ್ತು, ಚರ್ಚ್ ರಸ್ತೆ, ಬೆಂಗಳೂರು-560001, ಕರ್ನಾಟಕ,
ದೂರವಾಣಿ ಸಂಖ್ಯೆ : 25581383, 25589112, 25586520, ಫ್ಯಾಕ್ಸ್: 080-25586321
E-mail: ho@kspcb.gov.in, Website: https://kspcb.karnataka.gov.in

ವಾನಿಮಂ/03/ಹಿಪಅ/ಗಣಿ/ಪಸಾಸ/2026-27/974 ದಿನಾಂಕ: 11.06.2026

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಶ್ರೀ. ಬಸವರಾಜ್ ಎಸ್. ಮಲ್ಲಿ ಪಾಟೀಲ್ ಇವರು **ರಾಯಚೂರು ಜಿಲ್ಲೆ, ಸಿಂಧನೂರು ತಾಲ್ಲೂಕು, ಹೆಡಿಗಿನಾಳ ಗ್ರಾಮದ ಸರ್ವೆ ನಂ. 283/1, 284, 286/1, 287/4 ಮತ್ತು 287/3ರ ಸಮೀಪದಲ್ಲಿರುವ ತುಂಗಭದ್ರಾ ನದಿಪಾತ್ರ ಯೋಜನೆಯಲ್ಲಿರುವ "ಸಾಮಾನ್ಯ ಮರಳು ಬ್ಲಾಕ್-ಆರ್‌ಎಸ್‌ಬಿ-52"** ರಲ್ಲಿ ಒಟ್ಟು 12.20 ಎಕರೆ (5.058 ಹೆಕ್ಟೇರ್) ಸರ್ಕಾರಿ ಕಂದಾಯ ಭೂಮಿಯಲ್ಲಿ ವಾರ್ಷಿಕ 25,000 ಟನ್ ಉತ್ಪಾದನಾ ಸಾಮರ್ಥ್ಯದ ಸಾಮಾನ್ಯ ಮರಳು ಗಣಿಗಾರಿಕೆ ಯೋಜನೆಯನ್ನು 5ವರ್ಷಗಳ ಅವಧಿಗೆ ಕೈಗೊಳ್ಳಲು ಉದ್ದೇಶಿಸಿರುತ್ತಾರೆ. ಸದರಿ ಯೋಜನೆಯು ಪರಿಸರ ಆಘಾತ ಅಧ್ಯಯನ ಅಧಿಸೂಚನೆ, 2006 ಮತ್ತು ತಿದ್ದುಪಡಿಗಳಂತೆ ಬಿ1 ವರ್ಗದ ಚಟುವಟಿಕೆ 1(ಎ) – 'ಖನಿಜಗಳ ಗಣಿಗಾರಿಕೆ' ವರ್ಗವೆಂದು ಪರಿಗಣಿಸಲಾಗಿದೆ. ಸದರಿ ಯೋಜನೆಯ ಪ್ರವರ್ತಕರು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ **14.09.2006ರ** (ತಿದ್ದುಪಡಿ ದಿನಾಂಕ: 01.12.2009) ಪ್ರಕಾರ, ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರಿಂದ ಮೊದಲೇ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಹಾಗೂ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಿಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ. ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರ Terms of Reference ಪತ್ರ ಸಂಖ್ಯೆ: SEIAA 84 MIN 2026, ದಿನಾಂಕ:**16.04.2026** ಹಾಗೂ ಯೋಜನದಾರರು ನೀಡಿದ ನಿವೇದನೆಯ ಪತ್ರ **ದಿನಾಂಕ: 18.04.2026ರ** ಪ್ರಕಾರ ಮತ್ತು ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ, ರಾಯಚೂರು, ಇವರ ಪತ್ರ **ದಿನಾಂಕ: 27.05.2026ರಲ್ಲಿ** ಸೂಚಿಸಿದ ದಿನಾಂಕದಂತೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ನಡೆಸಲಾಗುತ್ತಿದೆ.

ಯೋಜನೆಯ ವಿವರಗಳು ಕಳಕಂಡಂತಿವೆ.

1. **ಕಂಪನಿಯ ಹೆಸರು ಮತ್ತು ವಿಳಾಸ: ಶ್ರೀ. ಬಸವರಾಜ್ ಎಸ್. ಮಲ್ಲಿ ಪಾಟೀಲ್, ತಂದೆ ಶಂಕರಗೌಡ ಮಲ್ಲಿ ಪಾಟೀಲ್,** ತಿಡಿಗೋಳ ಗ್ರಾಮ, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ-584 128.

2. **ಉದ್ದೇಶಿತ ಯೋಜನೆಯ ಸ್ಥಳ:** ರಾಯಚೂರು ಜಿಲ್ಲೆ, ಸಿಂಧನೂರು ತಾಲ್ಲೂಕು, ಹೆಡಿಗಿನಾಳ ಗ್ರಾಮದ ಸರ್ವೆ ನಂ. 283/1, 284, 286/1, 287/4 ಮತ್ತು 287/3ರ ಸಮೀಪದಲ್ಲಿರುವ ತುಂಗಭದ್ರಾ ನದಿಪಾತ್ರ ಯೋಜನೆಯಲ್ಲಿರುವ "ಸಾಮಾನ್ಯ ಮರಳು ಬ್ಲಾಕ್-ಆರ್‌ಎಸ್‌ಬಿ-52".

3. **ಉದ್ದೇಶಿತ ಯೋಜನೆಯ ವಿವರ :** ವಾರ್ಷಿಕ 25,000 ಟನ್ ಉತ್ಪಾದನಾ ಸಾಮರ್ಥ್ಯದ ಸಾಮಾನ್ಯ ಮರಳು ಗಣಿಗಾರಿಕೆ ಯೋಜನೆಯನ್ನು 5ವರ್ಷಗಳ ಅವಧಿಗೆ ಕೈಗೊಳ್ಳಲು ಉದ್ದೇಶಿಸಿರುತ್ತಾರೆ.

4. **ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ :** ದಿನಾಂಕ : 13.07.2026 (ಸೋಮವಾರ), ಸಮಯ : ಬೆಳಿಗ್ಗೆ 11:00 ಗಂಟೆ, ಸ್ಥಳ: ಆಂಜನೇಯ ಸ್ವಾಮಿ ದೇವಸ್ಥಾನ, ಹಳೇಊರು, ಹೆಡಿಗಿನಾಳ, ಸಿಂಧನೂರು.

5. **ಪರಿಸರ ಸಾರ್ವಜನಿಕ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಷೆಗೆ** ಲಭ್ಯವಿರುವ ಸ್ಥಳ. : ಅ. ಜಿಲ್ಲಾಧಿಕಾರಿಗಳ ಕಛೇರಿ, ರಾಯಚೂರು ಜಿಲ್ಲೆ, ರಾಯಚೂರು ಆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ರಾಯಚೂರು ಜಿಲ್ಲೆ, ರಾಯಚೂರು. ಇ. ಜಿಲ್ಲಾ ಕೈಗಾರಿಕಾ ಕೇಂದ್ರ, ರಾಯಚೂರು ಜಿಲ್ಲೆ, ರಾಯಚೂರು. ಈ. ತಹಶೀಲ್ದಾರರ ಕಾರ್ಯಾಲಯ, ಸಿಂಧನೂರು ತಾಲ್ಲೂಕು, ಉ. ಗಣಿ ಮತ್ತು ಭೂವಿಜ್ಞಾನ ಇಲಾಖೆ, ರಾಯಚೂರು. ಊ. ನಗರ ಸಭೆ ಕಾರ್ಯಾಲಯ, ಸಿಂಧನೂರು, ರಾಯಚೂರು ಜಿಲ್ಲೆ. ಋ. ಗ್ರಾಮ ಪಂಚಾಯತ್ ಕಾರ್ಯಾಲಯ, ಹೆಡಿಗಿನಾಳ ಗ್ರಾಮ, ಸಿಂಧನೂರು ತಾಲ್ಲೂಕು. ಎ. ವಲಯ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ವಿಜಯನಗರ. ಏ. ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ರಾಯಚೂರು. ಐ. ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, 7ನೇ ಮಹಡಿ 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಕರ್ನಾಟಕ, ಬೆಂಗಳೂರು-560 001. ಒ. ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, "ಪರಿಸರ ಭವನ", ನೆಲ ಮಹಡಿ, ನಂ. 49, ಚರ್ಚ್ ಸ್ಟ್ರೀಟ್, ಬೆಂಗಳೂರು-560001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ-ಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ-ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ, ರಾಯಚೂರು) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: **https://kspcb.karnataka.gov.in/** ನಲ್ಲಿ ಪಡೆಯಬಹುದು.

ಸಹಿ/-
ಸದಸ್ಯ ಕಾರ್ಯದರ್ಶಿ

ಪುತ್ತೂರಿನ ವಿವೇಕಾನಂದ ಸ್ವಾಯತ್ತ ಮಹಾವಿದ್ಯಾಲಯ



ಪುತ್ತೂರಿನಂತಹ ಗ್ರಾಮೀಣ ಪ್ರದೇಶದಲ್ಲಿ ಉನ್ನತ ಶಿಕ್ಷಣ ನೀಡಬೇಕೆಂಬ ಮಹದಾಸೆಯಿಂದ ಸ್ವಾತಂತ್ರ್ಯ ಪೂರ್ವದಲ್ಲಿಯೇ ಹುಟ್ಟಿಕೊಂಡ ಶಿಕ್ಷಣ ಸಂಸ್ಥೆ ಪುತ್ತೂರು ಎಜುಕೇಶನ್ ಸೊಸೈಟಿ. 1915ರಲ್ಲಿ ಸ್ಥಾಪನೆಯಾದ ಈ ಸಂಸ್ಥೆ, ರಾಷ್ಟ್ರೀಯ ಚಿಂತನೆಗಳನ್ನು ಬಲಪಡಿಸುವ ಉದ್ದೇಶವನ್ನೇ ಇಟ್ಟುಕೊಂಡು ಬೆಳೆಯಿತು. ಖಾಸಗಿ ನೆಲೆಯಿಂದ ಪ್ರಾರಂಭವಾದರೂ 1921ರಲ್ಲಿ ಸರಕಾರದ ಸುಪರ್ದಿಗೆ ಒಳಗಾಯಿತು. ಮುಂದಿನ ದಿನಗಳಲ್ಲಿ ಆರ್ಥಿಕವಾಗಿ ಹಿಂದುಳಿದ ಅರ್ಹ ವಿದ್ಯಾರ್ಥಿಗಳ ಅರ್ಧ ಶುಲ್ಕವನ್ನು ತಾನೇ ಭರಿಸಿಕೊಂಡು ಪುತ್ತೂರಿನ ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳುವ ಬಹಳ ದೊಡ್ಡ ಜವಾಬ್ದಾರಿಯನ್ನು ನಿರ್ವಹಿಸಿತು. 2009ರಲ್ಲಿ ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು ಎಂದು ಮರುನಾಮಕರಣಗೊಂಡಿತು. ಪ್ರಸ್ತುತ ಶಿಶು ಶಿಕ್ಷಣದಿಂದ ಪ್ರಾರಂಭಿಸಿ ಉನ್ನತ ಶಿಕ್ಷಣದವರೆಗೆ ಶಿಕ್ಷಣದಲ್ಲಿ ಭಾರತೀಯ ಜ್ಞಾನ ಶಾಖೆಗಳನ್ನು ಒಳಗೊಡಿಸಿಕೊಳ್ಳುತ್ತಾ ಸುಮಾರು 81 ಶಿಕ್ಷಣ ಸಂಸ್ಥೆಗಳನ್ನು ಮುನ್ನಡೆಸುತ್ತಿದೆ.

1960ರ ದಶಕದಲ್ಲಿ ಪುತ್ತೂರಿನಲ್ಲಿ ನಡೆದ ಕೆಲವು ವಿದ್ಯಮಾನಗಳಿಂದಾಗಿ ಭಾರತೀಯ ವಿಚಾರಧಾರೆಗೆ ಒತ್ತು ಕೊಡುವ ಕಾಲೇಜಿನ ಅನಿವಾರ್ಯತೆಯನ್ನು ಮನಗಂಡು 1965ರಲ್ಲಿ ಸ್ಥಾಪನೆಯಾದ ಸಂಸ್ಥೆಯೇ ವಿವೇಕಾನಂದ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ. ಆ ಕಾಲದಲ್ಲಿ ಪುತ್ತೂರಿನಲ್ಲಿ ವಕೀಲಿ ವೃತ್ತಿಯನ್ನು ನಡೆಸುತ್ತಿದ್ದ ಉರಿಮಜಲು ರಾಮ ಭಟ್ ಅವರ ಮುಂದಾಳುತ್ವ ಮತ್ತು ಪುತ್ತೂರಿನ ಜನತೆಯ ಸಹಕಾರದ ಫಲಶ್ರುತಿಯಿದು. ಶಿಕ್ಷಣದಲ್ಲಿ ರಾಷ್ಟ್ರೀಯತೆ, ಶಿಕ್ಷಣದಲ್ಲಿ ಆಧ್ಯಾತ್ಮಿಕತೆ, ಶಿಕ್ಷಣದಲ್ಲಿ ಸಾಂಸ್ಕೃತಿಕತೆ ಎನ್ನುವ ಧ್ಯೇಯವನ್ನು ಅಳವಡಿಸಿಕೊಂಡಿದೆ. ವಿದ್ಯಾರ್ಥಿಗಳಲ್ಲಿ ವ್ಯಕ್ತಿತ್ವವನ್ನು ನಿರ್ಮಾಣ ಮಾಡಿ ಅವರನ್ನು ದೇಶದ ಆಸ್ತಿಯನ್ನಾಗಿ ರೂಪಿಸುವ ಜವಾಬ್ದಾರಿಯ ಜೊತೆಗೆ ಗುಣಮಟ್ಟದ ಪರಿಣಾಮಕಾರಿ ಶಿಕ್ಷಣವನ್ನು ನೀಡುವ ಮಹತ್ತರವಾದ ಉದ್ದೇಶವನ್ನು ಇಟ್ಟುಕೊಂಡ ಸಂಸ್ಥೆಯಿದು. ಪ್ರಸ್ತುತ ಸ್ವಾಯತ್ತ ಸಂಸ್ಥೆಯಾಗಿ ರೂಪುಗೊಂಡು ತಮ್ಮ ನೆಲದ ಸಂಸ್ಕೃತಿ, ಸ್ಥಳೀಯ ಜ್ಞಾನ ಪರಂಪರೆ, ಜೊತೆಗೆ ಭಾರತೀಯ ಜ್ಞಾನ ಪರಂಪರೆಯನ್ನು ತಿಳಿಯುವ ತ್ರಿವಳಿ ಸೂತ್ರದೊಂದಿಗೆ ಉನ್ನತ ಶಿಕ್ಷಣ ನೀಡುವ ಕೆಲಸವನ್ನು ನಿರ್ವಹಿಸುತ್ತಿದೆ. ಗ್ರಾಮೀಣ ಭಾಗದ ಎಲ್ಲಾ ಯುವ ಸಮುದಾಯಕ್ಕೆ ಉನ್ನತ ಶಿಕ್ಷಣ ಸಿಗಬೇಕು ಎನ್ನುವ ಉದ್ದೇಶದಿಂದ ಅಂಕಗಳನ್ನು ಪರಿಗಣಿಸದೆ, ಉತ್ತೀರ್ಣದ ಕನಿಷ್ಠ ಅಂಕ ಪಡೆದ ವಿದ್ಯಾರ್ಥಿಗೂ ಅವನು ಬಯಸಿದ ವಿಷಯದ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟು ಉನ್ನತ ಶ್ರೇಣಿಯಲ್ಲಿ ತೇರ್ಗಡೆಗೊಳ್ಳುವಂತೆ ಶಿಕ್ಷಣಕ್ಕೆ ಒಳಪಡಿಸಿ ತಿದ್ದಿ ತೀಡಿ ಸಂಸ್ಕಾರದಿಂದ ಬದುಕುವಂತೆ ಮಾಡುವ ದೊಡ್ಡ ಆಶಯವನ್ನು ಇಟ್ಟುಕೊಂಡು ಯುವ ಸಮುದಾಯಕ್ಕೆ ದಾರಿ ತೋರಿಸುವ ಕೈದೀವಿಗೆಯಂತೆ ವಿವೇಕಾನಂದ ವಿದ್ಯಾಸಂಸ್ಥೆ ರೂಪುಗೊಂಡಿದೆ.

ಶೈಕ್ಷಣಿಕ ಸಾಧನೆಗಳು

ಕಾಲೇಜ್ 2022ರಲ್ಲಿ ಸ್ವಾಯತ್ತ ಸಂಸ್ಥೆಯಾಗಿ ರೂಪುಗೊಂಡಿತು. ಈ ಮೂಲಕ ತನ್ನದೇ ಆದ ಅಧ್ಯಯನ ಮಂಡಳಿ, ಪಠ್ಯಪುಸ್ತಕಗಳ ರಚನೆ, ಪ್ರಶ್ನೆಪತ್ರಿಕೆ ತಯಾರಿ, ಪರೀಕ್ಷಾಂಗ ವ್ಯವಸ್ಥೆ, ಸಂಶೋಧನೆ ಮುಂತಾದ ಅಂಗಗಳನ್ನು ಒಳಗೊಂಡಿದೆ. ಇದು ಕ್ಲಪ್ತ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ನಡೆಸಿ, ನಿಖರವಾದ ಫಲಿತಾಂಶವನ್ನು ಪ್ರಕಟಿಸಲು ಅನುಕೂಲವಾಗಿದೆ. ಈ ಅವಕಾಶವನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿ, ಫಲಿತಾಂಶ, ರ್‍ಯಾಂಕ್ ಘೋಷಣೆಯವರೆಗಿನ ಪ್ರತೀ ಹಂತವನ್ನು ಅತ್ಯಂತ ಜವಾಬ್ದಾರಿಯಿಂದ ನಿರ್ವಹಿಸುತ್ತಿದೆ. 'ಸಪ್ತಪರ್ಣೋತ್ಸವ' ಹೆಸರಿನಲ್ಲಿ ಪದವಿ ಪ್ರದಾನ ಸಮಾರಂಭ ಏರ್ಪಡಿಸಿ ರ್‍ಯಾಂಕ್ ವಿಜೇತರಿಗೆ ರ್‍ಯಾಂಕ್ ಪ್ರಮಾಣ ಪತ್ರಗಳನ್ನು ಪ್ರದಾನ ಮಾಡಲಾಗಿದೆ.

ಸೌಲಭ್ಯಗಳು

ಬೋಧನೆಗೆ ಪೂರಕವಾಗಿರುವ ಪವರ್ ಪ್ವೈಂಟ್, ಸ್ಮಾರ್ಟ್ ತರಗತಿಗಳು ಎನ್ನುವ ತಂತ್ರಜ್ಞಾನ ಆಧಾರಿತ ಕೊಠಡಿಗಳು, 80 ಸಾವಿರಕ್ಕಿಂತ ಹೆಚ್ಚುಗ್ರಂಥಗಳಿರುವ ಗ್ರಂಥಾಲಯ, ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ಪೂರಕವಾದ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡಿರುವ ಸುಧಾರಿತ ಪ್ರಯೋಗಾಲಯಗಳಿವೆ. ಸುಸಜ್ಜಿತವಾದ ಹವಾನಿಯಂತ್ರಿತ ಸಭಾಭವನ, ಪ್ರಾರ್ಥನಾ ಮಂದಿರ, ಧ್ಯಾನ ಮಂದಿರಗಳನ್ನು ಒಳಗೊಂಡಿದೆ. ಕಾಲೇಜಿನಲ್ಲಿ ಆಧುನಿಕ ಕಾಲದ ಅಗತ್ಯಗಳಾದ ಬ್ಯಾಂಕ್, ಎಟಿಎಂ, ಸಹಕಾರಿ ಸಂಘ, ಸ್ಟೇಷನರಿ ವ್ಯವಸ್ಥೆ ಹುಡುಗರಿಗೆ ಮತ್ತು ಹುಡುಗಿಯರಿಗೆ ಪ್ರತ್ಯೇಕವಾದ ಹಾಸ್ಟೆಲ್, ಕ್ಯಾಂಟೀನ್, ಆರೋಗ್ಯ ಮಂದಿರ, ಆಪ್ತ ಸಲಹಾ ಕೇಂದ್ರ ಮುಂತಾದ ಸೌಲಭ್ಯಗಳಿವೆ.

ಉಚಿತ ಭೋಜನದ ವ್ಯವಸ್ಥೆ

ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ 'ಅನ್ನಪೂರ್ಣ' ಉಚಿತ ಮಧ್ಯಾಹ್ನದ ಭೋಜನ ವ್ಯವಸ್ಥೆಯನ್ನು ಅತ್ಯಂತ ವ್ಯವಸ್ಥಿತವಾಗಿ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ. ಪ್ರತೀವರ್ಷ 100ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳು ಈ ಯೋಜನೆಯ ಪ್ರಯೋಜನವನ್ನು ಪಡೆಯುತ್ತಿದ್ದಾರೆ.

ವಿದ್ಯಾರ್ಥಿ ವೇತನ

ಕಳೆದ ಶೈಕ್ಷಣಿಕ (2025-26) ವರ್ಷದಲ್ಲಿ ಸುಮಾರು 900ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಸುಮಾರು ರೂ.80 ಲಕ್ಷಕ್ಕಿಂತಲೂ ಹೆಚ್ಚು ವಿದ್ಯಾರ್ಥಿವೇತನವನ್ನು ವಿತರಿಸಲಾಗಿದೆ. ಇದರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಒಬಿಸಿ, ಬೀಡಿಕಾರ್ಮಿಕ, ಮಾತೃ ಸಂಸ್ಥೆಯಾದ ವಿವೇಕಾನಂದ ವಿದ್ಯಾವರ್ಧಕ ಸಂಘ ಕೊಡಮಾಡುವ ದತ್ತಿ ನಿಧಿ, ವಿದ್ಯಾ ನಿಧಿ, ಪ್ರಧಾನ ಮಂತ್ರಿ ಆರ್ಮಿ ವಿದ್ಯಾರ್ಥಿ ವೇತನದಂತಹ ಸುಮಾರು 35 ವಿಭಾಗಗಳಲ್ಲಿ ವಿದ್ಯಾರ್ಥಿವೇತನ ಪಡೆಯುವ ಅವಕಾಶಗಳಿವೆ ಮತ್ತು ಪಡೆದುಕೊಂಡಿದ್ದಾರೆ.

ಸಂಸ್ಥೆಯ ಅನನ್ಯತೆ

ಅಧ್ಯಯನ ಬಯಸಿ ಬರುವ ಒಬ್ಬ ಹರೆಯದ ವಿದ್ಯಾರ್ಥಿಯ ಸರ್ವಾಂಗೀಣ ಬೆಳವಣಿಗೆಯ ದೃಷ್ಟಿಯಿಂದ ಸಂಸ್ಥೆಯ ಬೆಳಗ್ಗಿನ ತರಗತಿಗಳು ಸರಸ್ವತೀ ವಂದನೆ, ಶಾರದಾಗಾನ, ಬ್ರಹ್ಮನಾದ, ಗಾಯತ್ರೀ ಮಂತ್ರ, ರಾಷ್ಟ್ರವಂದನ, ಶಾಂತಿಮಂತ್ರವನ್ನು ಪಠಿಸುವ ಮೂಲಕ ಪ್ರಾರಂಭವಾಗುತ್ತದೆ. ಇದರ ಜೊತೆಗೆ ಬಂಕಿಮಚಂದ್ರ ಚಟ್ಟೋಪಾಧ್ಯಾಯರು ರಚಿಸಿದ ವಂದೇ ಮಾತರಂ ಪೂರ್ಣ ಪಠ್ಯವನ್ನು ಹಾಡುವುದರ ಮೂಲಕ ದೈನಂದಿನ ತರಗತಿಗಳು ಪ್ರಾರಂಭಗೊಳ್ಳುತ್ತವೆ. ವಾಲ್ಮೀಕಿ, ಕನಕದಾಸ ಮುಂತಾದ ರಾಷ್ಟ್ರಕಂಡ ಅನೇಕ ಸಂತರ, ಹೋರಾಟಗಾರರ, ಧಾರ್ಮಿಕ ಪುರುಷರ ಜಯಂತಿಗಳನ್ನು, ಯೋಗ ದಿನ, ಗುರು ಪೂರ್ಣಿಮೆ, ರಕ್ಷಾಬಂಧನ ಮುಂತಾದ ಅನೇಕ ವಿಶೇಷ ದಿನಗಳನ್ನು, ಸ್ವಾತಂತ್ರ್ಯೋತ್ಸವ, ವಿವೇಕಾನಂದ ಜಯಂತಿ, ಗಣರಾಜ್ಯೋತ್ಸವ ಮುಂತಾದ ರಾಷ್ಟ್ರೀಯ ಹಬ್ಬಗಳನ್ನು, ಗಣೇಶೋತ್ಸವ, ಶ್ರೀಕೃಷ್ಣಾಷ್ಟಮಿ, ಓಣಂ, ನವರಾತ್ರಿ, ದೀಪಾವಳಿ, ಯುಗಾದಿ ಮುಂತಾದ ಧಾರ್ಮಿಕ ಹಬ್ಬಗಳನ್ನು ಆಚರಿಸುತ್ತೇವೆ.

ಕ್ರೀಡಾ ವಿಭಾಗ

ಕ್ರೀಡಾ ವಿಭಾಗಗಳಲ್ಲಿ ವಿ.ವಿ. ಮಟ್ಟದಲ್ಲಿ, ಅಂತರ್ ವಿ.ವಿ. ಮಟ್ಟದಲ್ಲಿ, ದಸರಾ ಕ್ರೀಡಾಕೂಟದಲ್ಲಿ, ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಬಹುಮಾನ ಪಡೆಯುವ ಸಾಮರ್ಥ್ಯದ ಕ್ರೀಡಾಪಟುಗಳನ್ನು ರೂಪಿಸುತ್ತಿದೆ. ಇದಕ್ಕೆ ಪೂರಕವಾಗಿ 400 ಮೀಟರ್ ಓಟದ ಸ್ಪರ್ಧೆಗೆ ಅನುವಾಗುವಂತಿರುವ ವಿಶಾಲವಾದ ಕ್ರೀಡಾಂಗಣವಿದೆ. ವಾಲಿಬಾಲ್, ಫುಟ್‌ಬಾಲ್, ಕಬ್ಬಡ್ಡಿ, ತ್ರೋಬಾಲ್, ಶಟಲ್ ಬ್ಯಾಡ್ಮಿಂಟನ್, ಟೆನ್ನಿಸ್, ಕ್ರಿಕೆಟ್, ಕೊಕ್ಕೊ ಮುಂತಾದ ಕ್ರೀಡೆಗಳ ತರಬೇತಿಗಳು ನಿರಂತರವಾಗಿ ನಡೆಯುತ್ತಿದೆ. ಇದರ ಜೊತೆಗೆ ಗ್ರಾಮೀಣ ಕ್ರೀಡೆಗಳಾದ ಲಗೋರಿ, ಹಗ್ಗಜಗ್ಗಾಟ ಮುಂತಾದವುಗಳಿಗೂ ಪ್ರೋತ್ಸಾಹ ನೀಡುತ್ತಿದೆ. ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡಲು ಪೂರ್ಣಾವಧಿ ದೈಹಿಕ ಶಿಕ್ಷಣ ನಿರ್ದೇಶಕರ ತಂಡ ಕೆಲಸ ನಿರ್ವಹಿಸುತ್ತಿದೆ.

ಪಠ್ಯೇತರ ಚಟುವಟಿಕೆಗಳು

ಪಠ್ಯೇತರ ವಿಭಾಗದಲ್ಲಿ 25ಕ್ಕಿಂತ ಹೆಚ್ಚು ಸಂಘ ಸಂಸ್ಥೆಗಳು ಕೆಲಸ ಮಾಡುತ್ತಾ, ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಅಗತ್ಯವಿರುವ ಕಾರ್ಯಕ್ರಮಗಳನ್ನು ರೂಪಿಸುತ್ತಿವೆ. ಎನ್.ಸಿ.ಸಿ., ಎನ್ನೆಸ್ಸೆಸ್, ರೆಡ್‌ಕ್ರಾಸ್, ರೋವರ್ಸ್ ಮತ್ತು ರೇಂಜರ್ಸ್ ವಿಭಾಗಗಳು ಸಮಾಜಮುಖಿಯಾಗಿ ಕೆಲಸ ಮಾಡುತ್ತಿವೆ. ಕಳೆದ 3 ವರ್ಷಗಳಿಂದ ಸತತವಾಗಿ ಕಾಲೇಜಿನ ಎನ್‌ಸಿಸಿ ವಿದ್ಯಾರ್ಥಿಗಳು ನವದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಭಾಗವಹಿಸುತ್ತಿರುವುದು ಸಂಸ್ಥೆಗೆ ಹೆಮ್ಮೆಯ ವಿಷಯವಾಗಿದೆ.

ಉತ್ಸವಗಳು

ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಇವೆಂಟ್ ಮ್ಯಾನೇಜ್‌ಮೆಂಟ್ ಜ್ಞಾನವನ್ನು ಕೊಡುವ ದೃಷ್ಟಿಯಿಂದ ಅನೇಕ ಉತ್ಸವಗಳನ್ನು ರೂಪಿಸುತ್ತಿದ್ದೇವೆ. ಆಮಂತ್ರಣ ಪತ್ರಿಕೆ ಮಾಡುವುದು, ಬ್ಯಾನರ್ ಕಟ್ಟುವುದು, ಪ್ರಚಾರ ಮಾಡುವುದು, ಸ್ಪರ್ಧೆಗಳನ್ನು ನಡೆಸುವುದು, ಸಭಾಕಾರ್ಯಕ್ರಮ ರೂಪಿಸುವುದು, ಬಹುಮಾನಗಳನ್ನು ಆಯ್ಕೆ ಮಾಡುವುದು, ಪ್ರಮಾಣಪತ್ರವನ್ನು ರೂಪಿಸುವುದು ಮುಂತಾದವುಗಳನ್ನು ವಿದ್ಯಾರ್ಥಿಗಳೇ ನಿರ್ವಹಿಸುತ್ತಾರೆ. ಉದ್ಯೋಗ ಮತ್ತು ತರಬೇತಿ ವಿದ್ಯಾರ್ಥಿಗಳಿಗೆ ಅವರ ಉದ್ಯೋಗದ ಆಸಕ್ತಿ ಹಾಗೂ ಅವಶ್ಯಕತೆಗೆ ಅನುಸಾರವಾಗಿ ಹಾಗೂ ಅವಶ್ಯವಿರುವ ವಿವಿಧ ಕೌಶಲ್ಯಕ್ಕೆ ಸಂಬಂಧಿಸಿ ನಿರಂತರವಾಗಿ ತರಬೇತಿಯನ್ನು ನೀಡಲಾಗುತ್ತಿದೆ. ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ, ಸಂದರ್ಶನ ಎದುರಿಸುವ ಕೌಶಲ್ಯ, ಸ್ವಪರಿಚಯವನ್ನು ಸಿದ್ಧಪಡಿಸುವ ವಿಧಾನ, ವ್ಯಕ್ತಿತ್ವ ರೂಪಿಸುವ ವಿಧಾನ ಮುಂತಾದವುಗಳ ಕುರಿತು ನಿರಂತರ ತರಬೇತಿಗಳು ನಡೆಯುತ್ತವೆ. ಕಳೆದ ಶೈಕ್ಷಣಿಕ ವರ್ಷದಲ್ಲಿ ಸುಮಾರು 200ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳಿಗೆ ಬೇರೆ ಬೇರೆ ಕಂಪೆನಿಗಳಲ್ಲಿ ಉದ್ಯೋಗದ ಅವಕಾಶಗಳು ದೊರೆತಿವೆ.

ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ

ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುತ್ತಿದೆ. ಐಎಎಸ್, ಐಪಿಎಸ್, ಕೆಎಎಸ್ ಇತ್ಯಾದಿ ಪರೀಕ್ಷೆಗಳಿಗೆ 'ಯಶಸ್', ಸಿ.ಎ.ನಲ್ಲಿ ಆಸಕ್ತಿಯುಳ್ಳವರಿಗೆ 'ವಿಕಾಸ್' ಮತ್ತು ಶಿಕ್ಷಕ ವೃತ್ತಿಯಲ್ಲಿ ಮುಂದುವರಿಯಲು ಬಯಸುವವರಿಗೆ 'ಭವಿಷ್' ಘಟಕಗಳು ಕೆಲಸ ಮಾಡುತ್ತಿವೆ.

ವಿವೇಕಾನಂದ ಸಂಶೋಧನ ಕೇಂದ್ರ

ಸಂಶೋಧನೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ವಿವೇಕಾನಂದ ಸಂಶೋಧನಾ ಕೇಂದ್ರವು ಕೆಲಸ ನಿರ್ವಹಿಸುತ್ತದೆ. ವಿವೇಕಾನಂದ ಸಂಶೋಧನ ಕೇಂದ್ರದ ಅಡಿಯಲ್ಲಿ ಶಿವರಾಮ ಕಾರಂತ ಅಧ್ಯಯನ ಕೇಂದ್ರ, ದೇರಾಜೆ ಸೀತಾರಾಮಯ್ಯ ಯಕ್ಷಗಾನ ಅಧ್ಯಯನ ಕೇಂದ್ರ, ಭಾರತೀಯ ಸಂಸ್ಕೃತಿ ಮತ್ತು ಲಲಿತಕಲೆಗಳ ಅಧ್ಯಯನ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಇವುಗಳನ್ನು ಬಳಸಿಕೊಂಡು ಸ್ಥಳೀಯ ವಿಷಯಗಳ ಕುರಿತು ಆಳವಾದ ಅಧ್ಯಯನ ಮಾಡುವ ಅವಕಾಶವಿದೆ.

ಅಧ್ಯಯನದ ಅವಕಾಶಗಳು

ಸ್ನಾತಕ ಪದವಿಯಲ್ಲಿ ಬಿ.ಎ.: - ಎಚ್‌ಇಕೆ, ಎಚ್‌ಇಪಿ, ಎಚ್‌ಇಎಸ್, ಎಚ್‌ಇಇ ಬಿ.ಎ.: ಜರ್ನಲಿಸಂನೊಂದಿಗೆ ಎಚ್‌ಜೆಇ, ಎಚ್‌ಜೆಕೆ ಬಿ.ಎ.: ಸೈಕಲಾಜಿ ಜತೆ ಸೋಶಿಯಾಲಾಜಿ ಮತ್ತು ಇಂಗ್ಲೀಷ್ (ಆಪ್ಷನ್) ಬಿ.ಎಸ್ಸಿ.: ಪಿಎಂಸಿ, ಪಿಎಂಸಿಎಸ್, ಬಿಝೆಡ್‌ಸಿ ಬಿ.ಎಸ್ಸಿ. ಸೈಕಲಾಜಿ ಜತೆ ಝೂಲಾಜಿ ಮತ್ತು ಬಾಟನಿ ಬಿ.ಕಾಂ., ಬಿ.ಕಾಂ. (ಬಿಸಿನೆಸ್ ಡಾಟಾ ಅನಾಲಿಸಿಸ್), ಬಿ.ಕಾಂ. ಇಂಟಿಗ್ರೇಟೆಡ್ ಸಿಎ/ಸಿಎಸ್ ಬಿಬಿಎ, ಬಿಬಿಎ (ಲಾಜಿಸ್ಟಿಕ್ಸ್), ಬಿಸಿಎ, ಬಿಸಿಎ-ಎಐ-ಎಂಎಲ್, ಬಿಸಿಎ-ಸೈಬರ್ ಸೆಕ್ಯುರಿಟೀಸ್, ಬಿಸಿಎ-ಡಾಟಾ ಸೈನ್ಸ್ ಸ್ನಾತಕೋತ್ತರ ಪದವಿ: ಎಂ.ಕಾಂ., ಎಂಎಸ್ಸಿ (ಕೆಮೆಸ್ಟ್ರಿ), ಎಂಎಸ್ಸಿ (ಇಂಡಸ್ಟ್ರಿಯಲ್ ಕೆಮೆಸ್ಟ್ರಿ), ಎಂಎಸ್ಸಿ (ಮ್ಯಾಥಮ್ಯಾಟಿಕ್ಸ್), ಎಂ.ಎ. ಜರ್ನಲಿಸಂ ಮತ್ತು ಮಾಸ್ ಕಮ್ಯುನಿಕೇಶನ್ ಉದ್ದೇಶಿತ ಕೋರ್ಸುಗಳ ಅಧ್ಯಯನದ ಅವಕಾಶಗಳು: ಎಂಎಸ್ಸಿ (ಕಾರ್ಪೋರೇಟ್ ಸೈಕಲಾಜಿ), ಬಿ.ಎ.-ಪಬ್ಲಿಕ್ ಅಡ್ಮಿನಿಸ್ಟ್ರೇಶನ್, ಪಬ್ಲಿಕ್ ಪಾಲಿಸಿ ಉಚಿತ ಶಿಕ್ಷಣ 2026-27ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಪ್ರಥಮ ಕಲಾ ಮತ್ತು ಪ್ರಥಮ ವಿಜ್ಞಾನ ವಿಭಾಗಕ್ಕೆ ಸೇರುವ ಆರ್ಥಿಕವಾಗಿ ಹಿಂದುಳಿದ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗೆ ಉಚಿತ ಶಿಕ್ಷಣದ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

ಪ್ರಶಸ್ತಿಗಳು

ವಿಶೇಷವಾಗಿ ಸೃಜನಶೀಲ ಬರವಣಿಗೆಯಲ್ಲಿ ತೊಡಗಿಸಿಕೊಂಡ ವರನ್ನು ಗುರುತಿಸಿ ನಿರಂಜನ ಪ್ರಶಸ್ತಿಯನ್ನು ಹಾಗೂ ವಿದ್ವತ್ತಿನ ಕ್ಷೇತ್ರದಲ್ಲಿ ಕೆಲಸ ಮಾಡಿದ ವಿದ್ವಾಂಸರನ್ನು ಗುರುತಿಸಿ ಶಂಕರ ಸಾಹಿತ್ಯ ಪ್ರಶಸ್ತಿಯನ್ನು ಪ್ರತಿ ವರ್ಷ ನೀಡಿ ಗೌರವಿಸುತ್ತಿದ್ದೇವೆ. ಒಂದು ಶಿಕ್ಷಣ ಸಂಸ್ಥೆಯಾಗಿ ಸಾಹಿತ್ಯ ಕ್ಷೇತ್ರದ ಸಾಧಕರನ್ನು ಗುರುತಿಸಿ ಪ್ರಶಸ್ತಿಯನ್ನು ನೀಡುವ ಅಪರೂಪದ ವಿದ್ಯಾ ಸಂಸ್ಥೆಯಿದು.



ಪ್ರಸಾರಾಂಗ

ವಿವೇಕಾನಂದ ಮಹಾವಿದ್ಯಾಲಯ ಸ್ವಾಯತ್ತ ಸಂಸ್ಥೆಯಾದ ಬಳಿಕ ಜ್ಞಾನವನ್ನು ಸಮಾಜಕ್ಕೆ ಪಸರಿಸುವ ದೃಷ್ಟಿಯಿಂದ 'ಸೌರಭ' ಎನ್ನುವ ಜ್ಞಾನ ಪ್ರಸಾರಾಂಗ ವಿಭಾಗವನ್ನು ಆರಂಭಿಸಿದೆ. ಇಲ್ಲಿ ವಿದ್ಯಾರ್ಥಿಗಳು ಬೇರೆ ಬೇರೆ ವಿಷಯಗಳ ಕುರಿತು ಸಂಶೋಧನೆ ಮಾಡಿದಾಗ, ಅದನ್ನು ಪ್ರಕಟಿಸುವ ಅವಕಾಶಗಳಿವೆ. ಬರವಣಿಗೆ, ಸಂಶೋಧನೆಯಲ್ಲಿ ತೊಡಗಿಸಿಕೊಂಡ ವಿದ್ಯಾರ್ಥಿಗೆ ಇದೊಂದು ಸುವರ್ಣಾವಕಾಶವಾಗಿದೆ.

ಪೊಲೀಸ್ ಇಲಾಖೆಯ ಕ್ಷಿಪ್ರ ಕಾರ್ಯ ಸ್ವಾಗತಾರ್ಹ: ಬಿಲ್ಲವರ ಯೂನಿಯನ್



ಮಂಗಳೂರು: ಬಿಲ್ಲವಸಮಾಜದಮತ್ತು ಜಾತಿಯ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ತುಚ್ಛವಾಗಿ ಮಾತನಾಡಿರುವ ಮಹಿಳೆಯ ವಿರುದ್ಧ ಕ್ರಮಕ್ಕಾಗಿ ಬಿಲ್ಲವ ಸಮಾಜದ ಸಂಘಟನೆಗಳು ಪೊಲೀಸ್ ಇಲಾಖೆಗೆ ಮಾಡಿರುವ ಮನವಿಗೆ ಪೂರಕವಾಗಿ ಸ್ಪಂದಿಸಿ ಆರೋಪಿ ಮಹಿಳೆಯನ್ನು ಕ್ಷಿಪ್ರವಾಗಿ ಬಂಧಿಸಿರುವ ಪೊಲೀಸ್ ಇಲಾಖೆಯ ಕ್ಷಿಪ್ರ ಕಾರ್ಯ ಸ್ವಾಗತಾರ್ಹ ಎಂದು ಅಖಿಲ ಭಾರತ ಬಿಲ್ಲವರ ಯೂನಿಯನ್ ಅಧ್ಯಕ್ಷ ನವೀನ್ ಚಂದ್ರ ಸುವರ್ಣ ಹೇಳಿದ್ದಾರೆ.

ಸಾಮಾಜಿಕ ಸ್ವಾಸ್ಥ್ಯವನ್ನು ಕದಡಲು ಪ್ರಯತ್ನಿಸುವ ಇಂತಹ ಸಾಮಾಜಘಾತುಕರಿಗೆ ಕಾನೂನು ಪ್ರಕಾರ ಕಠಿಣ ಶಿಕ್ಷೆಯಾಗಬೇಕಿದೆ. ಬ್ರಹ್ಮಶ್ರೀ ನಾರಾಯಣ ಗುರುಗಳ ಸಂದೇಶದಂತೆ, ಸಾಮಾಜಿಕ ಸಾಮರಸ್ಯವನ್ನು ಉಳಿಸಬೇಕು ಎಂದು ಅವರು ಹೇಳಿದ್ದಾರೆ.

ಯೂನಿಯನ್ ಉಪಾಧ್ಯಕ್ಷ ಲೋಕನಾಥ ಅಮೀನ್ ಅವರು ಮಂಗಳೂರು ನಗರ ಪೊಲೀಸ್ ಆಯುಕ್ತರನ್ನು ಕಚೇರಿಯಲ್ಲಿ ಭೇಟಿ ಮಾಡಿ ಯೂನಿಯನ್ ವತಿಯಿಂದ ಅಭಿನಂದನೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಯೂನಿಯನ್‌ನ ಪ್ರಧಾನ ಕಾರ್ಯದರ್ಶಿ ಜೀವನ್ ಕುಮಾರ್ ತೊಕ್ಕೊಟ್ಟು, ಕೋಶಾಧಿಕಾರಿ ಬಿ.ದೇರಣ್ಣ, ಕ್ರೀಡಾ ಕಾರ್ಯದರ್ಶಿ ಜಯಪ್ರಕಾಶ್, ಮಹಿಳಾ ಸದಸ್ಯೆ ಸುಖಲಾಕ್ಷಿ ಸುವರ್ಣ ಇದ್ದರು.

ಫುಟ್ಬಾಲ್ ಪಂದ್ಯಾವಳಿಯ ಸಮಾರೋಪ ಸಮಾರಂಭದಲ್ಲಿ ಕೇರಳ ರಾಜ್ಯಪಾಲ

ಭವಿಷ್ಯ ರೂಪಿಸುವ ಸೈನಿಕ ಶಾಲೆಗಳು

ಮಡಿಕೇರಿ: ದೇಶಭಕ್ತಿ, ಪ್ರಾಮಾಣಿಕತೆ, ನಾಯಕತ್ವ ಮತ್ತು ದೇಶ ಸೇವೆಯ ಮೌಲ್ಯಗಳನ್ನು ಹೊಂದಿರುವ ಭವಿಷ್ಯದ ಯುವಕರನ್ನು ರೂಪಿಸುವಲ್ಲಿ ಸೈನಿಕ ಶಾಲೆಗಳ ಪಾತ್ರ ಅತ್ಯಂತ ಮಹತ್ವದ್ದು ಎಂದು ಕೇರಳಂ ಮತ್ತು ತಮಿಳುನಾಡು ರಾಜ್ಯಗಳ ರಾಜ್ಯಪಾಲ ರಾಜೇಂದ್ರ ವಿಶ್ವನಾಥ ಆರ್ಲೇಕರ್ ಅಭಿಪ್ರಾಯಪಟ್ಟರು.

ಕುಶಾಲನಗರ ಸಮೀಪದ ಕೂಡಿಗೆಯಲ್ಲಿರುವ ಕೊಡಗು ಸೈನಿಕ ಶಾಲೆಯಲ್ಲಿ ಆಯೋಜಿಸಲಾಗಿದ್ದ ಅಖಿಲ ಭಾರತ ಸೈನಿಕ ಶಾಲೆಗಳ ಅಂತರ ಗುಂಪು ಫುಟ್ಬಾಲ್ ಪಂದ್ಯಾವಳಿ 2026 (ಪೂರ್ವ ಸುಬ್ರೊತೊ ಕಪ್ 2026) ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ವಿಜೇತ ತಂಡಗಳಿಗೆ ಬಹುಮಾನ ವಿತರಿಸಿ ಅವರು ಮಾತನಾಡಿದರು.

ದೇಶದ ವಿವಿಧ ಭಾಗಗಳಿಂದ ಆಗಮಿಸಿದ ಯುವ ಫುಟ್ಬಾಲ್ ಆಟಗಾರರ ಶಿಸ್ತು, ಸಮರ್ಪಣೆ, ತಂಡದ ಮನೋಭಾವ ಮತ್ತು ಕ್ರೀಡಾ ಸ್ಫೂರ್ತಿಯನ್ನು ಪ್ರಶಂಸಿಸಿದ ಅವರು, ಕೊಡಗು ಸೈನಿಕ ಶಾಲೆಯ ಸಮಗ್ರ ಶಿಕ್ಷಣ, ಕ್ರೀಡಾ ಶ್ರೇಷ್ಠತೆ, ಸಾಂಸ್ಕೃತಿಕ ಏಕತೆ ಮತ್ತು ರಾಷ್ಟ್ರ ನಿರ್ಮಾಣದ ಕಾರ್ಯಗಳನ್ನೂ ಅವರು ಈ ಸಂದರ್ಭ ಶ್ಲಾಘಿಸಿದರು.

ಗೌರವ ಅತಿಥಿಯಾಗಿದ್ದ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ರಾಷ್ಟ್ರೀಯ ಮಹತ್ವದ ಈ ಪಂದ್ಯಾವಳಿಯನ್ನು ಅತ್ಯುತ್ತಮವಾಗಿ ಆಯೋಜಿಸಿದ ಕೊಡಗು ಸೈನಿಕ ಶಾಲೆಗೆ ಅಭಿನಂದನೆ ಸಲ್ಲಿಸಿದರಲ್ಲದೆ, ಶಿಕ್ಷಣ, ಕ್ರೀಡೆ, ಮೂಲಸೌಕರ್ಯ, ಶಿಸ್ತು ಹಾಗೂ ವ್ಯಕ್ತಿತ್ವ ನಿರ್ಮಾಣ ಕ್ಷೇತ್ರಗಳಲ್ಲಿ ಶಾಲೆಯ ಸಾಧನೆಯನ್ನು ಶ್ಲಾಘಿಸಿದರು.

ದೇಶ ಸೇವೆ ಹಾಗೂ ನಾಯಕತ್ವಕ್ಕೆ ಬದ್ಧವಾದ ದೇಶಭಕ್ತ ಯುವಜನರನ್ನು ರೂಪಿಸುವಲ್ಲಿ ಸೈನಿಕ ಶಾಲೆಗಳ ಪಾತ್ರ ಮಹತ್ವದ್ದಾಗಿದೆ ಎಂದು ಅವರು ನುಡಿದರು.



ಮುಖ್ಯ ಅತಿಥಿಗಳನ್ನು ಶಾಲೆಯ ಪ್ರಾಂಶುಪಾಲ ಕರ್ನಲ್ ಅಮರ್ ಜೀತ್ ಸಿಂಗ್ ಅವರು ಸಾಂಪ್ರದಾಯಿಕ ಅಶ್ವದಳದ ಮೂಲಕ ಆತ್ಮೀಯವಾಗಿ ಸ್ವಾಗತಿಸಿದರು. ನಂತರ ಮುಖ್ಯ ಅತಿಥಿಗಳು ಹಾಗೂ ಗೌರವ ಅತಿಥಿಗಳು ಶಾಲೆಯಲ್ಲಿರುವ ಯುದ್ಧ ಸ್ಮಾರಕಕ್ಕೆ ಪುಷ್ಪ ನಮನ ಸಲ್ಲಿಸಿ ವೀರ ಯೋಧರಿಗೆ ಗೌರವ ಸಮರ್ಪಿಸಿದರು. ಕೇರಳಂ-ತಮಿಳುನಾಡು ರಾಜ್ಯಗಳ ರಾಜ್ಯಪಾಲರಿಗೆ ಶಾಲೆಯ ವಿದ್ಯಾರ್ಥಿಗಳಿಂದ ಗೌರವ ವಂದನೆ ಸಲ್ಲಿಸಲಾಯಿತು.

ಹಿರಿಯ ಶಿಕ್ಷಕ ವಿಪಿನ್ ಕುಮಾರ್ ಅವರು ಗೌರವ ಅತಿಥಿಗಳ ಪರಿಚಯ ಮಾಡಿಕೊಟ್ಟರೆ, ಉಪ ಪ್ರಾಂಶುಪಾಲ ವಿಂಗ್ ಕಮಾಂಡರ್ ಮೊಹಮ್ಮದ್ ಶಾಜಿ ಅವರು ಮುಖ್ಯ ಅತಿಥಿಗಳನ್ನು ಪರಿಚಯವನ್ನು ನೀಡಿದರು.

ಕರ್ನಲ್ ಅಮರ್ ಜೀತ್ ಸಿಂಗ್ ಅವರು ಗಣ್ಯರು, ಭಾಗವಹಿಸಿದ ತಂಡಗಳು, ಎಸ್ಕಾರ್ಟ್ ಸಿಬ್ಬಂದಿ, ತೀರ್ಪುಗಾರರು, ತರಬೇತುದಾರರು, ಮಾಧ್ಯಮ ಪ್ರತಿನಿಧಿಗಳು, ಪೋಷಕರು, ವಿದ್ಯಾರ್ಥಿಗಳನ್ನು ಸ್ವಾಗತಿಸಿದರು. ಶಾಲೆಯ ಇತಿಹಾಸದಲ್ಲಿಯೇ ಇದೊಂದು ಸ್ಮರಣೀಯ ಹಾಗೂ ಐತಿಹಾಸಿಕ ಕ್ಷಣವೆಂದು ಬಣ್ಣಿಸಿದ ಅವರು, ಪಂದ್ಯಾವಳಿಯ ಅವಧಿಯಲ್ಲಿ ಕ್ರೀಡಾಸ್ಫೂರ್ತಿ, ಶಿಸ್ತು, ತಂಡದ ಮನೋಭಾವ ಹಾಗೂ ರಾಷ್ಟ್ರೀಯ ಏಕತೆಯ ಮೌಲ್ಯಗಳು ಶಾಲಾ ಆವರಣದಲ್ಲಿ ಸ್ಪಷ್ಟವಾಗಿ ಪ್ರತಿಬಿಂಬಿಸಿದ್ದವು ಎಂದು ನುಡಿದರು. ಸಮಾರಂಭದ ಪ್ರಮುಖ ಆಕರ್ಷಣೆಯಾಗಿ ಭಾಗವಹಿಸಿದ್ದ ಎಲ್ಲಾ ತಂಡಗಳ ಶಿಸ್ತಿನ ಪಥಸಂಚಲನ ನಡೆಯಿತು. ರಾಜ್ಯಪಾಲರು ಪಥಸಂಚಲನದ ಗೌರವ ವಂದನೆಯನ್ನು ಸ್ವೀಕರಿಸಿದರು. ಬಳಿಕ ಶಾಲಾ ವಿದ್ಯಾರ್ಥಿಗಳು ಪ್ರದರ್ಶಿಸಿದ ಡೊಳ್ಳು ಕುಣಿತ ಕರ್ನಾಟಕದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಅನಾವರಣಗೊಳಿಸಿತು.

ಜಿಮ್ ಉದ್ಘಾಟನೆ

ರಾಜ್ಯಪಾಲರು ಶಾಲೆಯ ಕೆ ಎಂ ಪಿ ಸಭಾಂಗಣದಲ್ಲಿ ನವೀಕೃತ ಶಾಲಾ ಜಿಮ್ ಉದ್ಘಾಟಿಸಿದರು. ನಂತರ ಗಣ್ಯರು ಕೆಡೆಟ್‌ಗಳು ಮತ್ತು ಭಾಗವಹಿಸಿದ ತಂಡಗಳೊಂದಿಗೆ ಕೆಡೆಟ್ಸ್ ಮೆಸ್ಸಿನಲ್ಲಿ ಆಯೋಜಿಸಲಾದ ವಿಶೇಷ ಭೋಜನ ಕಾರ್ಯಕ್ರಮದಲ್ಲಿ ಸಂವಾದ ನಡೆಸಿದರು.

ಕೇಂದ್ರ ಸರ್ಕಾರದಿಂದ 6 ಕೋಟಿ ಅನುದಾನ: ವಿ.ಸುನಿಲ್ ಕುಮಾರ್

ಕಾರ್ಕಳ : ಕಾರ್ಕಳ ವಿಧಾನ ಸಭಾ ಕ್ಷೇತ್ರದ ಕಾರ್ಕಳ ಹಾಗೂ ಹೆಬ್ರಿ ತಾಲೂಕು ವ್ಯಾಪ್ತಿಯಲ್ಲಿನ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿಗೆ ಕೇಂದ್ರ ಸರ್ಕಾರದ ಕೇಂದ್ರ ರಸ್ತೆ ಮತ್ತು ಮೂಲಸೌಕರ್ಯ ನಿಧಿ ಅಡಿಯಲ್ಲಿ 6 ಕೋಟಿ ರೂಪಾಯಿ ಅನುದಾನ ಮಂಜೂರಾಗಿ ಆಡಳಿತಾತ್ಮಕ ಅನುಮೋದನೆ ಆಗಿದೆ.

ಕಾರ್ಕಳಕ್ಷೇತ್ರದಸಾರ್ವಜನಿಕರಬಹುದಿನಗಳಬೇಡಿಕೆಯಾಗಿದ್ದ ಹೆಬ್ರಿ ತಾಲೂಕಿನ ಬಚ್ಚಪ್ಪುವಿನಿಂದ - ಹೆಬ್ರಿ ಕಡೆಗೆ ಹೋಗುವ ರಸ್ತೆ ಅಭಿವೃದ್ಧಿ, ಮುಂಡ್ಕೂರು ಪೇಟೆಯ ರಸ್ತೆ ಅಭಿವೃದ್ಧಿ, ನಿಟ್ಟೆ



ಕೆಮ್ಮಣ್ಣು ಬಪ್ಪಗೋಳಿ ದ್ವಾರದಿಂದ ಕೆಮ್ಮಣ್ಣು ದುರ್ಗಾಪರಮೇಶ್ವರಿ ದೇವಸ್ಥಾನ ರಸ್ತೆ ಅಭಿವೃದ್ಧಿ, ಅಜೆಕಾರು-ಹೆರ್ಮುಂಡೆ ಚರ್ಚ್ ಹತ್ತಿರದ ರಸ್ತೆ ಅಭಿವೃದ್ಧಿ, ಕಾರ್ಕಳ ನಾರಾವಿ ಮುಖ್ಯ ರಸ್ತೆಯ ಈದು ಕ್ರಾಸ್ ರಸ್ತೆ ಅಭಿವೃದ್ಧಿ, ಪಡುಕುಡೂರು ಶಾಲೆಯಿಂದ ಶಿವಪುರ ರಸ್ತೆ ಅಭಿವೃದ್ಧಿ ಸೇರಿದಂತೆ ಒಟ್ಟು 6 ರಸ್ತೆಗಳ ಅಭಿವೃದ್ಧಿಗೆ ತಲಾ 1 ಕೋಟಿ ರೂಪಾಯಿಗಳಂತೆ ಒಟ್ಟು 6 ಕೋಟಿ ರೂಪಾಯಿ ಅನುದಾನ ಮಂಜೂರಾಗಿದೆ.

ಸಾರ್ವಜನಿಕರ ಹಾಗೂ ವಾಹನಗಳ ಸುರಕ್ಷಿತ ಹಾಗೂ ಸುಗಮ ಸಂಚಾರಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ರಸ್ತೆಗಳ ನಿರ್ಮಾಣಕ್ಕೆ ವಿಶೇಷ ಅನುದಾನ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಹಾಗೂ ಸಂಸದರಾದ ಕೋಟ ಶ್ರೀನಿವಾಸ ಪೂಜಾರಿಯವರ ಮುಖೇನ ಮನವಿ ಮಾಡಲಾಗಿತ್ತು. ಇದರ ಪರಿಣಾಮವಾಗಿ ಕಾರ್ಕಳ ವಿಧಾನ ಸಭಾ ಕ್ಷೇತ್ರಕ್ಕೆ 6 ಕೋಟಿ ರೂ. ಅನುದಾನ ಮಂಜೂರಾಗಿ ಸದ್ರಿ ರಸ್ತೆಗಳ ನಿರ್ಮಾಣ ಕಾರ್ಯಕ್ಕೆ ಸರಕಾರದ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಆದಷ್ಟು ಶೀಘ್ರವಾಗಿ ಇಲಾಖಾ ಪ್ರಕ್ರಿಯೆಗಳನ್ನು ಮುಗಿಸಿ ಕಾಮಗಾರಿಗಳನ್ನು ಆರಂಭಿಸಲಾಗುವುದು ಎಂದು ಶಾಸಕ ವಿ.ಸುನಿಲ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ಪ್ರೊ.ಬಾಲಕೃಷ್ಣ ಗಟ್ಟಿ

ಬಂಟ್ವಾಳ: ಹಿರಿಯ ಪತ್ರಕರ್ತರು, ಬಂಟ್ವಾಳ ಎಸ್‌ವಿಎಸ್. ಕಾಲೇಜಿನಲ್ಲಿ ಅರ್ಥಶಾಸ್ತ್ರ ಉಪನ್ಯಾಸಕರಾಗಿ, ಪ್ರಾಂಶುಪಾಲರಾಗಿ ನಿವೃತ್ತರಾದ ಪ್ರೊ.ಬಾಲಕೃಷ್ಣ ಗಟ್ಟಿ ಅವರು ಮಂಗಳೂರಿನಲ್ಲಿರುವ ಸ್ವಗೃಹದಲ್ಲಿ ಶುಕ್ರವಾರ ನಿಧನರಾಗಿದ್ದಾರೆ. ಅವರಿಗೆ 83 ವರ್ಷವಾಗಿತ್ತು.



ಮೂಲತಃ ಕಾಸರಗೋಡಿನವರಾದ ಇವರು ಬಂಟ್ವಾಳದಲ್ಲಿ ಸುದೀರ್ಘ ಕಾಲ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದು ವಿವಿಧ ಪತ್ರಿಕೆಯಲ್ಲಿ ವರದಿಗಾರರಾಗಿದ್ದರು. ನೇತ್ರಾವತಿ ವಾರ್ತೆ ದಿನ ಪತ್ರಿಕೆಯನ್ನು ಪ್ರಾರಂಭಿಸಿ ಅನೇಕ ಕಿರಿಯ ಪತ್ರಕರ್ತರಿಗೆ ಮಾರ್ಗದರ್ಶಕರಾಗಿದ್ದರು. ಸರಳ ನಿಷ್ಠುರ ಬರೆವಣಿಗೆ ಮೂಲಕ ಪತ್ರಿಕಾರಂಗದಲ್ಲಿ ದಶಕಗಳ ಕಾಲ ಗುರುತಿಸಲ್ಪಟ್ಟಿದ್ದರು. ಬಂಟ್ವಾಳ ತಾಲೂಕು ಗ್ರಾಮೀಣ ಪತ್ರಕರ್ತರ ಸಂಘದ ಸ್ಥಾಪಕಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಉತ್ತಮ ವಾಗ್ಮಿಯಾಗಿದ್ದ ಅವರು 2024 ರಲ್ಲಿ ಅಮ್ಮುಂಜೆಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಉಪನ್ಯಾಸಕ ವೃತ್ತಿಯ ನಿವೃತ್ತಿ ಬಳಿಕ ಕೆಲವೊಂದು ಕಾಲೇಜುಗಳಲ್ಲಿ ಆಡಳಿತಾಧಿಕಾರಿಯಾಗಿಯೂ ಅವರು ಕಾರ್ಯ ನಿರ್ವಹಿಸಿದ್ದರು.

ಮೃತರು ಪತ್ನಿ, ಓರ್ವ ಪುತ್ರ, ಒಬ್ಬಳು ಪುತ್ರಿ ಮತ್ತು ಬಂಧು ಬಳಗವನ್ನು ಅಗಲಿದ್ದಾರೆ.


ಎನ್.ಗಣೇಶ



ಮಡಿಕೇರಿ: ನಾಪೋಕ್ಲು ಬೇತು ಗ್ರಾಮದ ನಿವಾಸಿ ಮೂಟೇರಿ ಎನ್.ಗಣೇಶ (78) ಅವರು ಗುರುವಾರ ಬೆಳಗ್ಗೆ ನಿಧನ ಹೊಂದಿದರು. ಅವರು ಪತ್ನಿ, ಓರ್ವ ಪುತ್ರ ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ.

ಶ್ರೀಧರ್ ಭಾಗವತ್

ಸುಬ್ರಹ್ಮಣ್ಯ: ಹರಿಹರ ಪಳ್ಳತ್ತಡ್ಕ ಗ್ರಾಮದ ಕಜ್ಜೋಡಿ ನಿವಾಸಿ ನಿವೃತ್ತ ಉಪನ್ಯಾಸಕ ಶ್ರೀಧರ್ ಭಾಗವತ್ (80) ಗುರುವಾರ ರಾತ್ರಿ ಸ್ವಗೃಹದಲ್ಲಿ ನಿಧನರಾದರು. ಅಧ್ಯಾಪಕ ವೃತ್ತಿಯಲ್ಲಿ ದೀರ್ಘ ಕಾಲ ಸೇವೆ ಸಲ್ಲಿಸಿದ್ದ ಅವರು ಸಹಾಯಕ ಪ್ರಾಧ್ಯಾಪಕರಾಗಿ, ಉಪನ್ಯಾಸಕರಾಗಿ ಹಾಗೂ ಮುಖ್ಯೋಪಾಧ್ಯಾಯರಾಗಿ ಕಡಬ, ಗುತ್ತಿಗಾರು, ದುಗ್ಗಲಡ್ಕ ಹಾಗೂ ಪಂಜ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿದ್ದರು. ಅಲ್ಲದೆ, ಅವರು ಶ್ರೀ ಹರಿಹರೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು. ಅವರು ಪತ್ನಿ, ಈರ್ವರು ಪುತ್ರರು ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ.



ಪಿ. ಶ್ರೀನಿವಾಸ ನಾಯಕ್

ಬಂಟ್ವಾಳ: ಮೆಲ್ಕಾರ್‌ನ ಹವ್ಯಾಸಿ ನಾಟಕ ಕಲಾವಿದ ಪಿ. ಶ್ರೀನಿವಾಸ ನಾಯಕ್ (83) ಅವರು ಅಲ್ಪ ಕಾಲದ ಅಸೌಖ್ಯದಿಂದ ಬೋಳಂಗಡಿಯ ಸ್ವಗೃಹದಲ್ಲಿ ನಿಧನ ಹೊಂದಿದರು.



ಸುಜೀರ್ ಕುಟುಂಬಸ್ಥರಾದ ಅವರು ಪತ್ನಿ, ಇಬ್ಬರು ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ.

ಮೃತರು ಮೆಲ್ಕಾರ್ ಯುವಕ ವೃಂದದ ಸ್ಥಾಪಕ ಅಧ್ಯಕ್ಷರಾಗಿ, ಶ್ರೀಕೃಷ್ಣ ಜನ್ಮಾಷ್ಟಮಿ ಸಮಿತಿಯ ಅಧ್ಯಕ್ಷರಾಗಿ, ನರಹರಿ ಪರ್ವತದ ಸಕ್ರಿಯ ಸೇವಾ ಕಾರ್ಯಕರ್ತರಾಗಿ, ಅಯ್ಯಪ್ಪ ವ್ರತಧಾರಿಗಳ ಗುರುಸ್ವಾಮಿಯಾಗಿ ಮೆಲ್ಕಾರ್ ದುರ್ಗಾ ಪರಮೇಶ್ವರಿ ಭಜನಾ ಮಂದಿರದ ಸೇವಾ ಕಾರ್ಯಕರ್ತರಾಗಿ ಮೆಲ್ಕಾರ್ ಬಯಲಾಟ ಸಮಿತಿಯ ಪೋಷಕರಾಗಿಯೂ ಕಾರ್ಯ ನಿರ್ವಹಿಸಿದ್ದರು. ಕ್ರೀಡಾಭಿಮಾನಿಯಾಗಿದ್ದ ಅವರು ಹವ್ಯಾಸಿ ರಂಗ ಕಲಾವಿದರಾಗಿದ್ದು ಹಲವು ನಾಟಕಗಳಲ್ಲಿ ಅಭಿನಯಿಸಿದ್ದರು.

ರಾಮೋಲಾ ಜೆ. ಹೆಜಮಾಡಿ

ಪಡುಬಿದ್ರಿ : ಹೆಜಮಾಡಿ ದೊಡ್ಡಮನೆ ನಿವಾಸಿ ರಾಮೋಲಾ ಜೆ. ಹೆಜಮಾಡಿ (84) ಅವರು ಜೂ. 12ರಂದು ನಿಧನರಾದರು. ಅವರು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. 1990ರ ದಶಕದಲ್ಲಿ ಹೆಜಮಾಡಿಯ ಮಹಿಳೆಯರನ್ನು ಸಂಘಟಿಸಿ ಜೈ ಕರ್ನಾಟಕ ಮಹಿಳಾ ಮಂಡಳಿಯನ್ನು ಸ್ಥಾಪಿಸಿ, ಅದರ ಸ್ಥಾಪಕ ಅಧ್ಯಕ್ಷೆಯಾಗಿ ಸೇವೆ ಸಲ್ಲಿಸಿದ್ದ ಅವರು, ಮಹಿಳೆಯರ ಸಬಲೀಕರಣಕ್ಕಾಗಿ ವಿಶೇಷ ಕಾಳಜಿ ವಹಿಸಿದ್ದರು.



ಅನೇಕ ಮಹಿಳೆಯರಿಗೆ ಹೊಲಿಗೆ ತರಬೇತಿ ಹಾಗೂ ಹೊಲಿಗೆ ವೃತ್ತಿಯಲ್ಲಿ ತೊಡಗಿಸಿ ಕೊಳ್ಳಲು ಪ್ರೋತ್ಸಾಹ ನೀಡಿ ಸ್ವಾವಲಂಬಿ ಜೀವನ ರೂಪಿಸಿಕೊಳ್ಳಲು ನೆರವಾಗಿದ್ದರು. ಅಲ್ಲದೆ, ಅವರು ಹೆಜಮಾಡಿ ಬಿಲ್ಲವರ ಸಂಘದ ಉಪಾಧ್ಯಕ್ಷೆಯಾಗಿ, ಹೆಜಮಾಡಿ ಹಾಲು ಉತ್ಪಾದಕರ ಸಹಕಾರ ಸಂಘದ ನಿರ್ದೇಶಕಿಯಾಗಿ ಹಾಗೂ ದಕ್ಷಿಣ ಕನ್ನಡ-ಕಾಸರಗೋಡು ಜಿಲ್ಲಾ ಒಕ್ಕೂಟದ ಜಿಲ್ಲಾ ಮಹಿಳಾ ಸಂಚಾಲಕಿಯಾಗಿ ವಿವಿಧ ಸಾಮಾಜಿಕ ಮತ್ತು ಸಹಕಾರಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದರು.

ಎ ಐ ಆಧಾರಿತ ಸೈನ್ ಲ್ಯಾಂಗ್ವೇಜ್ ಅನುವಾದಕದ ಅಭಿವೃದ್ಧಿ

ಬಂಟಕಲ್ ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳ ಸಾಧನೆ

ಶಿರ್ವ: ಬಂಟಕಲ್ಲು ಶ್ರೀ ಮಧ್ವವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಕಲಿಕೆ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿಗಳಾದ ಎಂ. ಮನೀಶ್, ನಿಶಾಂತ್, ನಿಶಾಂತ್ ಎ. ಜತ್ತನ್ ಹಾಗೂ ಸುರಭಿ ಜೋಗಿ ಇವರು ಶ್ರವಣ ಮತ್ತು ವಾಕ್ ದೋಷ ಹೊಂದಿರುವ ಮಕ್ಕಳಿಗಾಗಿ ಎಐ ಆಧಾರಿತ ಸೈನ್ ಲ್ಯಾಂಗ್ವೇಜ್ ಅನುವಾದಕವನ್ನು ವಿಭಾಗದ ಪ್ರಾಧ್ಯಾಪಕಿಯಾದ ಡಾ. ಮಮತ ಬಿ ಇವರ ಮಾರ್ಗದರ್ಶನದಲ್ಲಿ ಅಭಿವೃದ್ಧಿ ಪಡಿಸಿದ್ದಾರೆ. ಈ ಯೋಜನೆಯು ಇಂಡಿಯನ್ ಸೈನ್ ಲ್ಯಾಂಗ್ವೇಜ್ ಬಳಸುವವರು ಮತ್ತು ಶ್ರವಣ ಸಾಮರ್ಥ್ಯ ಹೊಂದಿರುವ ಸಮುದಾಯದವರ ನಡುವಿನ ಸಂವಹನದ ಅಂತರವನ್ನು ಕಡಿಮೆಗೊಳಿಸುವ ಉದ್ದೇಶವನ್ನು ಹೊಂದಿದೆ.



ಇಂಡಿಯನ್ ಸೈನ್ ಲ್ಯಾಂಗ್ವೇಜ್ ನೈಜ ಸಮಯದಲ್ಲಿ ಧ್ವನಿಯಾಗಿ ಪರಿವರ್ತಿಸುವುದರ ಜೊತೆಗೆ, ಮಾತನಾಡುವ ಭಾಷೆಯನ್ನು ಇಂಡಿಯನ್ ಸೈನ್ ಲ್ಯಾಂಗ್ವೇಜ್ ಪ್ರೊಸೆಸಿಂಗ್ ತಂತ್ರಜ್ಞಾನಗಳ ಬಳಕೆಯಿಂದ ಸುಗಮವಾಗಿ ಸಂವಹನ ಪ್ರಕ್ರಿಯೆಯು ನಡೆಯುತ್ತದೆ. ಕೈ ಸಂಜ್ಞೆ ಗುರುತಿಸುವಿಕೆ, ಧ್ವನಿ ಸಂಸ್ಕರಣೆ, ಭಾಷಾ ಮಾದರೀಕರಣ ಮುಂತಾದ ವ್ಯವಸ್ಥೆಯು ಶ್ರವಣ ಮತ್ತು ವಾಕ್ ದೋಷ ಹೊಂದಿರುವ ವ್ಯಕ್ತಿಗಳ ಪ್ರವೇಶಾತ್ಮಕತೆ ಹಾಗೂ ಸಾಮಾಜಿಕ ಒಳಗೊಳ್ಳುವಿಕೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ.

ಕಿರುಸುದ್ದಿ

ಮಹಿಳಾ ವಿಶ್ವಕಪ್: ಒಂದೇ ದಿನ, 3 ಪಂದ್ಯ

ಲಂಡನ್: ಭರ್ಜರಿ ಚಾಲನೆ ಪಡೆದಿರುವ ಮಹಿಳೆಯರ ಟಿ20 ವಿಶ್ವಕಪ್ ಪಂದ್ಯಾವಳಿಯ ಎರಡನೇ ದಿನದಂದು ಸ್ಕಾಟ್ಲೆಂಡ್ ತಂಡವನ್ನು ಐರ್ಲೆಂಡ್ ಎದುರಿಸಲಿದ್ದರೆ, ಬಲಿಷ್ಠ ಆಸ್ಟ್ರೇಲಿಯಾವನ್ನು ದ. ಆಫ್ರಿಕಾ ಎದುರಿಸಲಿದೆ. ಮೂರನೇ ಪಂದ್ಯದಲ್ಲಿ ವಿಂಡೀಸ್ ಮತ್ತು ನ್ಯೂಜಿಲೆಂಡ್ ತಂಡಗಳು ಎದುರಾಗಲಿವೆ. ಶುಕ್ರವಾರ ತಡರಾತ್ರಿ ಪಂದ್ಯಾವಳಿ ಶುರುವಾಯಿತು. ಶ್ರೀಲಂಕಾ ಮತ್ತು ಇಂಗ್ಲೆಂಡ್ ತಂಡಗಳು ಎದುರಾಗುವ ಮುನ್ನವೇ ಸಂಭ್ರಮದ ಉದ್ಘಾಟನಾ ಸಮಾರಂಭ ನೆರವೇರಿತು.

ಆಸ್ಟ್ರೇಲಿಯಾ ಆಫ್ರಿಕಾ ಪಂದ್ಯ ಇಂದು

ತಾರೆಯರ ಪ್ರದರ್ಶನ, ಹಿರಿಯರ ಮಾತು ಮತ್ತು ದಿಗ್ಗಜರ ಉಪಸ್ಥಿತಿ ಕಾರ್ಯಕ್ರಮಕ್ಕೆ ಶೋಭೆ ತಂದಿತು. ರಾತ್ರಿ 11 ಗಂಟೆಗೆ ಮೊದಲ ಪಂದ್ಯ ಶುರುವಾಯತು. ಎರಡನೇ ದಿನ ಮೂರು ಪಂದ್ಯಗಳಿರುವುದು ವಿಶೇಷ. ಮಹಿಳಾ ಕ್ರಿಕೆಟ್ ಕ್ಷೇತ್ರದಲ್ಲಿ ಯಾರಿಗೂ ಮುಟ್ಟಲಾಗದ ಸ್ಥಾನ ಪಡೆದು ಗೆಲುವಿನಲ್ಲೇ ಮಿಂಚುತ್ತಿರುವ ಆಸ್ಟ್ರೇಲಿಯಾ ತಂಡವು ದ.ಆಫ್ರಿಕಾವನ್ನು ಎದುರಿಸಲು ಸಜ್ಜಾಗಿದೆ. ಅತ್ತ ವಿಂಡೀಸ್ ಕೂಡ ಹಾಲಿ ಚಾಂಪಿಯನ್ ನ್ಯೂಜಿಲೆಂಡ್ ಸವಾಲಿಗೆ ಸಿದ್ಧವಾಗುತ್ತಿದೆ.

ದಿಗ್ಗಜ ಶೂಟರ್ ಜಸ್‌ಪಾಲ್ ನಿಧನ

ಹೊಸದಿಲ್ಲಿ: ಮುನಿಚ್‌ನಿಂದ ದಿಲ್ಲಿಗೆ ಬರುತ್ತಿರುವ ಮಾರ್ಗದಲ್ಲಿ ಹೃದಯಾಘಾತದಿಂದ ಭಾರತದ ದಿಗ್ಗಜರ ಶೂಟರ್, ತರಬೇತುದಾರರಾದ ಜಸ್‌ಪಾಲ್ ರಾಣಾ ನಿಧನರಾದರು. ಅವರಿಗೆ 49 ವಯಸ್ಸಾಗಿತ್ತು. ಪಿಸ್ತೂಲ್ ಮಾದರಿಯ ವಿವಿಧ ವಿಭಾಗಗಳಲ್ಲಿ ದಾಖಲೆಗಳನ್ನು ಬರೆದಿರುವ ಜಸ್‌ಪಾಲ್, ವೈಯಕ್ತಿಕ ಏಷ್ಯನ್ ಚಾಂಪಿಯನ್‌ಶಿಪ್, ಏಷ್ಯನ್ ಗೇಮ್ಸ್ ಸೇರಿದಂತೆ ವಿವಿಧ ಅಂತಾರಾಷ್ಟ್ರೀಯ ಕೂಟದಲ್ಲಿ 9 ಚಿನ್ನ ಸೇರಿದಂತೆ 15 ಪದಕಗಳನ್ನು ಗೆದ್ದಿದ್ದರು. ಅಲ್ಲಿಗೆ ನಿಲ್ಲಿಸದ ಅವರು, ಶೂಟರ್ ಮನು ಭಾಕರ್ 2 ಪದಕ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಪರಿಣಾಮ ಅವರಿಗೆ ಪಿಸ್ತೂಲ್ ವಿಭಾಗದ ಹೈ-ಪರ್ಫಾರ್ಮನ್ಸ್ ಕೋಚ್ ಆಗಿಯೂ ನೇಮಕ ಮಾಡಲಾಗಿತ್ತು. ಅದರದ್ದೇ ಕೆಲಸದ ಭಾಗವಾಗಿ ಮುನಿಚ್‌ನಿಂದ ಮರಳುತ್ತಿರುವಾಗ ಹೃದಯಾಘಾತದಿಂದ ಮೃತಪಟ್ಟರು.

ವಿಂಬಲ್ಡನ್ ಬಹುಮಾನ ಶೇ.20ರಷ್ಟು ಹೆಚ್ಚಳ

ಲಂಡನ್: ಗ್ರ್ಯಾಂಡ್‌ಸ್ಲ್ಯಾಮ್ ಆದಾಯದಲ್ಲಿ ಹೆಚ್ಚಿನ ಪಾಲು ನೀಡುವಂತೆ ಆಟಗಾರರಿಂದ ಹೆಚ್ಚುತ್ತಿರುವ ಕರೆಗಳ ಮಧ್ಯೆ, ವಿಂಬಲ್ಡನ್ 2026 ರ ಚಾಂಪಿಯನ್‌ಶಿಪ್‌ಗಾಗಿ ಬಹುಮಾನದ ಹಣವನ್ನು ಶೇಕಡಾ 20 ರಷ್ಟು ಹೆಚ್ಚಿಸುವುದಾಗಿ ಘೋಷಣೆಯಾಗಿದೆ. ಪುರುಷ ಮತ್ತು ಮಹಿಳಾ ಸಿಂಗಲ್ಸ್ ಚಾಂಪಿಯನ್‌ಗಳು ತಲಾ ದಾಖಲೆಯ 3.6 ಮಿಲಿಯನ್ (4.8 ಮಿಲಿಯನ್ ಡಾಲರ್) ಯೂರೊ ಪಡೆಯಲಿದ್ದಾರೆ. ಗುರುವಾರ ಈ ಘೋಷಣೆ ಮಾಡಿದ ಆಲ್ ಇಂಗ್ಲೆಂಡ್ ಕ್ಲಬ್ ಅಧ್ಯಕ್ಷೆ ಡೆಬೊರಾ ಜೆವಾನ್ಸ್, ಆಟಗಾರರ ದೈನಂದಿನ ವೇತನ ಸೇರಿದಂತೆ ಒಟ್ಟು ಬಹುಮಾನ ನಿಧಿ 64.2 ಮಿಲಿಯನ್ ಯೂರೋ (85.8 ಮಿಲಿಯನ್ ಡಾಲರ್) ಗೆ ಏರಲಿದೆ. ಆಟಗಾರರು ತಮ್ಮ ಆದಾಯದ ಹೆಚ್ಚಿನ ಪಾಲನ್ನು ಸ್ಪರ್ಧಿಗಳಿಗೆ ಹಂಚಿಕೆ ಮಾಡಲು ಗ್ರ್ಯಾಂಡ್ ಸ್ಲ್ಯಾಮ್ ಪಂದ್ಯಾವಳಿಗಳನ್ನು ಒತ್ತಾಯಿಸುತ್ತಿರುವ ಸಮಯದಲ್ಲಿ ಈ ಹೆಚ್ಚಳವಾಗಿದೆ.

ಕ್ರಿಕೆಟ್‌ಗೆ ಕೇನ್ ವಿಲಿಯಮ್ಸನ್ ವಿದಾಯ

ದುಬೈ: ನ್ಯೂಜಿಲೆಂಡ್ ತಂಡದ ಮಾಜಿ ನಾಯಕ, ಪ್ರಬಲ ಬ್ಯಾಟರ್ ಕೇನ್ ವಿಲಿಯಮ್ಸನ್ ಅವರು ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ. ಇಂಗ್ಲೆಂಡ್‌ನೊಂದಿಗೆ ನಡೆಯುತ್ತಿರುವ 3 ಟೆಸ್ಟ್ ಪಂದ್ಯಗಳ ಸರಣಿ ನಡುವಯೇ ಅವರು ದಿಢೀರ್ ನಿರ್ಧಾರ ಕೈಗೊಂಡಿದ್ದು, ತಕ್ಷಣದಿಂದಲೇ ಆಡಲಾರೆ ಎನ್ನುವ ಮೂಲಕ ತಮ್ಮ 16 ವರ್ಷದ ಕ್ರಿಕೆಟ್ ಪಯಣಕ್ಕೆ ತೆರೆ ಎಳೆದಿದ್ದಾರೆ. 2010ರಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ಪದಾರ್ಪಣೆ ಮಾಡಿರುವ ಅವರು, ಬ್ಯಾಟಿಂಗ್‌ನಲ್ಲಿ ಮಿಂಚಿ ತಮ್ಮದೇ ದಂತಕಥೆ ಬರೆದಿದ್ದಾರೆ. ಈ ಬಗ್ಗೆ ಶುಕ್ರವಾರ ಘೋಷಿಸುತ್ತಾ ಕೇನ್, ನಾನು ನಿವೃತ್ತಿ ಬಗ್ಗೆ ಕಳೆದ ಹಲವು ದಿನಗಳಿಂದಲೂ ಯೋಚಿಸುತ್ತಿದ್ದೇನೆ. ಈಗ ಕಾಲ ಬಂದಿದೆ. ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ನನ್ನ ದೇಶವನ್ನು ಪ್ರತಿನಿಧಿಸಿದ್ದು ನನ್ನ ಭಾಗ್ಯ ಮತ್ತು ಹೆಮ್ಮೆ. ಬೆಂಬಲಿಸಿದ ಎಲ್ಲರಿಗೂ ಧನ್ಯವಾದ ಎಂದು ತಮ್ಮ ಸಾಮಾಜಿಕ ಜಾಲತಾಣದ ಖಾತೆಗಳಲ್ಲಿ ಬರೆದುಕೊಂಡಿದ್ದಾರೆ.



ಕೇನ್ ಸಾಧನೆ: ಟೆಸ್ಟ್‌ನಲ್ಲಿ ಈಗಾಗಲೇ 9515 ರನ್ ಗಳಿಸಿರುವ ಅವರು, ನ್ಯೂಜಿಲೆಂಡ್ ಪರ ಅತಿ ಹೆಚ್ಚು ರನ್ ಗಳಿಸಿದ ಆಟಗಾರ ಎಂಬ ದಾಖಲೆ ಮಾಡಿದ್ದಾರೆ. ಏಕದಿನದಲ್ಲಿ 7256 ರನ್‌ಗಳನ್ನು ಬಾರಿಸಿದ್ದು ಅಲ್ಲಿಯೂ ಈ ಸಾಧನೆ ಮಾಡಿದ ನಾಲ್ಕನೇ ಆಟಗಾರ ಎಂಬ ದಾಖಲೆ ಮಾಡಿದ್ದಾರೆ. ನಾಯಕತ್ವ ವಿಚಾರಕ್ಕೆ ಬಂದರೆ ಕೇನ್ 40 ಟೆಸ್ಟ್ ಪಂದ್ಯಗಳಲ್ಲಿ ತಂಡವನ್ನು ಮುನ್ನಡೆಸಿದ್ದಾರೆ. ಅದರಲ್ಲಿ 22 ಪಂದ್ಯಗಳಲ್ಲಿ ನ್ಯೂಜಿಲೆಂಡ್ ಗೆದ್ದಿದೆ. 10 ಸೋಲು, 8 ಪಂದ್ಯಗಳು ಡ್ರಾಗೊಂಡಿವೆ. ಏಕದಿನ ಮತ್ತು ಟಿ20 ವಿಚಾರಕ್ಕೆ ಬಂದರೆ ಅವರು, 2016ರ ಟಿ20 ವಿಶ್ವಕಪ್, 2019ರ ಏಕದಿನ ಪಂದ್ಯಾವಳಿಯಲ್ಲಿ ತಮ್ಮ ತಂಡವನ್ನು ಫೈನಲ್‌ಗೇರಿಸಿದ್ದರು.

ದ.ಆಫ್ರಿಕಾ ವಿರುದ್ಧ ಮೆಕ್ಸಿಕೋಗೆ 2-0 ರಿಂದ ಜಯ | ಮೊದಲ ಪಂದ್ಯದಲ್ಲೇ ಕೆಂಪು ಕಾರ್ಡ್‌ಗಳ ಸದ್ದು

ಮೆಕ್ಸಿಕೋ ಮಾಸ್, ಕೊರಿಯಾ ಕ್ಲಾಸ್!

ಮ್ಯಾಕ್ಸಿಕೋ: ತನ್ನ ಮಾಸ್ ಆಟದೊಂದಿಗೆ ಮಿಂಚಿರುವ ಆತಿಥ್ಯ ಮೆಕ್ಸಿಕೋ ಪ್ರತಿಷ್ಠಿತ ಫಿಫಾ ವಿಶ್ವಕಪ್ ಪಂದ್ಯಾವಳಿಯಲ್ಲಿ ಶುಭಾರಂಭ ಮಾಡಿತು. ಮೆಕ್ಸಿಕೊ ಸಿಟಿಯ ಐತಿಹಾಸಿಕ ಅಜ್ಟೆಕಾ ಕ್ರೀಡಾಂಗಣದಲ್ಲಿ 80,824 ಪ್ರೇಕ್ಷಕರ ಸಮ್ಮುಖದಲ್ಲಿ ನಡೆದ ಪಂದ್ಯದಲ್ಲಿ ಜುಲಿಯನ್ ಕ್ವಿನೋನ್ಸ್ ಮತ್ತು ರೌಲ್ ಜಿಮೆನೆಸ್ ಮಿಂಚಿದರು. ಅತ್ತ ಎರಡನೇ ಪಂದ್ಯದಲ್ಲಿ ಜೆಕ್ ಗಣರಾಜ್ಯ ತಂಡದೊಂದಿಗೆ ಮಿಂಚಿದ ದಕ್ಷಿಣ ಕೊರಿಯಾ ಗೆಲುವ ಸಾಧಿಸಿತು.

ಭಾರತೀಯ ಕಾಲಮಾನ ಪ್ರಕಾರ ಮಧ್ಯರಾತ್ರಿ ನಡೆದ ಪಂದ್ಯದ 9ನೇ ನಿಮಿಷದಲ್ಲೇ ಕ್ವಿನೋನ್ಸ್ ಗೋಲು ಬಾರಿಸಿ ಮೆಕ್ಸಿಕೋಗೆ ಮುನ್ನಡೆ ತಂದುಕೊಟ್ಟರು. ಬಳಿಕ 66ನೇ ನಿಮಿಷದಲ್ಲಿ ಜಿಮೆನೆಸ್ ಹೆಡರ್ ಮೂಲಕ ಮತ್ತೊಂದು ಗೋಲು ದಾಖಲಿಸಿ ತಂಡದ ಗೆಲುವು ಖಚಿತಪಡಿಸಿದರು.

2-0
ಗೋಲ್‌ನಿಂದ ದಕ್ಷಿಣ ಆಫ್ರಿಕಾ ವಿರುದ್ಧ ಮೆಕ್ಸಿಕೋ ಜಯ

- ಮೆಕ್ಸಿಕೋ ಪರ ಜಿಮೆನೆಸ್‌ನ 46ನೇ ಅಂತಾರಾಷ್ಟ್ರೀಯ ಗೋಲು
- ದಕ್ಷಿಣ ಆಫ್ರಿಕಾದ ಇಬ್ಬರು ಆಟಗಾರರಿಗೆ ಕೆಂಪು ಕಾರ್ಡ್
- ಮೆಕ್ಸಿಕೋದ ಸೀಸರ್ ಮೊಂಟೆಸ್‌ಗೆ ಹೆಚ್ಚುವರಿ ವೇಳೆಯಲ್ಲಿ ಕೆಂಪು ಕಾರ್ಡ್

ಸಿಥೋಲೆ ಹಾಗೂ ತೆಂಬಾ ಜ್ವಾನೆಗೆ ಕೆಂಪು ಕಾರ್ಡ್

ಪಂದ್ಯದಲ್ಲಿ ದಕ್ಷಿಣ ಆಫ್ರಿಕಾದ ಸ್ವೆಹೆಲೊ ಸಿಥೋಲೆ ಹಾಗೂ ತೆಂಬಾ ಜ್ವಾನೆ ಕೆಂಪು ಕಾರ್ಡ್ ಪಡೆದು ಹೊರನಡೆದ ಕಾರಣ ತಂಡ 9 ಆಟಗಾರರೊಂದಿಗೆ ಪಂದ್ಯ ಮುಗಿಸಬೇಕಾಯಿತು. ಹೆಚ್ಚುವರಿ ಸಮಯದಲ್ಲಿ ಮೆಕ್ಸಿಕೋದ ಸೀಸರ್ ಮೊಂಟೆಸ್ ಕೂಡ ಕೆಂಪು ಕಾರ್ಡ್ ಪಡೆದರು. ವಿಶ್ವಕಪ್ ಉದ್ಘಾಟನಾ ಪಂದ್ಯದಲ್ಲಿ ಮೊದಲ ಬಾರಿಗೆ ಮೂರು ಕೆಂಪು ಕಾರ್ಡ್‌ಗಳು ಪ್ರದರ್ಶಿತವಾದವು.

09 ನೇ ನಿಮಿಷ ಜುಲಿಯನ್ ಕ್ವಿನೋನ್ಸ್ ಗೋಲು


66 ನೇ ನಿಮಿಷ ರೌಲ್ ಜಿಮೆನೆಸ್ ಗೋಲು

80,824
ಪ್ರೇಕ್ಷಕರು ಅಜ್ಟೆಕಾ ಕ್ರೀಡಾಂಗಣದಲ್ಲಿ ಹಾಜರಿ





- ರೌಲ್ ಜಿಮೆನೆಸ್‌ಗೆ ಇದು ವಿಶ್ವಕಪ್ ಇತಿಹಾಸದ ಮೊದಲ ಗೋಲು
- ಮೆಕ್ಸಿಕೋ ಪರ ಅತಿ ಹೆಚ್ಚು ಗೋಲು ಗಳಿಸಿದವರ ಪಟ್ಟಿಯಲ್ಲಿ ಜಾರೆಡ್ ಬೊರ್ಗೆಟ್ಟಿಯೊಂದಿಗೆ ಜಂಟಿ 2ನೇ ಸ್ಥಾನ
- ನಾಯಕ ಜೇವಿಯರ್ ಚಿಚರಿಟೋ ಹೆರ್ನಾಂಡೆಸ್ ದಾಖಲೆಯಿಂದ ಕೇವಲ 6 ಗೋಲುಗಳ ಅಂತರ
- 2006ರ ಬಳಿಕ ವಿಶ್ವಕಪ್ ಪಂದ್ಯವೊಂದರಲ್ಲಿ ಗರಿಷ್ಠ ಕೆಂಪು ಕಾರ್ಡ್‌ಗಳ ದಾಖಲೆ ಸಮೀಪ



2-1
ಗೋಲ್‌ನಿಂದ ಜೆಕ್ ಗಣರಾಜ್ಯ ವಿರುದ್ಧ ದಕ್ಷಿಣ ಕೊರಿಯಾ ಜಯ



59 ನೇ ನಿಮಿಷ: ಲಾಡಿಸ್ಲಾವ್ ಕ್ರೇಜ್ಚಿ (ಜೆಕ್ ಗಣರಾಜ್ಯ)

67 ನೇ ನಿಮಿಷ: ಹ್ವಾಂಗ್ ಇನ್-ಬಿಯೊಮ್ (ದಕ್ಷಿಣ ಕೊರಿಯಾ)

80 ನೇ ನಿಮಿಷ ಓ ಹ್ಯೋನ್-ಗ್ಯು (ದಕ್ಷಿಣ ಕೊರಿಯಾ)

ಗುಡಲಹಾರಾ ಕ್ರೀಡಾಂಗಣದಲ್ಲಿ ಹಾಜರಾತಿ
44,985

ಕೊರಿಯಾ ಶುಭಾರಂಭ

ಶುಕ್ರವಾರ ಬೆಳಗ್ಗೆ ನಡೆದ ಪಂದ್ಯದಲ್ಲಿ ದಕ್ಷಿಣ ಕೊರಿಯಾ ಗೆಲುವಿನೊಂದಿಗೆ ತನ್ನ ಅಭಿಯಾನ ಆರಂಭಿಸಿದೆ. ಗುಡಲಹಾರಾ ಕ್ರೀಡಾಂಗಣದಲ್ಲಿ ನಡೆದ ಎ' ಗುಂಪಿನ ಪಂದ್ಯದಲ್ಲಿ ಜೆಕ್ ಗಣರಾಜ್ಯವನ್ನು 2-1 ಗೋಲುಗಳಿಂದ ಮಣಿಸಿದೆ. ಮೊದಲಾರ್ಧದಲ್ಲಿ ಎರಡೂ ತಂಡಗಳು ನಿರೀಕ್ಷಿತ ಪ್ರದರ್ಶನ ನೀಡದ ಕಾರಣ ಪ್ರೇಕ್ಷಕರಿಂದ ಅಸಮಾಧಾನ ವ್ಯಕ್ತವಾಯಿತು. ಆದರೆ ಎರಡನೇ ಅರ್ಧದಲ್ಲಿ ಪಂದ್ಯ ರೋಚಕ ತಿರುವು ಪಡೆದುಕೊಂಡಿತು. 59ನೇ ನಿಮಿಷದಲ್ಲಿ ನಾಯಕ ಲಾಡಿಸ್ಲಾವ್ ಕ್ರೇಜ್ಚಿ ಹೆಡರ್ ಮೂಲಕ ಗೋಲು ಬಾರಿಸಿ ಜೆಕ್ ಗಣರಾಜ್ಯಕ್ಕೆ ಮುನ್ನಡೆ ತಂದುಕೊಟ್ಟರು. ಆದರೆ ಕೊರಿಯಾ ಶೀಘ್ರವೇ ತಿರುಗೇಟು ನೀಡಿತು.

ಕಂಬ್ಯಾಕ್

67ನೇ ನಿಮಿಷದಲ್ಲಿ ಹ್ವಾಂಗ್ ಇನ್-ಬಿಯೊಮ್ ಇಬ್ಬರು ರಕ್ಷಣಾ ಆಟಗಾರರನ್ನು ಮಣಿಸಿ ಅದ್ಭುತ ಗೋಲು ಬಾರಿಸಿ ಸಮಬಲ ಸಾಧಿಸಿದರು. ನಂತರ 80ನೇ ನಿಮಿಷದಲ್ಲಿ ಬಲಭಾಗದಿಂದ ನೀಡಿದ ಅವರ ನಿಖರ ಪಾಸ್ ಅನ್ನು ಓ ಹ್ಯೋನ್-ಗ್ಯು ಗೋಲಾಗಿ ಪರಿವರ್ತಿಸಿ ದಕ್ಷಿಣ ಕೊರಿಯಾಗೆ ಗೆಲುವು ತಂದುಕೊಟ್ಟರು. ನಾಯಕ ಸನ್ ಹ್ಯೂಂಗ್-ಮಿನ್ ನೇತೃತ್ವದ ದಕ್ಷಿಣ ಕೊರಿಯಾ ಪಂದ್ಯದ ಬಹುತೇಕ ಸಮಯ ಬಾಲ್ ಮೇಲಿನ ಹಿಡಿತ ಕಾಯ್ದುಕೊಂಡು ಹೆಚ್ಚು ಆಕ್ರಮಣಕಾರಿ ಆಟವಾಡಿತು. ಆರಂಭದಲ್ಲೇ ಹಲವು ಅವಕಾಶಗಳು ಸಿಕ್ಕರೂ ಅವುಗಳನ್ನು ಗೋಲಾಗಿ ಪರಿವರ್ತಿಸಲು ವಿಫಲವಾಗಿತ್ತು.

- ದಕ್ಷಿಣ ಕೊರಿಯಾ ಫಿಫಾ ಶ್ರೇಯಾಂಕ 25
- ಜೆಕ್ ಗಣರಾಜ್ಯ ಫಿಫಾ ಶ್ರೇಯಾಂಕ 38
- 2006ರ ಬಳಿಕ ಜೆಕ್ ಗಣರಾಜ್ಯದ ಮೊದಲ ವಿಶ್ವಕಪ್ ಪಂದ್ಯ

ಉಪಾಂತ್ಯಕ್ಕೆ ಪಿ. ವಿ. ಸಿಂಧು

- ಆಸ್ಟ್ರೇಲಿಯನ್ ಓಪನ್ ಬ್ಯಾಡ್ಮಿಂಟನ್
- ಚೆನ್ ವಿರುದ್ಧ ನೇರ ಸೆಟ್‌ಗಳ ಗೆಲುವು
- ತನ್ವಿ ಶರ್ಮಗೆ ಸೋಲು

ಸಿಡ್ನಿ(ಆಸ್ಟ್ರೇಲಿಯಾ): ತೈವಾನ್‌ನ ಚೆನ್ ಸು ಯು ವಿರುದ್ಧದ ಪಂದ್ಯದಲ್ಲಿ ಪ್ರಾಬಲ್ಯ ಸಾಧಿಸಿರುವ ಅನುಭವಿ ಶಟ್ಲರ್ ಪಿ.ವಿ. ಸಿಂಧು ಪ್ರತಿಷ್ಠಿತ ಆಸ್ಟ್ರೇಲಿಯಾ ಓಪನ್ ಬ್ಯಾಡ್ಮಿಂಟನ್ ಪಂದ್ಯಾವಳಿಯ ಸೆಮಿಫೈನಲ್‌ಗೇರಿದ್ದಾರೆ.

ಬ್ಯಾಡ್ಮಿಂಟನ್ ಲೋಕ ಅದರಲ್ಲೂ ಟೂರ್‌ಗಳಲ್ಲಿ ಭಾರತೀಯರದ್ದೇ ಪಾರುಪತ್ಯ. ಹಿಂದಿನ ಟೂರ್ನಿಗಳಿಂದ ನೋಡುತ್ತಾ ಬಂದರೆ ಪ್ರತಿ ಕೂಟದಲ್ಲಿ ಒಬ್ಬರಾದರೂ ಭಾರತೀಯ ಶಟ್ಲರ್ ಮಿಂಚುತ್ತಾರೆ. ಈ ಬಾರಿ ಸಿಂಧು ಅವರದ್ದು. ನಾಕೌಟ್ ಪಂದ್ಯಾವಳಿಯ ಪ್ರತಿಯೊಂದು ಪಂದ್ಯದಲ್ಲೂ ಸಿಂಧು ಅಸಾಮಾನ್ಯ ಪ್ರದರ್ಶನದೊಂದಿಗೆ ಎದುರಾಳಿಗಳ ಮೇಲೆ ಸ್ಪಷ್ಟ ಪ್ರಾಬಲ್ಯ ಸಾಧಿಸುತ್ತಾ ಬಂದಿದ್ದಾರೆ. ಶುಕ್ರವಾರದಂದು ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಅವರು ತೈವಾನ್‌ನ ಚೆನ್ ಸು ಅವರನ್ನು ಎದುರಿಸಿದ್ದರು. ಮೊದಲನೇ ಸೆಟ್‌ನಿಂದ ಹಿಡಿದು ಗೆಲುವಿನ ನಾಗಾಲೋಟ ಬಾರಿಸುವವರೆಗೂ ಅವಳಿ ಒಲಿಂಪಿಕ್ಸ್ ವಿಜೇತೆ ಎದುರಾಳಿಗೆ ಅವಕಾಶವೇ ನೀಡಲಿಲ್ಲ.

ದೊಡ್ಡ ಮುನ್ನಡೆಯೊಂದಿಗೆ ಪಂದ್ಯವನ್ನಾರಂಭಿಸಿದ ಸಿಂಧು ನಿರಂತರ ಪಾಯಿಂಟ್‌ಗಳನ್ನು ಗಳಿಸುತ್ತಾ ಬಂದರು. ಸ್ಮ್ಯಾಷ್, ಪಾಯಿಂಟ್ ಮತ್ತು ಡ್ರಾಪ್‌ಗಳ ಮೂಲಕ ಮೊದಲನೇ ಸೆಟ್ ಅನ್ನು 21-6ರಿಂದ ಗೆದ್ದು ಆತ್ಮವಿಶ್ವಾಸ ಗೆದ್ದರು. ಎರಡನೇ ಸೆಟ್‌ನಲ್ಲಿ ಮತ್ತೆ ಅದೇ ಪ್ರಾಬಲ್ಯ ಮುಂದುವರಿಸುತ್ತಾ ಸಿಂಧು 21-9ರಿಂದ ಗೆದ್ದುಕೊಂಡರು. ಮುಂದಿನ ಪಂದ್ಯದಲ್ಲಿ ಅವರು ಅಕಾನೆ ಯಮಗುಚಿ ಅವರನ್ನು ಎದುರಿಸಲಿದ್ದಾರೆ.

ಮತ್ತೊಂದು ಪಂದ್ಯದಲ್ಲಿ ಭಾರತೀಯ ಉದಯೋನ್ಮುಖಿ ಆಟಗಾರ್ತಿ ತನ್ವಿ ಶರ್ಮ ಅವರನ್ನು ಅಕಾನೆ ಅವರು ಸೋಲಿಸಿದರು. ನಿರೀಕ್ಷಿತ ಪ್ರದರ್ಶನದೊಂದಿಗೆ ಕ್ವಾರ್ಟರ್



ಫೈನಲ್‌ಗೇರಿದ್ದ ಅವರು, ನೇರ ಸೆಟ್‌ಗಳಿಂದಲೇ ಸೋತರು. ತೀವ್ರ ಹೋರಾಟ ನಡೆಸಿದ್ದಾದರೂ ಮೊದಲನೇ ಸೆಟ್‌ನಲ್ಲಿ 21-14 ಮತ್ತು ಎರಡನೇ ಸೆಟ್‌ನಲ್ಲೂ 21-14ರಿಂದ ಸೋಲು ಹೊರ ನಡೆದರು.

ಅಫ್ಘಾನ್ ಬೇಟೆಗೆ ಭಾರತ ಸಿದ್ಧ

ಧರ್ಮಶಾಲಾ: ಬಹು ದಿನಗಳ ನಂತರ ಏಕದಿನ ಅಂಗಳಕ್ಕೆ ಭಾರತ ಇಳಿಯಲಿದೆ. ವಿರಾಟ್ ಕೊಹ್ಲಿ ಇಲ್ಲದಿದ್ದರೂ ರೋಹಿತ್ ಶರ್ಮ ಅವರ ಬ್ಯಾಟಿಂಗ್‌ಗಾಗಿ ಕಾತರದಿಂದ ಕಾದು ಕೂತಿರುವ ಸಮಸ್ತ ಭಾರತೀಯ ಕ್ರಿಕೆಟ್ ಅಭಿಮಾನಿಗಳು ಶನಿವಾರದಂದು ಅಫ್ಘಾನಿಸ್ತಾನ ಮತ್ತು ಭಾರತ ನಡುವೆ ನಡೆಯಲಿರುವ ಮೊದಲ ಏಕದಿನ ಪಂದ್ಯವನ್ನು ಕಣ್ತುಂಬಿಕೊಳ್ಳಲಿದ್ದಾರೆ.

ಟೆಸ್ಟ್ ಸೋತಿರುವ ಅಫ್ಘಾನಿಸ್ತಾನ ತಂಡವು ಧರ್ಮಶಾಲಾದ ಹಿಮಗಳ ಕೆಳಗಿರುವ ಕ್ರೀಡಾಂಗಣದಲ್ಲಿ ಭಾರತ ತಂಡವನ್ನು ಶನಿವಾರದಂದು ಎದುರಿಸಲಿದೆ. ಗೆಲ್ಲುವ ಪ್ರಯತ್ನಕ್ಕೆ ಕೈಹಾಕುವ ತಯಾರಿಗಳನ್ನು ಮಾಡಲಿದೆ. ಇತ್ತ ಶುಭಮನ್ ಗಿಲ್ ನಾಯಕತ್ವದಲ್ಲಿ ಕಣಕ್ಕಿಳಿಯಲಿರುವ ಭಾರತ ರೋಹಿತ್ ಶರ್ಮ ಅವರೊಂದಿಗೆ ಆಡಲಿದೆ.

- ಇಂದು ಮೊದಲ ಏಕದಿನ ಪಂದ್ಯ
- ರೋಹಿತ್ ಲಭ್ಯ

ಐಪಿಎಲ್ ಮುಗಿದ ನಂತರ ಭಾರತ ತಂಡದ ಆಟಗಾರರು ಇದೇ ಮೊದಲ ಬಾರಿಗೆ ನೀಲಿ ಜೆರ್ಸಿಯಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಈಗಾಗಲೇ ಟೆಸ್ಟ್ ಪಂದ್ಯವನ್ನು ಏಕಪಕ್ಷೀಯವಾಗಿ ಗೆದ್ದಿರುವ ಶುಭಮನ್ ಪಡೆಗೆ ಇದು ಮುಂದಿನ ವರ್ಷ ನಡೆಯಲಿರುವ ಏಕದಿನ ವಿಶ್ವಕಪ್ ತಯಾರಿ ಭಾಗವಾಗಿರಲಿದೆ. ಈಗಿನಿಂದಲೇ ಶುರು ಮಾಡಿಕೊಂಡು ಉತ್ತಮ ಅಭ್ಯಾಸ ನಡೆಸುವ ನಿಟ್ಟಿನಲ್ಲಿ ಭಾರತ ಗಟ್ಟಿಯಾಗುತ್ತಿದೆ. ಒಂದೇ ಮಾದರಿಯಲ್ಲಿ ಉಳಿದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮ ಈ ಪಂದ್ಯಗಳಲ್ಲಿ ಆಡುವ ನಿರೀಕ್ಷೆಯಿತ್ತು. ಆದರೆ ವಿರಾಟ್ ಕೊಹ್ಲಿ ಗಾಯದಿಂದಾಗಿ ಪಂದ್ಯದಲ್ಲಿ ಕಾಣಿಸಿಕೊಳ್ಳುತ್ತಿಲ್ಲ. ರೋಹಿತ್ ಶರ್ಮ ಮಾತ್ರ ತಂಡದ ಭಾಗವಾಗಿರಲಿದ್ದಾರೆ.



ಪಂದ್ಯದ ವಿವರ

- ಯಾವಾಗ: ಶನಿವಾರ
- ಎಲ್ಲಿ: ಧರ್ಮಶಾಲಾ
- ಸಮಯ: ಮಧ್ಯಾಹ್ನ 1:30
- ಪ್ರಸಾರ: ಸ್ಟಾರ್‌ಸ್ಪೋರ್ಟ್ಸ್, ಜಿಯೋ ಹಾಟ್ ಸ್ಟಾರ್

ಉತ್ತರ ಪ್ರದೇಶ ಸಿಎಂ ಯೋಗಿ ಭೇಟಿಯಾದ ಕ್ಯಾಂಪ್ಕೊ ನಿಯೋಗ

ಮಂಗಳೂರು: ಕ್ಯಾಂಪ್ಕೋ ಅಧ್ಯಕ್ಷ ಎಸ್.ಆರ್. ಸತೀಶ್ಚಂದ್ರ ಮತ್ತು ವ್ಯವಸ್ಥಾಪಕ ನಿರ್ದೇಶಕ ಡಾ. ಬಿ.ವಿ. ಸತ್ಯನಾರಾಯಣ ಅವರು ಲಕ್ನೋದಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ಅವರ ಕಚೇರಿಯಲ್ಲಿ ಭೇಟಿಯಾಗಿ, ಅಡಿಕೆ ಬೆಳೆಗಾರರು ಮತ್ತು ಸಹಕಾರ ಸಂಸ್ಥೆಗಳು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಚರ್ಚಿಸಿದರು.

ಚರ್ಚೆಯಲ್ಲಿ, ಉತ್ತರ ಪ್ರದೇಶದಲ್ಲಿ ಅಡಿಕೆ ವ್ಯಾಪಾರದ ಮೇಲೆ ವಿಧಿಸಲಾಗುತ್ತಿರುವ 'ಮಂಡಿ ತೆರಿಗೆ'ಯಿಂದಾಗಿ ಸಹಕಾರ ಸಂಸ್ಥೆಗಳು ಎದುರಿಸುತ್ತಿರುವ ಸಂಕಷ್ಟಗಳನ್ನು ನಿಯೋಗವು ಮುಖ್ಯಮಂತ್ರಿಗಳ ಗಮನಕ್ಕೆ ತಂದರು. ಸುಮಾರು 1.5 ಲಕ್ಷಕ್ಕೂ ಹೆಚ್ಚು ರೈತ ಸದಸ್ಯರನ್ನು ಹೊಂದಿರುವ ಬಹು-ರಾಜ್ಯ ಸಹಕಾರ ಸಂಸ್ಥೆಯಾದ ಕ್ಯಾಂಪ್ಕೊ ಪ್ರಸ್ತುತ ತೆರಿಗೆ ಪದ್ಧತಿಯಿಂದ ತೀವ್ರವಾಗಿ ತೊಂದರೆಗಳನ್ನು ಅನುಭವಿಸುತ್ತಿದೆ. ಇದರಿಂದಾಗಿ ನ್ಯಾಯಸಮ್ಮತ ವ್ಯಾಪಾರದ ನಡೆಸುವ ಸಹಕಾರ ಸಂಸ್ಥೆಗಳ ವೆಚ್ಚ ಹೆಚ್ಚಾಗಿದ್ದು, ಖಾಸಗಿ ಮಾರುಕಟ್ಟೆ ನಿರ್ವಾಹಕರ ವಿರುದ್ಧ ಪೈಪೋಟಿ ನಡೆಸುವುದು ಕಷ್ಟಕರವಾಗಿದೆ ಎಂದು ವಿವರಿಸಲಾಯಿತು.




ಕರ್ನಾಟಕದಿಂದ ಖರೀದಿಸುವ ಅಡಿಕೆಗೆ ಈಗಾಗಲೇ ಮೂಲ ಸ್ಥಳದಲ್ಲಿಯೇ (ಕರ್ನಾಟಕದಲ್ಲಿ) ಎಪಿಎಂಸಿ ಸೆಸ್/ಮಾರುಕಟ್ಟೆ ಶುಲ್ಕವನ್ನು ವಿಧಿಸಲಾಗಿರುತ್ತದೆ. ಇದೇ ಅಡಿಕೆಗೆ ಉತ್ತರ ಪ್ರದೇಶದಲ್ಲಿ ಮತ್ತೆ ಮಂಡಿ ತೆರಿಗೆ ವಿಧಿಸಲಾಗುತ್ತಿದ್ದು, ಒಂದೇ ಕೃಷಿ ಉತ್ಪನ್ನದ ಮೇಲೆ ಎರಡು ಬಾರಿ ಮಾರುಕಟ್ಟೆ ಶುಲ್ಕದ ಹೊರೆ ಬೀಳುತ್ತಿದೆ ಎಂದು ಕ್ಯಾಂಪ್ಕೊ ನಿಯೋಗವು ಬೊಟ್ಟು ಮಾಡಿತು. ಈ ಹೆಚ್ಚುವರಿ ತೆರಿಗೆ ಹೊರೆಯು ಉತ್ತರ ಪ್ರದೇಶದಲ್ಲಿನ ನಮ್ಮ ವ್ಯಾಪಾರ ವಹಿವಾಟಿನ ಮೇಲೆ ಪ್ರತಿಕೂಲ ಪರಿಣಾಮ ಬೀರಿದ್ದು, ವಹಿವಾಟಿನಲ್ಲಿ ಗಣನೀಯ ಕುಸಿತಕ್ಕೆ ಕಾರಣವಾಗಿದೆ ಮತ್ತು ಕಾನ್ಪುರದ ಮಾರಾಟ ಮಳಿಗೆಯನ್ನು ಅನಿವಾರ್ಯವಾಗಿ ಮುಚ್ಚಲ್ಪಟ್ಟಿದೆ ಎಂದು ಮುಖ್ಯಮಂತ್ರಿಗಳಿಗೆ ಮಾಹಿತಿ ನೀಡಲಾಯಿತು.

ಅಡಿಕೆ ಮೇಲಿನ ಮಂಡಿ ತೆರಿಗೆಯನ್ನು ರದ್ದುಗೊಳಿಸಬೇಕು ಅಥವಾ ಪರ್ಯಾಯವಾಗಿ ಸಹಕಾರ ಸಂಸ್ಥೆಗಳಿಗಾದರೂ ವಿನಾಯಿತಿ ನೀಡಬೇಕು ಹಾಗೂ ದ್ವಿಗುಣ ಮಾರುಕಟ್ಟೆ ಶುಲ್ಕದ ಹೊರೆಯಿಂದ ಪರಿಹಾರ ಒದಗಿಸುವಂತೆ ಕ್ಯಾಂಪ್ಕೊ, ಉತ್ತರ ಪ್ರದೇಶ ಸರ್ಕಾರವನ್ನು ವಿನಂತಿಸಿತು. ಇಂತಹ ಕ್ರಮಗಳಿಂದ ಸಹಕಾರಿ ಸಂಸ್ಥೆಗಳ ವ್ಯಾಪಾರ ಬಲಗೊಳ್ಳುತ್ತವೆ, ಲಕ್ಷಾಂತರ ರೈತರ ಹಿತಾಸಕ್ತಿ ಕಾಪಾಡಿದಂತಾಗುತ್ತದೆ ಮತ್ತು ನ್ಯಾಯಸಮ್ಮತ ವ್ಯಾಪಾರ ಚಟುವಟಿಕೆಗಳ ಮೂಲಕ ಸರ್ಕಾರಕ್ಕೂ ಹೆಚ್ಚಿನ ಆದಾಯ ಲಭಿಸುವುದು ಎಂದು ಮನವರಿಕೆ ಮಾಡಲಾಯಿತು.

ಕ್ಯಾಂಪ್ಕೊ ಲಕ್ನೋ ಶಾಖೆಯ ವ್ಯವಸ್ಥಾಪಕ ರವಿಶಂಕರ್ ಹಾಗೂ ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರ ಆಪ್ತ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ಶಿವಪ್ರಸಾದ್ ಅವರು ಉಪಸ್ಥಿತರಿದ್ದರು ಮತ್ತು ಈ ಸಂವಾದ ಹಾಗೂ ಚರ್ಚೆಗಳನ್ನು ಸಂಯೋಜಿಸುವಲ್ಲಿ ನೆರವಾದರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



6013

ಎಡದಿಂದ ಬಲಕ್ಕೆ
1.ಹನುಮನ ಆಗ್ರಹದಿಂದ ಸಿಕ್ಕ ಕೃಪೆ (4)
3.ಕದ ಒಳಗೊಂಡ ಹೂವಿನ ಪರಾಗ (4)
5.ಬಣ್ಣದ ಲೋಹದ ತಗಡು ಇದು (3)
6.ಬೆಟ್ಟದ ಕಡೆಗೆ ಎಸೆದ ಆಭರಣ (2)
8.ಶರ-ನಿಜ ಒಳಗೊಂಡ ಕತ್ತಲಿನೊಡೆಯ (4)
10.ಅತಿಯ ನಡುವೆ ಅಡಗಿದ ದುರ್ದೆಶೆ (4)
12.ಜಗದಗಲ ವ್ಯಾಪಿಸಿದ ನೀರು (2)
14.ಕನದ ನಡುವೆ ಬೆಸ್ತನಿದ್ದಾನೆ (3)
15.ಈ ತರಹದಲ್ಲಿ ತೋರಿದ ತನ್ಮಯತೆ (4)
16.ಗುಂಪಿನ ಒಡೆಯನಾಗಿ ವಿನಾಯಕ (4)

ಮೇಲಿನಿಂದ ಕೆಳಕ್ಕೆ
1.ಪಾಠವನ್ನು ಕಲಿಸುವ ಕ್ರಿಯೆ (4)
2.ಹತ ಒಳಗೊಂಡ ಬಾಲ್ಯ (4)
3.ಪ್ರಾಣಿ-ಪಕ್ಷಿಗಳಲ್ಲಿ ಎಳೆಯದು (2)
4.ಗಣಿತದಲ್ಲಿ ಹತ್ತನೆಯ ಒಂದು ಭಾಗ (4)
7.ಕೊಬ್ಬಿದ ಗಂಡುಕೋತಿಯಿದು (3)
9.ರಜ ಕಡೆಯಲ್ಲಿರುವ ತಾವರೆ (3)
10.ತಡೆಯಿಲ್ಲದೆ-ಎಡಬಿಡದೆ ಎಂಬರ್ಥದ ಶಬ್ದ (4)
11.ಕಲವನ್ನೊಳಗೊಂಡ ದೊಡ್ಡ ರಾಜ್ಯಸಭೆ (4)
13.ವಶ ಮಾಡಿಕೊಂಡದ್ದು ತುಂಬ ಸ್ವಲ್ಪ (4)
14.ನಡೆದ ಅಥವಾ ಕಲ್ಪಿತವಾದ ಸಂಗತಿ (2)

6012 ಉತ್ತರ

ಎಡದಿಂದ ಬಲಕ್ಕೆ:
1.ಜೀತ 2.ಕದನ 4.ಪಂಪ
6.ನಡೆಮಾಡ 8.ಗುಲಗಂಜಿ
12.ಮರಸುತ್ತು
14.ಹಸುತನ 15.ನೆಗೆ
16.ಹಡಗು 17.ಬಿಲ

ಮೇಲಿನಿಂದ ಕೆಳಕ್ಕೆ :
1.ಜೀವನದಿ 2.ಕರಂಡ
3.ನಲುಗು 5.ಪರಾಜಿತ
7.ಮಾತುಹಾರಿಸು
9.ಲಕಲಕಿಸು
10.ಜಮಖಾನೆ
11.ಘನಫಲ 13.ಹರಿತ್ತು
14.ಹರಗು

ತಮಿಳುನಾಡು ಸಿಎಂ ವಿಜಯಗೆ ಮಂಗಳೂರಿನಲ್ಲಿ ಭವ್ಯ ಸ್ವಾಗತ





• **ಮಂಗಳೂರು:** ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ್ ಅವರು ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸುವ ಸಲುವಾಗಿ ಶುಕ್ರವಾರ ವಿಶೇಷ ವಿಮಾನದ ಮೂಲಕ ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ.ಖಾದರ್, ಹೆಚ್ಚುವರಿ ಜಿಲ್ಲಾಧಿಕಾರಿ ರಾಜು ಕೆ., ಉಪವಿಭಾಗಾಧಿಕಾರಿ ಮೀನಾಕ್ಷಿ ಆರ್ಯ ಅವರು ವಿಜಯ್ ಅವರನ್ನು ಹೂಗುಚ್ಛ ನೀಡುವ ಮೂಲಕ ಸ್ವಾಗತಿಸಿದರು.

ಈ ವೇಳೆ ಅಭಿಮಾನಿಗಳು ವಿಜಯ್ ಅವರಿದ್ದ ಕಾರಿನತ್ತ ಮುಗಿಬಿದ್ದರು. ಕೆಲವರು ಟಿವಿಕೆ ಪಕ್ಷದ ಧ್ವಜವನ್ನೂ ಬೀಸುವ ಮೂಲಕ ಅಭಿಮಾನ ವ್ಯಕ್ತಪಡಿಸಿದರು. ವಿದ್ಯಾರ್ಥಿಗಳು, ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು.

ಅಭಿಮಾನಿಗಳ ಪ್ರೀತಿಗೆ ಪ್ರತಿಕ್ರಿಯಿಸಿದ ವಿಜಯ್, ನಗುಮುಖದೊಂದಿಗೆ ಕೈ ಬೀಸಿ ಶುಭಾಶಯ ಕೋರಿದರು. ಬಳಿಕ ಅವರು ರಸ್ತೆ ಮಾರ್ಗವಾಗಿ ಉಡುಪಿ ಜಿಲ್ಲೆಯ ಪ್ರಸಿದ್ಧ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದತ್ತ ಬಿಗು ಭದ್ರತೆಯೊಂದಿಗೆ ಕಾರಿನಲ್ಲಿ ತೆರಳಿದರು. ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ಮೊದಲ ಬಾರಿಗೆ ಕರ್ನಾಟಕಕ್ಕೆ ವಿಜಯ್ ಆಗಮಿಸಿದ್ದಾರೆ.

ಸುರತ್ಕಲ್‌ನಲ್ಲಿ ಕೈಬೀಸಿ ಮುಗುಳ್ನಕ್ಕ ದಳಪತಿ!

ತಮಿಳುನಾಡಿನ ಮುಖ್ಯಮಂತ್ರಿ 'ದಳಪತಿ' ವಿಜಯ್ ಅವರು ಶುಕ್ರವಾರ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನಕ್ಕೆ ತೆರಳುವ ಮಾರ್ಗಮಧ್ಯೆ ಸುರತ್ಕಲ್ ಜಂಕ್ಷನ್‌ನಲ್ಲಿ ಅಭಿಮಾನಿಗಳಿಗೆ ಅನಿರೀಕ್ಷಿತ ಖುಷಿ ನೀಡಿದ್ದಾರೆ.

ಕೊಲ್ಲೂರಿಗೆ ತೆರಳುತ್ತಿದ್ದ ವಿಜಯ್ ಅವರ ಕಾರು ಸುರತ್ಕಲ್ ಜಂಕ್ಷನ್ ತಲುಪುತ್ತಿದ್ದಂತೆ ರಸ್ತೆ ಬದಿಯಲ್ಲಿ ಪೊಲೀಸರ ಬಿಗಿ ಬಂದೋಬಸ್ತ್ ಕಂಡುಬಂತು. ಕುತೂಹಲದಿಂದ ವಿಚಾರಿಸಿದಾಗ ಸಿಎಂ ವಿಜಯ್ ಸಾಗುತ್ತಿರುವ ಮಾಹಿತಿ ಸಿಗುತ್ತಿದ್ದಂತೆ ಕಾಲೇಜು ವಿದ್ಯಾರ್ಥಿಗಳು, ಯುವಕ–ಯುವತಿಯರು, ವಿಜಯ್ ಅಭಿಮಾನಿಗಳು ಕ್ಷಣಾರ್ಧದಲ್ಲಿ ಜಂಕ್ಷನ್‌ನ ಉದ್ದಕ್ಕೂ ಜಮಾಯಿಸಿದರು. ಅಭಿಮಾನಿಗಳನ್ನು ಕಂಡ ವಿಜಯ್ ತಮ್ಮ ಕಾರಿನ ಗ್ಲಾಸನ್ನು ತಗ್ಗಿಸಿ, ನೆರೆದಿದ್ದ ಜನರತ್ತ ಕೈ ಬೀಸಿ ಮುಗುಳ್ನಕ್ಕರು.

ಕೆಲವೇ ಸೆಕೆಂಡ್‌ಗಳ ಕಾಲ ನಡೆದ ಈ ದೃಶ್ಯ ಅಭಿಮಾನಿಗಳ ಪಾಲಿಗೆ ಅವಿಸ್ಮರಣೀಯವಾಯಿತು. 'ಅಷ್ಟು ದೊಡ್ಡ ಸ್ಟಾರ್, ಸಿಎಂ ಆಗಿದ್ರೂ ಗ್ಲಾಸ್ ಇಳಿಸಿ ನಮಗೆ ವಿಶ್ ಮಾಡಿದ್ರು. ಅವರ ಸರಳತೆಗೆ ನಾವು ಫ್ಯಾನ್ಸ್' ಎಂದು ಸುರತ್ಕಲ್‌ನ ಕಾಲೇಜು ವಿದ್ಯಾರ್ಥಿನಿಯೊಬ್ಬಳು ಹಂಚಿಕೊಂಡಳು.

ಕಿರುಸುದ್ದಿ

ಮಂಗಳೂರು ಜಂಕ್ಷನ್ ರೈಲು ನಿಲ್ದಾಣದಿಂದ ವಿವಿಧ ಭಾಗಗಳಿಗೆ ಬಸ್ ಸೇವೆ

• **ಮಂಗಳೂರು:** ಕರ್ನಾಟಕ ರಾಜ್ಯರಸ್ತೆ ಸಾರಿಗೆ ನಿಗಮ ಮಂಗಳೂರು ವಿಭಾಗದ, ಮಂಗಳೂರು–3ನೇ ಘಟಕದಿಂದ ಮಂಗಳೂರು ಜಂಕ್ಷನ್ ರೈಲು ನಿಲ್ದಾಣ (ಪಡೀಲ್) ನಿಂದ ಕಟೀಲು/ಬೊಕ್ಕಪಟ್ಣ/ ಸ್ಟೇಟ್‌ಬ್ಯಾಂಕ್/ ಕೋಡಿಕಲ್ ಮಾರ್ಗವಾಗಿ ನಗರ ಸಾರಿಗೆಯನ್ನು ಕಾರ್ಯಾಚರಣೆಗೊಳಿಸಲಾಗುತ್ತಿದೆ.

ವೇಳಾ ವಿವರ: ಮಂಗಳೂರು ಜಂಕ್ಷನ್ ರೈಲು ನಿಲ್ದಾಣ (ಪಡೀಲ್) ನಿಂದ ಕಟೀಲಿಗೆ ಬೆಳಿಗ್ಗೆ 6:55, 10:45, ವಯಾ :ಕೂಳೂರು– ಸುರತ್ಕಲ್– ಚೊಕ್ಕಬೆಟ್ಟು– ಕಾಟಿಪಳ್ಳ– ಶಿಬರೂರು– ಬಲವಿನಗುಡ್ಡೆ, ಬೊಕ್ಕಪಟ್ಣದಿಂದ ಬೆಳಿಗ್ಗೆ 8:45, 10:15, 11:45, ಮಧ್ಯಾಹ್ನ 1:30, 3:20, 5, 6:30, ವಯಾ : ಕಂಕನಾಡಿ–ಜ್ಯೋತಿ– ಪಿವಿಎಸ್– ಲಾಲ್‌ಬಾಗ್–ಸುಲ್ತಾನ್ ಬತ್ತೇರಿ–ಅಮೃತ ವಿದ್ಯಾಲಯ–ಬೋಳಾರ್, ಸ್ಟೇಟ್‌ಬ್ಯಾಂಕ್‌ಗೆ 3, ಸಂಜೆ 5, ಮಧ್ಯಾಹ್ನ 1, 1:25, 2.40, ವಯಾ : ಪಡೀಲ್–ಮರೋಳಿ–ನಂತೂರು–ಕದ್ರಿ–ಜ್ಯೋತಿ, ಕೋಡಿಕಲ್‌ಗೆ ಬೆಳಿಗ್ಗೆ 8, 9, 9:50, 11, 12:15, 2:30, 3:30, ವಯಾ: ಪಡೀಲ್–ಮರೋಳಿ–ಕಂಕನಾಡಿ ಮಾರ್ಕೆಟ್ –ಮಲ್ಲಿಕಟ್ಟೆ–ಕೆಪಿಟಿ–ಲಾಲ್‌ಬಾಗ್–ಉರ್ವಾಸ್ಟೋರ್ –ಕೊಟ್ಟಾರ. ಸಾರ್ವಜನಿಕ ಪ್ರಯಾಣಿಕರು ಸಾರಿಗೆ ಸೌಲಭ್ಯದ ಸದುಪಯೋಗ ಪಡೆದುಕೊಳ್ಳಬಹುದು ಎಂದು ಕೆ.ಎಸ್.ಆರ್.ಟಿ.ಸಿ ಮಂಗಳೂರು ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆನೆದಂತ ಅಕ್ರಮ ಸಾಗಾಟ ಪತ್ತೆ: ಮೂವರು ವಶ

• **ಮಂಗಳೂರು:** ಮಂಗಳೂರು ನಗರದ ಪದವು ಗ್ರಾಮದ ಜೋಡುಕಟ್ಟೆ ಮರೋಳಿ ಹತ್ತಿರ ಜೂನ್ 11 ರಂದು ಅಕ್ರಮವಾಗಿ ಆನೆದಂತಗಳನ್ನು ಮಾರಾಟಕ್ಕೆ ಯತ್ನಿಸುತಿದ್ದ ಬೆಳ್ತಂಗಡಿ ಶಶಾಂಕ ಪುದುವೆಟ್ಟು, ಮಂಜೇಶ್ವರದ ಅಬ್ದುಲ್ ಖಾದರ್, ಅತ್ತಾವರದ ಪ್ರಭಾಚಂದ್ರ ಎಂಬಆರೋಪಿಗಳನ್ನು ಬಂಧಿಸಲಾಗಿದೆ. ಆರೋಪಿಗಳಿಂದ 2 ಕಾರು ಮತ್ತು 42.700 ಕಿ.ಗ್ರಾಂ ತೂಕದ 2 ಆನೆದಂತಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಕಾರ್ಯಾಚರಣೆಯಲ್ಲಿ ಬೆಂಗಳೂರು, ಮತ್ತು ಮಡಿಕೇರಿ ಸಿಐಡಿ ಅರಣ್ಯ ಘಟಕದ ಪೊಲೀಸ್ ಅಧೀಕ್ಷಕ ಪವನ್‌ನೆಜ್ಜೂರು ಐ.ಪಿ.ಎಸ್ ಅವರ ಮಾರ್ಗದರ್ಶನದಲ್ಲಿ ಮಂಗಳೂರು ಸಿ.ಐ.ಡಿ ಪೊಲೀಸ್ ಅರಣ್ಯ ಸಂಚಾರಿ ದಳದ ಪೊಲೀಸ್ ಉಪನಿರೀಕ್ಷಕ ದಿಲೀಪ್ ಜಿ.ಆರ್ ಹಾಗೂ ಸಿಬ್ಬಂದಿಗಳಾದ ಜಯರಾಮ ಕೆ.ಟಿ, ಬಾಲಕೃಷ್ಣ ಕೆ.ಎಂ, ತಾರನಾಥ ಎಸ್ ಮತ್ತು ಅಬ್ದುಲ್ ರವೂಫ್ ಭಾಗವಹಿಸಿದ್ದರು.

ಮರ ಬಿದ್ದು ಕಾಫಿ ಬೆಳೆಗಾರ ಸಾವು

• **ಮಡಿಕೇರಿ:** ತೋಟದಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭ ಮರ ಬಿದ್ದು ಬೆಳೆಗಾರರೊಬ್ಬರು ಸಾವಿಗೀಡಾದ ಘಟನೆ ಸೋಮವಾರಪೇಟೆ ತಾಲೂಕಿನ ಚಿಕ್ಕತೋಳೂರು ಗ್ರಾಮದಲ್ಲಿ ನಡೆದಿದೆ. ಚಿಕ್ಕತೋಳೂರು ಗ್ರಾಮದ ಬೆಳೆಗಾರ ನಂದೀಶ್ (51) ಎಂಬವರೇ ಸಾವಿಗೀಡಾದವರು.



ಗುರುವಾರ ಬೆಳಗ್ಗೆ ತೋಟದಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭ ಒಣಗಿದ ಮರವೊಂದು ಕೆಳ ಭಾಗದಲ್ಲಿ ಕೆಲಸ ಮಾಡುತ್ತಿದ್ದ ನಂದೀಶ್ ಅವರ ಮೇಲೆ ಬಿದ್ದಿದೆ. ಮರ ಬಿದ್ದ ರಭಸಕ್ಕೆ ನಂದೀಶ್ ಅವರ ಪಕ್ಕೆಲುಬುಗಳು ಮುರಿತಕ್ಕೊಳಗಾಗಿದ್ದು, ಹೃದಯ ಹಾಗೂ ಶ್ವಾಸಕೋಶಕ್ಕೆ ತೀವ್ರ ಹಾನಿಯಾಗಿತ್ತು. ತಕ್ಷಣ ಅವರನ್ನು ಸರ್ಕಾರಿ ಆಸ್ಪತ್ರೆಗೆ ಸಾಗಿಸಿ, ಪ್ರಾಥಮಿಕ ಚಿಕಿತ್ಸೆಯ ನಂತರ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಅವರು ಸಾವಿಗೀಡಾಗಿದ್ದಾರೆ. ಮೃತರು ಪತ್ನಿ, ಓರ್ವ ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ.

ಸಿಎಂ ವಿಜಯ್‌ಗೆ ಕಪ್ಪು ಬಾವುಟ ಯತ್ನ; 'ಕರವೇ' ಕಾರ್ಯಕರ್ತರು ವಶಕ್ಕೆ

• **ಉಡುಪಿ:** ಮೇಕೆದಾಟು ಯೋಜನೆಗೆ ತಮಿಳುನಾಡು ಸರ್ಕಾರ ನಿರಂತರವಾಗಿ ವಿರೋಧ ವ್ಯಕ್ತಪಡಿಸುತ್ತಿರುವುದನ್ನು ಖಂಡಿಸಿ, ಕೊಲ್ಲೂರಿಗೆ ಆಗಮಿಸುತ್ತಿದ್ದ ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ್ ಅವರಿಗೆ ಕಪ್ಪು ಬಾವುಟ ಪ್ರದರ್ಶಿಸಲು ಮುಂದಾಗಿದ್ದ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಕುಮಾರ್ ಶೆಟ್ಟಿ ಬಣ) ಕಾರ್ಯಕರ್ತರನ್ನು ಶನಿವಾರ ಪೊಲೀಸರು ವಶಕ್ಕೆ ಪಡೆದಿದ್ದಾರೆ. ರಾಷ್ಟ್ರೀಯ ಹೆದ್ದಾರಿ 66ರ ಉದ್ಯಾವರ ಬಲಾಯಿಪಾದೆ ಜಂಕ್ಷನ್ ಬಳಿ ಕರವೇ ಉಡುಪಿ ಜಿಲ್ಲಾ ಘಟಕದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಜಮಾಯಿಸಿ, ತಮಿಳುನಾಡು ಸಿಎಂ ಭೇಟಿ ವಿರುದ್ಧ ಕಪ್ಪು ಬಾವುಟ ಪ್ರದರ್ಶಿಸಿ ಆಕ್ರೋಶ ಹೊರಹಾಕಲು ಸಿದ್ಧತೆ ನಡೆಸಿದ್ದರು. ಆದರೆ, ಮುಖ್ಯಮಂತ್ರಿಗಳ ವಾಹನ ಸಂಚಾರ ಆರಂಭವಾಗುವ ಮುನ್ನವೇ ತಕ್ಷಣ ಕಾರ್ಯಪ್ರವೃತ್ತರಾದ ಪೊಲೀಸರು ಪ್ರತಿಭಟನಾಕಾರರನ್ನು ವಶಕ್ಕೆ ಪಡೆಯುವ ಮೂಲಕ ಪ್ರತಿಭಟನೆ ತಡೆದರು. ಕರವೇ ಉಡುಪಿ ಜಿಲ್ಲಾ ಗೌರವಾಧ್ಯಕ್ಷ ಅನ್ಸಾರ್ ಅಹಮದ್ ಸೇರಿದಂತೆ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು, ಬಳಿಕ ಬಿಡುಗಡೆಗೊಳಿಸಿದರು.

ಧರ್ಮಸ್ಥಳದಲ್ಲಿ ವ್ಯಸನಮುಕ್ತರ ಸಮ್ಮಿಲನ , ಶತದಿನೋತ್ಸವ ಸಮಾರಂಭ

ಧರ್ಮಸ್ಥಳದ ಮಾನವ ಕಲ್ಯಾಣ ಮಾದರಿ

• **ಧರ್ಮಸ್ಥಳ :** ಚತುರ್ವಿಧ ದಾನಪರಂಪರೆಯೊಂದಿಗೆ ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಮತ್ತು ಹೇಮಾವತಿ ವೀ. ಹೆಗ್ಗಡೆ ಮಾನವ ಕಲ್ಯಾಣಕ್ಕಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೂಲಕ ಮಾಡುತ್ತಿರುವ ಬಹುಮುಖಿ ಸೇವಾಕಾರ್ಯಗಳು ಆದರ್ಶ ಹಾಗೂ ಅನುಕರಣೀಯವಾಗಿವೆ ಎಂದು ಕೊಡಗು ವಿರಾಜಪೇಟೆಯ ಪೂಜ್ಯ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಹೇಳಿದರು.

ಅವರು ಶುಕ್ರವಾರ ಧರ್ಮಸ್ಥಳದಲ್ಲಿ ಅಮೃತವರ್ಷಿಣಿ ಸಭಾಭವನದಲ್ಲಿ ವ್ಯಸನಮುಕ್ತರ ಸಮ್ಮಿಲನ ಮತ್ತು ಶತದಿನೋತ್ಸವ ಸಮಾರಂಭವನ್ನು ಉದ್ಘಾಟಿಸಿ ಆಶೀರ್ವಚನ ನೀಡಿದರು.

ಧರ್ಮಸ್ಥಳದ ವತಿಯಿಂದ ಬದುಕಿಗೆ ಬೇಕಾದ ಎಲ್ಲಾ ಅವಶ್ಯಕತೆಗಳನ್ನು ಮತ್ತು ಸೌಲಭ್ಯಗಳನ್ನು ಒದಗಿಸಿ ಫಲಾನುಭವಿಗಳ ಸ್ವಾವಲಂಬಿ ಜೀವನಕ್ಕೆ ಪ್ರೋತ್ಸಾಹ ನೀಡುತ್ತಿರುವುದು ಶ್ಲಾಘನೀಯವಾಗಿದೆ. ಆಡು ಮುಟ್ಟದ ಸೊಪ್ಪಿಲ್ಲ, ಧರ್ಮಸ್ಥಳದವರು ಕಾರ್ಯ ಮಾಡದ ಸೇವಾ ಕ್ಷೇತ್ರವಿಲ್ಲ ಎಂದರು.

ವ್ಯಸನಮುಕ್ತರು ದೃಢಸಂಕಲ್ಪದಿಂದ ಸಾರ್ಥಕ ಜೀವನ ನಡೆಸಬೇಕು. ಇದು ಅತ್ಯಂತ ಸಂತೋಷ ಮತ್ತು ಸಂಭ್ರಮದ ಸಮಾರಂಭವಾಗಿದ್ದು ವ್ಯಸನಮುಕ್ತರ ಮುಖದಲ್ಲಿರುವ ಮಂದಹಾಸ ಹಾಗೂ ತೃಪ್ತಿ ಆಶಾದಾಯಕವಾಗಿದೆ. ಹೆಗ್ಗಡೆಯವರು ತಮ್ಮ ಎಲ್ಲಾ ಸೇವಾಕಾರ್ಯಗಳ ಯಶಸ್ಸನ್ನು ದೇವರ ಸೇವೆ ಎಂದೇ ಭಾವಿಸಿ, ಶ್ರೀ ಸ್ವಾಮಿಗೆ ಅರ್ಪಿಸಿ ಧನ್ಯತೆಯನ್ನು ಹೊಂದುತ್ತಾರೆ.



ಧರ್ಮಸ್ಥಳದಲ್ಲಿ ನಡೆದ ವ್ಯಸನಮುಕ್ತರ ಸಮ್ಮಿಲನ ಮತ್ತು ಶತದಿನೋತ್ಸವ ಸಮಾರಂಭದಲ್ಲಿ ಗೌರವಾರ್ಪಣೆ

ವ್ಯಸನಮುಕ್ತರು ಇಲ್ಲಿಗೆ ಬಂದು ಒಳ್ಳೆಯ ಜ್ಞಾನ ಹಾಗೂ ವಿಚಾರಗಳನ್ನು ಮನದಲ್ಲಿ ತುಂಬಿಕೊಂಡು ಮುಂದೆ ಸಾರ್ಥಕ ಜೀವನ ನಡೆಸಬೇಕು. ಏಕೆಂದರೆ ಇತರ ಕ್ಷೇತ್ರಗಳಲ್ಲಿ ಮಾಡಿದ ಪಾಪಕರ್ಮಗಳು ಪುಣ್ಯಕ್ಷೇತ್ರದಲ್ಲಿ ನಾಶವಾಗುತ್ತವೆ. ಪುಣ್ಯಕ್ಷೇತ್ರದಲ್ಲಿ ಪಾಪ ಮಾಡಿದರೆ ವಜ್ರಲೇಪದಂತೆ ಅದು ಬದುಕಿನಲ್ಲಿ ಶಾಶ್ವತವಾಗಿರುತ್ತದೆ ಎಂದು ಸ್ವಾಮೀಜಿ ಸಲಹೆ ನೀಡಿದರು.

ನವಜೀವನ ಪ್ರಶಸ್ತಿ ಪ್ರದಾನ ಮಾಡಿದ ವಿಧಾನಪರಿಷತ್ ಸದಸ್ಯ ಕೆ. ಪ್ರತಾಪಸಿಂಹ ನಾಯಕ್ ಮಾತನಾಡಿ, ವ್ಯಸನಮುಕ್ತರು ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಂಡು, ತಮ್ಮ ಕೆಲಸವನ್ನು ಸಂತೋಷದಿಂದ ಮಾಡಿ ಗೌರವಯುತ ಹಾಗೂ ನೆಮ್ಮದಿಯ ಜೀವನ ನಡೆಸಬೇಕು ಎಂದು ಹೇಳಿದರು.

ವಾರ್ಷಿಕ ವರದಿ ಬಿಡುಗಡೆಗೊಳಿಸಿದ ಹೇಮಾವತಿ ವೀ. ಹೆಗ್ಗಡೆ ಮಾತನಾಡಿ, ಮದ್ಯಪಾನದಂತಹ ದುಶ್ಚಟಗಳಿಂದ ಕೊಲೆ, ಅನ್ಯಾಯ, ಅತ್ಯಾಚಾರ ಹೆಚ್ಚಾಗುತ್ತದೆ. ಮಹಿಳೆಯರ ಜೀವನ ನರಕಯಾತನೆಯಾಗುತ್ತದೆ. ಮಾನವಜನ್ಮ ಶ್ರೇಷ್ಠವಾಗಿದ್ದು ಬುದ್ಧಿ, ವಿವೇಕ ಮತ್ತು ಶಕ್ತಿಯ ಸದುಪಯೋಗ ಮಾಡಿ ಸುಖ–ಶಾಂತಿ, ನೆಮ್ಮದಿಯ ಕುಟುಂಬಜೀವನ ನಡೆಸಬೇಕು ಎಂದು ಕಿವಿಮಾತು ಹೇಳಿದರು.

ಗ್ರಾಮಾಭಿವೃದ್ಧಿ ಯೋಜನೆಯ ಸಿ.ಇ.ಒ. ಅನಿಲ್ ಕುಮಾರ್ ಮಾತನಾಡಿ, ಫಲಾನುಭವಿಗಳ ಕಲ್ಯಾಣಕ್ಕಾಗಿ ಅನುಷ್ಠಾನಗೊಳಿಸಿದ ಯಶಸ್ವಿ ಕಾರ್ಯಕ್ರಮಗಳ ಮಾಹಿತಿ ನೀಡಿದರು.

ಅಧ್ಯಕ್ಷತೆ ವಹಿಸಿದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಮಾತನಾಡಿ, ವ್ಯಸನಮುಕ್ತರು ದೃಢಸಂಕಲ್ಪದಿಂದ ಇದ್ದು ಮುಂದೆ ಯಾವುದೇ ಆಮಿಷ, ಒತ್ತಡಕ್ಕೆ ಒಳಗಾಗಿ ಮತ್ತೆ ದುಶ್ಚಟಕ್ಕೆ ಬಲಿಯಾಗಬಾರದು. ತಾವು ಸಾರ್ಥಕ ಜೀವನ ನಡೆಸುವುದರೊಂದಿಗೆ, ಇತರ ಮದ್ಯವ್ಯಸನಿಗಳೂ ವ್ಯಸನಮುಕ್ತರಾಗುವಂತೆ ಪ್ರೇರಣೆ, ಸಹಕಾರ ನೀಡಬೇಕು ಎಂದರು.

ಪ್ರಾಸ್ತಾವಿಕ ಮಾತುಗಳೊಂದಿಗೆ ಸ್ವಾಗತಿಸಿದ ಜನಜಾಗೃತಿ ವೇದಿಕೆಯ ಪ್ರಾದೇಶಿಕ ನಿರ್ದೇಶಕ ವಿವೇಕ್ ಪ್ಯಾಸ್ ಮಾತನಾಡಿ, ಈ ವರೆಗೆ 2063 ಮದ್ಯವರ್ಜನ ಶಿಬಿರಗಳ ಮೂಲಕ 1,38,000 ಮದ್ಯವ್ಯಸನಿಗಳನ್ನು ವ್ಯಸನಮುಕ್ತರಾಗಿ ಪರಿವರ್ತನೆ ಮಾಡಿದ್ದು ಇದಕ್ಕಾಗಿ 75 ಕೋಟಿ ರೂ. ವಿನಿಯೋಗಿಸಲಾಗಿದೆ ಎಂದರು.

ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆಯ ರಾಜ್ಯ ಸಂಘಟನಾ ಅಧ್ಯಕ್ಷ ನಟರಾಜ ಬಾದಾಮಿ ಧನ್ಯವಾದವಿತ್ತರು.

ಯೋಜನಾಧಿಕಾರಿ ಗಣೇಶ್ ಆಚಾರ್ಯ ಕಾರ್ಯಕ್ರಮ ನಿರ್ವಹಿಸಿದರು.

'ಜಾಗೃತಿ ಅಣ್ಣ ಮತ್ತು ಜಾಗೃತಿ ಮಿತ್ರ' ಪ್ರಶಸ್ತಿ

ಹೊನ್ನಾವರದ ಮಂಜುನಾಯ್ಕ, ನಂಜನಗೂಡು ಮಣಿಕಂಠ ಮತ್ತು ಗದಗ ಜಿಲ್ಲೆಯ ನವಲಗುಂದದ ಜಗದೀಶ ಮಲ್ಲಪ್ಪ ಬ್ಯಾಳಿ ಅವರಿಗೆ 'ಜಾಗೃತಿ ಅಣ್ಣ' ಹಾಗೂ ಹುಬ್ಬಳ್ಳಿಯ ಸಿದ್ದಪ್ಪ ಕಲ್ಲಪ್ಪ ನೀಲರಗಿ, ಅಥಣಿಯ ಅಂದಾನಿ ದುರದುಂಡೆಪ್ಪ, ಶಿವಮೊಗ್ಗದ ರಮೇಶ್, ಎಸ್.ಎಲ್. ಗದಗದ ಶಿವಾನಂದ ಕುರಿ, ತುಮಕೂರಿನ ರವಿಕುಮಾರ್ ಮತ್ತು ವಿಜಯಪುರದ ಬಬಲೇಶ್ವರ ಸುಭಾಷ್ ಅವರಿಗೆ 'ಜಾಗೃತಿ ಮಿತ್ರ' ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ಪಾನಮುಕ್ತರ ಪರವಾಗಿ ಕೂಡ್ಲಿಗಿಯ ಸತೀಶ್ ಮತ್ತು ತುಮಕೂರಿನ ಮಂಜುಳಾ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

ಆಗುಂಬೆ ಘಾಟ್: ಸಂಚಾರ ಬಂದ್

• **ಉಡುಪಿ:** ರಾಷ್ಟ್ರೀಯ ಹೆದ್ದಾರಿ–169ಎಯ ತೀರ್ಥಹಳ್ಳಿ ಆಗುಂಬೆ ಘಾಟ್‌ನಲ್ಲಿ ಜೂನ್ 15ರಿಂದ ಮಳೆಗಾಲ ಮುಗಿಯುವವರೆಗೆ ವಾಹನಗಳ ಸಂಚಾರವನ್ನು ನಿಷೇಧಿಸಿ ಶಿವಮೊಗ್ಗ ಜಿಲ್ಲಾಡಳಿತ ಆದೇಶ ಹೊರಡಿಸಿದೆ.

ಶಿವಮೊಗ್ಗ ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ ಈ ಕುರಿತು ಆದೇಶ ಹೊರಡಿಸಿದ್ದು, ಆಗುಂಬೆ ಘಾಟ್‌ನಲ್ಲಿ ಇತ್ತೀಚಿನ ದಿನಗಳಲ್ಲಿ ಭಾರಿ ವಾಹನಗಳ ಸಂಚಾರ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

ಶಿವಮೊಗ್ಗದಿಂದ ಹೊಸನಗರ–ಮಾಸ್ತಿಕಟ್ಟೆ ಮಾರ್ಗವಾಗಿ ಕುಂದಾಪುರ ಹಾಗೂ ಉಡುಪಿಗೆ ಸಂಪರ್ಕ ಕಲ್ಪಿಸುವ ಹುಲಿಕಲ್ ಘಾಟ್ ಪ್ರದೇಶದಲ್ಲಿ ಭೂಕುಸಿತ ಸಂಭವಿಸಿದ ಬಳಿಕ ನಡೆಯುತ್ತಿರುವ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ. ಇದರ ಪರಿಣಾಮವಾಗಿ ಹೆಚ್ಚಿನ ಭಾರಿ ವಾಹನಗಳು ಆಗುಂಬೆ ಘಾಟ್ ಮಾರ್ಗವನ್ನು ಬಳಸುತ್ತಿದ್ದು, ನಿರಂತರ ಮಳೆಯಿಂದ ಘಾಟ್ ರಸ್ತೆಯ ಬದಿಗಳಲ್ಲಿ ಭೂಕುಸಿತ ಸಂಭವಿಸುವ, ಅಪಘಾತಗಳು ನಡೆಯುವ ಹಾಗೂ ಸಾರ್ವಜನಿಕ ಸಂಚಾರಕ್ಕೆ ಅಡಚಣೆ ಉಂಟಾಗುವ ಸಾಧ್ಯತೆ ಇದೆ ಎಂದು ಜಿಲ್ಲಾಡಳಿತ ತಿಳಿಸಿದೆ.



ಪರ್ಯಾಯ ಮಾರ್ಗಗಳು

ತೀರ್ಥಹಳ್ಳಿಯಿಂದ ಉಡುಪಿ ಕಡೆಗೆ ತೆರಳುವ ಭಾರಿ ವಾಹನಗಳು:
ತೀರ್ಥಹಳ್ಳಿ – ನಗರ – ನಾಗೋಡಿ – ಕೊಲ್ಲೂರು ಕುಂದಾಪುರ – ಉಡುಪಿ
ತೀರ್ಥಹಳ್ಳಿ – ಶೃಂಗೇರಿ – ಕೆರೆಕಟ್ಟೆ – ಬಜಗೋಳಿ ಕಾರ್ಕಳ – ಉಡುಪಿ.

ಉಡುಪಿಯಿಂದ ತೀರ್ಥಹಳ್ಳಿ ಕಡೆಗೆ ತೆರಳುವ ಭಾರಿ ವಾಹನಗಳು ಉಡುಪಿ–ಕುಂದಾಪುರ – ಕೊಲ್ಲೂರು – ನಾಗೋಡಿ ನಗರ – ತೀರ್ಥಹಳ್ಳಿ, ಉಡುಪಿ–ಕಾರ್ಕಳ – ಬಜಗೋಳಿ – ಕೆರೆಕಟ್ಟೆ –ಶೃಂಗೇರಿ – ತೀರ್ಥಹಳ್ಳಿ ಮಾರ್ಗವಾಗಿ ಸಂಚರಿಸಬೇಕಾಗಿದೆ.

ಮಳೆಗಾಲದ ಅವಧಿಯಲ್ಲಿ ಸಾರ್ವಜನಿಕರ ಸುರಕ್ಷತೆ ಹಾಗೂ ಘಾಟ್ ರಸ್ತೆಯ ಸಂರಕ್ಷಣೆಯ ದೃಷ್ಟಿಯಿಂದ ಈ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಜಿಲ್ಲಾಧಿಕಾರಿ ಸೂಚಿಸಿದ್ದಾರೆ.

ಅಲ್ಲದೆ, ಆರೋಗ್ಯ ಹಾಗೂ ತುರ್ತು ಸೇವೆಗಳಿಗಾಗಿ ಮಣಿಪಾಲ್, ಉಡುಪಿ ಮತ್ತು ಮಂಗಳೂರು ನಗರಗಳಿಗೆ ತೆರಳುವ ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ ಹಾಗೂ ಹಾವೇರಿ ಜಿಲ್ಲೆಗಳ ಜನರಿಗೆ ಈ ಮಾರ್ಗ ಪ್ರಮುಖ ಸಂಪರ್ಕ ಕೊಂಡಿಯಾಗಿದ್ದು, ರಸ್ತೆ ಸಂಚಾರಕ್ಕೆ ತೊಂದರೆ ಉಂಟಾದರೆ ಸಾರ್ವಜನಿಕರಿಗೆ ಹೆಚ್ಚಿನ ಸಮಸ್ಯೆಯಾಗುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕಾ ಕ್ರಮವಾಗಿ ಭಾರಿ ವಾಹನಗಳ ಸಂಚಾರಕ್ಕೆ ನಿರ್ಬಂಧ ಹೇರಲಾಗಿದೆ.

ಮಂಗಳೂರು ವಿವಿಯಲ್ಲಿ ಎಬಿವಿಪಿ ಕಾರ್ಯಕರ್ತರ ಪ್ರತಿಭಟನೆ

• **ಮಂಗಳೂರು:** ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ ವಿದ್ಯಾರ್ಥಿಗಳು ಶುಕ್ರವಾರ ಮಂಗಳೂರು ವಿ.ವಿ ಆಡಳಿತ ಸೌಧದ ಎದುರು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಎಬಿವಿಪಿ ರಾಜ್ಯ ಸಹಕಾರ್ಯದರ್ಶಿ ಸುಜಿತ್ ಮಾತನಾಡಿ, ಮಂಗಳೂರು ವಿ.ವಿಯಲ್ಲಿ ಆಗುತ್ತಿರುವ ಸಾಲು ಸಾಲು ಅನಾಹುತಗಳು, ಇದರಿಂದ ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳು ಆಡಳಿತ ಕಚೇರಿ, ಮಂಡಳಿಗೆ, ಸುಪ್ರೀಂ ಅಥಾರಟಿ ಅನಿಸಿಕೊಂಡ ವಿ.ಸಿಯವರಿಗೆ ಮನವಿ ಮಾಡಿದರೂ ಪರಿಹಾರ ಸಿಗುತ್ತಿಲ್ಲ. ಕನಿಷ್ಠ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗದ ವಿ.ವಿಗೆ ನಾಚಿಕೆಯಾಗಬೇಕು. ತಕ್ಷಣವೇ 9 ಬೇಡಿಕೆಗಳನ್ನು ತಕ್ಷಣವೇ ಬಗೆಹರಿಸಬೇಕು . ಬಗೆಹರಿಸುವವರೆಗೂ ಹೋರಾಟವನ್ನು ನಿಲ್ಲಿಸುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಬಳಿಕ ಸ್ಥಳಕ್ಕೆ ಆಗಮಿಸಿದ ಕುಲಪತಿ ಪ್ರೊ.ಪಿಎಲ್ ಧರ್ಮ ಅವರು, ವಿದ್ಯಾರ್ಥಿಗಳ ಶುಲ್ಕದಿಂದಲೇ ವಿ.ವಿ ನಡೆಯುತ್ತಿದೆ, ಗೆಸ್ಟ್ ಫ್ಯಾಕಲ್ಟಿ , ಎಲ್ಲವೂ ವಿದ್ಯಾರ್ಥಿಗಳ ದುಡ್ಡಿನಿಂದ ನಡೆಯುತ್ತಿದೆ. ಸರಕಾರ ಯಾವುದೇ ಪ್ರತಿಕ್ರಿಯೆ ನೀಡುತ್ತಿಲ್ಲ, ದಿನಾ ಪತ್ರ ಬರೆಯುತ್ತಿದ್ದೇವೆ . ಸರಕಾರದಿಂದ ಬಂದಿರುವ ರೂ. 20 ಕೋಟಿಯನ್ನು ಎಲ್ಲಾ ಸೌಕರ್ಯಗಳನ್ನು ಒದಗಿಸುವಲ್ಲಿ ಪ್ರಯತ್ನಿಸುತ್ತಿದ್ದೇವೆ. ಬಿಲ್ಡಿಂಗ್ ಕಮಿಟಿ, ಪರ್ಚೇಸ್ ಕಮಿಟಿ ಎಲ್ಲಾ ಅನುಮೋದನೆ ಪಡೆದು ಒದಗಿಸಬೇಕಾಗಿದೆ. 200 ಕಂಪ್ಯೂಟರುಗಳ ಆರ್ಡರ್ ನೀಡಲಾಗಿದೆ, 15 ಲಕ್ಷ ಕೆಮಿಕಲ್ಸ್ ಮೇ ಮೊದಲ ವಾರದಲ್ಲಿ ಬಂದಿದೆ. ಮೂರು ಪ್ರಾಜೆಕ್ಟ್‌ಗಳು ನಡೀತಾ ಇದೆ. ಸರಕಾರದಿಂದ ಬಂದಿರುವ ದುಡ್ಡನ್ನು ಸರಕಾರವೇ ನೇಮಿಸಿದ ಗುತ್ತಿಗೆದಾರರು ಕಾರ್ಯನಿರ್ವಹಿಸುತ್ತಾರೆ ಎಂದರು.

ಕುಲಪತಿಯವರ ಪ್ರತಿಕ್ರಿಯೆಗೆ ಸ್ಪಂದಿಸದ ವಿದ್ಯಾರ್ಥಿಗಳನ್ನು ಪೊಲೀಸರು ಬಂಧಿಸಿ, ಬಳಿಕ ಬಿಡುಗಡೆಗೊಳಿಸಿದರು. ಈ ವೇಳೆ ಕೊಣಾಜೆ ನಗರ ಕಾರ್ಯದರ್ಶಿ ಮನು, ವಿವಿ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳಾದ ನಿಹಾರ್, ಶ್ರೀಷಾ, ಅಪೇಕ್ಷಾ , ಕೇಸರಿ, ಯಶ್ವಿನ್ ಮತ್ತಿತರರು ಪಾಲ್ಗೊಂಡಿದ್ದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು
ಶನಿವಾರ 13, ಜೂನ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU

ಇಂದಿನ ಹವಾಮಾನ
ದಕ್ಷಿಣ ಕನ್ನಡ 29° 26°
ಉಡುಪಿ 31° 26°


ಪುಟ 5
ಕೆಸರಿನಿಂದ ತುಂಬಿದ ಹೊಸಂಗಡಿ ರೈಲ್ವೆ ಗೇಟ್ ಬಸ್ ತಂಗುದಾಣ ಪರಿಸರ


ಪುಟ 6
ಬಾಕಿ ಇರುವ ಕಡತಗಳ ತ್ವರಿತ ವಿಲೇವಾರಿ ಮಾಡಲು ಸೂಚನೆ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಸುಳ್ಯದಲ್ಲಿ ಗ್ರಾಹಕರನ್ನು ಆಕರ್ಷಿಸಿದ ಹಲಸು-ಮಾವು ಮೇಳ





ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದ ಕೇರ್ಪಳ ಶ್ರೀ ದುರ್ಗಾಪರಮೇಶ್ವರಿ ಕಲಾ ಮಂದಿರದಲ್ಲಿ ಶುಕ್ರವಾರ ಆರಂಭಗೊಂಡ 3 ದಿನಗಳ ಹಲಸು ಮತ್ತು ಮಾವು ಮೇಳ ಕಾರ್ಯಕ್ರಮದಲ್ಲಿ ಸಾವಿರಾರು ಮಂದಿ ಪಾಲ್ಗೊಂಡರು. ಮೇಳದಲ್ಲಿ ವಿವಿಧ ಬಗೆಯ ಖಾದ್ಯಗಳಾದ ಹಪ್ಪಳ, ಸಂಡಿಗೆ ಹಾಗೂ ಹಲಸಿನ ಹಣ್ಣಿನ ಮೌಲ್ಯವರ್ಧಿತ ಉತ್ಪನ್ನಗಳನ್ನು ಗ್ರಾಹಕರು ಮುಗಿಬಿದ್ದು ಖರೀದಿಸಿದರು. (ವರದಿ ಪುಟ 2)

ಕುಕ್ಕೆ ಕ್ಷೇತ್ರದಲ್ಲಿ ಪ್ಲಾಸ್ಟಿಕ್ ಹಾವಳಿ: ಪ್ಲಾಸ್ಟಿಕ್ ಸೇವಿಸಿ ಅಸ್ವಸ್ಥಗೊಂಡ ಹೋರಿ!



ಸುಬ್ರಹ್ಮಣ್ಯ: ಯಾತ್ರಾ ಕ್ಷೇತ್ರವಾದ ಕುಕ್ಕೆ ಸುಬ್ರಹ್ಮಣ್ಯದಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಸೇವಿಸಿ ಅಸ್ವಸ್ಥಗೊಂಡು ನಿತ್ರಾಣ ಸ್ಥಿತಿಯಲ್ಲಿದ್ದ ಹೋರಿಗೆ ಚಿಕಿತ್ಸೆ ನೀಡಿ ರಕ್ಷಿಸಲಾಯಿತು. ಹೋರಿಯ ಸ್ಥಿತಿ ತಿಳಿದು ಸ್ಥಳಕ್ಕೆ ಧಾವಿಸಿದ ಪಶು ವೈದ್ಯಾಧಿಕಾರಿಗಳು ಹೋರಿಗೆ ಸೂಕ್ತ ಚಿಕಿತ್ಸೆ ನೀಡಿದ್ದು, ಸಮಯೋಚಿತ ವೈದ್ಯಕೀಯ ನೆರವಿನಿಂದ ಅದರ ಪ್ರಾಣ ಉಳಿಸಲಾಗಿದೆ. ಹೋರಿಯ ಚಿಂತಾಜನಕ ಸ್ಥಿತಿ ಗಮನಿಸಿದ ಸ್ಥಳೀಯರು ತಕ್ಷಣ ಸ್ಪಂದಿಸಿ ರಕ್ಷಣಾ ಕಾರ್ಯದಲ್ಲಿ ಕೈಜೋಡಿಸಿದರು. ರವಿ ಕಕ್ಕೆಪದವು, ಪ್ರಶಾಂತ್ ಆಚಾರ್ಯ, ಅಶ್ವಥ್ ಸೇರಿದಂತೆ ಸ್ಥಳೀಯ ಪ್ರಾಣಿ ಪ್ರೇಮಿಗಳು, ಸಮಾಜಸೇವಕರು ಹೋರಿಯ ಜೀವ ಉಳಿಸಲು ಶ್ರಮಿಸಿ ದರು. ಕ್ಷೇತ್ರಕ್ಕೆ ಆಗಮಿ ಸುವ ಭಕ್ತರು ತ್ಯಾಜ್ಯಗಳನ್ನು ನಿಗದಿತ ಸ್ಥಳಗಳಲ್ಲೇ ವಿಲೇವಾರಿ ಮಾಡಿ, ಪರಿಸರ ಸ್ನೇಹಿ ನಡವಳಿಕೆ ಅಳವಡಿಸಿಕೊಳ್ಳುವ ಮೂಲಕ ಸ್ವಚ್ಛ – ಸುಂದರ ಕುಕ್ಕೆ ಕ್ಷೇತ್ರ ನಿರ್ಮಾಣಕ್ಕೆ ಸಹಕರಿಸಬೇಕೆಂದು ಸ್ಥಳೀಯರು ಮನವಿ ಮಾಡಿದ್ದಾರೆ.

ಸುತ್ತಮುತ್ತ

ಅನಗತ್ಯವಾಗಿ ರಸ್ತೆ ಅಗೆತ ಮಾಡಿದರೆ ಸೂಕ್ತ ಕ್ರಮ ಜಾರಿ

ಉಡುಪಿ: ಈಗಾಗಲೇ ಮಳೆಗಾಲ ಪ್ರಾರಂಭವಾಗಿರುವ ಹಿನ್ನೆಲೆ, ಉಡುಪಿ ಲೋಕೋಪಯೋಗಿ ಇಲಾಖಾ ವ್ಯಾಪ್ತಿಯ ಯಾವುದೇ ರಾಜ್ಯ ಹೆದ್ದಾರಿ/ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಹಾಗೂ ಅಕ್ಕಪಕ್ಕ ದಲ್ಲಿ ಅಗೆತ ಮಾಡುವುದನ್ನು ಅಕ್ಟೋಬರ್ ಅಂತ್ಯದವರೆಗೆ ನಿಷೇಧಿಸಲಾಗಿದೆ. ಅನಗತ್ಯ ರಸ್ತೆ ತುಂಡರಿಸುವುದು, ಅಗೆತ ಮಾಡುವುದು ಕಂಡು ಬಂದಲ್ಲಿ ಅಂತವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದೆಂದು ಉಡುಪಿ ಲೋಕೋಪಯೋಗಿ ಇಲಾಖೆ ಪ್ರಕಟಣೆ ತಿಳಿಸಿದೆ.

ಅಬಕಾರಿ ಪ್ರಕರಣ: ತಲೆಮರೆಸಿಕೊಂಡಿದ್ದ ಆರೋಪಿ ಬಂಧನ

ಕುಂಬಳೆ: ಅಬಕಾರಿ ಪ್ರಕರಣದಲ್ಲಿ ಆರೋಪಿಯಾಗಿ ಹಲವು ವರ್ಷಗಳಿಂದ ತಲೆಮರೆಸಿಕೊಂಡಿದ್ದ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ. ಹೊಸಂಗಡಿ ನಿವಾಸಿ ಪ್ರಶಾಂತ್ (44) ಬಂಧಿತ ಆರೋಪಿ. ಈತನನ್ನು ಕುಂಬಳೆ ಪೊಲೀಸರು ಗುರುವಾರ ತೊಕ್ಕೊಟ್ಟಿನಿಂದ ಬಂಧಿಸಿದ್ದಾರೆ. 2006ರಲ್ಲಿ ದಾಖಲಾದ ಅಬಕಾರಿ ಪ್ರಕರಣದಲ್ಲಿ ಈತ ಆರೋಪಿಯಾಗಿದ್ದಾನೆ.

ಶುರುವಾಗಿದೆ ಮಳೆಗಾಲ | ಅಬ್ಬರಿಸುತ್ತಿದೆ ಸಮುದ್ರ

ಕಡಲ್ಕೊರೆತ ಭೀತಿ!

ಆತಂಕದಲ್ಲಿದ್ದಾರೆ ಮೀನಕಳಿಯ ಪ್ರದೇಶದ ಜನತೆ

ಸುರತ್ಕಲ್ : ಮಳೆಗಾಲ ಆರಂಭವಾಗಿದೆ. ಇದರ ಜೊತೆಗೆ ಕಡಲ್ಕೊರೆತ ಭೀತಿ ಕಡಲ ತೀರದ ಜನತೆಯನ್ನು ಕಾಡಲಾರಂಭಿಸಿದೆ. ಬೈಕಂಪಾಡಿ ಮೀನಕಳಿಯ ಪ್ರದೇಶದಲ್ಲಿ ಕಡಲ್ಕೊರೆತದ ಭೀತಿ ಮತ್ತೆ ಎದುರಾಗಿದ್ದು, ಮುನ್ನೆಚ್ಚರಿಕಾ ಕ್ರಮವಾಗಿ ಸಮುದ್ರ ತೀರದಲ್ಲಿ ಮರಳು ಚೀಲಗಳ ಇರಿಸಿ ತಾತ್ಕಾಲಿಕ ತಡೆಗೋಡೆ ನಿರ್ಮಿಸಲಾಗಿದೆ. ಆದರೆ ಜನತೆಯ ಭಯ ಮಾತ್ರ ಇನ್ನೂ ದೂರವಾಗಿಲ್ಲ.

ಅಂಗಳದವರೆಗೂ ಬರುತ್ತೆ ನೀರು

ಮೀನಕಳಿಯ ಪ್ರದೇಶದಲ್ಲಿ ಹಲವಾರು ಕುಟುಂಬಗಳು ವಾಸಿಸುತ್ತಿದ್ದು, ಒಂದೆರಡು ವರ್ಷಗಳ ಹಿಂದೆ ಉಂಟಾದ ಕಡಲ್ಕೊರೆತದಿಂದ ಸಮುದ್ರದ ನೀರು ಕೆಲ ಮನೆಗಳ ಸಮೀಪದವರೆಗೂ ಬಂದಿತ್ತು. ಈ ವರ್ಷ ಕಡಲ ಆರ್ಭಟ ಜೋರಾದರೆ ಸಮುದ್ರದ ನೀರು ಮನೆ ಅಂಗಳದವರೆಗೂ ಬಂದು ಭೀತಿ ಸೃಷ್ಟಿಸುವ ಆತಂಕ ಜನತೆ ವ್ಯಕ್ತಪಡಿಸುತ್ತಿದ್ದಾರೆ.

ಸ್ಥಳೀಯರ ಪ್ರಕಾರ, ಮೀನಕಳಿಯ ರಂಗಮಂದಿರದ ಸಮೀಪ ಈ ಹಿಂದೆ ತುಂಬಲಾಗಿದ್ದ ಮಣ್ಣಿನ ಪ್ರದೇಶ ಕಡಲಿನ ಅಬ್ಬರಕ್ಕೆ ಸಿಲುಕಿ ಸಮುದ್ರ ಪಾಲಾಗಿತ್ತು. ವರ್ಷದಿಂದ ವರ್ಷಕ್ಕೆ ಕರಾವಳಿಯ ಮಣ್ಣುಕೊಚ್ಚಿಹೋಗುತ್ತಿರುವ ಪರಿಣಾಮ ಭೂಮಿಯ ವಿಸ್ತೀರ್ಣ ಕಡಿಮೆಯಾಗುತ್ತಿದ್ದು, ವಸತಿ ಪ್ರದೇಶಗಳ ಸುರಕ್ಷತೆಯ ಆತಂಕವೂ ಕಾಡಿದೆ.



ಯೋಜನೆಗಳು ಇನ್ನೂ ಕಾರ್ಯಗತವಾಗಿಲ್ಲ

ಕರ್ನಾಟಕ ಸರ್ಕಾರ ಈ ಹಿಂದೆ ರಾಜ್ಯದ ಕರಾವಳಿಯನ್ನು ಕಡಲ್ಕೊರೆತದಿಂದ ರಕ್ಷಿಸಲು ನೂರಾರು ಕೋ.ರೂ.ಗಳ ವೆಚ್ಚದ ಸಮಗ್ರ ಯೋಜನೆ ರೂಪಿಸಿತ್ತು. ಕೆಲವು ಪ್ರದೇಶಗಳಲ್ಲಿ ಕಾಮಗಾರಿ ನಡೆದಿದ್ದರೂ ಸುರತ್ಕಲ್, ಬೈಕಂಪಾಡಿ, ಮುಕ್ಕ ಸೇರಿದಂತೆ ಹಲವಾರು ಕಡಲ್ಕೊರೆತ ಪೀಡಿತ ಪ್ರದೇಶಗಳಲ್ಲಿ ಯೋಜನೆ ಪೂರ್ಣ ಪ್ರಮಾಣದಲ್ಲಿ ಜಾರಿಯಾಗಿಲ್ಲ, ಪರಿಣಾಮವಾಗಿ ಪ್ರತಿ ಮಳೆಗಾಲ ಬಂದಾಗ ಕರಾವಳಿ ಜನರು ಆತಂಕದಲ್ಲೇ ದಿನ ಕಳೆಯುವಂತಾಗಿದೆ.

ಶಾಶ್ವತ ತಡೆ ಇಲ್ಲ

ಈ ಭಾಗದಲ್ಲಿ ನಾಡದೋಣಿಗಳು ಸಮುದ್ರಕ್ಕೆಸರಾಗ ಇಳಿಯಲು ಅನುಕೂಲವಾಗುವಂತೆ ಶಾಶ್ವತ ಕಲ್ಲಿನ ರಚನೆಗಳು, ಅಲೆ ತಡೆಯುವ ವ್ಯವಸ್ಥೆಗಳ ನಿರ್ಮಿಸಿಲ್ಲ, ಪರಿಣಾಮ ಸಮುದ್ರದ ಅಲೆಗಳು ನೇರ ಕರಾವಳಿಗೆ ಅಪ್ಪಳಿಸಿ ಮಣ್ಣಿನ ಸವಕಳಿಯನ್ನು ಮತ್ತಷ್ಟು ಹೆಚ್ಚಿಸುತ್ತಿವೆ. »ಪುಟ 6

ಶಾಶ್ವತ ಯೋಜನೆ ಜಾರಿಗೊಳಿಸಿ

ಪ್ರಸ್ತುತ ಹಾಕಿರುವ ಮರಳು ಚೀಲಗಳು ತಾತ್ಕಾಲಿಕ ರಕ್ಷಣೆ ಒದಗಿಸಬಹುದಾದರೂ, ಇದು ಶಾಶ್ವತ ಪರಿಹಾರವಲ್ಲ ಎಂಬುದು ತಜ್ಞರ ಅಭಿಪ್ರಾಯ. ಸಮುದ್ರದ ಅಬ್ಬರ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವ ಹಿನ್ನೆಲೆ ಬೃಹತ್ ಕಲ್ಲಿನ ತಡೆಗೋಡೆ, ವೈಜ್ಞಾನಿಕ ಕರಾವಳಿ ಸಂರಕ್ಷಣಾ ಕಾಮಗಾರಿ, ರಕ್ಷಣಾ ಯೋಜನೆ ಕೈಗೊಳ್ಳಬೇಕಿದೆ. ಸರ್ಕಾರ ತಕ್ಷಣ ಮಧ್ಯ ಪ್ರವೇಶಿಸಿ ಶಾಶ್ವತ ಕರಾವಳಿ ರಕ್ಷಣಾ ಯೋಜನೆ ಜಾರಿಗೊಳಿಸಬೇಕೆಂದು ಆಗ್ರಹಿಸಿದ್ದಾರೆ.

ದ.ಕ.ಜಿಲ್ಲಾಧಿಕಾರಿಯ ಖಡಕ್ ಸೂಚನೆ

ಫ್ಲೆಕ್ಸ್, ಬ್ಯಾನರ್‌ಗಳ ತೆರವು ಕಾರ್ಯಕ್ಕೆ ವೇಗ

ನಗರಕ್ಕೆ ದೊರೆಯಲಿದೆ ನ್ಯೂ ಲುಕ್

ಮಂಗಳೂರು: ಬಂದರು ನಗರಿ ಮಂಗಳೂರಿನಲ್ಲಿ ಮಳೆಗಾಲದ ನೆಪದಲ್ಲಾದರೂ ಅನಧಿಕೃತ ಫ್ಲೆಕ್ಸ್, ಬ್ಯಾನರ್‌ಗಳಿಗೆ ಕಡಿವಾಣ ಬೀಳುವ ಸಾಧ್ಯತೆ ಗೋಚರಿಸಿದೆ.

ಜಿಲ್ಲಾಧಿಕಾರಿಗಳು ಗುರುವಾರ ಖಡಕ್ ಸೂಚನೆ ನೀಡಿದ್ದರಿಂದ ಶುಕ್ರವಾರವೇ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಫ್ಲೆಕ್ಸ್, ಬ್ಯಾನರ್‌ಗಳ ತೆರವಿಗೆ ಮನಪಾ ಅಧಿಕಾರಿಗಳು ಕಾರ್ಯಾಚರಣೆ ಆರಂಭಿಸಿದ್ದಾರೆ.

ಎಲ್ಲೆಂದರಲ್ಲಿದೆ ಅನಧಿಕೃತ ಬ್ಯಾನರ್

ನಗರದಲ್ಲಿ ಹೊಸ ಸಿಎಂ, ಸಚಿವರಿಗೆ ಅಭಿನಂದನೆ ಸಲ್ಲಿಸುವ ಬ್ಯಾನರ್, ಫ್ಲೆಕ್ಸ್‌ಗಳು ವ್ಯಾಪಕವಾಗಿ ಅಳವಡಿಕೆಯಾಗಿವೆ. ಆದರೆ, ಯಾವುದೇ ಅನಧಿಕೃತ ಬ್ಯಾನರ್, ಫ್ಲೆಕ್ಸ್‌ಗಳಿಗೆ ಅವಕಾಶ ನೀಡಬಾರದು ಎಂದು ಸ್ವತಃ ಮುಖ್ಯಮಂತ್ರಿ ಸ್ಪಷ್ಟ ಸೂಚನೆ ನೀಡಿದ್ದರು. ಆದರ ಬೆನ್ನಿಗೇ ಫ್ಲೆಕ್ಸ್, ಬ್ಯಾನರ್‌ಗಳ ತೆರವಿಗೆ ಜಿಲ್ಲಾಧಿಕಾರಿ ಸೂಚನೆ ಹೊರಡಿಸಿದ್ದರು. ಪರಿಣಾಮವಾಗಿ ಇದೀಗ ಎಲ್ಲ ಅನಧಿಕೃತ ಫ್ಲೆಕ್ಸ್ ಬ್ಯಾನರ್‌ಗಳನ್ನು ತೆರವುಗೊಳಿಸಲಾಗುತ್ತಿದೆ. ಆ ಮೂಲಕ ನಗರದ ಅಂದ ಕೆಡಿಸುವ ಪ್ರವೃತ್ತಿಗೆ ಮುಕ್ತಿ ಸಿಗುವ ಸಾಧ್ಯತೆಯಿದೆ. »ಪುಟ 6



ಜೀವಹಾನಿ ಸಂಭವಿಸುವ ಸಾಧ್ಯತೆ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಸ್ತುತ ಮುಂಗಾರು ಮಳೆ ಚುರುಕು ಗೊಂಡಿದ್ದು, ಮಳೆಗಾಲದ ಸಂದರ್ಭಗಾಳಿ-ಮಳೆಯ ಪರಿಣಾಮದಿಂದ ರಸ್ತೆಗಳಲ್ಲಿ, ಪ್ರಮುಖವಾಗಿ ರಸ್ತೆಗಳ ಡಿವೈಡರ್‌ಗಳಿಗೆ ಅಳವಡಿಸಲಾಗಿರುವ ಫ್ಲೆಕ್ಸ್, ಬ್ಯಾನರ್, ಬಂಟಿಂಗ್‌ಗಳು ಕಳಚಿ ವಾಹನಗಳ ಮೇಲೆ, ಪಾದಚಾರಿಗಳ ಮೇಲೆ ಬೀಳುವುದರಿಂದ ಅಪಘಾತಗಳು, ಜೀವಹಾನಿಗಳು ಸಂಭವಿಸುವ ಸಾಧ್ಯತೆಯೂ ಇದೆ.

ಹೊಸ ದಿಗಂತ ವರದಿಗೆ ಸಿಕ್ಕಿತು ಸ್ಪಂದನೆ | ಕಾರ್ಯಾಚರಣೆ ಶುರು

ಕೊನೆಗೂ ತೆರವಾಯಿತು ಅಪಾಯಕಾರಿ ಕಟ್ಟಡ

ಪುತ್ತೂರು: ನಗರದ ಮುಖ್ಯ ರಸ್ತೆಯ ಮಹಿಳಾ ಪೊಲೀಸ್ ಠಾಣೆಯ ಬಳಿ ಅರ್ಧ ಮಾತ್ರ ತೆರವುಗೊಂಡು ಕುಸಿಯುವ ಹಂತಕ್ಕೆ ತಲುಪಿ ಅಪಾಯಕಾರಿಯಾಗಿದ್ದ ಕಟ್ಟಡ ಶುಕ್ರವಾರ ಸಂಜೆ ಜೆಸಿಬಿ ಯಂತ್ರದ ಮೂಲಕ ತೆರವುಗೊಳಿಸಲಾಗಿದೆ.

ಶಿಥಿಲಾವಸ್ಥೆಯಲ್ಲಿದ್ದ ಕಟ್ಟಡವೊಂದು ಅಮಾಯಕರ ಬಲಿ ಪಡೆಯಲು ಸಿದ್ಧವಾಗಿ ನಿಂತಿದ್ದರೂ, ಅಪಾಯದ ಸೂಚನೆ ಫಲಕ ಹಾಕುವುದು ಬಿಟ್ಟು ಬೇರೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ, ತಕ್ಷಣ ಸ್ಥಳೀಯಾಡಳಿತ ಎಚ್ಚೆತ್ತುಕೊಳ್ಳುವಂತೆ 'ಹೊಸ ದಿಗಂತ' ಪತ್ರಿಕೆಯಲ್ಲಿ ಜೂ.11ರಂದು ಸಚಿತ್ರ ವರದಿ ಪ್ರಕಟಿಸಿ ಗಮನ ಸೆಳೆಯಲಾಗಿತ್ತು.



ಒಂದು ಪಾರ್ಶ್ವ ಕೆಡವಲಾಗಿತ್ತು

ಮಹಿಳಾ ಪೊಲೀಸ್ ಠಾಣೆಯ ಬಳಿಯ ಈ ಕಟ್ಟಡದ ವಿವಾದ ನ್ಯಾಯಾಲಯದಲ್ಲಿತ್ತು. ಆದರೆ, ಶ್ರೀ ಮಹಾಲಿಂಗೇಶ್ವರ ದೇವಾಲಯದ ಜಾತ್ರೆ ಸಂದರ್ಭ ಬಲ್ನಾಡು ದೈವಸ್ಥಾನದಿಂದ ದೈವದ ಕಿರುವಾಳು ಆಗಮಿಸುವ ಸಂದರ್ಭ ಪಕ್ಕದಲ್ಲಿರುವ ಕಟ್ಟೆಯ ಬಳಿಯಲ್ಲೂ ಜನರು ಸೇರುವುದರಿಂದ ತೊಂದರೆಯಾಗುತ್ತಿದೆ ಎಂದು ಈ ಕಟ್ಟಡದ ಒಂದು ಪಾರ್ಶ್ವವನ್ನು ಜೆಸಿಬಿ ಬಳಸಿ ಕೆಡವಿ ಹಾಕಲಾಗಿತ್ತು. »ಪುಟ 6

ದೂರು ದಾಖಲಾಗಿತ್ತು

ಮಹಿಳಾ ಠಾಣೆಯ ಬಳಿಯ ಈ ಹಳೆಯ ಕಟ್ಟಡವನ್ನು ಭಕ್ತರ ಮೂಲಕ ತೆರವು ಮಾಡಲಾಗಿದೆ ಎಂದು ಹೇಳಲಾದ ಘಟನೆ ಸಂದರ್ಭ ಶಾಸಕರು, ಮಹಾಲಿಂಗೇಶ್ವರ ದೇವಳ ವ್ಯವಸ್ಥಾಪನ ಸಮಿತಿಯವರೂ ಸ್ಥಳದಲ್ಲಿದ್ದರು. ನಂತರದ ಬೆಳವಣಿಗೆಯಲ್ಲಿ ಕಟ್ಟಡಕ್ಕೆ ಸಂಬಂಧಿಸಿದ ಮಾಲಕರು ಪೊಲೀಸ್ ದೂರು ನೀಡಿ ಹಲವರ ವಿರುದ್ಧ ಪ್ರಕರಣವೂ ದಾಖಲಾಗಿತ್ತು.

ರಸ್ತೆ ದಾಟುತ್ತಿದ್ದಾಗ ಸ್ಕೂಟರ್ ಡಿಕ್ಕಿ: ವ್ಯಕ್ತಿಗೆ ಗಂಭೀರ ಗಾಯ

ಮಂಜೇಶ್ವರ: ರಸ್ತೆ ದಾಟುತ್ತಿದ್ದಾಗ ಸ್ಕೂಟರ್ ಡಿಕ್ಕಿ ಹೊಡೆದು ಗಾಯಗೊಂಡ ಹಿನ್ನೆಲೆಯಲ್ಲಿ ಸ್ಕೂಟರ್ ಸವಾರನ ವಿರುದ್ಧ ಮಂಜೇಶ್ವರ ಪೊಲೀಸರು ಕೇಸು ದಾಖಲಿಸಿದ್ದಾರೆ. ಹೇರೂರು ಕಂಗ್ವೆ ನಿವಾಸಿ ಪದ್ಮನಾಭ (54) ಎಂಬವರ ಕಾಲಿಗೆ ಗಂಭೀರ ಗಾಯಗೊಂಡು ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಹೊಸಂಗಡಿಯಲ್ಲಿ ರಸ್ತೆ ದಾಟುತ್ತಿದ್ದಾಗ ಉಪ್ಪಳ ಭಾಗದಿಂದ ಮಂಜೇಶ್ವರ ಕಡೆಗೆ ತೆರಳುತ್ತಿದ್ದ ಸ್ಕೂಟರ್ ಡಿಕ್ಕಿ ಹೊಡೆದು ಅವರು ಗಾಯಗೊಂಡರು. ಈ ಸಂಬಂಧ ಅವರ ಸಹೋದರ ನಾರಾಯಣ ಎಂಬವರು ನೀಡಿದ ದೂರಿನಂತೆ ಕೇಸು ದಾಖಲಿಸಲಾಗಿದೆ.

ಕಾಸರಗೋಡಿನಲ್ಲಿ ಮಳೆಗಾಲ ಸಿದ್ಧತೆಯ ನೈಜ ಅನಾವರಣ | ನದಿಯಂತಾದ ರಸ್ತೆಗಳು

ದುರಂತಗಳಿಗೆ ಆಹ್ವಾನ ನೀಡುತ್ತಿವೆ ರಸ್ತೆ ಗುಂಡಿಗಳು!

ಕಾಸರಗೋಡು: ಕಾಸರಗೋಡಿನಲ್ಲಿ ಮಳೆಗಾಲದ ಸಿದ್ಧತೆಯ ನೈಜ ಅನಾವರಣವಾಗಿದೆ. ಸತತವಾಗಿ ಸುರಿಯುತ್ತಿರುವ ಮಳೆಯಿಂದ ಚರಂಡಿಗಳು ತುಂಬಿ ಹರಿಯುತ್ತಿದ್ದರೆ, ರಸ್ತೆಗಳು ನದಿಯಂತಾಗಿವೆ. ಜಿಲ್ಲಾಡಳಿತ ಮಳೆಗಾಲ ಪೂರ್ವ ಎಷ್ಟು ಸಿದ್ಧತೆ ಮಾಡಿಕೊಂಡಿದೆ ಎಂಬುದು ಈ ಮೂಲಕ ಬಹಿರಂಗಗೊಂಡಿದೆ.

ಕಳೆದ ಕೆಲವು ದಿನಗಳಲ್ಲಿ ಸುರಿದ ಮಳೆಗೆ ಜಿಲ್ಲೆಯ ವಿವಿಧೆಡೆಗಳಲ್ಲಿ ರಸ್ತೆಗಳು, ಕಾಲುದಾರಿಗಳು ಜಲಾವೃತಗೊಳ್ಳುತ್ತಿದ್ದು, ಅನೇಕ ಕಡೆಗಳಲ್ಲಿ ಗುಡ್ಡ ಕುಸಿತದ ಭೀತಿ ಎದುರಾಗಿದೆ. ಜಿಲ್ಲಾಡಳಿತದ ಸ್ಪಷ್ಟ ಸೂಚನೆಗಳಿದ್ದರೂ ಮಳೆಗಾಲ ಪೂರ್ವ ತಯಾರಿ ಜಿಲ್ಲೆಯಲ್ಲಿ ಸರಿಯಾಗಿ ನಡೆಯದಿರುವುದು ದುರಂತಗಳಿಗೆ ಆಹ್ವಾನ ನೀಡುವಂತಾಗಿದೆ.


ಸಂಗಮ ವಿಶೇಷ

ಶಾಲಾ ಕ್ಯಾಂಪಸ್ ಡೇಂಜರ್

ಮಾಯಿಪ್ಪಾಡಿ ಡಯಟ್ ಶಾಲಾ ಕ್ಯಾಂಪಸ್‌ಗೆ ಅಪಾಯ ಆವರಿಸಿದೆ. ಡಯಟ್ ಶಾಲೆಯ ಬಳಿಯಿರುವ ರಸ್ತೆಗೆ ಮರಗಳು ಅಪಾಯಕಾರಿಯಾಗಿ ಬಾಗಿನಿಂತಿದೆ. ರಸ್ತೆ ಬದಿಯ ಗುಡ್ಡದ ಮೇಲೆ ಕಾರ್ಯಾಚರಿಸುತ್ತಿರುವ ಡಯಟ್ ವಿದ್ಯಾಸಂಸ್ಥೆಯ ಬಹುತೇಕ ಭಾಗಗಳಲ್ಲಿ ಮಣ್ಣು ಕುಸಿತ ಕಂಡುಬರುತ್ತಿದ್ದು, ಆತಂಕದ ಸ್ಥಿತಿ ನಿರ್ಮಾಣ ವಾಗಿದೆ. ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿರುವ ಈ ರಸ್ತೆ ಬದಿಯ ಹಲವಾರು ಮರಗಳು ಯಾವುದೇ ಕ್ಷಣದಲ್ಲಿ ಧರೆಗುರುಳುವ ಸ್ಥಿತಿಯಲ್ಲಿವೆ.

ಮನವಿಗೂ ಸಿಗದ ಸ್ಪಂದನೆ

ಡಯಟ್ ಕ್ಯಾಂಪಸ್‌ಗೆ ಭೀತಿ ಸೃಷ್ಟಿಸುವ ಮಣ್ಣು ಕುಸಿತಕ್ಕೆ ತಕ್ಷಣ ಪರಿಹಾರ ಕಲ್ಪಿಸಬೇಕು ಹಾಗೂ ಮರಗಳ ತೆರವುಗೊಳಿಸಲು ಡಯಟ್ ಅಧಿಕಾರಿಗಳು ಸತತವಾಗಿ ಜಿಲ್ಲಾಧಿಕಾರಿ, ಲೋಕೋಪ ಯೋಗಿ ಇಲಾಖೆ ಅಧಿಕಾರಿಗಳಿಗೆ ಮನವಿ ನೀಡುತ್ತಿದ್ದರೂ ಪ್ರಯೋಜನವಾಗಿಲ್ಲ.

ಆವರಣಗೋಡೆ ಕುಸಿದು ಬಿದ್ದಿದೆ

ವಿದ್ಯಾನಗರ – ಸೀತಾಂಗೋಳಿ ರಸ್ತೆಯನ್ನು ಅಗಲೀಕರಿಸಿ ನವೀಕರಿಸಿದ ಸಂದರ್ಭ ಗುಡ್ಡ ಪ್ರದೇಶದಿಂದ ಅವೈಜ್ಞಾನಿಕವಾಗಿ ಮಣ್ಣು ಅಗೆದಿರುವುದು ಸಮಸ್ಯೆಗೆ ಕಾರಣವಾಗಿದೆ. ಡಯಟ್‌ನ ಆವರಣ ಗೋಡೆಗೆ ಹೊಂದಿಕೊಂಡು ರಸ್ತೆಗಾಗಿ ಮಣ್ಣು ಅಗೆಯಲಾಗಿತ್ತು. ಕಳೆದ ಎರಡು ದಿನಗಳ ಹಿಂದೆ ಸುರಿದ ಧಾರಾಕಾರ ಮಳೆಗೆ ಆವರಣಗೋಡೆ ಕೆಲ ಭಾಗ ಕುಸಿದು ಬಿದ್ದಿದೆ.

ಸುತ್ತಮುತ್ತ

ನಾಳೆ ಬಂಟರ ಭವನದಲ್ಲಿ ಬಂಟೆರೆ ಕಲಾಪಂಥ, ವಾರ್ಷಿಕೋತ್ಸವ

ಬಂಟ್ವಾಳ: ಬಂಟರ ಸಂಘ ಬಂಟವಾಳ ತಾಲೂಕು ಇದರ ನೇತೃತ್ವದಲ್ಲಿ ಮಹಿಳಾ ವಿಭಾಗ, ಯುವ ವಿಭಾಗ ಹಾಗೂ ವಲಯ ಬಂಟರ ಸಂಘಗಳ ಸಹಯೋಗದೊಂದಿಗೆ ವಾರ್ಷಿಕೋತ್ಸವ ಹಾಗೂ ಬಂಟ್ವಾಳ ತಾಲೂಕು ವಲಯ ಮಟ್ಟದ 'ಬಂಟೆರೆ ಕಲಾಪಂಥ' ಜೂ. 14ರಂದು ಬಂಟವಾಳ ಬಂಟರ ಭವನದಲ್ಲಿ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಜಗನ್ನಾಥ ಚೌಟ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಬಂಟೆರೆ ಕಲಾ ಪಂಥವನ್ನು ಪ್ರಗತಿಪರ ಕೃಷಿಕ ನಿರಂಜನ್ ಸೇಮಿತ ಕುಂದಬೆಟ್ಟು ಉದ್ಘಾಟಿಸುವರು. ಅಪರಾಹ್ನ 1.30ಕ್ಕೆ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಮುಂಬೈ ಉದ್ಯಮಿ ಬಾಲಕೃಷ್ಣ ಎಂ. ರೈ ತಿಪ್ಪಕೋಡಿ, ಮಂಗಳೂರು ಪಂಚ ಗ್ಯಾರಂಟಿ ಸಮಿತಿ ಅಧ್ಯಕ್ಷ ಸುರೇಂದ್ರ ಬಿ. ಕಂಬಳಿ ಅತಿಥಿಗಳಾಗಿ ಭಾಗವಹಿಸಲಿದ್ದು, ಸಂಜೆ 3.30ಕ್ಕೆ ವಿಜೇತರಿಗೆ ಬಹುಮಾನ ವಿತರಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಬಿ.ಸಿ.ರೋಡಿನಲ್ಲಿ ರಕ್ತದಾನ ಶಿಬಿರ

ಬಂಟ್ವಾಳ: ಸೆಕ್ಯೂರ್ ಇನ್ಶೂರೆನ್ಸ್ ಕನ್ಸಲ್ಟೆನ್ಸಿ ಫರಂಗಿಪೇಟೆ ಸೇವಾಂಜಲಿ ಪ್ರತಿಷ್ಠಾನ ಸಹಯೋಗದೊಂದಿಗೆ ಕೆಎಂಸಿ ಆಸ್ಪತ್ರೆ, ಮಂಗಳೂರು ಆಶ್ರಯದಲ್ಲಿ ವಿಶ್ವ ರಕ್ತದಾನಿಗಳ ದಿನದ ಪ್ರಯುಕ್ತ 136ನೇ ರಕ್ತದಾನ ಶಿಬಿರವು ಜೂ. 14 ರಂದು ಬೆಳಗ್ಗೆ 9 ರಿಂದ 1ರವರೆಗೆ ಬಿ.ಸಿ.ರೋಡಿನ ಶ್ರೀರಕ್ತೇಶ್ವರೀ ದೇವಸ್ಥಾನದ ಪಕ್ಕದಲ್ಲಿರುವ ಅರ್‌ಡಿ ಕಾಂಪ್ಲೆಕ್ಸ್‌ನ 2ನೇ ಮಹಡಿಯಲ್ಲಿ ನಡೆಯಲಿದೆ. ಬಂಟ್ವಾಳ ಶಾಸಕ ರಾಜೇಶ್ ನಾಯ್ಕ್ ಯು., ಬಂಟ್ವಾಳ ತಹಶೀಲ್ದಾರ್ ಜಿ. ಮಂಜುನಾಥ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಸೆಕ್ಯೂರ್ ಇನ್ಶೂರೆನ್ಸ್ ಕನ್ಸಲ್ಟೆನ್ಸಿಯ ಮಾಲಕ ಪ್ರಶಾಂತ್ ಫ್ರಾಂಕ್ ಹಾಗೂ ಸೇವಾಂಜಲಿ ಪ್ರತಿಷ್ಠಾನದ ಆಡಳಿತ ಟ್ರಸ್ಟಿ ಕೆ. ಕೃಷ್ಣಕುಮಾರ ಪೂಂಜ ಜಂಟಿ ಪ್ರಕಟಣೆಯಲ್ಲಿ ಕೋರಿದ್ದಾರೆ.

ಲಯನ್ಸ್ ಪ್ರಾಂತಿಯ ಅಧ್ಯಕ್ಷರಾಗಿ ಸಂತೋಷ್ ಜಾಕೆ ನೇಮಕ

ಸುಳ್ಯ: ಲಯನ್ಸ್ ಜಿಲ್ಲೆ 317 ಡಿ ಪ್ರಾಂತ್ಯ 6ರ 2026–27ನೇ ಸಾಲಿನ ಪ್ರಾಂತಿಯ ಅಧ್ಯಕ್ಷರಾಗಿ ಸಂತೋಷ್ ಜಾಕೆ ಅವರನ್ನು ಲಯನ್ಸ್ ಜಿಲ್ಲಾ ಗವರ್ನರ್ ತಾರಾನಾಥ್ ಎಚ್.ಎಂ. ಕೊಪ್ಪ ನೇಮಕ



ಮಾಡಿದ್ದಾರೆ. ಪಂಜ, ಬೆಳ್ಳಾರೆ, ಕುಕ್ಕೆ ಸುಬ್ರಹ್ಮಣ್ಯ, ಗುತ್ತಿಗಾರು, ಸಂಪಾಜೆ ಕಡಬ ಲಯನ್ಸ್ ಕ್ಲಬ್‌ಗಳು ಅವರ ವ್ಯಾಪ್ತಿಗೆ ಬರಲಿದ್ದು, ಸಂತೋಷ ಜಾಕೆಯವರು ಪಂಜ ಲಯನ್ಸ್ ಕ್ಲಬ್‌ನ ಅಧ್ಯಕ್ಷರಾಗಿ, ವಲಯ ಅಧ್ಯಕ್ಷರಾಗಿ, ಜಿಲ್ಲಾ ಸಂಪುಟ ಸದಸ್ಯರಾಗಿ ಈ ಹಿಂದೆ ಕಾರ್ಯ ನಿರ್ವಹಿಸಿದ್ದರು. ಸಂತೋಷ್ ಜಾಕೆ ಎಪಿಎಂಸಿ ಉಪಾಧ್ಯಕ್ಷರಾಗಿ, ಕಲ್ಮಡ್ಕ ಗ್ರಾಮ ಪಂಚಾಯತ್ ಅಧ್ಯಕ್ಷರಾಗಿ, ಪಂಬೆತ್ತಾಡಿ ಸಹಕಾರಿ ಸಂಘದ ಉಪಾಧ್ಯಕ್ಷರಾಗಿಯೂ ಕಾರ್ಯ ನಿರ್ವಹಿದ್ದರು.

ಮಾರುತಿ ಯುವಕ ಮಂಡಲ ಅಧ್ಯಕ್ಷರಾಗಿ ಅನಿಲ್ ಚರಣ್ ಆಯ್ಕೆ

ಉಳ್ಳಾಲ: ಉಳ್ಳಾಲ ಮೊಗವೀರಪಟ್ಣದ ಮಾರುತಿ ಯುವಕ ಮಂಡಲ ಮತ್ತು ಮಾರುತಿ ಜನಸೇವಾ ಸಂಘದ ನೂತನ ಅಧ್ಯಕ್ಷರಾಗಿ ಅನಿಲ್ ಚರಣ್ ಉಳ್ಳಾಲ ಆಯ್ಕೆಯಾಗಿದ್ದಾರೆ. ಮಾರುತಿ ಜನಸೇವಾ ಸಂಘದ ಕಚೇರಿಯಲ್ಲಿ ನಡೆದ ಮಹಾಸಭೆಯಲ್ಲಿ



ಮುಂದಿನ ಮೂರು ವರುಷಗಳ ಅವಧಿಗೆ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ನಡೆಯಿತು. ಪ್ರಧಾನ ಸಂಚಾಲಕರಾಗಿ ಸುಧಿರ್ ವಿ. ಅಮೀನ್, ಗೌರವ ಅಧ್ಯಕ್ಷರಾಗಿ ಕಿರಣ್ ಕುಮಾರ್, ಉಪಾಧ್ಯಕ್ಷರಾಗಿ ಪ್ರಶಾಂತ್ ಬಿ. ಉಳ್ಳಾಲ, ಪ್ರಧಾನ ಕಾರ್ಯದರ್ಶಿಯಾಗಿ ಕಪಿಲ್ ಎಸ್. ಬಂಗೇರ, ಕೋಶಾಧಿಕಾರಿಯಾಗಿ ತಿಲಕ್ ಎಸ್. ಬಂಗೇರ, ಕ್ರೀಡಾ ಕಾರ್ಯದರ್ಶಿಯಾಗಿ ಮಹೇಶ್ ಸಾಲ್ಯಾನ್, ಜೊತೆ ಕಾರ್ಯದರ್ಶಿಯಾಗಿ ಪವನ್ ಬಂಗೇರ, ಸಮಿತಿ ಸದಸ್ಯರಾಗಿ ವರದರಾಜ ಬಂಗೇರ, ಸಂದೀಪ್ ಪುತ್ರನ್, ಅಶ್ವಿನ್ ಕೋಟ್ಯಾನ್, ದಿನೇಶ್ ಕರ್ಕೇರ, ವಾಸುದೇವ ಕರ್ಕೇರ,ಅಜಿತ್ ಸುವರ್ಣ,ಪ್ರಕಾಶ್ ತಿಂಗಳಾಯ ಆಯ್ಕೆಯಾಗಿದ್ದಾರೆ. ಮಹಾಸಭೆಯಲ್ಲಿ ಹಿರಿಯ ಸದಸ್ಯರಾದ ಲೋಕನಾಥ್ ಕೋಟ್ಯಾನ್, ಚೆನ್ನಪ್ಪ ಅಮೀನ್ ರಘುವೀರ್ ಗುರಿಕಾರರು, ರೂಪೇಶ್ ರಂಜಿತ್, ಸುಧೀರ್ ಸುವರ್ಣ, ವರುಣ್, ಕಮಲಾಕ್ಷ, ಮನೋಹರ್, ಗಣರಾಜ,ದಾಮೋದರ್ ರೋಮಿತ್ ಉಪಸ್ಥಿತರಿದ್ದರು.

ಸುಳ್ಯದಲ್ಲಿ ಹಲಸು-ಮಾವು ಮೇಳ ಉದ್ಘಾಟನೆ | ಆದಾಯ ತಂದು ಕೊಡುವ ಬೆಳೆಯಾಗಲಿದೆ: ಶ್ರೀಪಡ್ರೆ

ಭಾರತದಲ್ಲಿ ಹಲಸು ಸಂಶೋಧನಾ ಕೇಂದ್ರ ಸ್ಥಾಪನೆಯಾಗಲಿ

ಸುಳ್ಯ: ಹಲಸು ಬೆಳೆ ಆದಾಯ ತಂದು ಕೊಡುವ ದಿನಗಳು ಬರಲಿದ್ದು, ತಳಿ ಸಂರಕ್ಷಣೆ ಜತೆ ಭಾರತದಲ್ಲಿ ಹಲಸು ಸಂಶೋಧನಾ ಕೇಂದ್ರ ಸ್ಥಾಪನೆಯಾಗಬೇಕಾಗಿದೆ ಎಂದು ಅಡಿಕೆ ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ಶ್ರೀಪಡ್ರೆ ಹೇಳಿದರು ಅವರು ಟೀಮ್ ಉಬಾರ್, ಸುಳ್ಯ ರೈತ ಉತ್ಪಾದಕ ಕಂಪೆನಿ ಸುಳ್ಯ, ಪ್ರಣವ ಸೌಹಾರ್ದ ಸಹಕಾರಿ ಸಂಘ ಮತ್ತು ಸುದ್ದಿ ಕೃಷಿ ಅರಿವು ಕೇಂದ್ರದ ಆಶ್ರಯದಲ್ಲಿ ಸ್ಥಳೀಯ ತಾಲೂಕು ಆಡಳಿತ, ತಾಲೂಕು ಪಂಚಾಯತ್, ಕೃಷಿ ಸಂಬಂಧಿತ ಸರಕಾರಿ ಇಲಾಖೆಗಳು ಹಾಗೂ ಸಹಕಾರಿ ಸಂಘಗಳು, ಸ್ಥಳೀಯ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಸುಳ್ಯದ ಕೇರ್ಪಳ ಶ್ರೀ ದುರ್ಗಾಪರಮೇಶ್ವರಿ ಕಲಾ ಮಂದಿರದಲ್ಲಿ ಶುಕ್ರವಾರ ಆರಂಭಗೊಂಡ 3ದಿನಗಳ ಹಲಸು ಮತ್ತು ಮಾವು ಮೇಳ ಕಾರ್ಯಕ್ರಮದಲ್ಲಿ ಅವರು ಮುಖ್ಯ ಅತಿಥಿಯಾಗಿ ಮಾತನಾಡಿದರು.

ಕೃಷಿಯಲ್ಲಿ ಸಾಧನೆ

ಹಲಸು–ಮಾವು ಮೇಳವನ್ನು ತಹಶೀಲ್ದಾರ್



ಮಂಜುಳಾ ಎಂ. ಉದ್ಘಾಟಿಸಿ, ಸುಳ್ಯದಲ್ಲಿ ಪ್ರಪ್ರಥಮ ಬಾರಿಗೆ ನಡೆಯುವ ಮೇಳಕ್ಕೆ ವರ್ಷಧಾರೆಯು ಸ್ವಾಗತಿಸಿದೆ. ಕೃಷಿಯನ್ನು ಹಿಂದೆ ಹವಾಮಾನ ಆಧಾರಿತ ಎಂದು ಹೇಳುತ್ತಿದ್ದರು. ಇಂದು ಅದನ್ನು ಮೆಟ್ಟಿ ನಿಂತು ಸಾಧನೆ ಮೂಲಕ ಹವಾಮಾನ ಆಧಾರಿತವಲ್ಲದ ಬೆಳೆಗಳು ಎಂದು ಸಾಧಿಸಿ ತೋರಿದ್ದಾರೆ ಎಂದು ಅವರು ಹೇಳಿದರು.

ಹಲಸು ಮಾವು ಮೇಳದ ಗೌರವ ಮಾರ್ಗದರ್ಶಕ ಡಾ.ಯು.ಪಿ. ಶಿವಾನಂದ ಸಭಾ ಕಾರ್ಯಕ್ರಮವನ್ನು ಉದ್ಘಾಟಿಸಿ ಶುಭ ಹಾರೈಸಿದರು. ಹಲಸು ಮಾವು ಮೇಳ ಸಮಿತಿಯ ಗೌರವಾಧ್ಯಕ್ಷ, ಪ್ರಣವ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಜಿ.ಆರ್. ಪ್ರಸಾದ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪದ್ಮಶ್ರೀ ಪುರಸ್ಕೃತ ಡಾ. ಗಿರೀಶ್ ಭಾರದ್ವಾಜ್, ವಿಧಾನ ಪರಿಷತ್ ಮಾಜಿ ಸದಸ್ಯ ಅಣ್ಣಾ ವಿನಯಚಂದ್ರ, ಸುಳ್ಯ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಕೆ.ಎಂ. ಮುಸ್ತಫ, ವಿಜಯ ಗ್ರಾಮೀಣಾಭಿವೃದ್ಧಿ ಪ್ರತಿಷ್ಠಾನದ ಸಿಇಒ ಜ್ಯೋತಿರಾಜ್, ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಪ್ರಮೋದ್ ಸಿ.ಎಂ., ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಗುರುಪ್ರಸಾದ್ ಎಂ.ಎಸ್. ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸುಳ್ಯ ರೈತ ಉತ್ಪಾದಕ ಕಂಪೆನಿಯ ಅಧ್ಯಕ್ಷ ಹಾಗೂ ಹಲಸು ಮಾವು ಮೇಳ ಸಂಘಟನಾ ಸಮಿತಿಯ ಅಧ್ಯಕ್ಷ ವೀರಪ್ಪ ಗೌಡ ಕಣ್ಕಲ್ ಸ್ವಾಗತಿಸಿ, ಪ್ರಧಾನ ಕಾರ್ಯದರ್ಶಿ ಜಯರಾಮ ಮುಂಡೋಳಿಮೂಲೆ ವಂದಿಸಿದರು. ಮೋಹಿನಿ ಸಂಪಾಜೆ ಹಾಗೂ ಯಶ್ವಿ ಕಾಳಂಮನೆ ಕಾರ್ಯಕ್ರಮ ನಿರ್ವಹಿಸಿದರು.

ಸ್ಥಳದಲ್ಲೇ ಹಲಸು, ಮಾವಿನ ಕಸಿ

ಹಲಸು ಮಾವು ಮೇಳದಲ್ಲಿ ವಿಶೇಷ ಆಕರ್ಷಣೆಯಾಗಿ ಸ್ಥಳದಲ್ಲೆ ಹಲಸು ಹಾಗೂ ಮಾವಿನ ಕಸಿ ಕಟ್ಟಿ ಕೊಡಲಾಗುತ್ತಿದ್ದು, ಜೊತೆಗೆ ಮೇಳದ ಮೂರು ದಿನಗಳ ಕಾಲವು ವಿಚಾರ ಸಂಕಿರಣ, ಅಡುಗೆ ಸ್ಪರ್ಧೆ, ಸಾಂಸ್ಕೃತಿಕ ಕಾರ್ಯಕ್ರಮಗಳು ಸೇರಿದಂತೆ ವಿವಿಧ ಬಗೆಯ ಕಾರ್ಯಚಟುವಟಿಕೆಗಳು ನಡೆಯಿತು. ವಿದ್ಯಾರ್ಥಿಗಳು, ಕೃಷಿಕರನ್ನು ಈ ಮೇಳವು ಕೈಬೀಸಿ ಕರೆಯುವಂತಾಗಿದ್ದು, ಮೇಳದಲ್ಲಿ ವಿಶೇಷವಾಗಿ ಕೃಷಿ ಕ್ಷೇತ್ರದಲ್ಲಿ ಸಾಧನೆಗೈದ ಕೃಷಿಕರನ್ನು ಸನ್ಮಾನಿಲಾಗುತ್ತದೆ.

ಸಂಶೋಧನೆ ನಡೆಯಲಿ

ಹಲಸಿಗೆ ಆದರದ ಆದ ಮೌಲ್ಯವಿದ್ದು ಕೇರಳ ಸರಕಾರ ಹಲಸನ್ನು ರಾಜ್ಯ ಫಲ ಎಂದು ಘೋಷಣೆ ಮಾಡಿದೆ. ಹಲವು ರೋಗಗಳಿಗೆ ರಾಮಭಾಣವಾದ ಹಲಸಿನ ಬಗ್ಗೆ ಸಂಶೋಧನೆಗಳು ನಡೆಯಬೇಕು.

● ಶ್ರೀಪಡ್ರೆ, ಕಾರ್ಯನಿರ್ವಾಹಕ ಸಂಪಾದಕ, ಪುತ್ತೂರಿನ ಅಡಿಕೆ ಪತ್ರಿಕೆ

ಮೋದಿ '12': ಪುತ್ತೂರು ಕಲ್ಲೇಗ ದೈವಸ್ಥಾನ ವಠಾರ ಸ್ವಚ್ಛತಾ ಕಾರ್ಯ



ಪುತ್ತೂರು: ದೇಶದ ಪ್ರಧಾನಿ ನರೇಂದ್ರ ಮೋದಿ 12 ವರ್ಷದಲ್ಲಿ ಯಾವುದೇ ಭ್ರಷ್ಟಾಚಾರ ಇಲ್ಲದೆ ಸ್ವಚ್ಛ ರಾಜಕಾರಣ ಮಾಡಿ ತೋರಿಸಿದ್ದಾರೆ. ಜಗತ್ತಿನಲ್ಲಿ ಭಾರತದ ಗೌರವ ಹೆಚ್ಚಿಸಿದ್ದಾರೆ ಎಂದು ವಿಧಾನ ಪರಿಷತ್ ಶಾಸಕ ಕಿಶೋರ್‌ಕುಮಾರ್ ಪುತ್ತೂರು ಹೇಳಿದ್ದಾರೆ.

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ 12ನೇ ವರ್ಷಾಚರಣೆಯ ಸೇವಾ ಅಭಿವೃದ್ಧಿ ಮತ್ತು ಜನಕಲ್ಯಾಣದ ಪ್ರಯುಕ್ತ ದ.ಕ. ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ವತಿಯಿಂದ ಪುತ್ತೂರು ಗ್ರಾಮಾಂತರ ಮತ್ತು ನಗರ ಮಂಡಲದ ನೇತೃತ್ವದಲ್ಲಿ ಪುತ್ತೂರು ಕಲ್ಲೇಗ ದೈವಸ್ಥಾನದ ವಠಾರದಲ್ಲಿ ನಡೆದ ಸ್ವಚ್ಛತಾ ಕಾರ್ಯದಲ್ಲಿ ಅವರು ಮಾತನಾಡಿದರು. ಹಿಂದುಳಿದ ವರ್ಗಗಳ ಮೋರ್ಚಾದ ರಾಜ್ಯ ಕಾರ್ಯದರ್ಶಿ ಆರ್.ಸಿ. ನಾರಾಯಣ ಮಾತನಾಡಿದರು. ಬಿಜೆಪಿ ಒಬಿಸಿ ನಗರ ಮಂಡಲದ ಅಧ್ಯಕ್ಷ ನಿರಂಜನ್ ಮಾನ್ಯ, ಬಿಜೆಪಿ ನಗರ ಮಂಡಲದ ಅಧ್ಯಕ್ಷ ಶಿವಕುಮಾರ್, ಜಿಲ್ಲಾ ಒಬಿಸಿ ಮೋರ್ಚಾ ಅಧ್ಯಕ್ಷ ಮಹೇಶ್ ಜೋಗಿ, ಜಿಲ್ಲಾ ಉಪಾಧ್ಯಕ್ಷ ಪ್ರಸನ್ನ ಮಾರ್ತ, ಜಿಲ್ಲಾ ಕಾರ್ಯದರ್ಶಿ ವಿದ್ಯಾಗೌರಿ, ಜಿಲ್ಲಾ ಒಬಿಸಿ ಉಪಾಧ್ಯಕ್ಷ ರಾಘವೇಂದ್ರ ರಾವ್, ವಿನೋದ್ ಬೆಳಿಯೂರು, ಪ್ರಧಾನ ಕಾರ್ಯದರ್ಶಿಗಳಾದ ಮೋನಪ್ಪ ದೇವಸ್ಯ, ಶಶಿಧರ ಕಲ್ಲಂಜ, ನಗರ ಪ್ರಭಾರಿ ರವಿ ಸೂವರು, ಗ್ರಾಮಾಂತರ ಪ್ರಭಾರಿ ಪುರುಷೋತ್ತಮ ಸಾಲಿಯಾನ್, ನಗರ ಮಂಡಲದ ಮಹಿಳಾ ಮೋರ್ಚಾದ ಅಧ್ಯಕ್ಷೆ ಸ್ವರ್ಣಲತಾ ಹೆಗ್ಡೆ ಜಯಲಕ್ಷ್ಮಿ ಶಾಗ್ರಿತ್ತಾಯ, ನಗರಮಂಡಲದ ಪ್ರಧಾನ ಕಾರ್ಯದರ್ಶಿಗಳಾದ ಯುವರಾಜ್ ಪೆರಿಯತ್ತೋಡಿ, ಶಶಿಧರ್ ನಾಯಕ್, ಒಬಿಸಿ ನಗರ ಮಂಡಲದ ಪ್ರಧಾನ ಕಾರ್ಯದರ್ಶಿಗಳಾದ ವಿಮಲ ಪೂಜಾರಿ, ಸುನಿಲ್ ದೇವಾಂಗ, ನಾಗೇಂದ್ರ ಬಾಳಿಗ, ಪುರುಷೋತ್ತಮ ಮುಂಗ್ಲಿಮನೆ ಇದ್ದರು.

ದೇರಳಕಟ್ಟೆ ಕ್ಷೇಮಾದಲ್ಲಿ 'ಮಕ್ಕಳ ಶಸ್ತ್ರಚಿಕಿತ್ಸಾ ಸಪ್ತಾಹ' ಆಚರಣೆ



ಉಳ್ಳಾಲ: ದೇರಳಕಟ್ಟೆಯ ಕೆ.ಎಸ್. ಹೆಗ್ಡೆ ಮೆಡಿಕಲ್ ಅಕಾಡೆಮಿಯ ಮಕ್ಕಳ ಶಸ್ತ್ರಚಿಕಿತ್ಸಾ ವಿಭಾಗದ ವತಿಯಿಂದ "ಪ್ರತಿ ಮಗುವಿಗೂ ಸುರಕ್ಷಿತ ಶಸ್ತ್ರಚಿಕಿತ್ಸೆ" ಎಂಬ ಧ್ಯೇಯವಾಕ್ಯದಡಿ ಜಾಗೃತಿ,ಶೈಕ್ಷಣಿಕ ಹಾಗೂ ರೋಗಿ–ಸಂವಹನ ಕಾರ್ಯಕ್ರಮಗಳ ಸರಣಿಯನ್ನು ಆಯೋಜಿಸುವ ಮೂಲಕ 'ಮಕ್ಕಳ ಶಸ್ತ್ರಚಿಕಿತ್ಸಾ ಸಪ್ತಾಹ 2026'ನ್ನು ಆಚರಿಸಲಾಯಿತು.

ದೂರದರ್ಶನ ವಾಹಿನಿಯಲ್ಲಿ ಜಾಗೃತಿ ಉಪನ್ಯಾಸವನ್ನು ಆಯೋಜಿಸಿ ನವಜಾತ ಶಿಶುಗಳು ಹಾಗೂ ಮಕ್ಕಳಲ್ಲಿ ಕಂಡುಬರುವ ಸಾಮಾನ್ಯ ಶಸ್ತ್ರಚಿಕಿತ್ಸಾ ಸಮಸ್ಯೆಗಳ ಕುರಿತು ಅರಿವು ಮೂಡಿಸಲಾಯಿತು. ಜೊತೆಗೆ ಸಮಯೋಚಿತ ಹಾಗೂ ಕೈಗೆಟಕುವ ವೆಚ್ಚದ ಶಸ್ತ್ರಚಿಕಿತ್ಸೆಯ ಮಹತ್ವವನ್ನು ತಿಳಿಸಲಾಯಿತು. ವಾರದ ಅವಧಿಯಲ್ಲಿ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ರಸಪ್ರಶ್ನೆ (ಕ್ವಿಜ್) ಸ್ಪರ್ಧೆಗಳು ಹಾಗೂ ಸಿಬ್ಬಂದಿಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಪೋಸ್ಟರ್ ಸ್ಪರ್ಧೆಯನ್ನು ಆಯೋಜಿಸಲಾಯಿತು.

ಮಕ್ಕಳ ಶಸ್ತ್ರಚಿಕಿತ್ಸಾ ವಿಭಾಗದಿಂದ ನಡೆಸಲಾದ ಶಸ್ತ್ರಚಿಕಿತ್ಸೆಗಳಿಗೆ ಶೇ. 50 ರಿಯಾಯಿತಿ ನೀಡಲಾಯಿತು. ಬುಧವಾರ ಮಕ್ಕಳ ಶಸ್ತ್ರಚಿಕಿತ್ಸಾ ಸಪ್ತಾಹ ಆಚರಣೆಯ ಸಮಾರೋಪವನ್ನು ಈ ಹಿಂದೆ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿರುವ ಮಕ್ಕಳು ಹಾಗೂ ಅವರ ಕುಟುಂಬದ ಸದಸ್ಯರಿಗಾಗಿ ವಿಶೇಷ ಕಾರ್ಯಕ್ರಮದೊಂದಿಗೆ ನಡೆಸಲಾಯಿತು. ಸುಮಾರು 50 ರೋಗಿಗಳು ಮತ್ತು 80 ಮಂದಿ ಕುಟುಂಬ ಸದಸ್ಯರು ಭಾಗವಹಿಸಿದ್ದರು. ಮಕ್ಕಳಿಗಾಗಿ ಮುಖ ಚಿತ್ರಕಲೆ (ಫೇಸ್ ಪೇಂಟಿಂಗ್), ಟ್ಯಾಟೂ ಕಲೆ ಹಾಗೂ ಬಲೂನ್ ಮಾದರಿ ತಯಾರಿಕೆ ಮುಂತಾದ ಮನರಂಜನಾ ಚಟುವಟಿಕೆ ಆಯೋಜಿಸಲಾಗಿತ್ತು.

ಉಜಿರೆ ರುಡ್‌ಸೆಟ್‌ನಲ್ಲಿ ವೃತ್ತಿಪರ ಮೇಕಪ್ ಮಾಸ್ಟರ್‌ಕ್ಲಾಸ್ ತರಬೇತಿ



ಬೆಳ್ತಂಗಡಿ: ಡಾ.ಡಿ.ವೀರೇಂದ್ರ ಹೆಗ್ಗಡೆಯವರ ಮಾರ್ಗದರ್ಶನ ದಲ್ಲಿ ನಡೆಯುತ್ತಿರುವ ಉಜಿರೆಯ ರುಡ್‌ಸೆಟ್ ಸಂಸ್ಥೆಯಲ್ಲಿ ಆಯೋಜಿಸಲಾಗಿದ್ದ ಒಂದು ದಿನದ ವೃತ್ತಿಪರ ಮೇಕಪ್ ಮಾಸ್ಟರ್‌ಕ್ಲಾಸ್ ಕಾರ್ಯಾಗಾರವನ್ನು ಉಜಿರೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸ್ನಾತಕೋತ್ತರ ಪದವೀಧರ (ಸ್ವಾಯತ್ತ) ಕಾಲೇಜಿನ ಡೀನ್ ಡಾ. ಸೌಮ್ಯ ಉದ್ಘಾಟಿಸಿ ಮಾತನಾಡಿ, ಸಮಯ ಪಾಲನೆ, ಶಿಸ್ತು ಮತ್ತು ಹೊಸತನದ ಮನೋಭಾವ ಸದಾ ಇರಲಿ ಎಂದು ಶಿಬಿರಾರ್ಥಿಗಳಿಗೆ ಶುಭ ಕೋರಿದರು ಅಂತಾರಾಷ್ಟ್ರೀಯ ಪ್ರಮಾಣೀಕೃತ ಮೇಕಪ್ ಆರ್ಟಿಸ್ಟ್, ಸೆಲೆಬ್ರಿಟಿ ಮೇಕಪ್ ಆರ್ಟಿಸ್ಟ್ ಹಾಗೂ ಮೇಕಪ್ ಎಜುಕೇಟರ್ ಆಗಿರುವ ಹಾಸನದ ಸೋಮು ಹಾಸನ್ ಮುಖ್ಯ ಅತಿಥಿಯಾಗಿದ್ದರು.ರುಡ್‌ಸೆಟ್ ಸಂಸ್ಥೆಗಳ ಕಾರ್ಯನಿರ್ವಾಹಕ ನಿರ್ದೇಶಕ ಬಿ.ಪಿ. ವಿಜಯಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಅತಿಥಿ ಉಪನ್ಯಾಸಕರಾದ ಮಾಧವಿ. ಎಂ. ರೈ ಹಾಗೂ ಆಶಾ ಸೋಮು (ಹಾಸನ) ವೇದಿಕೆಯಲ್ಲಿ ಇದ್ದರು. ರುಡ್‌ಸೆಟ್ ಸಂಸ್ಥೆಯ ಹಿರಿಯ ಉಪನ್ಯಾಸಕ ಅಬ್ರಹಾಂ ಜೇಮ್ಸ್ ಸ್ವಾಗತಿಸಿ, ಕೆ. ಕರುಣಾಕರ ಜೈನ್ ನಿರೂಪಿಸಿದರು. ಸಂಸ್ಥೆಯ ರಶ್ಮಿ ಪ್ರವೀಣ್ ಕುಮಾರ್, ಕಾಶ್ಮೀರ ಡಿಸೋಜಾ, ಸುರೇಶ, ಸಹಕರಿಸಿದ್ದರು. ಸಭೆಯಲ್ಲಿ ಸೋಮು ಹಾಸನ್ ಅವರನ್ನು ಗೌರವಿಸಲಾಯಿತು. ಜಲಜಾಕ್ಷಿ ಮತ್ತು ಶ್ರಾವಣಿ ತಂಡ ಪ್ರಾರ್ಥಿಸಿ, ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ರಾಷ್ಟ್ರೀಯ ಪ್ರಜ್ಞೆಯು ಸ್ವತಂತ್ರವಾದ ಪರಿಕಲ್ಪನೆ: ಡಾ. ಅಜಕ್ಕಳ ಗಿರೀಶ ಭಟ್



ಪುತ್ತೂರು: ಸ್ವಾಮಿ ವಿವೇಕಾನಂದರು ದೇಶದ ಒಳಿತಿಗಾಗಿ ಯಾರನ್ನೂ ಬೇಧ ಭಾವ ಮಾಡದೇ ಎಲ್ಲರೂ ನನ್ನವರೆಂಬ ಭಾವನೆಯನ್ನು ಬೆಳೆಸಿಕೊಳ್ಳಬೇಕು ಎಂದವರು. ರಾಷ್ಟ್ರೀಯ ಪ್ರಜ್ಞೆಯು ಸ್ವತಂತ್ರವಾದ ಪರಿಕಲ್ಪನೆಯಾಗಿದೆ. ಸುಶಿಕ್ಷಿತ ಸಮಾಜ ರೂಪುಗೊಂಡರೂ ದೇಶದ ಕುರಿತು ಅಭಿಮಾನ ಹೊಂದುವುದು ಅತ್ಯಂತ ಮುಖ್ಯ ಎಂದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ. ಅಜಕ್ಕಳ ಗಿರೀಶ ಭಟ್ ಹೇಳಿದರು.

ನಗರದ ವಿವೇಕಾನಂದ ಸ್ನಾತಕೋತ್ತರ ಅಧ್ಯಯನ ಕೇಂದ್ರ, ವಿವೇಕಾನಂದ ಸಂಶೋಧನಾ ಕೇಂದ್ರ, ಐಕ್ಯೂಎಸಿ ಮತ್ತು ವಿವೇಕಾನಂದ ಕಾಲೇಜ್ ಆಫ್ ಫಾರ್ಮಾಸ್ಯುಟಿಕಲ್ ಸೈನ್ಸಸ್ ಇದರ ಸಹಯೋಗದಲ್ಲಿ ನಡೆದ 'ವಿವೇಕ ಸ್ಮೃತಿ' ಸರಣಿ ಉಪನ್ಯಾಸ ಕಾರ್ಯಕ್ರಮದ 29ನೆಯ ಸಂಚಿಕೆಯಲ್ಲಿ ಅವರು ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದರು. ಧ್ಯಕ್ಷತೆ ವಹಿಸಿದ್ದ ವಿವೇಕಾನಂದ ಕಾಲೇಜ್ ಆಫ್ ಫಾರ್ಮಾಸ್ಯುಟಿಕಲ್ ಸೈನ್ಸ್‌ನ ಆಡಳಿತ ಮಂಡಳಿಯ ಸಂಚಾಲಕ ಗೋವಿಂದಪ್ರಕಾಶ್ ಸಾಯ ಶುಭ ಹಾರೈಸಿದರು. ವಿವೇಕಾನಂದ ಮಹಾವಿದ್ಯಾಲಯದ (ಸ್ವಾಯತ್ತ) ಪ್ರಾಂಶುಪಾಲ ಪ್ರೊ. ಶ್ರೀಕೃಷ್ಣ ಗಣರಾಜ ಭಟ್, ವಿವೇಕಾನಂದ ಫಾರ್ಮಾಸ್ಯುಟಿಕಲ್ ಕಾಲೇಜಿನ ಪ್ರಾಂಶುಪಾಲ ಡಾ. ಗುರುರಾಜ್ ಎಂ. ಉಪಸ್ಥಿತರಿದ್ದರು. ವಿವೇಕಾನಂದ ಸಂಶೋಧನಾ ಕೇಂದ್ರದ ನಿರ್ದೇಶಕಿ ಡಾ. ವಿಜಯಸರಸ್ವತಿ ಬಿ. ಸ್ವಾಗತಿಸಿ, ಭಾರತೀಯ ಸಂಸ್ಕೃತಿ ಮತ್ತು ಲಲಿತ ಕಲೆಗಳ ಅಧ್ಯಯನ ಕೇಂದ್ರದ ಸಂಯೋಜಕಿ ಡಾ. ವಿದ್ಯಾ ಎಸ್. ವಂದಿಸಿದರು. ಕಾಲೇಜಿನ ಕನ್ನಡ ವಿಭಾಗದ ಉಪನ್ಯಾಸಕ ಮಧು ಕುಮಾರ್ ಕಾರ್ಯಕ್ರಮ ನಿರ್ವಹಿಸಿದರು.

ಅಮರ ಸುಳ್ಯ ದಂಗೆಯ ಇತಿಹಾಸ ಬೆಳ್ಳಿ ತೆರೆಗೆ 'ಅಮರ ಸುಳ್ಯ-1837'

ಸುಳ್ಯ: ಅಮರ ಸುಳ್ಯ ದಂಗೆಯ ಐತಿಹಾಸಿಕ ಘಟನೆಯನ್ನು ಆಧರಿಸಿದ 'ಅಮರ ಸುಳ್ಯ–1837' ಎಂಬ ಪೂರ್ಣ ಪ್ರಮಾಣದ ಚಲನಚಿತ್ರ ನಿರ್ಮಾಣಕ್ಕೆ ಅಮರ ಸುಳ್ಯ–1837 ಮೆಮೋರಿಯಲ್ ಟ್ರಸ್ಟ್ ನಿರ್ಮಿಸಲಿದೆ ಎಂದು ಸಾಹಿತಿ ಕೆ.ಆರ್. ತೇಜ ಕುಮಾರ್ ಬಡ್ಡಡ್ಕ ಹೇಳಿದರು.

ಅವರು ಸುಳ್ಯ ಪ್ರೆಸ್ ಕ್ಲಬ್‌ನಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಮರ ಸುಳ್ಯ ದಂಗೆಯು ಜಾಗತಿಕ ಇತಿಹಾಸದಲ್ಲಿ ವಿಶಿಷ್ಟ ಸ್ಥಾನ ಪಡೆದಿರುವ ಘಟನೆಯಾಗಿದ್ದು, ಅದರ ಕುರಿತು ಹಲವು ಪುಸ್ತಕಗಳು ಮತ್ತು ಲೇಖನಗಳು ಪ್ರಕಟವಾಗಿವೆ. ಆದರೆ, ದೃಶ್ಯ ಮಾಧ್ಯಮದ ಮೂಲಕ ಈ ಐತಿಹಾಸಿಕ ಘಟನೆಯನ್ನು ಜನರಿಗೆ ತಲುಪಿಸುವ ಪ್ರಯತ್ನ ಇದುವರೆಗೆ ನಡೆದಿಲ್ಲ. ಈ ಕೊರತೆ ನೀಗಿಸುವ ಉದ್ದೇಶದಿಂದ ಚಲನಚಿತ್ರ ನಿರ್ಮಾಣಕ್ಕೆ ಮುಂದಾಗಿದ್ದೇವೆ ಎಂದರು.

ಟ್ರಸ್ಟ್‌ನ ಕಾರ್ಯದರ್ಶಿ ಎ.ಕೆ. ಹಿಮಕರ ಮಾತನಾಡಿ, ಸಾಹಿತ್ಯಕ ಹಾಗೂ ಚಾರಿತ್ರಿಕ ಮಹತ್ವ ಹೊಂದಿರುವ ಈ ಚಲನಚಿತ್ರಕ್ಕೆ ಚಲನಚಿತ್ರ ಮಂಡಳಿಯ ಅನುಮೋದನೆ ದೊರೆತಿದೆ. ಅಮರ ಸುಳ್ಯ ದಂಗೆಯು ಸುಳ್ಯದ ಜನರು ಹೆಮ್ಮೆಪಡುವ ಹೋರಾಟವಾಗಿದ್ದು, ಅದರ ನೈಜ ಇತಿಹಾಸವನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ನಿಟ್ಟಿನಲ್ಲಿ ಕಲಾತ್ಮಕವಾಗಿ ಚಿತ್ರಿಸಲು ಯೋಜಿಸಲಾಗಿದೆ ಎಂದು ತಿಳಿಸಿದರು.

ಚಿತ್ರದ ನಿರ್ದೇಶಕ ಹಾಗೂ ಟ್ರಸ್ಟ್ ಸದಸ್ಯ ಜಾನ್ ದೇವರಾಜ್ ಮಾತನಾಡಿ, ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಅಮರಸುಳ್ಯ ದಂಗೆಯ ಘಟನೆಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸಲಾಗುವುದು. ಸ್ಥಳೀಯ ಪ್ರತಿಭೆಗಳಿಗೆ ಹೆಚ್ಚಿನ ಅವಕಾಶ ಕಲ್ಪಿಸುವ ಉದ್ದೇಶ ಹೊಂದಿದ್ದು, ಸುಳ್ಯ, ಮಂಗಳೂರು, ಮಡಿಕೇರಿ, ಕಾಸರಗೋಡು ಭಾಗದ ಕಲಾವಿದರಿಗೆ ಆದ್ಯತೆ ನೀಡಲಾಗುವುದು. ಈ ಚಿತ್ರವು ಐತಿಹಾಸಿಕ ಘಟನೆಯನ್ನು ಪ್ರೇಕ್ಷಕರ ಮುಂದೆ ಜೀವಂತವಾಗಿ ಮರು ಸೃಷ್ಟಿಸಲಿದ್ದು ಮೂರು ಭಾಷೆಗಳಲ್ಲಿ ತೆರೆ ಕಾಣಲಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಅಮರ ಸುಳ್ಯ–1837 ಚಲನಚಿತ್ರದ ಪೋಸ್ಟರ್ ಬಿಡುಗಡೆಗೊಳಿಸಲಾಯಿತು. ಸುದ್ದಿಗೋಷ್ಠಿಯಲ್ಲಿ ಮಿಥುನ್ ಕುಮಾರ್ ಸೋನ ಹಾಗೂ ಟ್ರಸ್ಟ್ ಸದಸ್ಯ ಕೆ.ಆರ್. ವಿದ್ಯಾಧರ ಬಡ್ಡಡ್ಕ ಉಪಸ್ಥಿತರಿದ್ದರು.

ಕಲ್ಲಡ ಶ್ರೀರಾಮ ಶಿಶುವಾಟಿಕ ತರಗತಿ ಉದ್ಘಾಟನೆ, ವಿದ್ಯಾರ್ಥಿಗಳ ಪ್ರವೇಶೋತ್ಸವ



ಬಂಟ್ವಾಳ: ಕಲ್ಲಡ್ಕ ಶ್ರೀರಾಮ ಇಂಗ್ಲಿಷ್ ಮೀಡಿಯಂ ಸ್ಕೂಲ್‌ನ 'ಶ್ರೀರಾಮ ಶಿಶುವಾಟಿಕ' ವಿಭಾಗ ಮತ್ತು ಅದರ ನೂತನ ತರಗತಿಗಳ ಉದ್ಘಾಟನೆ ಹಾಗೂ 2026–27ನೇ ಶೈಕ್ಷಣಿಕ ವರ್ಷಕ್ಕೆ ಹೊಸದಾಗಿ ಸೇರ್ಪಡೆಗೊಂಡ ವಿದ್ಯಾರ್ಥಿಗಳ ಪ್ರವೇಶೋತ್ಸವ ಶಂಕರಾಚಾರ್ಯ ಸಭಾಂಗಣದಲ್ಲಿ ಶುಕ್ರವಾರ ನಡೆಯಿತು.

ಮುಂಬೈ ಐಎಸ್‌ಎಸ್‌ಎಆರ್ ಫೈನಾನ್ಸಿಯಲ್ ಸರ್ವಿಸ್ ಚೇರ್ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಡಾ. ಆರ್.ಕೆ. ಶೆಟ್ಟಿ ಮುಂಬೈ ಶ್ರೀರಾಮ ಶಿಶುವಾಟಿಕ ವಿಭಾಗಮತ್ತು ಕಟ್ಟಡವನ್ನು ಉದ್ಘಾಟಿಸಿದರು. ಶ್ರೀರಾಮ ವಿದ್ಯಾ ಕೇಂದ್ರದ ಸಂಸ್ಥಾಪಕ, ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಪ್ರಭಾಕರ್ ಭಟ್ ಕಲ್ಲಡ್ಕ ಅಧ್ಯಕ್ಷತೆ ವಹಿಸಿದ್ದರು. ಪುತ್ತೂರು ಪ್ರಗತಿ ಹಾಸ್ಪಿಟಲ್ ಆಯುರ್ವೇದ ತಜ್ಞೆ ಡಾ. ಸುಧಾ ರಾವ್ ಬಂಗಾರಡ್ಕ ಮಾತನಾಡಿದರು. ಪುತ್ತೂರು ಜಿ.ಎಲ್ ಆಚಾರ್ಯ ಜ್ಯುವೆಲ್ಲರ್ಸ್ ಆಡಳಿತ ಪಾಲುದಾರರಾದ ಲಕ್ಷ್ಮಿಕಾಂತ್ ಆಚಾರ್ಯ, ಜಿ.ಎಲ್. ಆಚಾರ್ಯ ಜ್ಯುವೆಲ್ಲರ್ಸ್‌ನ ಸಾಮಾಜಿಕ ಜಾಲತಾಣದ ಮುಖ್ಯಸ್ಥ ವೇದಲಕ್ಷ್ಮಿ ಕಾಂತ್ ಆಚಾರ್ಯ, ಮಂಗಳೂರು ರೈಸ್ ಸ್ಪೈಸಸ್‌ನ ಮಾಲಕರಾದ ದಿವ್ಯಾ ಸೋಹನ್ ರೈ, ಉಪ್ಪಿನಂಗಡಿ ರಾಜ್ ಗ್ರೂಪ್ ಸಂಸ್ಥಾಪಕ ಕೃಷ್ಣರಾಜ್, ಶ್ರೀರಾಮ ವಿದ್ಯಾ ಕೇಂದ್ರದ ಆಡಳಿತ ಸಮಿತಿ ಅಧ್ಯಕ್ಷ ಬಿ .ನಾರಾಯಣ ಸೋಮಯಾಜಿ, ಶ್ರೀರಾಮ ವಿದ್ಯಾ ಕೇಂದ್ರದ ಸಂಚಾಲಕ ವಸಂತ ಮಾಧವ, ಸಿಇಒ ಶ್ರೀ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ, ಶ್ರೀರಾಮ ಆಂಗ್ಲ ಮಾಧ್ಯಮ ಶಾಲೆ ಪ್ರಾಂಶುಪಾಲ ತಿರುಮಲೇಶ್ವರ ಪ್ರಶಾಂತ್ ಇದ್ದರು. ವೈಷ್ಣವಿ ಕಡ್ಕ ಸ್ವಾಗತಿಸಿದರು. ವೈಷ್ಣವಿ ಕಾಮತ್ ವಂದಿಸಿದರು. ಸೃಜನ ನಿರೂಪಿಸಿದರು.

ಸಾರ್ವಜನಿಕ ಆಸ್ತಿ ಖಾಸಗಿ ಸಂಸ್ಥೆಗೆ ವರ್ಗಾವಣೆ ಕಾನೂನಿನ ವಿರುದ್ಧ ಕ್ರಮ

ಖಾಸಗೀಕರಣ ವಿರುದ್ಧ ಮೆಸ್ಕಾಂ ನೌಕರರ ದ್ವಾರಸಭೆ

ಬಂಟ್ವಾಳ: ಪ್ರಸ್ತಾವಿತ ಖಾಸಗೀಕರಣವನ್ನು ವಿರೋಧಿಸಿ ಬಂಟ್ವಾಳ ಮೆಸ್ಕಾಂ ಕಚೇರಿಯಲ್ಲಿ ಶುಕ್ರವಾರ ನೌಕರರು ಕಾರ್ನರ್ ಮೀಟಿಂಗ್ (ದ್ವಾರಸಭೆ) ನಡೆಸಿದರು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಒಕ್ಕೂಟ, ಕೆಇಬಿ ನೌಕರರ ಸಂಘ, ಇಂಜಿನಿಯರುಗಳ ಸಂಘ ಸಹಿತ ನಾನಾ ಸಂಘಟನೆಗಳ ನೇತೃತ್ವದಲ್ಲಿ ಕಾರ್ಯ ನಿರ್ವಾಹಕ ಎಂಜಿನಿಯರ್ ಸಂತೋಷ್ ನಾಯಕ್ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಯಿತು.

ಇಂತಹ ಸಂದರ್ಭದಲ್ಲಿ ಸಾರ್ವಜನಿಕ ಆಸ್ತಿಯನ್ನು ಯಾವುದೇ ಒಂದು ಖಾಸಗಿ ಕಂಪೆನಿಗೆ ವರ್ಗಾಯಿಸುವುದು ಕಾನೂನಿನ ವಿರುದ್ಧವಾಗಿರುತ್ತದೆ ಎಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು.

ಕ.ವಿ.ಪ್ರ.ನಿ. ನೌಕರರ ಸಂಘದ ಉಪಾಧ್ಯಕ್ಷ ಕೆ. ಶಂಕರ್ ಪ್ರಕಾಶ್, ಡಿಪ್ಲೊಮ ಇಂಜಿನಿಯರ್



ಸಂಘದ ರಾಜ್ಯಾಧ್ಯಕ್ಷ ರಾಮಚಂದ್ರ, ಮಂಗಳೂರು ವೃತ್ತದ ಸಂಘಟನಾ ಕಾರ್ಯದರ್ಶಿ ಷಣ್ಮುಖಪ್ಪ ಬಾವಿ, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರುಗಳಾದ ನಾರಾಯಣ್.ಜಿ, ಸುಬ್ರಮಣ್ಯ ಪ್ರಸಾದ್ ಬಿ.ಜಿ , ಭವತಾರಿಣಿ, ಕ.ವಿ.ಪ್ರ.ನಿ ನೌಕರರ ಸಂಘ ಕೇಂದ್ರ ಸಮಿತಿ ಸದಸ್ಯರಾದ ರಾಜೇಶ್.ಬಿ, ಕರಿಬಸಪ್ಪ , ಭಾಸ್ಕರ್ ಹಾಗೂ ಬಂಟ್ವಾಳ ವಿಭಾಗದ ಅಧಿಕಾರಿ ಮತ್ತು ನೌಕರರರು ಭಾಗವಹಿಸಿ ಖಾಸಗೀಕರಣದ ಪ್ರಕ್ರಿಯೆಗೆ ವಿರೋಧ ವ್ಯಕ್ತಪಡಿಸಿ ತೀರ್ಮಾನ ಕೈಗೊಳ್ಳಲಾಯೊತು.

ಗ್ರಾಮೀಣ ಜೀವನೋಪಾಯ ಅಭಿಯಾನ, ಸಂಜೀವಿನಿ ಒಕ್ಕೂಟ ಸಹಯೋಗ

ಬಾಳೆದಿಂಡಿನ ನಾರು ತಯಾರಿಕಾ ಘಟಕ ಆರಂಭ

ಸುಳ್ಯ: ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಸಂಜೀವಿನಿ, ಕೆ.ಎಸ್.ಆರ್.ಎಲ್.ಪಿ.ಎಸ್. ದ.ಕ. ಜಿಲ್ಲಾ ಪಂಚಾಯತ್, ಪಯಸ್ವಿನಿ ಸಂಜೀವಿನಿ ತಾಲೂಕು ಮಟ್ಟದ ಒಕ್ಕೂಟದ ಸಹಯೋಗದಲ್ಲಿ ಆರಂತೋಡಿನ ಪ್ರಕೃತಿ ವನಧನ ವಿಕಾಸ ಕೇಂದ್ರದಲ್ಲಿ ಸಮಗ್ರ ಕೃಷಿ ಸಮುದಾಯ ಯೋಜನೆಯಡಿ ಜೀವನೋಪಾಯ ಸೇವಾ ಕೇಂದ್ರದಲ್ಲಿ ಬಾಳೆ ದಿಂಡಿನ ನಾರು ತಯಾರಿಕಾ ಘಟಕ ಉದ್ಘಾಟನೆ ಗುರುವಾರ ನೆರವೇರಿತು.

ನಾರು ತೆಗೆಯುವ ಯಂತ್ರವನ್ನು ಜಿ.ಪಂ. ಯೋಜನಾ ನಿರ್ದೇಶಕ ಜಯರಾಮ್ ಕೆ.ಇ., ನೇಯ್ಗೆ ಯಂತ್ರವನ್ನು ತಾ.ಪಂ. ಇಒ ರಾಜಣ್ಣ ಹೊಲಿಗೆ ಯಂತ್ರವನ್ನು ಜಿಲ್ಲಾ ಗ್ಯಾರಂಟಿ ಯೋಜನೆ ಅಧ್ಯಕ್ಷ ಭರತ್ ಮುಂಡೋಡಿ, ಜ್ಯೂಸ್ ತಯಾರಿಕಾ ಯಂತ್ರವನ್ನು ಆರಂತೋಡು



ಗ್ರಾ.ಪಂ. ಮಾಜಿ ಅಧ್ಯಕ್ಷ ಕೇಶವ ಅಡ್ತಲೆ ಉದ್ಘಾಟಿಸಿದರು. ಅಲೆಟ್ಟಿ ಲಕ್ಷ್ಮೀ ಸಂಜೀವಿನಿ ಗ್ರಾ.ಪಂ. ಮಟ್ಟದ ಒಕ್ಕೂಟದ ಅಧ್ಯಕ್ಷೆ ಸುಷ್ಮಾ ದಿನೇಶ್ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ನಗರ ಯೋಜನಾ ಪ್ರಾಧಿಕಾರ ಅಧ್ಯಕ್ಷ ಮುಸ್ತಫ ಕೆ.ಎಂ. ತಾಲೂಕು ಗ್ಯಾರಂಟಿ ಯೋಜನೆ ಅಧ್ಯಕ್ಷ ಶಾಹುಲ್ ಹಮೀದ್ ಕುತ್ತಮೊಟ್ಟೆ ಕವಿನ್ ಇಕೊ ಗ್ರೀನ್ ಪ್ರೊಡಕ್ಟ್ ವ್ಯವಸ್ಥಾಪಕ ನಿರ್ದೇಶಕ ಜಮೀನ್ ಪ್ರಭು, ಐಟಿಡಿಪಿ ಜಿಲ್ಲಾ ಅಧಿಕಾರಿ ಭಸವರಾಜ್, ಮಾಹೆ ವಿವಿಯ ವಾಸುದೇವ, ಮುಲ್ಕಿ ಸಂಜೀವಿನಿ ಒಕ್ಕೂಟ ಅಧ್ಯಕ್ಷೆ ಭಾನುಮತಿ ಇದ್ದರು. ಜಯಪ್ರಕಾಶ್ ಎಂ.ಆರ್. ಸ್ವಾಗತಿಸಿದರು. ಶ್ವೇತಾ ವಿ.ಜಿ. ವಂದಿಸಿದರು.

ಸುತ್ತಮುತ್ತ

ಕಂಪ್ಯೂಟರ್ ಕೋರ್ಸ್‌ಗೆ ಅರ್ಜಿ ಆಹ್ವಾನ

ಕಾಸರಗೋಡು: ಸರಕಾರಿ ಅನುಮೋದಿತ ಡಿಪ್ಲೊಮಾ ಇನ್ ಕಂಪ್ಯೂಟರ್ ಅಪ್ಲಿಕೇಶನ್, ಸರ್ಟಿಫಿಕೇಟ್ ಇನ್ ವರ್ಡ್ ಪ್ರೊಸೆಸಿಂಗ್, ಸರ್ಟಿಫಿಕೇಟ್ ಇನ್ ಡೇಟಾ ಎಂಟ್ರಿ ಆಪರೇಟರ್, ಸರ್ಟಿಫಿಕೇಟ್ ಇನ್ ಡೆಸ್ಕ್‌ಟಾಪ್ ಪಬ್ಲಿಷಿಂಗ್ ಕೋರ್ಸ್ ಗಳು ಜುಲೈ ತಿಂಗಳಲ್ಲಿ ರಾಜ್ಯ ಸಂಪನ್ಮೂಲ ಕೇಂದ್ರದ ಅಧೀನದಲ್ಲಿ ಪ್ರಾರಂಭವಾಗಲಿವೆ. ಕೋರ್ಸ್‌ಗಳಿಗೆ ಆನ್‌ಲೈನ್ ಅರ್ಜಿಗಳ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಜೂ.30 ಆಗಿದೆ. ಯಾವುದೇ ವಯಸ್ಸಿನ ಮಿತಿಯಿಲ್ಲ, ಹೆಚ್ಚಿನ ವಿವರಗಳಿಗೆ 6282812703, 9947812703 ಕರೆ ಮಾಡಬಹುದು.

ತಾತ್ಕಾಲಿಕ ನೇಮಕಾತಿ

ಕಾಸರಗೋಡು: ಮೊಗ್ರಾಲ್ ಸರಕಾರಿ ಯುನಾನಿ ಔಷಧಾಲಯದಲ್ಲಿ ತಾತ್ಕಾಲಿಕ ಹುದ್ದೆಗಳ ನೇಮಕಾತಿಗಾಗಿ ಸಂದರ್ಶನವು ಜೂ.15ರಂದು ಮಧ್ಯಾಹ್ನ 2 ಗಂಟೆಗೆ ನಡೆಯಲಿದೆ. ಭೌತ ಚಿಕಿತ್ಸಕ ಅರ್ಹತೆ ಪ್ಲಸ್ ಟು ವಿಜ್ಞಾನ, ಸರಕಾರಿ ಮಾನ್ಯತೆ ಪಡೆದ ಪ್ರಮಾಣಪತ್ರ (ಬಿಪಿಟಿ). ಕಾರುಣ್ಯ ಪಾಲಿಯೇಟಿವ್ ಆಂಬ್ಯುಲೆನ್ಸ್ ಚಾಲಕ ಅರ್ಹತೆ 10ನೇ ತರಗತಿ, ಚಾಲನಾ ಪರವಾನಗಿ (ಕನಿಷ್ಠ 3 ವರ್ಷ ಅನುಭವ ಹೊಂದಿರಬೇಕು), ದೈಹಿಕ ಸಾಮರ್ಥ್ಯ ಪ್ರಮಾಣಪತ್ರ ಪಡೆದಿರಬೇಕು ಎಂದು ತಿಳಿಸಲಾಗಿದೆ.

ಅಭಯ ಕಿರಣ ಯೋಜನೆ: ಅರ್ಜಿ ಆಹ್ವಾನ

ಕಾಸರಗೋಡು: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜಾರಿಗೆ ತಂದಿರುವ ಅಭಯಕಿರಣ ಯೋಜನೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸ್ವಂತ ಬದುಕಿಗೆ ಯಾವುದೇ ಮಾರ್ಗವಿಲ್ಲದೆ ಬದುಕುತ್ತಿರುವ ವಯಸ್ಸಿನ ಹೊರತಾಗಿಯೂ ನಿರಾಶ್ರಿತ ಮಹಿಳೆಯರಿಗೆ ಆಶ್ರಯ ನೀಡುವ ವ್ಯಕ್ತಿಗೆ ಈ ಯೋಜನೆಯ ಮೂಲಕ ತಿಂಗಳಿಗೆ 1000 ರೂ.ಗಳ ಆರ್ಥಿಕ ನೆರವು ದೊರೆಯಲಿದೆ. 2026ನೇ ಡಿಸೆಂಬರ್ 15ರ ವರೆಗೆ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಬಹುದು. ಸಂರಕ್ಷಿತ ಮಹಿಳೆಯ ವಾರ್ಷಿಕ ಆದಾಯ 1 ಲಕ್ಷ ರೂ.ಗಿಂತ ಕಡಿಮೆ ಇರಬೇಕು. ಹೆಚ್ಚಿನ ಮಾಹಿತಿಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವೆಬ್‌ಸೈಟ್ ಸಂಪರ್ಕಿಸಬಹುದು.

ನಾಳೆ ಸಾರ್ವಜನಿಕ ಶ್ರದ್ಧಾಂಜಲಿ

ಕುಂದಾಪುರ : ಕುಂದಾಪುರ ತಾಲೂಕು ಪಂಚಾಯತ್ ರಾಜ್ ಒಕ್ಕೂಟ, ಜನಪ್ರತಿನಿಧಿ ಪ್ರಕಾಶನ ಕುಂದಾಪುರ, ಸದ್ಭಾವನಾ ವೇದಿಕೆ ಕುಂದಾಪುರ ಮತ್ತು ನಮ್ಮಭೂಮಿ ಸಂಸ್ಥೆ ಹಟ್ಟಿಯಂಗಡಿ ಇವರ ವತಿಯಿಂದ ಇತ್ತೀಚಿಗೆ ನಿಧನರಾದ ಎಸ್.ಜನಾರ್ದನ ಮರವಂತೆ ಇವರ ಸಾರ್ವಜನಿಕ ಶ್ರದ್ಧಾಂಜಲಿ ಸಭೆ ಕುಂದಾಪುರದ ಸರಕಾರಿ ಪದವಿಪೂರ್ವ ಕಾಲೇಜಿನ ಲಕ್ಷ್ಮೀ ನರಸಿಂಹ ಕಲಾ ಮಂದಿರದಲ್ಲಿ ಜೂ.14ರಂದು ಬೆಳಿಗ್ಗೆ 10 ಗಂಟೆಯಿಂದ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಅಶೋಕನಗರ ಮೊಸರು ಕುಡಿಕೆ ಉತ್ಸವ ಸಮಿತಿ ಅಧ್ಯಕ್ಷರಾಗಿ ಆಯ್ಕೆ

ಮಂಗಳೂರು: ಹಿಂದೂ ಧಾರ್ಮಿಕ ಸೇವಾ ಸಂಘ ಅಶೋಕನಗರ ಇದರ 72ನೇ ವರ್ಷದ ಮೊಸರು



ಕುಡಿಕೆ ಉತ್ಸವ ಸಮಿತಿಯ ಅಧ್ಯಕ್ಷರಾಗಿ ಪುರುಷೋತ್ತಮ ಸುವರ್ಣ ಆಯ್ಕೆಯಾಗಿದ್ದಾರೆ. ಗೌರವಾಧ್ಯಕ್ಷರಾಗಿ ಸಂತೋಷ್ ಕುಮಾರ್, ಬಿ.ನಾಗೇಶ ಕರ್ಕೇರ, ರಾಜಗೋಪಾಲ್ ಶೆಟ್ಟಿ ಉಪಾಧ್ಯಕ್ಷರಾಗಿ ಯು. ಕರುಣಾಕರ ಶ್ರೀಯಾನ್, ದಿನಕರ್ ಸುವರ್ಣ, ಭುಜಂಗ ಶ್ರೀಯಾನ್, ಪ್ರಧಾನ ಕಾರ್ಯದರ್ಶಿಯಾಗಿ ಕಿಶೋರ್ ಶೆಟ್ಟಿ ಹೊಯ್ಗೆಬೈಲ್, ಜತೆ ಕಾರ್ಯದರ್ಶಿಗಳಾಗಿ ರಿತೇಶ್ ಆರ್. ಕುಕ್ಯಾನ್, ಚಿರಾಗ್ ಅಶೋಕನಗರ, ಕೋಶಾಧಿಕಾರಿಯಾಗಿ ಅನಿಲ್ ಕುಮಾರ್, ಕ್ರೀಡಾ ಕಾರ್ಯದರ್ಶಿಗಳಾಗಿ ಸತೀಶ್ ಪೂಜಾರಿ ಅಶೋಕನಗರ, ಪ್ರಸನ್ನ ಕೊಟ್ಟಾರಿ, ತ್ರಿಶಾಂತ್ ಅಮೀನ್, ಸಾಂಸ್ಕೃತಿಕ ಕಾರ್ಯದರ್ಶಿಗಳಾಗಿ ಶಶಿಕಿರಣ್, ರಜತ್ ಕೆ., ಸುನಿಲ್ ಕುಮಾರ್, ಲೆಕ್ಕ ಪರಿಶೋಧಕರಾಗಿ ಯೋಗೀಶ್ ಶೆಟ್ಟಿಗಾರ್ ಆಯ್ಕೆಯಾಗಿದ್ದಾರೆ.

ಮಹಿಳಾ ಗ್ರಾಮಸಭೆ

ಕುಂದಾಪುರ : ಗ್ರಾಮ ಪಂಚಾಯತ್ ಗಂಗೊಳ್ಳಿ ಇದರ 2026–27ನೇ ಸಾಲಿನ ಮಹಿಳಾ ಗ್ರಾಮಸಭೆ ಗಂಗೊಳ್ಳಿ ಗ್ರಾಮ ಪಂಚಾಯತ್ ಸಭಾಭವನದಲ್ಲಿ ಜೂ.17ರಂದು ಬೆಳಿಗ್ಗೆ 10.30ಕ್ಕೆ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಉಡುಪಿಯಲ್ಲಿ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಕಾರ್ಯಕ್ರಮ

ಬಾಲಕಾರ್ಮಿಕ ಮುಕ್ತ ಜಿಲ್ಲೆಯನ್ನಾಗಿಸಲು ಪಣ ತೊಡೋಣ

ಉಡುಪಿ: ಬಾಲಕಾರ್ಮಿಕ ಪದ್ಧತಿಯು ಸಮಾಜದ ಅನಿಷ್ಠ ಪದ್ಧತಿಗಳಲ್ಲಿ ಒಂದಾಗಿದ್ದು, ಇದು ಮಕ್ಕಳು ತಮ್ಮ ಬಾಲ್ಯಾವಸ್ಥೆಯನ್ನು ಸವಿಯುವುದನ್ನು ಮೊಟಕುಗೊಳಿಸುವುದರ ಜೊತೆಗೆ ಶಿಕ್ಷಣ ವಂಚಿತರನ್ನಾಗಿ ಮಾಡುತ್ತದೆ. ಬಾಲಕಾರ್ಮಿಕ ಪದ್ಧತಿಯನ್ನು ತಳ ಮಟ್ಟದಲ್ಲಿ ನಿರ್ಮೂಲನೆ ಮಾಡುವ ಮೂಲಕ ಉಡುಪಿಯನ್ನು ಬಾಲ ಕಾರ್ಮಿಕ ಮುಕ್ತ ಜಿಲ್ಲೆಯನ್ನಾಗಿಸಲು ಪ್ರತಿಯೊಬ್ಬರೂ ಪಣ ತೊಡಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ. ಪುರುಷೋತ್ತಮ್ ಹೇಳಿದ್ದಾರೆ.



ಮಣಿಪಾಲದ ರಜತಾದ್ರಿಯ ಅಟಲ್ ಬಿಹಾರಿ ವಾಜಪೇಯಿ ಸಭಾಂಗಣದಲ್ಲಿ ನಡೆದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಕ್ಕಳ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಬೇಕು

ಬಾಲಕಾರ್ಮಿಕರಾಗಿ ದುಡಿಯುತ್ತಿರುವ ಮಕ್ಕಳು ಬಂದ ಹಣದಿಂದ ತಂಬಾಕು, ಧೂಮಪಾನ ಸೇರಿದಂತೆ ಮಾದಕ ವ್ಯಸನಕ್ಕೆ ತುತ್ತಾಗಿ, ಸಮಾಜ ಘಾತುಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಸಾಧ್ಯತೆಗಳು ಹೆಚ್ಚಾಗಿವೆ. ಬಡತನ ಇದ್ದರೂ ಸಹ ಪೋಷಕರು ತಮ್ಮ ಮಕ್ಕಳ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಬೇಕು ಎಂದ ಅವರು, ಬಾಲ ಕಾರ್ಮಿಕ ಪದ್ಧತಿಯ ದುಷ್ಪರಿಣಾಮಗಳ ಬಗ್ಗೆ ನಿರಂತರ ಅರಿವು ಕಾರ್ಯಕ್ರಮ ಆಯೋಜಿಸುವ ಮೂಲಕ ಬಾಲ ಕಾರ್ಮಿಕ ಮುಕ್ತ ಜಿಲ್ಲೆಯನ್ನಾಗಿಸಲು ಇಲಾಖೆಗಳೊಂದಿಗೆ ಪೋಷಕರು ಸಹಕಾರ ನೀಡಬೇಕು ಎಂದರು.

ಶಿಕ್ಷಣ ಪಡೆಯುವಂತೆ ಮನವೊಲಿಸಬೇಕು

ಕರಾವಳಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಂ.ಎ. ಗಫೂರ್ ಮಾತನಾಡಿ, ಮಕ್ಕಳ ಬಾಲ್ಯವನ್ನು ರಕ್ಷಿಸಿ, ಅವರಿಗೆ ಶಿಕ್ಷಣ ನೀಡುವುದರೊಂದಿಗೆ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಮಾಡುವುದು ಈ ದಿನದ ಮುಖ್ಯ ಉದ್ದೇಶವಾಗಿದ್ದು 14 ವರ್ಷದೊಳಗಿನ ಯಾವುದೇ ಮಗುವು ಹೋಟೆಲ್, ಕಾರ್ಖಾನೆ ಸೇರಿದಂತೆ ಮತ್ತಿತರ ಕಡೆಗಳಲ್ಲಿ ದುಡಿಯುತ್ತಿರುವುದು ಕಂಡುಬಂದಲ್ಲಿ ಅವರುಗಳ ಮನವೊಲಿಸಿ, ಶಿಕ್ಷಣ ಪಡೆಯುವಂತೆ ಮಾಡಬೇಕು ಎಂದರು.

ಅಪರ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ್, ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯ ಅಂಗವಾಗಿ ಪ್ರತಿಜ್ಞಾ ವಿಧಿ ಬೋಧಿಸಿದರು.

> **ಪೋಷಕರು ಎಚ್ಚರ ವಹಿಸಬೇಕು**
>
> ಮಕ್ಕಳು ತಮ್ಮ ಬಾಲ್ಯವನ್ನು ಮುಕ್ತವಾಗಿ ಅನುಭವಿಸಲು, ಅವರ ರಕ್ಷಣೆಗಾಗಿ ಸಂವಿಧಾನ ಅನೇಕ ಕಾನೂನು , ಕಾಯಿದೆ ಜಾರಿಗೆ ತಂದಿದ್ದು, ಮಕ್ಕಳು ಇದರಿಂದ ವಂಚಿತರಾಗ ಬಾರದು. ಇಂದಿಗೂ ಸಹ ನಾವು ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾ ಆಚರಿಸುತ್ತಿರುವುದು ನೋಡಿದರೆ ಈ ಪದ್ಧತಿ ಇನ್ನು ಮುಂದುವರೆಯುತ್ತಿರುವುದು ವಿಷಾಧನೀಯ ಸಂಗತಿಯಾಗಿದೆ. ಪೋಷಕರು ಮಕ್ಕಳ ಜೀವನ ರೂಪಿಸುವ ಜವಾಬ್ದಾರಿ ಪರಿಣಾಮಕಾರಿಯಾಗಿ ನಿರ್ವಹಿಸದೇ ಇದ್ದಲ್ಲಿ ಬಾಲ ಕಾರ್ಮಿಕರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇರುತ್ತದೆ. ಪೋಷಕರು ಹೀಗಾಗದಂತೆ ಎಚ್ಚರ ವಹಿಸಬೇಕು. ಬಾಲ್ಯದಿಂದಲೇ ತಮ್ಮ ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ ನೀಡಬೇಕು.
>
> ● ಎಂ. ಪುರುಷೋತ್ತಮ್

ಬೀದಿ ನಾಟಕ

ಈ ಸಂದರ್ಭ ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ ಪದ್ಧತಿ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986 ಮತ್ತು ತಿದ್ದುಪಡಿ ಕಾಯ್ದೆ 2016 ರ ಕುರಿತು, ವಿ ಹೆಲ್ಪ್ ಟ್ರಸ್ಟ್, ಅಲಂಗಾರ್, ಮೂಡಬಿದ್ರಿ ಇವರಿಂದ ಬೀದಿ ನಾಟಕ ನಡೆಯಿತು.

ಕೈಗಾರಿಕಾ ಇಲಾಖೆಯ ಉಪನಿರ್ದೇಶಕ ಸೀತಾರಾಮ ಶೆಟ್ಟಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ನಾಗರತ್ನ ನಾಯಕ್, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಘದ ಯೋಜನಾ ನಿರ್ದೇಶಕಿ ಅಮೃತ ಮತ್ತಿತರರು ಉಪಸ್ಥಿತರಿದ್ದರು.

ಜಿಲ್ಲಾ ಕಾರ್ಮಿಕ ಅಧಿಕಾರಿ ಕಮಲ್ ಷಾ ಅಲ್ತಾಫ್ ಅಹಮದ್ ಪ್ರಸ್ತಾವನೆಗೈದರು. ಛೇಂಬರ್ ಆಫ್ ಕಾಮರ್ಸ್‌ನ ಪ್ರಧಾನ ಕಾರ್ಯದರ್ಶಿ ಡಾ. ವಿಜೇಂದ್ರ ಮಾತನಾಡಿದರು. ಕಾರ್ಕಳ ವೃತ್ತ ಕಾರ್ಮಿಕ ನಿರೀಕ್ಷಕ ನವೀನ್ ಕುಮಾರ್ ಸಿ.ಎಚ್. ಸ್ವಾಗತಿಸಿ, ಪ್ರಶಾಂತ್ ಶೆಟ್ಟಿ ಹಾವಂಜೆ ನಿರೂಪಿಸಿ, ಕುಂದಾಪುರ ವೃತ್ತ ಕಾರ್ಮಿಕ ನಿರೀಕ್ಷಕ ವಿಜೇಂದ್ರ ಕೆ. ವಂದಿಸಿದರು.

ಆಯ್ದ ಭಾಗವತರಿಗೆ ಕ್ಲಿಷ್ಟ ಪ್ರಸಂಗಗಳ ಕಾರ್ಯಾಗಾರ ಶ್ಲಾಘನೀಯ: ಹೆಗಡೆ

ಕೋಟ: ಯಕ್ಷಗಾನದಲ್ಲಿ ಬಹಳಷ್ಟು ಪ್ರಸಂಗಗಳು ಚಲಾವಣೆಯಲಿಲ್ಲ, ಮುಖ್ಯ ಕಾರಣ ಕ್ಲಿಷ್ಟ ನಡೆಗಳು, ಅದರಲ್ಲಿ ಕವಿ ಮುದ್ದಣನ 'ಕುಮಾರ ವಿಜಯ'ವೂ ಒಂದು. ನನ್ನ ಯಕ್ಷಗಾನ 48 ವರ್ಷಗಳ ಸೇವೆಯಲ್ಲಿ ಈ ಪ್ರಸಂಗದ ಪ್ರದರ್ಶನದ ಬಗ್ಗೆ ಕೇಳಿಲ್ಲ, ಕಂಡಿಲ್ಲ, ಅಂತಹ ಪ್ರಸಂಗವನ್ನು ಆಯ್ದ ಭಾಗವತರಿಗೆ ನೀಡಲ್ಪಡುವ ಶಿಕ್ಷಣ ನಿಜಕ್ಕೂ ಶ್ಲಾಘನೀಯ ಎಂದು ಹಿರಿಯ ಯಕ್ಷಗಾನ ಕಲಾವಿದ ಕೊಂಡದಕುಳಿ ರಾಮಚಂದ್ರ ಹೆಗಡೆ ಶುಭ ಹಾರೈಸಿದರು.



ಅವರು ಇತ್ತೀಚಿಗೆ ಯಕ್ಷಗಾನ ಕಲಾಕೇಂದ್ರ ಹಂಗಾರಕಟ್ಟೆ ಐರೋಡಿ ಇವರು ಹಮ್ಮಿಕೊಂಡಿರುವ 'ಕುಮಾರ ವಿಜಯ' ಪ್ರಸಂಗದ ಭಾಗವತಿಗೆಯ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಶಿಬಿರಾರ್ಥಿ ಭಾಗವತರ ಭಾಗ್ಯ

ಯಕ್ಷಗಾನ ಪ್ರಪಂಚ ದಲ್ಲಿ ಅಪಾರ ಜ್ಞಾನ ಹೊಂದಿರುವ ಮೇಧಾವಿ ಸದಾನಂದ ಐತಾಳರ ಗುರುತನ ದೊರಕಿದ್ದು ಶಿಬಿರಾರ್ಥಿ ಭಾಗವತರ ಭಾಗ್ಯ ಎಂದರು.

ಪ್ರಾಚಾರ್ಯ ಸದಾನಂದ ಐತಾಳ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯದರ್ಶಿ ಐರೋಡಿ ರಾಜಶೇಖರ ಹೆಬ್ಬಾರ ಕಾರ್ಯಾ ಗಾರದ ಮುಖ್ಯ ಉದ್ದೇಶವನ್ನು ವಿವರಿಸಿ, ಸ್ವಾಗತಿಸಿದರು. ಬೈಕಾಡಿ ರಘುರಾಮ ವಂದಿಸಿದರು.

> **ಕಾರ್ಯಾಗಾರ ಮೆಚ್ಚುವಂತದ್ದು**
>
> ಅಸಂಖ್ಯಾತ ಶ್ರೇಷ್ಟ ಭಾಗವತರನ್ನು ಯಕ್ಷ ಪ್ರಪಂಚಕ್ಕೆ ನೀಡಿರುವ ಯಕ್ಷಗಾನ ಕಲಾಕೇಂದ್ರ, ಹಂಗಾರ ಕಟ್ಟೆ, ಐರೋಡಿ ಇವರ ಈ ಕಾರ್ಯ ಮೆಚ್ಚತಕ್ಕದ್ದು. ಅದರಲ್ಲೂ ಯಕ್ಷಗಾನ ಪ್ರಪಂಚ ದಲ್ಲಿ ಅಪಾರ ಜನ ಹೊಂದಿರುವ ಮೇಧಾವಿ ಸದಾನಂದ ಐತಾಳರ ಗುರುತನ ದೊರಕಿದ್ದು ಶಿಬಿರಾರ್ಥಿ ಭಾಗವತರ ಭಾಗ್ಯ.
>
> ● ರಾಮಚಂದ್ರ ಹೆಗಡೆ

ಆಯ್ದ ಹತ್ತು ಭಾಗವತರಿಗೆ ಪ್ರಸಂಗ ಶಿಕ್ಷಣವನ್ನು ನೀಡಲಾಯಿತು.

ಕುಕ್ಕೆಯಲ್ಲಿ ಎಸ್‌ಎಸ್‌ಪಿಯು ಕಾಲೇಜಿನ ಸಾಧಕ ವಿದ್ಯಾರ್ಥಿಗಳಿಗೆ ಗೌರವಾರ್ಪಣೆ



ಸುಬ್ರಹ್ಮಣ್ಯ: ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಗೌರವಿಸುವುದು ಸ್ಫೂರ್ತಿಯ ಸಂಕೇತ. ಶ್ರೀ ದೇವಳ ವಿದ್ಯಾಸಂಸ್ಥೆಯಲ್ಲಿ ಗ್ರಾಮೀಣ ವಿದ್ಯಾರ್ಥಿಗಳಿಗೆ ವ್ಯಾಸಂಗಕ್ಕೆ ಬೇಕಾದ ಸಂಪೂರ್ಣ ಅನುಕೂಲತೆ ಮಾಡಲಾಗುವುದು ಎಂದು ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಎಸ್. ಇಂಜಾಡಿ ಹೇಳಿದರು.

ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಳ ಆಡಳಿತದ ಎಸ್.ಎಸ್. ಪಿ.ಯು ಕಾಲೇಜಿನ ಶೈಕ್ಷಣಿಕ ಸಾಧಕರ ಅಭಿನಂದನಾ ಸಮಾರಂಭದಲ್ಲಿ ವಿದ್ಯಾರ್ಥಿಗಳನ್ನು ಗೌರವಿಸಿ ಅವರು ಮಾತನಾಡಿದರು.

ಶ್ರೀ ದೇವಳದ ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಸೌಮ್ಯಾ ಭರತ್, ಪ್ರವೀಣ ರೈ ಮರುವಂಜ, ಲೀಲಾ ಮನಮೋಹನ್, ಅಜಿತ್ ಪಾಲೇರಿ, ನಿವೃತ್ತ ಗ್ರಂಥ ಪಾಲಕ ಬಾಬು ಎಚ್. ಹಾಸನಡ್ಕ ಅತಿಥಿಗಳಾಗಿದ್ದರು. ಕಾಲೇಜಿನ ಪ್ರಾಚಾರ್ಯ ಸೋಮಶೇಖರ್ ನಾಯಕ್, ಪ್ರೌಢ ಶಾಲಾ ಮುಖ್ಯ ಗುರು ನಂದಾ ಹರೀಶ್, ಹಿರಿಯ ಸಹಶಿಕ್ಷಕ ಎಂ. ಕೃಷ್ಣ ಭಟ್, ಶಿಕ್ಷಕ–ರಕ್ಷಕ ಸಂಘದ ಅಧ್ಯಕ್ಷೆ ತ್ರಿವೇಣಿ ದಾಮ್ಲೆ, ಪ್ರಮುಖರಾದ ರೇಖಾರಾಣಿ ಸೋಮಶೇಖರ್, ಜಯಪ್ರಕಾಶ್ ಆರ್., ಲೋಕೇಶ್ ಬಿ.ಎನ್., ಗುಣವರ್ಧನ ಕೆದಿಲ, ಶಶಿಧರ್ ಕೆ. ಮತ್ತಿತರರು ವೇದಿಕೆಯಲ್ಲಿದ್ದರು.

ಅಭಿನಂದನೆ

ವಿದ್ಯಾಸಂಸ್ಥೆಯಲ್ಲಿ ಪಿಯುಸಿಯಲ್ಲಿ ಡಿಸ್ಟಿಂಕ್ಷನ್ ಪಡೆದ 158 ವಿದ್ಯಾರ್ಥಿಗಳಿಗೆ ಶಿಕ್ಷಕ ರಕ್ಷಕ ಸಂಘದಿಂದ ಅಭಿನಂದನೆ ಸಲ್ಲಿಸಲಾಯಿತು. ಬಳಿಕ ಪ್ರಥಮ ಪಿಯುನಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ದ.ಕ. ಜಿಲ್ಲಾ ಉಪನ್ಯಾಸಕರ ಸಂಘದ ಪ್ರಧಾನ ಸಂಘಟನಾ ಕಾರ್ಯದರ್ಶಿಯಾಗಿ ಆಯ್ಕೆಯಾದ ಉಪನ್ಯಾಸಕ ಜಯಪ್ರಕಾಶ್ ಆರ್. ಅವರನ್ನು ಸನ್ಮಾನಿಸಲಾಯಿತು. ಪ್ರವೀಣ್ ಎರ್ಮಾಯಿಲ್ ನಿರೂಪಿಸಿದರು.

ಇನ್ನಂಜೆ ಎಸ್‌ವಿಎಚ್ ಪ್ರೌಢ ಶಾಲೆ: 'ವಿಶ್ವ ಪರಿಸರ ದಿನ' ಆಚರಣೆ



ಶಿರ್ವ: ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ, ಯುವ ರೆಡ್‌ಕ್ರಾಸ್ ಘಟಕ ಹಾಗೂ ಎನ್‌ಸಿಸಿ ಘಟಕವು ಜಂಟಿಯಾಗಿ ಇನ್ನಂಜೆ ಎಸ್‌ವಿಎಚ್ ಪ್ರೌಢ ಶಾಲೆಯಲ್ಲಿ ವಿಶ್ವ ಪರಿಸರ ದಿನ' ವನ್ನು ಆಚರಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ಶಾಲಾ ಆವರಣದಲ್ಲಿ ವಿವಿಧ ಬಗೆಯ ಹಣ್ಣಿನ ಸಸಿಗಳನ್ನು ನೆಡೆಸಲಾಯಿತು. ಅಲ್ಲದೆ ಪ್ರತಿ ತರಗತಿಗೆ ಒಂದು ಸಸಿಯ ಜವಾಬ್ದಾರಿ ವಹಿಸಿ, ಅದರ ಪೋಷಣೆ ಮತ್ತು ಸಂರಕ್ಷಣೆ ಹೊಣೆಗಾರಿಕೆಯನ್ನು ವಿದ್ಯಾರ್ಥಿಗಳಿಗೆ ನೀಡಲಾಯಿತು.

ಪರಿಸರ ಸ್ನೇಹಿ ಪೆನ್ಸಿಲ್ ವಿತರಣೆ

ಪರಿಸರ ಸಂರಕ್ಷಣೆ ಹಾಗೂ ಸುಸ್ಥಿರ ಜೀವನ ಶೈಲಿಯ ಮಹತ್ವ ವಿದ್ಯಾರ್ಥಿಗಳಲ್ಲಿ ಮೂಡಿಸುವ ಉದ್ದೇಶದಿಂದ ಎಲ್ಲಾ ವಿದ್ಯಾರ್ಥಿಗಳಿಗೆ ಪರಿಸರ ಸ್ನೇಹಿ ಪೆನ್ಸಿಲ್‌ಗಳನ್ನು ವಿತರಿಸಲಾಯಿತು.

ಈ ಸಂದರ್ಭ ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ ಶೈಕ್ಷಣಿಕ ಡೀನ್ ಡಾ ಸುದರ್ಶನ್ ರಾವ್ ಪ್ರಾಧ್ಯಾಪಕ ಸಚಿನ್ ಪ್ರಭು, ಡಾ. ವಿಘ್ನೇಶ್ ಶೆಣೈ, ಎಸ್‌ವಿಹೆಚ್ ಪ.ಪೂ. ಕಾಲೇಜಿನ ಪ್ರಾಂಶುಪಾಲರಾದ ರಾಜೇಂದ್ರ ಪ್ರಭು, ಎಸ್‌ವಿಹೆಚ್ ಕನ್ನಡ ಮಾಧ್ಯಮದ ಮುಖ್ಯೋಪಾಧ್ಯಾಯರಾದ ನಟರಾಜ್ ಉಪಾಧ್ಯಾಯ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

150ಕ್ಕೂ ಅಧಿಕ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿ, ಪರಿಸರ ಸಂರಕ್ಷಣೆ ಮತ್ತು ಹಸಿರು ಭವಿಷ್ಯದತ್ತ ತಮ್ಮ ಬದ್ಧತೆಯನ್ನು ವ್ಯಕ್ತಪಡಿಸಿದರು.

ಕಲ್ಲಡ್ಕ ಸರ್ಕಾರಿ ಮಾದರಿ ಶಾಲೆಯಲ್ಲಿ ಬಾಳ್ತಿಲ ಒಕ್ಕೂಟದ ತ್ರೈಮಾಸಿಕ ಸಭೆ



ಬಂಟ್ವಾಳ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ.ಸಿ.ಟ್ರಸ್ಟ್ ವಿಟ್ಲ ಇದರ ಕಲ್ಲಡ್ಕ ವಲಯದ ಬಾಳ್ತಿಲ ಒಕ್ಕೂಟದ ತ್ರೈಮಾಸಿಕ ಸಭೆಯು ಕಲ್ಲಡ್ಕ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಸಭಾಭವನದಲ್ಲಿ ನಡೆಯಿತು.

ಸಭೆಯ ಅಧ್ಯಕ್ಷತೆಯನ್ನು ಬಾಳ್ತಿಲ ಒಕ್ಕೂಟದ ಅಧ್ಯಕ್ಷೆ ಉಮಾವತಿ ವಹಿಸಿದ್ದರು. ಗ್ರಾಮಾಭಿವೃದ್ಧಿ ಯೋಜನೆ ಕಲ್ಲಡ್ಕ ವಲಯ ಮೇಲ್ವಿಚಾರಕ ಶುಕರಾಜ್ ಯೋಜನೆಯ ಗುಂಪುಗಳ ಕಾರ್ಯ, ಜವಾಬ್ದಾರಿ, ಗುಂಪುಗಳಿಗೆ ನೀಡಲಾಗುವ ಸಾಲ ಸೌಲಭ್ಯಗಳು, ಆರೋಗ್ಯ ವಿಮೆ ಹಾಗೂ ಪ್ರಸಕ್ತ ಸಾಲಿನಲ್ಲಿ ಬಾಳ್ತಿಲ ಒಕ್ಕೂಟ ವ್ಯಾಪ್ತಿಯಲ್ಲಿ ಯೋಜನೆಯಿಂದ ದೊರೆತ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು.

ಪದಾಧಿಕಾರಿಗಳ ಆಯ್ಕೆ

ಈ ಸಂದರ್ಭದಲ್ಲಿ ಗ್ರಾಮಾಭಿವೃದ್ಧಿ ಯೋಜನೆ ಕಲ್ಲಡ್ಕ ವಲಯ ಅಧ್ಯಕ್ಷ ತುಳಸಿ ರವರ ಉಪಸ್ಥಿತಿಯಲ್ಲಿ ಒಕ್ಕೂಟದ ನೂತನ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಮಾಧವ ಸಾಲಿಯಾನ್ ಅಧ್ಯಕ್ಷರಾಗಿ ಮಾಧವ ಸಾಲಿಯಾನ್ ಕುದ್ರೆಬೆಟ್ಟು ,ಉಪಾಧ್ಯಕ್ಷೆ ಸುಮಿತ್ರ ಬಿ.ಆರ್.ನಗರ, ಕಾರ್ಯದರ್ಶಿ ರಮೇಶ್ ಕುದ್ರೆಬೆಟ್ಟು, ಜತೆ ಕಾರ್ಯದರ್ಶಿ ಸುಲೋಚನಾ ಸುಧೆಕಾರು, ಸಂಯೋಜಕರಾಗಿ ಮಹೇಶ್ ಕುಮಾರ್ ಹಾಗೂ ದಾಖಲಾತಿ ಸಮಿತಿಯಲ್ಲಿ ಸೌಮ್ಯ, ಕವಿತಾ ಪೂರ್ಣಿಮಾ ಪೂಜಾ, ಮಾನ್ವಿತಾ ಆಯ್ಕೆಯಾದರು.

ಒಕ್ಕೂಟ ಪದಾಧಿಕಾರಿಗಳಾದ ಸಂತೋಷ್ ಕುಮಾರ್, ಉಷಾ, ಹರೀಶ್ ಉಪಸಮಿತಿ ಸದಸ್ಯೆ ಉಷಾ, ರತ್ನ, ಒಕ್ಕೂಟ ಸೇವಾ ಪ್ರತಿನಿಧಿ ವಿದ್ಯಾ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಒಕ್ಕೂಟದ ಎಲ್ಲಾ ಸ್ವ ಸಹಾಯ ಸಂಘಗಳ ಸದಸ್ಯರು ಸಭೆಯಲ್ಲಿ ಭಾಗವಹಿಸಿದ್ದರು

ಮಕ್ಕಳಲ್ಲಿ ಎಳವೆಯಲ್ಲಿಯೇ ಸಂಸ್ಕೃತಿ ಅನುಷ್ಠಾನಕ್ಕೆ ಯಕ್ಷಾಭ್ಯಾಸ ಅಡಿಗಲ್ಲು



ಸುಬ್ರಹ್ಮಣ್ಯ: ಯಕ್ಷಗಾನ ಕರಾವಳಿ ಜಿಲ್ಲೆಗಳಲ್ಲಿ ಶತಮಾನಗಳಿಂದ ಬೆಳೆದು ಬಂದ ಅದ್ಭುತ ಕಲೆ. ಸಂಗೀತ, ನೃತ್ಯ, ಮಾತುಗಾರಿಕೆ ಮುಂತಾದವುಗಳ ಅನನ್ಯ ಸಂಗಮವಾದ ಈ ಕಲೆ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಮಕ್ಕಳಲ್ಲಿ ಸಂಸ್ಕೃತಿ ಎಳವೆಯಲ್ಲಿ ಅನುಷ್ಠಾನವಾಗಲು ಯಕ್ಷಾಭ್ಯಾಸ ಅಡಿಗಲ್ಲಾಗುತ್ತದೆ ಎಂದು ಕಡಬ ತಾಲೂಕು ಉಪ ತಹಶೀಲ್ದಾರ್ ಗೋಪಾಲ್ ಕೆ. ಹೇಳಿದರು.

ಸುಬ್ರಹ್ಮಣ್ಯ ಮಠ ಎಜುಕೇಶನ್ ಸೊಸೈಟಿ ಆಡಳಿತದ ಬಿಳಿನೆಲೆ ಶ್ರೀ ಗೋಪಾಲಕೃಷ್ಣ ಪ್ರೌಢ ಶಾಲೆ , ಶ್ರೀ ವೇದವ್ಯಾಸ ವಿದ್ಯಾಲಯದ ವಿದ್ಯಾರ್ಥಿಗಳಿಗೆ ಯಕ್ಷ ದ್ರುವ ಪಟ್ಲ ಫೌಂಡೇಷನ್‌ವತಿಯಿಂದ ನಡೆಯುವ ಯಕ್ಷ ಶಿಕ್ಷಣ ತರಗತಿಗಳನ್ನು ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾಲಯದ ಆಡಳಿತ ಮಂಡಳಿ ಕಾರ್ಯದರ್ಶಿ ಶ್ರೀಕೃಷ್ಣ ಶರ್ಮ ಅಧ್ಯಕ್ಷತೆ ವಹಿಸಿದ್ದರು. ಯಕ್ಷದ್ರುವ ಯಕ್ಷ ಶಿಕ್ಷಣದ ಸಂಚಾಲಕ ಪ್ರಶಾಂತ್ ರೈ, ಯಕ್ಷ ಗುರು ನಿಡ್ಲೆ ಈಶ್ವರ ಪ್ರಸಾದ್, ವೇದವ್ಯಾಸ ವಿದ್ಯಾಲಯದ ಶಿಕ್ಷಕ–ರಕ್ಷಕ ಸಂಘದ ಅಧ್ಯಕ್ಷ ಕೇಶವ ಗೌಡ, ವೇದವ್ಯಾಸ ವಿದ್ಯಾಲಯದ ಮುಖ್ಯ ಗುರುಗಳಾದ ಪ್ರಶಾಂತ್ ಬಿ. ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಗೋಪಾಲಕೃಷ್ಣ ಪ್ರೌಢ ಶಾಲೆಯ ಮುಖ್ಯ ಗುರು ಸತ್ಯಶಂಕರ ಭಟ್ ಎಂ. ಸ್ವಾಗತಿಸಿ, ಶಿಕ್ಷಕ ಕಾರ್ತಿಕ್ ಭಟ್ ವಂದಿಸಿದರು. ಚಿತ್ರ ಕಲಾ ಆಧ್ಯಾಪಕ ದಿನೇಶ್ ಕುಂದರ್ ಕಾರ್ಯಕ್ರಮ ನಿರ್ವಹಿಸಿದರು.

> **ಸಂತೋಷದ ವಿಚಾರ**
>
> ಯಕ್ಷದ್ರುವ ಪಟ್ಲ ಫೌಂಡೇಶನ್ ಆಸಕ್ತ ವಿದ್ಯಾರ್ಥಿಗಳಿಗೆ ಉಚಿತವಾಗಿ ಕಲಿಸುತ್ತಿರುವುದು ಸಂತೋಷ ವಿಚಾರ.
>
> ● ಗೋಪಾಲ್



ಸುಂಟಿಕೊಪ್ಪ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಲೇರಿಯಾ ವಿರೋಧಿ ಮಾಸಾಚರಣೆ ಅಂಗವಾಗಿ ಮಾಹಿತಿ ಕಾರ್ಯಾಗಾರ ನಡೆಯಿತು. ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಾಂತಿ ಮಾಹಿತಿ ನೀಡಿದರು. ಸುಂಟಿಕೊಪ್ಪ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಮೆಹರಾಜ್ ಅವರು ರೋಗ ಲಕ್ಷಣದ ಬಗ್ಗೆ ಮಾಹಿತಿ ನೀಡಿದರು. ಮಾಹಿತಿ ಕಾರ್ಯಾಗಾರದಲ್ಲಿ ಪ್ರಾ.ಆ.ಕೇಂದ್ರದ ಸುರಕ್ಷಾಧಿಕಾರಿ, ಸಮುದಾಯ ಆರೋಗ್ಯ ಅಧಿಕಾರಿ ಹಾಗೂ ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.



ಕಿನ್ನಿಗೋಳಿ ಪಟ್ಟಣ ಪಂಚಾಯತ್, ಅಲೆಯನ್ಸ್ ಕ್ಲಬ್ ಕಿನ್ನಿಗೋಳಿ, ಅರಣ್ಯ ಇಲಾಖೆ ವತಿಯಿಂದ ನಡುಗೋಡು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವನಮಹೋತ್ಸವ ನಡೆಯಿತು. ಪಟ್ಟಣ ಪಂಚಾಯತ್, ಅಲೆಯನ್ಸ್ ಕ್ಲಬ್ ಅಧ್ಯಕ್ಷರು, ಸದಸ್ಯರು, ಅರಣ್ಯಾಧಿಕಾರಿಗಳು, ಹಳೆವಿದ್ಯಾರ್ಥಿ ಸಂಘದ ಸದಸ್ಯರು ಉಪಸ್ಥಿತರಿದ್ದರು.

ಪುತ್ತೂರು ತೆಂಕಿಲದ ವಿವೇಕಾನಂದ ವಿದ್ಯಾ ಸಂಸ್ಥೆಗಳ ಕ್ಯಾಂಪಸ್‌ನಲ್ಲಿ ಆಯೋಜನೆ

ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡದಿಂದ ಪ್ರಾತ್ಯಕ್ಷಿಕೆ

ಪುತ್ತೂರು: ಪ್ರಕೃತಿ ವಿಕೋಪ ಸೇರಿದಂತೆ ಇತರ ಯಾವುದೇ ರಾಷ್ಟ್ರೀಯ ವಿಪತ್ತು ನಿರ್ವಹಣೆ ಸಂದರ್ಭದಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡ (ಎನ್.ಡಿ.ಆರ್.ಎಫ್.) ಜನರ ಜೀವ ಉಳಿಸುವ ಮಹತ್ವದ ಕಾರ್ಯ ಮಾಡುತ್ತದೆ. ಈ ಸಂದರ್ಭ ಆಗುವ ಜೀವಹಾನಿ ಕಡಿಮೆ ಮಾಡಲು ಯೋಜಿತ ರೀತಿಯಲ್ಲಿ ತುರ್ತುಸ್ಥಿತಿಯ ಅರ್ಥದಲ್ಲಿ ವಿಪತ್ತುಗಳಿಗೆ ಪ್ರತಿಕ್ರಿಯಿಸಲು ಈ ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡ ಯೋಜಿಸಿದೆ ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡದ ಟೀಮ್ ಕಮಾಂಡರ್ ಶಾಂತಿಲಾಲ್ ಜಾಟಿಯಾ ಹೇಳಿದ್ದಾರೆ.

ಪ್ರಕೃತಿ ವಿಕೋಪ ಸಂದರ್ಭ ಜನರು ಹೇಗೆ ತಮ್ಮನ್ನು ತಾವು ರಕ್ಷಣೆ ಮಾಡಬೇಕು ಎಂಬುದರ ಕುರಿತು ನಗರದ ತೆಂಕಿಲದ ವಿವೇಕಾನಂದ ವಿದ್ಯಾ ಸಂಸ್ಥೆಗಳ ಕ್ಯಾಂಪಸ್ ನಲ್ಲಿ ಹಮ್ಮಿಕೊಳ್ಳಲಾಗಿದ್ದ ಪ್ರಾತ್ಯಕ್ಷಿಕೆ ಕಾರ್ಯಕ್ರಮದಲ್ಲಿ



ಭಾಗವಹಿಸಿ ಅವರು ಮಾತನಾಡಿದರು.

ಜೊತೆಗೆ ಅಪಘಾತವಾದಾಗ, ಹೃದಯಾಘಾತವಾದಾಗ ಪ್ರಥಮ ಚಿಕಿತ್ಸೆ ಹೇಗೆ ಮಾಡಬೇಕು? ಒಬ್ಬ ವ್ಯಕ್ತಿಯ ಕೈ, ಕಾಲಿಗೆ ಮತ್ತು ಭುಜಕ್ಕೆ ಪೆಟ್ಟು ಬಿದ್ದು ಮುರಿದಾಗ ಮಾಡಬಹುದಾದ ಚಿಕಿತ್ಸೆ, ಭೂಕಂಪದ ಮತ್ತು ಪ್ರವಾಹದ ಸಂದರ್ಭ ಮನೆಯಲ್ಲಿರುವ ವಸ್ತುಗಳನ್ನು ಬಳಸಿ ತಮ್ಮನ್ನು ತಾವು ಹೇಗೆ ರಕ್ಷಣೆ ಮಾಡಬಹುದು ಎಂಬುದರ ವಿವರಣೆಯನ್ನು ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್ ಸುಭಾಶ್ ಶಿಂಧೆ ತಿಳಿಸಿದರು.

ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡದ ಸದಸ್ಯರಾದ ರಾಘೆ ರಾಮಕೃಷ್ಣ ಬಾಲಕೃಷ್ಣ ವಿ. ಶ್ರೀನಿವಾಸಲು ಭಾಗವಹಿಸಿದ್ದು ಪ್ರಾತ್ಯಕ್ಷಿಕೆಯ ಮೂಲಕ ಗಾಯಗೊಂಡವರನ್ನು ಹೇಗೆ ಪ್ರಥಮ ಚಿಕಿತ್ಸೆ ಮಾಡಬೇಕು ಎಂಬುದನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ವಿವರಣೆ ನೀಡಿ ಪ್ರಾತ್ಯಕ್ಷಿಕೆಯ ಮೂಲಕ ಉತ್ತರಿಸಿದರು.

ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆಯ ಕೋಶಾಕಾರಿ ಕೃಷ್ಣ ಮೋಹನ್, ಮುಖ್ಯೋಪಾಧ್ಯಾಯ ಸತೀಶ್ ಕುಮಾರ್ ರೈ, ನರೇಂದ್ರ ಪ.ಪೂ. ಕಾಲೇಜಿನ ಪ್ರಾಂಶುಪಾಲ ಪ್ರಸಾದ್ ಶ್ಯಾನಭಾಗ್ ಉಪಸ್ಥಿತರಿದ್ದರು.

ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆ, ವಿವೇಕಾನಂದ ಕನ್ನಡ ಮಾಧ್ಯಮ ಶಾಲೆ, ನರೇಂದ್ರ ಪ.ಪೂ. ಕಾಲೇಜಿನ ಅಧ್ಯಾಪಕರು, ಸಿಬ್ಬಂದಿ ವರ್ಗದವರು ಮತ್ತು ಸುಮಾರು 2000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆಯ ಶಿಕ್ಷಕಿ ಕವಿತಾ ಕೆ.ಜಿ. ಸ್ವಾಗತಿಸಿ, ವಂದಿಸಿದರು.

ಇಂದು ಸಾಲಿಗ್ರಾಮದಲ್ಲಿ ಅಂಚೆ ಜನ ಸಂಪರ್ಕ ಅಭಿಯಾನ, ಆಧಾರ್ ನೋಂದಣಿ, ತಿದ್ದುಪಡಿ

ಕೋಟ: ಇಲ್ಲಿನ ಶ್ರೀ ಗುರುನರಸಿಂಹ ದೇವಸ್ಥಾನ, ಯುವ ವೇದಿಕೆ ಕೋಟ ಮಹಾಜಗತ್ತು ಸಾಲಿಗ್ರಾಮ ಸಾಲಿಗ್ರಾಮ ಅಂಗಸಂಸ್ಥೆ, ಶ್ರೀ ಗುರು ಫ್ರೆಂಡ್ಸ್ ರಥಬೀದಿ ಸಾಲಿಗ್ರಾಮ ಹಾಗೂ ಭಾರತೀಯ ಅಂಚೆ ಇಲಾಖೆ ಉಡುಪಿ ವಿಭಾಗ ಇವರುಗಳ ಜಂಟಿ ಆಶ್ರಯದಲ್ಲಿ ಅಂಚೆ ಜನಸಂಪರ್ಕ ಅಭಿಯಾನ ಹಾಗೂ ಆಧಾರ್ ನೋಂದಣಿ ಮತ್ತು ತಿದ್ದುಪಡಿ ಶಿಬಿರವನ್ನು ಜೂ.13ರಂದು ಬೆಳಗ್ಗೆ 9 ರಿಂದ ಸಂಜೆ 4ರವರೆಗೆ ಶ್ರೀ ಗುರುನರಸಿಂಹ ದೇವಸ್ಥಾನ ಜ್ಞಾನ ಮಂದಿರ ಸಾಲಿಗ್ರಾಮ ಇಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಶ್ರೀ ಗುರುನರಸಿಂಹ ದೇವಳ ಆಡಳಿತ ಮಂಡಳಿ ಅಧ್ಯಕ್ಷ ಪ್ರಕಾಶ್ ಕಾರಂತ ಉದ್ಘಾಟಿಸಲಿದ್ದಾರೆ. ಯುವ ವೇದಿಕೆ ಕೋಟ ಮಹಾಜಗತ್ತು ಸಾಲಿಗ್ರಾಮ ಅಂಗಸಂಸ್ಥೆಯ ಅಧ್ಯಕ್ಷ ಸಚಿನ್ ಹೇರ್ಳೆ ಅಧ್ಯಕ್ಷತೆ ವಹಿಸಲಿದ್ದಾರೆ.

ಅಭ್ಯಾಗತರಾಗಿ ಉಡುಪಿ ವಿಭಾಗದ ಅಂಚೆ ಅಧೀಕ್ಷಕ ಜಯರಾಮ ಶೆಟ್ಟಿ, ಸಹಾಯಕ ಅಂಚೆ ಅಧೀಕ್ಷಕರಾದ ವಸಂತ, ಕೋಟ ಮಹಾಜಗತ್ತು ಸಾಲಿಗ್ರಾಮ ಅಂಗಸಂಸ್ಥೆಯ ಅಧ್ಯಕ್ಷ ಪಿ. ಚಂದ್ರಶೇಖರ ಹೊಳ್ಳ, ದೇವಸ್ಥಾನದ ಆಡಳಿತ ಮಂಡಳಿ ಸದಸ್ಯ ತಾರಾನಾಥ ಹೊಳ್ಳ, ಯುವವೇದಿಕೆ ಮಾರ್ಗದರ್ಶಕ ಮಂಜುನಾಥ ಉಪಾಧ್ಯ, ಶ್ರೀ ಗುರು ಫ್ರೆಂಡ್ಸ್ ರಥಬೀದಿ ಸಾಲಿಗ್ರಾಮದ ಅಧ್ಯಕ್ಷ ಸಂಪತ್ ಕುಮಾರ್, ಯುವವೇದಿಕೆಯ ಗೌರವಾಧ್ಯಕ್ಷ ಪಿ.ವೈ. ಕೃಷ್ಣಪ್ರಸಾದ್ ಹೇರ್ಳೆ, ಅತಿಥಿಗಳಾಗಿರುವರು. ಸಾರ್ವಜನಿಕರು ಈ ಶಿಬಿರದ ಸದುಪಯೋಗವನ್ನು ಪಡೆದುಕೊಳ್ಳಬೇಕಾಗಿ ಸಂಘಟಕರು ಪ್ರಕಟಣೆಯಲ್ಲಿ ಕೋರಿದ್ದಾರೆ.

ನಿಮ್ಮೂರಿನ ಸುದ್ದಿ

ನಿರಂತರ ಸುದ್ದಿ ಅಪ್ಡೇಟ್‌ಗಾಗಿ Google Lens ನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!

website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb

ಶನಿವಾರ 13, ಜೂನ್ 2026

ಕೋಟೆಕಾರಿನಲ್ಲಿ ಪಿಡಬ್ಲ್ಯುಡಿ ಉಪವಿಭಾಗ ಕಚೇರಿ ಕಟ್ಟಡಕ್ಕೆ ಶಿಲಾನ್ಯಾಸ | ಸಚಿವ ಯು.ಟಿ. ಖಾದರ್ ಆಶಯ

ಉಳ್ಳಾಲ ತಾಲೂಕಿನ ಸಮಗ್ರವಾದ ಅಭಿವೃದ್ಧಿಗೆ ಕಟ್ಟಡ ಪೂರಕ

ಉಳ್ಳಾಲ: ಉಳ್ಳಾಲ ತಾಲೂಕಿನಲ್ಲಿ ಎಲ್ಲಾ ಪ್ರಮುಖ ಇಲಾಖೆಗಳ ಕಚೇರಿಗಳು ಪ್ರಾರಂಭವಾಗುತ್ತದೆ ಯೆಂದು ಈ ಮೊದಲೇ ಹೇಳಿದ್ದೆ. ಇದೀಗ ತಾಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯ ನೂತನ ಉಪ ವಿಭಾಗ ಕಚೇರಿ ರಚನೆಯ ಮೂಲಕ ಇಲಾಖೆಯ ಅಸಿಸ್ಟೆಂಟ್ ಇಂಜಿನಿಯರ್ ಹಾಗೂ ಇತರ ಅ ಕಾರಿಗಳು ಇಲ್ಲೇ ಲಭ್ಯ ಇರುವುದರಿಂದ ನಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ಅಭಿವೃದ್ಧಿ ಕಾಮಗಾರಿಗಳು ವೇಗವಾಗಿ ನಡೆಯಲು ಸಾಧ್ಯವಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ.ಖಾದರ್ ಹೇಳಿದರು.



ಉಳ್ಳಾಲ ತಾಲೂಕಿನ ಕೋಟೆಕಾರು ಪಟ್ಟಣ ಪಂಚಾಯತ್ ವ್ಯಾಪ್ತಿಯ ಬೀರಿ ಎಂಬಲ್ಲಿ ನಿರ್ಮಾಣಗೊಳ್ಳಲಿರುವ ಲೋಕೋಪಯೋಗಿ ಇಲಾಖೆಯ ಉಪ ವಿಭಾಗ ಕಚೇರಿಯ ಕಟ್ಟಡಕ್ಕೆ ಶುಕ್ರವಾರ ಶಂಕು ಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ರಾಜ್ಯದಲ್ಲೇ ಪ್ರಥಮವಾಗಿ ಈ ಪ್ರದೇಶದಲ್ಲಿ ಲೋಕೋಪಯೋಗಿ ಇಲಾಖೆಯ ಉಪವಿಭಾಗದ ಕಚೇರಿಯನ್ನ ನಿರ್ಮಿಸಲಾಗುತ್ತಿದೆ. ಬೇರೆ ಜಿಲ್ಲೆಗೆ ಮಂಜೂರಾದ ಯೋಜನೆಯನ್ನು ಇಲ್ಲಿಗೆ ವರ್ಗಾವಣೆಗೊಳಿಸುವುದರ ಮೂಲಕ ಈ ಕಚೇರಿಯನ್ನು ನಿರ್ಮಿಸಲಾಗುತ್ತಿದ್ದು ಇದು ತಾಲೂಕಿನ ಎಲ್ಲಾ ರೀತಿಯ ಅಭಿವೃದ್ಧಿಗೆ ಪೂರಕವಾದ ಕಟ್ಟಡವಾಗಲಿದೆ. ನೂತನ ಉಪ ವಿಭಾಗ ಕಚೇರಿ ನಿರ್ಮಾಣಗೊಳ್ಳುವ ಮೂಲಕ ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ ಕೆಲಸ ಕಾರ್ಯಗಳಿಗೆ ಗ್ರಾಮ ಪಂಚಾಯತ್ ಸದಸ್ಯರು, ಜನಪ್ರತಿನಿಧಿಗಳು, ಜನ ಸಾಮಾನ್ಯರು ದೂರದ ಮಂಗಳೂರಿನ ಕಚೇರಿಗೆ ಅಲೆದಾಡುವುದು ತಪ್ಪಿದಂತಾಗುತ್ತದೆ ಎಂದು ಅವರು ಹೇಳಿದರು.

ಎಲ್ಲಾ ಕಚೇರಿಗಳು ಬರಲಿವೆ

ಮುಂದಿನ ದಿನಗಳಲ್ಲಿ ಉಳ್ಳಾಲ ತಾಲೂಕಿನಲ್ಲಿ ವಿವಿಧ ಇಲಾಖೆಗಳ ಉಪ ವಿಭಾಗ ಕಚೇರಿಗಳು ಬರಲಿವೆ. ಕೋಟೆಕಾರು ಪಟ್ಟಣ ಪಂಚಾಯತ್ ವ್ಯಾಪ್ತಿಯ ಬೀರಿಯಲ್ಲಿ ಅತೀ ಶೀಘ್ರವೇ ನೂತನ ಸಹಾಯಕ ಪೊಲೀಸ್ ಆಯುಕ್ತರ ಕಚೇರಿ ಹಾಗೂ ಆದಾಯ ತೆರಿಗೆ ಉಪ ವಿಭಾಗ ಕಚೇರಿ ನಿರ್ಮಾಣಗೊಳ್ಳಲಿವೆ. ಇಡೀ ಉಳ್ಳಾಲ ತಾಲೂಕಿಗೆ ಇಪ್ಪತ್ತೈದು ಕೋಟಿ ರೂಪಾಯಿ ವೆಚ್ಚದಲ್ಲಿ ಎಐ ಮಾಡೆಲ್ ಸೈಬರ್ ಸೆಕ್ಯೂರಿಟಿ ಕ್ಯಾಮರಗಳನ್ನು ಅಳವಡಿಸಲಿದ್ದು, ಅದರ ಕಮಾಂಡೊ ಸೆಂಟರ್ ನೂತನವಾಗಿ ನಿರ್ಮಾಣಗೊಳ್ಳಲಿರುವ ಸಹಾಯಕ ಪೊಲೀಸ್ ಆಯುಕ್ತರ ಕಚೇರಿಯಲ್ಲೇ ಕಾರ್ಯ ನಿರ್ವಹಿಸಲಿದೆ ಎಂದು ಯು.ಟಿ.ಖಾದರ್ ತಿಳಿಸಿದರು.

ಈ ಸಂದರ್ಭದಲ್ಲಿ ಉಳ್ಳಾಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಶೆಟ್ಟಿ ಬೋಳಿಯಾರ್, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸದಾಶಿವ ಉಳ್ಳಾಲ್, ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾ ಗಟ್ಟಿ ಜಿಲ್ಲಾ ಧಾರ್ಮಿಕ ಪರಿಷತ್ ಸದಸ್ಯರಾದ ಸುರೇಶ್ ಭಟ್ನಗರ, ಗ್ಯಾರಂಟಿ ಸಮಿತಿ ಜಿಲ್ಲಾ ಉಪಾಧ್ಯಕ್ಷೆ ಸುರೇಖಾ ಚಂದ್ರಹಾಸ್, ಕೋಟೆಕಾರು ಪಟ್ಟಣ ಪಂಚಾಯತ್ ಅಧ್ಯಕ್ಷೆ ದಿವ್ಯಾ ಶೆಟ್ಟಿ ಸದಸ್ಯರಾದ ಅಹ್ಮದ್ ಬಾವ ಅಜ್ಜಿನಡ್ಕ, ಉದಯ ಕುಮಾರ್ ಶೆಟ್ಟಿ ಇಸಾಕ್, ಸಫಿಯ, ಹರೀಶ್ ರಾವ್, ಮುಖ್ಯಾಧಿಕಾರಿ ಮಾಲಿನಿ, ಸೋಮೇಶ್ವರ ಪುರಸಭೆ ಸದಸ್ಯರಾದ ಸಲಾಮ್ ಉಚ್ಚಿಲ, ಪ್ರಮುಖರಾದ ಮನ್ಸೂರ್ ಮಂಚಿಲ, ಅಮಿತಾ ಅಶ್ವಿನ್ ಬಂಡಿಕೊಟ್ಯ, ಚಂದ್ರಿಕಾ ರೈ, ಹಮೀದ್ ಹಸನ್ ಮಾಡೂರು, ಹರ್ಷರಾಜ್ ಮುದ್ಯ, ಪವನ್ ರಾಜ್ ಕೊಲ್ಯ, ಗುತ್ತಿಗೆದಾರರಾದ ಕಲ್ಯಾಣ ಪುರುಷೋತ್ತಮ ಕುಲಾಲ್ ಮೊದಲಾದವರು ಉಪಸ್ಥಿತರಿದ್ದರು.

ಸುತ್ತಮುತ್ತ

4 ದಶಕಗಳ ನೀರಿನ ಸಮಸ್ಯೆಗೆ ಸಂಸದರಿಂದ ಶಾಶ್ವತ ಪರಿಹಾರ

ಮಡಿಕೇರಿ: ನಂಜರಾಯಪಟ್ಟಣ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರಂಗಸಮುದ್ರ ಗ್ರಾಮದ ಕುಟ್ಟನಹಳ್ಳ ಭಾಗದ 10ಕ್ಕೂ ಹೆಚ್ಚು ಕುಟುಂಬಗಳ ದಶಕಗಳ ಕಾಲದ ಕುಡಿಯುವ ನೀರಿನ ತೀವ್ರ ಸಮಸ್ಯೆಗೆ ಕೊನೆಗೂ ಶಾಶ್ವತ ಪರಿಹಾರ ದೊರಕಿದಂತಾಗಿದೆ. ಮೂಲಭೂತ ಸೌಲಭ್ಯವಾದ ಶುದ್ಧ ಕುಡಿಯುವ ನೀರಿಗಾಗಿ ಸುಮಾರು ನಾಲ್ಕು ದಶಕಗಳಿಂದ ಪರದಾಡುತ್ತಿದ್ದ ಇಲ್ಲಿನ ಕಾಂತಂಡ ಕುಟುಂಬಸ್ಥರೂ ಸೇರಿದಂತೆ ಹಲವಾರು ಗ್ರಾಮಸ್ಥರು, ಇದುವರೆಗೆ ಚಿಕ್ಲಿಹೊಳೆ ನಾಲೆ ನೀರನ್ನು ಕುಡಿದು ಅತ್ಯಂತ ಶೋಚನೀಯ ಸ್ಥಿತಿಯಲ್ಲಿ ಬದುಕು ನಡೆಸುತ್ತಿದ್ದರು.

ಗ್ರಾಮಸ್ಥರ ಈ ಗಂಭೀರ ಸಮಸ್ಯೆಯನ್ನು ಮನಗಂಡ ಸ್ಥಳೀಯ ಗ್ರಾ.ಪಂ.ಮಾಜಿ ಸದಸ್ಯ, ಬಿಜೆಪಿ ಉಪಾಧ್ಯಕ್ಷ ಹಾಗೂ ದಿಶಾ ಸಮಿತಿ ಸದಸ್ಯ ಆರ್. ಕೆ. ಚಂದ್ರ ಅವರು ಸಮಸ್ಯೆಯ ನಿವಾರಣೆಗೆ ಸತತ ಪ್ರಯತ್ನ ನಡೆಸಿದ್ದರು. ಇವರ ಮನವಿಗೆ ತಕ್ಷಣವೇ ಸ್ಪಂದಿಸಿದ ಮೈಸೂರು–ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಒಡೆಯರ್ ಅವರು ಕುಡಿಯುವ ನೀರಿನ ಯೋಜನೆಗಾಗಿ ರೂ. 5 ಲಕ್ಷ ಅನುದಾನವನ್ನು ತಕ್ಷಣವೇ ಮಂಜೂರು ಮಾಡಿದ್ದರು. ಅನುದಾನ ಬಿಡುಗಡೆಯಾದ ಬಳಿಕ ಕೇವಲ ಒಂದು ತಿಂಗಳ ಅಲ್ಪಾವಧಿಯಲ್ಲಿ, ಕಟ್ಟೆಹಾಡಿಯಿಂದ ಕುಟ್ಟನಹಳ್ಳ ಭಾಗದ ಕುಟುಂಬಗಳಿಗೆ ಸುಮಾರು 1.5 ಕಿಲೋಮೀಟರ್ ಉದ್ದದ ಪೈಪ್‌ಲೈನ್ ಅಳವಡಿಸಿ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ಮೂಲಕ ದೀರ್ಘಕಾಲದ ಸಮಸ್ಯೆಗೆ ಶಾಶ್ವತ ಮುಕ್ತಿ ಹಾಡಲಾಗಿದೆ. ವರ್ಷಗಳ ಕನಸು ನನಸಾದ ಹಿನ್ನೆಲೆಯಲ್ಲಿ ಹರ್ಷಗೊಂಡಿರುವ ಗ್ರಾಮಸ್ಥರು, ತಮಗೆ ನೆರವಾದ ಸಂಸದ ಯದುವೀರ್ ಒಡೆಯರ್, ಮುಖಂಡ ಆರ್. ಕೆ. ಚಂದ್ರ, ಮಾಜಿ ಶಾಸಕ ಅಪ್ಪಚ್ಚು ರಂಜನ್ ಹಾಗೂ ತ್ವರಿತವಾಗಿ ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ.

ಶ್ರೀ ಮಾಧವ ಶಿಶು ಮಂದಿರದ ನೂತನ ಪದಾಧಿಕಾರಿಗಳ ಆಯ್ಕೆ





ಉಪ್ಪಿನಂಗಡಿ: ಇಲ್ಲಿನ ವೇದಶಂಕರ ನಗರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಮಾಧವ ಶಿಶು ಮಂದಿರದ ನೂತನ ಅಧ್ಯಕ್ಷರಾಗಿ ಹರಿರಾಮಚಂದ್ರ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಸುಜಾತ ಕೃಷ್ಣ ಆಚಾರ್ಯ ಆಯ್ಕೆಯಾಗಿದ್ದಾರೆ. ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಕಲ್ಲಡ್ಕ ಪ್ರಭಾಕರ್ ಭಟ್ ಅವರ ಉಪಸ್ಥಿತಿಯಲ್ಲಿ ನಡೆದ ಈ ಆಯ್ಕೆ ಪ್ರಕ್ರಿಯೆಯಲ್ಲಿ ಆಡಳಿತ ಸಮಿತಿಯ ಉಪಾಧ್ಯಕ್ಷರಾಗಿ ಕಂಗ್ವೆ ವಿಶ್ವನಾಥ ಶೆಟ್ಟಿ, ಕೋಶಾಧಿಕಾರಿಯಾಗಿ ಗಾಯತ್ರಿ ವಸಂತ್, ಜೊತೆ ಕಾರ್ಯದರ್ಶಿಯಾಗಿ ನ್ಯಾಯವಾದಿ ಎನ್. ರಾಘವೇಂದ್ರ ನಾಯಕ್ ಅವರನ್ನು ಆಯ್ಕೆ ಮಾಡಲಾಯಿತು. ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಸಂದೇಶ್ ನಟ್ಟಿಬೈಲ್, ಜಯಶ್ರೀ ಜನಾರ್ದನ್, ಯು. ರಾಜೇಶ್ ಪೈ, ಕೆ. ಜಗದೀಶ್ ಶೆಟ್ಟಿ ಕರಾಯ ರಾಘವೇಂದ್ರ ನಾಯಕ್, ಯತೀಶ್ ಶೆಟ್ಟಿ ಎಚ್. ಸುಬ್ರಹ್ಮಣ್ಯ ಶೆಣೈ, ಯು. ರಾಮ, ಮನೋಜ್ ಶೆಟ್ಟಿ ಅವರನ್ನು ಆಯ್ಕೆ ಮಾಡಲಾಯಿತು. ಆಯ್ಕೆ ಪ್ರಕ್ರಿಯೆಯಲ್ಲಿ ವಿವೇಕಾನಂದ ವಿದ್ಯಾವರ್ಧಕ ಸಂಘದ ಸಹ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವೆಂಕಟರಮಣ ರಾವ್ ಮಂಕುಡೆ, ಉಪ್ಪಿನಂಗಡಿ ಶ್ರೀ ರಾಮ ಶಾಲಾ ಸಂಚಾಲಕ ಯು.ಜಿ. ರಾಧಾ ಉಪಸ್ಥಿತರಿದ್ದರು.

ಚಂದಳಿಕೆ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ

ವಿಟ್ಲ: ಚಂದಳಿಕೆಯ ದ.ಕ. ಜಿಲ್ಲಾ ಪಂಚಾಯತ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವಿಟ್ಲ ವಲಯದ ಸಹಯೋಗದಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ಪರಿಸರ ಮಾಹಿತಿ ಹಾಗೂ ಗಿಡಗಳ ನಾಟಿ ಮಾಡುವ ಕಾರ್ಯಕ್ರಮ ಜರುಗಿತು.

ವಿಟ್ಲ ಅರಮನೆಯ ಕೃಷ್ಣಯ್ಯ ಕೆ. ದೀಪ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಎಸ್‌ಡಿಎಂಸಿ ಅಧ್ಯಕ್ಷೆ ಸುಮತಿ ದೇಜಪ್ಪ ಅಧ್ಯಕ್ಷತೆ ವಹಿಸಿದ್ದರು. ಶಾಲಾ ಮುಖ್ಯ ಗುರು ವಿಶ್ವನಾಥ ಕುಳಾಲು ಪರಿಸರ ಮಾಹಿತಿ ನೀಡಿದರು. ವಲಯ ಯೋಜನಾಧಿಕಾರಿ ಸುರೇಶ್ ಗೌಡ, ನಟೇಶ್ ವಿಟ್ಲ ಅವರು ಸಹಕರಿಸಿ ಶುಭ ಹಾರೈಸಿದರು. ಎಸ್‌ಡಿಎಂಸಿ ಉಪಾಧ್ಯಕ್ಷ ಜಾಫರ್, ಒಕ್ಕೂಟದ ಅಧ್ಯಕ್ಷರಾದ ದಿವಾಕರ ಶೆಟ್ಟಿ ವಿಶ್ವನಾಥ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಈ ಸಂದರ್ಭ ಯೋಜನೆಯ ಸದಸ್ಯರು ಹಾಗೂ ಶೌರ್ಯ ವಿಪತ್ತು ನಿರ್ವಹಣಾ ಘಟಕದ ಸದಸ್ಯರು ಶಾಲಾ ಆವರಣದಲ್ಲಿ ಹಲವಾರು ಉಪಯುಕ್ತ ಗಿಡಗಳನ್ನು ನಾಟಿ ಮಾಡಿದರು. ವಿದ್ಯಾರ್ಥಿಗಳಿಗೆ ಸಿಹಿ ತಿಂಡಿ ವಿತರಿಸಲಾಯಿತು. ಪದ್ಮನಾಭ ಶೆಟ್ಟಿ ಸ್ವಾಗತಿಸಿ, ಶಿಕ್ಷಕ ವೆಂಕಟೇಶ್ ವಂದಿಸಿದರು. ದಮಯಂತಿ ಕಾರ್ಯಕ್ರಮ ನಿರ್ವಹಿಸಿದರು.

ಪ್ರಧಾನ ಸಂಘಟನಾ ಕಾರ್ಯದರ್ಶಿ ನೇಮಕ

ಸುಬ್ರಹ್ಮಣ್ಯ: ದ.ಕ. ಜಿಲ್ಲಾ ಪದವಿ ಪೂರ್ವ ಕಾಲೇಜ್‌ಗಳ ಉಪನ್ಯಾಸಕರ ಸಂಘದ ಪ್ರಧಾನ ಸಂಘಟನಾ ಕಾರ್ಯದರ್ಶಿಯಾಗಿ ಶ್ರೀ ಸುಬ್ರಹ್ಮಣ್ಯೇಶ್ವರ ಪದವಿ ಪೂರ್ವ ಕಾಲೇಜಿನ ರಸಾಯನಶಾಸ್ತ್ರ ಉಪನ್ಯಾಸಕ ಜಯಪ್ರಕಾಶ್ ಆರ್. ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಅವರು ಸುಬ್ರಹ್ಮಣ್ಯ ರೋಟರಿ ಕ್ಲಬ್‌ನ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.



ಶಿರ್ವ ಬಲ್ಲಾಡಿ ಶಾಲಾ ಶಿಕ್ಷಕ ಶಿವಣ್ಣ ಮುಖ್ಯ ಶಿಕ್ಷಕರಾಗಿ ಭಡ್ತಿ, ಬೀಳ್ಕೊಡುಗೆ



ಶಿರ್ವ: ಶಿರ್ವದ ಬಲ್ಲಾಡಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 23 ವರ್ಷಗಳಿಂದ ಸಹ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸಿದ ಶಿವಣ್ಣ ಆರ್. ಅವರಿಗೆ ಇಲಾಖೆ ಮುಖ್ಯ ಶಿಕ್ಷಕರಾಗಿ ಭಡ್ತಿ ನೀಡಿ ಸಾಂತೂರು ಸರಕಾರಿ ಶಾಲೆಗೆ ವರ್ಗಾವಣೆಗೊಳಿಸಿದ್ದು, ಪ್ರಯುಕ್ತ ಶಾಲಾಭಿಮಾನಿಗಳು, ಶಾಲಾ ಹಳೆವಿದ್ಯಾರ್ಥಿ ಸಂಘದ ನೇತೃತ್ವದಲ್ಲಿ ರವಿವಾರ ಶಾಲಾ ರಂಗಮಂಟಪದಲ್ಲಿ ಏರ್ಪಡಿಸಿದ ಸಾರ್ವಜನಿಕ ಸಮಾರಂಭದಲ್ಲಿ ಸನ್ಮಾನಿಸಲಾಯಿತು.

ಮುಖ್ಯ ಅತಿಥಿಗಳಾಗಿ ಶಿರ್ವ ಸಿ.ಎ.ಬ್ಯಾಂಕ್ ಅಧ್ಯಕ್ಷ ಕುತ್ಯಾರು ಪ್ರಸಾದ್ ಶೆಟ್ಟಿ ಶಿರ್ವ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ರತನ್ ಶೆಟ್ಟಿ ಶಾಲೆಯ ಸ್ಥಳದಾನಿ ಹಾಗೂ ಶಿರ್ವ ಶ್ರೀವಿಷ್ಣುಮೂರ್ತಿ ದೇವಳದ ಪ್ರಧಾನ ಅರ್ಚಕ ವೇದಮೂರ್ತಿ ರಘುಪತಿ ಗುಂಡು ಭಟ್, ನಿವೃತ್ತ ಶಿಕ್ಷಕ ರವೀಂದ್ರ ಶೆಟ್ಟಿ ಸಾನದಮನೆ, ಪ್ರಭಾರ ಮುಖ್ಯ ಶಿಕ್ಷಕಿ ಅನಿತಾ ಡಿಸೋಜ,ಶಿರ್ವ ವಿಷ್ಣುಮೂರ್ತಿ ಭಜನಾ ಮಂಡಳಿ ಅಧ್ಯಕ್ಷ ಅಜಿತ್ ಶೆಟ್ಟಿ ಶಾಲಾ ಹಳೆವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಶೇಖರ ಶೆಟ್ಟಿ , ಶಾಲಾ ಎಸ್‌ಡಿಎಮ್‌ಸಿ ಅಧ್ಯಕ್ಷೆ ಶಕುಂತಳಾ ನಾಯ್ಕ್, ಸಿಆರ್‌ಪಿ ಸರಿತಾರಾಣಿ ಭಾಗವಹಿಸಿ ಶಿಕ್ಷಕ ಶಿವಣ್ಣ ಮಾತನಾಡಿ, ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಶಿಕ್ಷಕರಾಗಿದ್ದು, ಶಾಲೆಗೆ ನೀಡಿದ ಸೇವಾ ಕಾರ್ಯಗಳನ್ನು ಸ್ಮರಿಸಿ ಅಭಿನಂದಿಸಿದರು.

ಶಿವಣ್ಣ ಅವರ ಪತ್ನಿ ರಾಜೇಶ್ವರೀ, ಶಾಲಾ ಹಳೆವಿದ್ಯಾರ್ಥಿ ಸಂಘದ ಅಧ್ಯಕ್ಷ ಉಮೇಶ ಆಚಾರ್ಯ ಅಧ್ಯಕ್ಷತೆ ವಹಿಸಿ ಪ್ರಾಸ್ತಾವಿಕ ಮಾತುಗಳೊಂದಿಗೆ ಸ್ವಾಗತಿಸಿದರು. ಪ್ರೀತಮ್ ಆಚಾರ್ಯ ಬಲ್ಲಾಡಿ ನಿರೂಪಿಸಿದರು. ಶಾಲಾ ಪ್ರಭಾರ ಮುಖ್ಯ ಶಿಕ್ಷಕಿ ಅನಿತಾ ಡಿಸೋಜಾ ಧನ್ಯವಾದವಿತ್ತರು.

ಮಂಚಿ – ಕೊಳ್ನಾಡು ಪ್ರೌಢಶಾಲೆಯಲ್ಲಿ 'ಮಳೆ ಹಬ್ಬ'



ಬಂಟ್ವಾಳ: ಮಕ್ಕಳು ಸಂತಸದ ಕಲಿಕೆಯಲ್ಲಿ ಪಾಲ್ಗೊಳ್ಳುವಂತಾಗಬೇಕು ಮತ್ತು ಇಷ್ಟಪಟ್ಟು ಓದಿಕೊಳ್ಳುವಂತಾಗಬೇಕೆನ್ನುವ ಉದ್ದೇಶದಿಂದ ಮಂಚಿ – ಕೊಳ್ನಾಡು ಪ್ರೌಢಶಾಲೆಯಲ್ಲಿ ಮಳೆ ಹಬ್ಬವೆನ್ನುವ ಮಕ್ಕಳ ಕಲಿಕಾ ಚೈತನ್ಯ ಶಿಬಿರ ಆಯೋಜಿಸಲಾಯಿತು.

ವಿಶೇಷ ಅತಿಥಿಯಾಗಿ ಶಾಲಾ ಹಿರಿಯ ವಿದ್ಯಾರ್ಥಿ ವೀಣಾಸರಸ್ವತಿ ಮಾತನಾಡಿದರು. ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ಶಿವಶಂಕರ ರಾವ್ ಅಧ್ಯಕ್ಷತೆ ವಹಿಸಿದ್ದರು. ವಿವಿಧ ರೀತಿಯ ಜಾಗೃತಿ ಹಾಡುಗಳು, ಚಪ್ಪಾಳೆಗಳ ವೈವಿಧ್ಯತೆಗಳೊಂದಿಗೆ ಸಂಪನ್ಮೂಲ ವ್ಯಕ್ತಿಯಾದ ಮಕ್ಕಳ ರಂಗಭೂಮಿ ಕಲಾವಿದ ಕೃಷ್ಣಪ್ಪ ಅವರು ಮಕ್ಕಳೊಂದಿಗೆ ಮಕ್ಕಳಾಗಿ ಬೆರೆತರು. ಪರಿಸರ ತ್ಯಾಜ್ಯ ಮತ್ತು ಅದರ ನಿರ್ವಹಣೆ ಕುರಿತಾಗಿ ಹಸಿರು ದಳದ ಸಾಮಾಜಿಕ ಕಾರ್ಯಕರ್ತ ನಾಗರಾಜ್ ಬಜಾಲ್ ಮಾಹಿತಿ ನೀಡಿ ದರು. ಪ್ರಕೃತಿಯ ಉಳಿವಿನಲ್ಲಿ ನಮ್ಮ ಪಾತ್ರದ ಅಗತ್ಯತೆಯನ್ನು ಪ್ರತಿಬಿಂಬಿಸುವ ನೀರು – ಬೇರು ವಿಷಯದ ಕುರಿತಂತೆ ರಾಜ್ಯಪ್ರಶಸ್ತಿ ಪುರಸ್ಕೃತ ನಿವೃತ್ತ ಶಿಕ್ಷಕ ರಮೇಶ್ ಬಾಯಾರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ಶಾಲಾ ಹಿರಿಯ ವಿದ್ಯಾರ್ಥಿ ಹಾಗೂ ಮಾಜಿ ಸೈನಿಕರಾದ ರಮೇಶ್ ರಾವ್ ನೂಜಿಪ್ಪಾಡಿ, ಹಿರಿಯ ವಿದ್ಯಾರ್ಥಿ ಹಾಗೂ ನಿವೃತ್ತ ಶಿಕ್ಷಕರಾದ ದೇವಕಿ ಎಚ್, ನಿವೃತ್ತ ಶಿಕ್ಷಕಿಯಾದ ಅನುಸೂಯ ರಾವ್, ಉಪಸ್ಥಿತರಿದ್ದರು. ಮುಖ್ಯೋಪಾಧ್ಯಾಯರಾದ ಸುಶೀಲ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಹಿಂದಿ ಭಾಷಾ ಶಿಕ್ಷಕಿ ಶಾಂತ ಎಸ್. ಸ್ವಾಗತಿಸಿದರು. ಕಲಾ ಶಿಕ್ಷಕ ಜಗನ್ನಾಥ್ ವಂದಿಸಿದರು. ಚಿತ್ರಕಲಾವಿದ ತಾರಾನಾಥ ಕೈರಂಗಳ ಕಾರ್ಯಕ್ರಮ ಸಂಯೋಜಿಸಿ ನಿರೂಪಿಸಿದರು.

ಪಡುಕುಡೂರು ಶಾಲೆಯಲ್ಲಿ ಎಸ್‌ಕೆಪಿಎಯಿಂದ ಪರಿಸರ ದಿನಾಚರಣೆ



ಕಾರ್ಕಳ: ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ. ಪ್ರತಿಯೊಬ್ಬರೂ ಪರಿಸರದ ಕುರಿತು ಕಾಳಜಿ ವಹಿಸುವುದು ಅವಶ್ಯ ಎಂದು ಎಸ್‌ಕೆಪಿಎ ನಿಕಟಪೂರ್ವ ಜಿಲ್ಲಾಧ್ಯಕ್ಷ ಪದ್ಮಪ್ರಸಾದ್ ಜೈನ್ ಅಭಿಪ್ರಾಯಪಟ್ಟರು.

ಅವರು ಜೂ. 10ರಂದು ಪಡುಕುಡೂರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎಸ್‌ಕೆಪಿಎ ಕಾರ್ಕಳ ವಲಯ ವತಿಯಿಂದ ನಡೆದ ಪರಿಸರ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಪತ್ರಕರ್ತ ರಾಮಚಂದ್ರ ಬರೆಪ್ಪಾಡಿ ಮಾತನಾಡಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಎಸ್‌ಕೆಪಿಎ ಕಾರ್ಕಳ ವಲಯ ಅಧ್ಯಕ್ಷ ಪ್ರಮೋದ್‌ಚಂದ್ರ ಪೈ, ವಿಶ್ವ ಪರಿಸರ ದಿನಾಚರಣೆ ಅಂಗವಾಗಿ 126 ವಿವಿಧ ತಳಿಯ ಗಿಡಗಳನ್ನು ಶಾಲಾ ಆವರಣದಲ್ಲಿ ನೆಡಲಾಗುವುದು ಮತ್ತು ವಿದ್ಯಾರ್ಥಿ ಜೀವನದಲ್ಲೇ ಪರಿಸರದ ಕುರಿತು ಆಸಕ್ತಿ ಮೂಡಿಸುವ ನಿಟ್ಟಿನಲ್ಲಿ ಪ್ರತಿ ವಿದ್ಯಾರ್ಥಿಗಳಿಗೆ ಗಿಡ ವಿತರಣೆ ಮಾಡಲಾಗುವುದು ಎಂದರು.

ಎಸ್‌ಡಿಎಂಸಿ ಅಧ್ಯಕ್ಷ ರವಿ ಶೆಟ್ಟಿ ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಪ್ರಸನ್ನ ಶೆಟ್ಟಿ ಮುಖ್ಯಶಿಕ್ಷಕ ಹರೀಶ್ ಪೂಜಾರಿ, ಎಸ್‌ಕೆಪಿಎ ಜಿಲ್ಲಾ ಉಪಾಧ್ಯಕ್ಷ ದತ್ತಾತ್ರೇಯ ಹಿರಿಯಂಗಡಿ, ಹಳೆ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಶ್ರೀನಿವಾಸ್ ಆಚಾರ್ಯ, ಎಸ್‌ಡಿಎಂಸಿ ಉಪಾಧ್ಯಕ್ಷ ಹರೀಶ್ ಪೂಜಾರಿ ಶೇಖರ್ ಕುಕ್ಕುಜೆ ಪ್ರಧಾನ ಕಾರ್ಯದರ್ಶಿ ಎಸ್.ಕೆ. ಪಿ.ಎ ಕಾರ್ಕಳ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶಿಕ್ಷಕಿ ಭಾವನಾ ಕಾರ್ಯಕ್ರಮ ನಿರೂಪಿಸಿ, ಸತೀಶ್ ವರಂಗ ವಂದಿಸಿದರು.

ನಿಜವಾದ ಅಂಬೇಡ್ಕರ್ ಸಮಾಜಕ್ಕೆ ತಿಳಿಯಬೇಕಿದೆ: ಪ್ರೊ.ಸೋಮಣ್ಣ ಹೊಂಗಳ್ಳಿ



ಮಂಗಳೂರು: ಅಖಿಲ ಭಾರತೀಯ ಸಾಹಿತ್ಯ ಪರಿಷತ್ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ವತಿಯಿಂದ ನಡೆದ ಡಾ. ಸುಧಾಕರ ಹೊಸಳ್ಳಿ ಅವರು ಬರೆದ 'ನಾನೂ ಕಾಫಿರ ಅಂಬೇಡ್ಕರ್ ಅವರ ಹಿಂದುತ್ವ ಕಥನ' ಪುಸ್ತಕದ ಲೋಕಾರ್ಪಣೆ ಕಾರ್ಯಕ್ರಮ ಮಂಗಳೂರಿನ ಎಸ್‌ಡಿಎಂ ಕಾಲೇಜಿನ ಸೆಮಿನಾರ್ ಹಾಲ್ ನಲ್ಲಿ ನಡೆಯಿತು.

ಪುಸ್ತಕ ಬಿಡುಗಡೆ ಮಾಡಿದ ಮಂಗಳೂರು ವಿಶ್ವವಿದ್ಯಾನಿಲಯದ ಕಲಾ ನಿಕಾಯದ ಡೀನ್ ಪ್ರೊ. ಸೋಮಣ್ಣ ಹೊಂಗಳ್ಳಿ ಮಾತನಾಡಿ ಅಂಬೇಡ್ಕರ್ ಹಿಂದೂ ಧರ್ಮದ ಅತ್ಯಂತ ಗಟ್ಟಿಯಾದ ಸಮರ್ಥಕ ಮತ್ತು ಸುಧಾರಕ ಅವರನ್ನು ನಮಗೆ ತಪ್ಪಾಗಿ ತಿಳಿಸುವ ಪ್ರಯತ್ನ ಆಗಿದೆ. ಆದರೆ ನಿಜವಾಗಿ ಅಂಬೇಡ್ಕರ್ ಏನು ಹೇಳಿದರು ಏನು ಬರೆದರು ಅನ್ನುವುದು ಸಮಾಜಕ್ಕೆ ತಿಳಿಯ ಬೇಕಾಗಿದೆ ಆ ಕೆಲಸವನ್ನು ಈ ಪುಸ್ತಕ ಮಾಡಿದೆ ಎಂದು ಅಭಿಪ್ರಾಯ ಪಟ್ಟರು.

ಪುಸ್ತಕ ಪರಿಚಯ ಮಾಡಿದ ಅಂಕಣಕಾರ ಪ್ರವೀಣ್ ಕುಮಾರ್ ಮಾವಿನಕಾಡು ಮಾತನಾಡಿ, ಹೇಗೆ ನಾನು ಗೌರಿ, ನಾನು ಅಫ್ಜಲ್ ಅನ್ನುವ ಪ್ರತಿರೋಧಗಳು ಬಂತೋ ಆ ಪ್ರತಿರೋಧದ ಮೂಲ ಅಂಬೇಡ್ಕರ್ ಅವರ ನಾನೂ ಕಾಫಿರ ಅನ್ನುವ ಹೇಳಿಕೆ. ಸರ್ವೇ ಜನಾಃ ಸುಖಿನೋ ಭವಂತು ಎಂದು ಹೇಳುವ ಹಿಂದೂ ಧರ್ಮ ಯಾವತ್ತಿಗೂ ಪರರನ್ನು ದ್ವೇಷ ಮಾಡಿಲ್ಲ ಆದರೆ ಕೆಲವರು ನಮ್ಮವರಲ್ಲದವರು ಕಾಫಿರರು ಎಂದು ಅವರನ್ನು ನಾಶ ಮಾಡುವ ಚಿಂತನೆ ಇರುವ ವೇಳೆ ಅಂಬೇಡ್ಕರ್ ಈ ರೀತಿ ಹೇಳಿದ್ದಾರೆ ಎಂದು ಪುಸ್ತಕದ ವಿಷಯ ತಿಳಿಸಿದರು.

ಅಧ್ಯಕ್ಷತೆಯನ್ನು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಮಂಗಳೂರು ವಿಭಾಗ ಪ್ರಮುಖ್ ಡಾ. ಕೇಶವ ಬಂಗೇರ ವಹಿಸಿದ್ದರು. ವೇದಿಕೆಯಲ್ಲಿ ಕೃತಿಯ ಲೇಖಕರಾದ ಡಾ. ಸುಧಾಕರ ಹೊಸಳ್ಳಿ ಇದ್ದರು. ಶೈಲೇಶ್ ಕುಲಾಲ್, ವೀಣಾ ಶೆಟ್ಟಿ ಗೀತಾ ಲಕ್ಷ್ಮೀಶ್ ಉಪಸ್ಥಿತರಿದ್ದರು. ಶ್ರೀಲಕ್ಷ್ಮಿ ಮಠದಮೂಲೆ ನಿರೂಪಿಸಿದರು.

ಅಜ್ಜಿನಡ್ಕ ವಿದ್ಯಾರ್ಥಿಗಳಿಗೆ ಕೋಟೆಕಾರು ವ್ಯವಸಾಯ ಸಹಕಾರಿ ಸಂಘದಿಂದ ಪುಸ್ತಕ ವಿತರಣೆ



ಉಳ್ಳಾಲ: ಕೋಟೆಕಾರು ವ್ಯವಸಾಯ ಸೇವಾ ಸಹಕಾರಿ ಸಂಘದ ವತಿಯಿಂದ ಅಜ್ಜಿನಡ್ಕದ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಹಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ, ಲೇಖನ ಸಾಮಗ್ರಿಗಳನ್ನು ವಿತರಿಸಲಾಯಿತು.

ಕೋಟೆಕಾರು ವ್ಯವಸಾಯ ಸೇವಾ ಸಹಕಾರ ಸಂಘದ ನಿರ್ದೇಶಕ ಸುರೇಖಾ ಚಂದ್ರಹಾಸ್ ಮಾತನಾಡಿ, ಸಂಘದ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಮುತುವರ್ಜಿಯಿಂದ ಕಳೆದ ಆರು ವರ್ಷಗಳಿಂದ ಸರಕಾರಿ ಶಾಲೆಯಲ್ಲಿ ಕಲಿಯುವ ಮಕ್ಕಳನ್ನು ಪ್ರೋತ್ಸಾಹಿಸುವ ಕೆಲಸ ಮಾಡುತ್ತಿದ್ದಾರೆ. ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡುವ ನಿಟ್ಟಿನಲ್ಲಿ ಸೊಸೈಟಿಯ ವತಿಯಿಂದ ವಿದ್ಯಾರ್ಥಿಗಳಿಗೆ ಕಲಿಯುವ ಸಾಮಗ್ರಿಗಳ ವಿತರಣೆ ಮಾಡಲಾಗಿದೆ. ಮಕ್ಕಳು ಆಂಗ್ಲಮಾಧ್ಯಮ ಶಿಕ್ಷಣಕ್ಕೆ ಮಾರು ಹೋಗುತ್ತಿರುವ ಈಗಿನ ಸಂದರ್ಭದಲ್ಲಿ ಕನ್ನಡ ಮಾಧ್ಯಮ ಶಾಲೆಗಳನ್ನು ಉಳಿಸುವ ಉದ್ದೇಶದಿಂದ ಕೋಟೆಕಾರು ವ್ಯವಸಾಯ ಸೇವಾ ಸಹಕಾರಿ ಸಂಘ ಸೇವೆ ಒದಗಿಸುತ್ತಿದೆ ಎಂದರು.

ಸಂಘದ ನಿರ್ದೇಶಕರಾದ ರಾಘವ ಆರ್.ಉಚ್ಚಿಲ್ ಮಾತನಾಡಿ, ಗಳಿಸಿದ ಲಾಭಾಂಶದಲ್ಲಿ ನಮ್ಮ ಸಂಘದ ಕಾರ್ಯ ವ್ಯಾಪ್ತಿಯ ಸರಕಾರಿ ಶಾಲೆ ಮತ್ತು ವಿದ್ಯಾರ್ಥಿಗಳಿಗೆ ನೆರವು ನೀಡಬೇಕೆನ್ನುವುದು ನಮ್ಮ ಆಶಯವಾಗಿದೆ ಎಂದರು.

ಕೋಟೆಕಾರು ವ್ಯವಸಾಯ ಸೇವಾ ಸಹಕಾರ ಸಂಘದ ಉಪಾಧ್ಯಕ್ಷ ಅಬುಸಾಲಿ ಅಧ್ಯಕ್ಷತೆ ವಹಿಸಿದ್ದರು. ನಿರ್ದೇಶಕರಾದ ಉದಯಕುಮಾರ್ ಶೆಟ್ಟಿ ಕೊಂಡಾಣಗುತ್ತು, ಸಿಇಒ ಹರ್ಷವರ್ಧನ್ ಉಳ್ಳಾಲ, ಕಂಬಳ ಓಟಗಾರ ವಂದಿತ್ ಶೆಟ್ಟಿ ಕೋಟೆಕಾರು ಪ.ಪಂ. ವಿಪಕ್ಷ ನಾಯಕರಾದ ಅಹಮದ್ ಬಾವ ಅಜ್ಜಿನಡ್ಕ,ಸಿಆರ್ ಪಿಗಳಾದ ಮೋಹನ್,ಸುಜಾತಾ,ಗೀತಾ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು.

ಮುಖ್ಯೋಪಾಧ್ಯಾಯಿನಿ ರಝಿಯಾ ಕಾರ್ಯಕ್ರಮ ನಿರೂಪಿಸಿದರು.

ಶ್ರೀ ರಾಮ ಪಿಯು ಕಾಲೇಜಿನಲ್ಲಿ ಎನ್‌ಸಿಸಿ ಪರಿಚಯ

ಬಂಟ್ವಾಳ: ಕಲ್ಲಡ್ಕ ಶ್ರೀ ರಾಮ ಪದವಿ ಪೂರ್ವ ವಿದ್ಯಾಲಯದಲ್ಲಿ ಪ್ರಥಮ ಪಿ ಯು.ಸಿ ವಿದ್ಯಾರ್ಥಿಗಳಿಗೆ ಎನ್‌ಸಿಸಿ(ಆರ್ಮಿ ವಿಂಗ್) ಇದರ ಪರಿಚಯ ಕಾರ್ಯಕ್ರಮ ನಡೆಸಲಾಯಿತು.

ಮಾಜಿ ಸೈನಿಕ ಮತ್ತು ಪ್ರಸ್ತುತ 18 ಕರ್ನಾಟಕ ಬೆಟಾಲಿಯನ್ ಎನ್ ಸಿಸಿಯಲ್ಲಿ ಪಿ.ಐ ಸಿಬ್ಬಂದಿಯಾಗಿ ಕಾರ್ಯನಿರ್ವಹಿಸುತ್ತಿರುವ ಯನ್ .ಬಿ. ಪಾಟೀಲ್ ವಿದ್ಯಾರ್ಥಿಗಳಿಗೆ ಎನ್‌ಸಿಸಿಯ ಮಹತ್ವ ಮತ್ತು ಪ್ರಯೋಜನಗಳ ಮಾಹಿತಿ ನೀಡಿದರು.



ಕಾರ್ಯಕ್ರಮದ ಅಧ್ಯಕ್ಷತೆಯನ್ನು ಉಪ ಪ್ರಾಂಶುಪಾಲರಾದ ಮತ್ತು ಎನ್‌ಸಿ ಸಿಯ ಸಿ.ಟಿ.ಒ ಆಗಿರುವ ದಿನೇಶ್ ವಹಿಸಿದ್ದರು. ತ್ರಿಷಾ ನಿರ್ವಹಿಸಿದರು.

ಸಮುದಾಯ ಭವನ ಕಾಮಗಾರಿ ಕ್ರಿಯಾ ಯೋಜನೆ ಪಟ್ಟಿ ಸಂಸದರಿಗೆ ಹಸ್ತಾಂತರ

ಪುತ್ತೂರು: ಸವಣೂರು ಶ್ರೀ ವಿಷ್ಣುಮೂರ್ತಿ ದೇವಾಲಯದ ವಠಾರದಲ್ಲಿ ಸುಮಾರು ರೂ.45 ಲಕ್ಷ ವೆಚ್ಚದಲ್ಲಿ ನಿರ್ಮಾಣವಾಗಲಿರುವ ಸಮುದಾಯ ಭವನದ ಕಾಮಗಾರಿಯ ಕ್ರಿಯಾ ಯೋಜನೆಯ ಪಟ್ಟಿಯನ್ನು ಸಂಸದ ಬೃಜೇಶ್ ಚೌಟ ಅವರಿಗೆ ದೇವಾಲಯದ ಆಡಳಿತ ಸಮಿತಿ ಅಧ್ಯಕ್ಷ ಸವಣೂರುಗುತ್ತು ವೆಂಕಪ್ಪ ಶೆಟ್ಟಿ ಅವರು ಜೂ.10ರಂದು ಹಸ್ತಾಂತರ ಮಾಡಿದರು.

ಸವಣೂರು ಶ್ರೀ ವಿಷ್ಣುಮೂರ್ತಿ



ಸೇವಾ ಸಮಿತಿಯ ಪೂರ್ವಾಧ್ಯಕ್ಷ ಉಮಾಪ್ರಸಾದ್ ರೈ ನಡುಬೈಲು, ಸವಣೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷ ಚೇತನ್ ಕುಮಾರ್ ಕೋಡಿಬೈಲು ಸತೀಶ್ ಬಲ್ಯಾಯ ಕನ್ನಡಕುಮೇರು ಇದ್ದರು.

4 ಕಿ.ಮೀ. ರಸ್ತೆಯ ಉದ್ಘಾಟನೆ | ನೂರಾರು ಜೀಪು ಚಾಲಕರ ಕುಟುಂಬಗಳ ಹಿತದೃಷ್ಟಿ ಪ್ರವಾಸೋದ್ಯಮಕ್ಕೆ ಪೂರಕ

ಪ್ರವಾಸಿತಾಣ ಮಾಂದಲಪಟ್ಟಿಗೆ ರೂಪಾಯಿ 60 ಲಕ್ಷ ವೆಚ್ಚದಲ್ಲಿ ಸುಸಜ್ಜಿತ ರಸ್ತೆ

ಮಡಿಕೇರಿ: ರಾಜ್ಯದ ಅತ್ಯಂತ ಪ್ರಸಿದ್ಧ ಮತ್ತು ಸುಂದರಪ್ರವಾಸಿ ತಾಣಗಳಲ್ಲಿ ಒಂದಾದ ಮಡಿಕೇರಿಯ ಮಾಂದಲಪಟ್ಟಿ (ಮುಗಿಲುಪೇಟೆ) ಗಿರಿಧಾಮಕ್ಕೆ ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂಥರ್ ಗೌಡ ಅವರ ನಿರ್ದೇಶನದ ಮೇರೆಗೆ ನಿರ್ಮಿಸಲಾದ 60 ಲಕ್ಷ ರೂ ವೆಚ್ಚದ 4 ಕಿ.ಮೀ. ರಸ್ತೆಯನ್ನು ಶಾಸಕರ ಅನುಪಸ್ಥಿತಿಯಲ್ಲಿ ಹೊದ್ದೂರು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಎಚ್.ಎ.ಹಂಸ ಅವರು ಶುಕ್ರವಾರ ಉದ್ಘಾಟಿಸಿದರು.

ಸ್ಥಳೀಯ ನಿವಾಸಿಗಳು, ಗ್ರಾಮಸ್ಥರು ಹಾಗೂ ಬಾಡಿಗೆ ಜೀಪ್ ಮಾಲಕರ ಕೋರಿಕೆ ಮೇರೆಗೆ ಶಾಸಕರು ಈ ರಸ್ತೆಯನ್ನು ನಿರ್ಮಾಣ ಮಾಡಲು ಅವಕಾಶ ಮಾಡಿದ್ದು ಪ್ರವಾಸಿ ತಾಣದಲ್ಲಿ ನಿಯಮ ಬಾಹಿರ ಚಟುವಟಿಕೆಗಳು ನಡೆಯದಂತೆ ಎಚ್ಚರವಹಿಸಬೇಕು ಎಂದು ಹಂಸ ಅವರು ಸ್ಥಳೀಯರಲ್ಲಿ ಮನವಿ ಮಾಡಿದರು.



ಕಾಲೂರು ಗ್ರಾಮಕ್ಕೆ ಬಸ್ ಬರುವ ರಸ್ತೆ ಹದಗೆಟ್ಟಿದ್ದು ತಕ್ಷಣಕ್ಕೆ ತಾತ್ಕಾಲಿಕ ದುರಸ್ತಿ ಕಾರ್ಯಕ್ಕೆ ಡಾ.ಮಂಥರ್ ಗೌಡ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ ಎಂದು ಅವರು ಮಾಹಿತಿ ನೀಡಿದರು.

ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆಯ ಜಿಲ್ಲಾಧ್ಯಕ್ಷ ತೆನ್ನಿರ ಮೈನಾ ಅವರು ಪ್ರಾಸ್ತವಿಕವಾಗಿ ಮಾತನಾಡಿ, ಜಿಲ್ಲೆಯ ಪ್ರಸಿದ್ಧ ಪ್ರವಾಸಿ ತಾಣಕ್ಕೆ ಬಾಡಿಗೆ ಜೀಪ್ ಚಾಲನೆ ಮಾಡಿ ಬದುಕು ಕಟ್ಟಿಕೊಂಡಿರುವ ನೂರಾರು ಕುಟುಂಬಗಳ ಹಿತದೃಷ್ಟಿಯಿಂದ ಮತ್ತು ಪ್ರವಾಸೋದ್ಯಮಕ್ಕೆ ಪೂರಕ ವಾತಾವರಣ ಕಲ್ಪಿಸುವ ನಿಟ್ಟಿನಲ್ಲಿ ಶಾಸಕ ಡಾ.ಮಂಥರ್ ಗೌಡ ಅವರು ಕೊಡಗು ಫಾರೆಸ್ಟ್ ಫೌಂಡೇಶನ್ ನಿಧಿಯಿಂದ 50 ಲಕ್ಷ ರೂ. ರಾಜ್ಯ ಸರ್ಕಾರದ ವನ್ಯಜೀವಿ ವಿಭಾಗದ ಅನುದಾನದಲ್ಲಿ 10 ಲಕ್ಷ ರೂ. ಸೇರಿದಂತೆ ಒಟ್ಟು 60 ಲಕ್ಷ ರೂಗಳನ್ನು ಒದಗಿಸಿದ ಮೇರೆಗೆ 4 ತಿಂಗಳುಗಳ ಕಾಲ ಕಾಮಗಾರಿ ನಡೆಸಿ ಈಗ ಲೋಕಾರ್ಪಣೆ ಮಾಡಲಾಗಿದೆ ಎಂದು ವಿವರಣೆ ನೀಡಿದರು. ಮಡಿಕೇರಿ ವಿಭಾಗದ ವಲಯ ಅರಣ್ಯ ಅಧಿಕಾರಿ (ಆರ್‌ಎಫ್‌ಒ) ಎಚ್. ಎಸ್.ಶಿವಕುಮಾರ್, ಉಪ ವಲಯ ಅರಣ್ಯಾಧಿಕಾರಿ ಭರತ್ ಎಂ.ಕೆ., ಮುಖಂಡರಾದ ಕೊಂಬಾರನ ಗಣಪತಿ, ಜಾನ್ಸನ್ ಪಿಂಟೋ, ವಕೀಲ ರೋಷನ್ ಗಣಪತಿ, ಕವನ್ ಕೊತ್ತೋಳಿ, ಅರ್ಜುನ್, ಶರಣ್, ಸ್ಥಳೀಯ ಮುಖಂಡರಾದ ಸಿದ್ದಂಡ ಪವನ್, ಚಂಡಿರ ರಾಜ, ಚೆನ್ನಪಂಡ ನರೇನ್ ಸೋಮಯ್ಯ, ನಂದಿರ ಹರಿ, ಚೆನ್ನಪಂಡ ಗಿರೀಶ್, ಚೆನ್ನಪಂಡ ನಂದ, ಚೆನ್ನಪಂಡ ಗೋವಿಂದ, ತಂಬುಕುತ್ತಿರ ರಮೇಶ್, ವಿಜು, ಕುಂಞಣ್ಣ ಹಂಚೆಟ್ಟಿರ ಮನು ಮುದ್ದಪ್ಪ ಅರಣ್ಯ ಇಲಾಖೆ ಸಿಬ್ಬಂದಿ ಚೇತನ್, ಹನುಮಂತರಾಯಪ್ಪ ಇದ್ದರು.

ಸುತ್ತ ಮುತ್ತ

ಬಜಕೂಡ್ಲು ಕ್ಲಬ್ ವಠಾರದಲ್ಲಿ ಸಸಿ ನಟಿ

ಪೆರ್ಲ: ಬಜಕೂಡ್ಲು ಶ್ರೀ ಮಹಾಲಿಂಗೇಶ್ವರ ಆರ್ಟ್ಸ್ ಮತ್ತು ಸ್ಪೋರ್ಟ್ಸ್ ಕ್ಲಬ್‌ನ ಮಾಸಿಕ ಸಭೆಯು ಕ್ಲಬ್ ಕಚೇರಿಯಲ್ಲಿ ಜರಗಿತು. ಕ್ಲಬ್ ಅಧ್ಯಕ್ಷ ಚಂದ್ರ ಅಮೆಕ್ಕಳ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳಲ್ಲೂ ಅತ್ಯುನ್ನತ ಅಂಕ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಾದ ವಿಸ್ಮಿತಾ ಡಿ., ತನುಶ್ರೀ ಎಂ., ಮಾನ್ವಿತಾ ರೈ ಬಿ. ಹಾಗೂ ತ್ರಿಷಾ ಜಿ. ಅವರನ್ನು ಕ್ಲಬ್‌ನ ವತಿಯಿಂದ ಅಭಿನಂದಿಸಲಾಯಿತು. ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಜೂ.7ರಂದು ಬೆಳಗ್ಗೆ 9ಕ್ಕೆ ಕ್ಲಬ್ ವಠಾರದಲ್ಲಿ ಸಸಿ ನೆಡುವ ಕಾರ್ಯಕ್ರಮ ನಡೆಯಲಿದೆ. ಕ್ಲಬ್‌ನ ಕಟ್ಟಡವನ್ನು ವಿಸ್ತರಿಸಿ ನಿರ್ಮಾಣ ಕಾರ್ಯ ಕೈಗೊಳ್ಳುವ ಬಗ್ಗೆ ತೀರ್ಮಾನ ಕೈಗೊಳ್ಳಲಾಯಿತು. ಮುಂದಿನ ದಿನಗಳಲ್ಲಿ ಶ್ರೀಕಾಂತ್ ಬಜಕೂಡ್ಲು ಅವರ ಮಾರ್ಗದರ್ಶನದಲ್ಲಿ ಕ್ಲಬ್‌ನ ವತಿಯಿಂದ ಚೆಸ್ ಪಂದ್ಯಾಟವನ್ನು ಆಯೋಜಿಸಲು ನಿರ್ಧರಿಸಲಾಯಿತು. ಪ್ರವೀಣ್ ರೈ ಬಜಕೂಡ್ಲು ಸ್ವಾಗತಿಸಿ, ವಂದಿಸಿದರು.

ಡಿಸಿಸಿ ಮಾಜಿ ಅಧ್ಯಕ್ಷ ವೆಳ್ತಂಬು ಸಂಸ್ಮರಣೆ

ಉಪ್ಪಳ: ಕಾಸರಗೋಡು ಜಿಲ್ಲಾ ಕಾಂಗ್ರೆಸ್ ಸಮಿತಿಯ ಮಾಜಿ ಅಧ್ಯಕ್ಷ, ಹಿರಿಯ ಸಹಕಾರಿಯಾಗಿದ್ದ ವೆಳ್ತಂಬು ಅವರ ಸಂಸ್ಮರಣಾ ದಿನವನ್ನು ಪೈವಳಿಕೆ ಮಂಡಲ ಕಾಂಗ್ರೆಸ್ ಸಮಿತಿ ವತಿಯಿಂದ ಹಮ್ಮಿಕೊಳ್ಳಲಾಯಿತು. ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದ ಬಳಿಕ ಸಂಸ್ಮರಣಾ ಸಭೆಯನ್ನು ನಡೆಸಲಾಯಿತು. ಮಂಡಲ ಕಾಂಗ್ರೆಸ್ ಅಧ್ಯಕ್ಷ ವಸಂತ ಮಾಸ್ತರ್ ಅಧ್ಯಕ್ಷತೆ ವಹಿಸಿದ್ದರು. ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ ನಾರಾಯಣ ಏದಾರು ಉದ್ಘಾಟಿಸಿದರು. ಪೈವಳಿಕೆ ಗ್ರಾಮ ಪಂಚಾಯತ್ ಉಪಾಧ್ಯಕ್ಷ ಟಿ.ರಾಘವೇಂದ್ರ ಭಟ್, ಗಂಗಾಧರ ನಾಯ್ಕ್, ಎಡ್ವರ್ಡ್ ಡಿಸೋಜ ಮೊದಲಾದವರು ಉಪಸ್ಥಿತರಿದ್ದರು. ಚನಿಯಪ್ಪ ಮಾಸ್ತರ್ ಸ್ವಾಗತಿಸಿ, ಶಿವರಾಮ ಶೆಟ್ಟಿ ವಂದಿಸಿದರು.

ನಾಳೆ ಐಲ ಕ್ಷೇತ್ರದ ಸೇವಾ ಸಮಿತಿ ಮಹಾಸಭೆ

ಉಪ್ಪಳ: ಐಲ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಸೇವಾ ಸಮಿತಿಯ ಮಹಾಸಭೆಯು ಜೂ.14ರಂದು ಅಪರಾಹ್ನ 3ಗಂಟೆಗೆ ಶ್ರೀ ಕ್ಷೇತ್ರದಲ್ಲಿ ನಡೆಯಲಿದೆ. ಸಭೆಯಲ್ಲಿ ವರದಿ ಮಂಡನೆ, ವಾರ್ಷಿಕ ಲೆಕ್ಕಪತ್ರ ಮಂಡನೆ, ನೂತನ ಸಮಿತಿ ಆಯ್ಕೆ ಜರಗಲಿದೆ. ಭಕ್ತಾದಿಗಳು ಸಭೆಯಲ್ಲಿ ಭಾಗವಹಿಸಿ ಸೂಕ್ತ ಸಲಹೆ ಸೂಚನೆಗಳನ್ನು ನೀಡಬೇಕೆಂದು ಸಮಿತಿಯ ಪದಾಧಿಕಾರಿಗಳು ವಿನಂತಿಸಿದ್ದಾರೆ.

ಉಪನ್ಯಾಸಕರ ನೇಮಕಾತಿ

ಕಾಸರಗೋಡು: ತೃಕ್ಕರೀಪುರ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಕಂಪ್ಯೂಟರ್ ಇಂಜಿನಿಯರಿಂಗ್ ವಿಭಾಗದಲ್ಲಿ ಉಪನ್ಯಾಸಕರ ಹುದ್ದೆಗೆ ನೇಮಕಾತಿಗಾಗಿ ಸಂದರ್ಶನವು ಜೂ.15 ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿದೆ. ಕಂಪ್ಯೂಟರ್ ಇಂಜಿನಿಯರಿಂಗ್‌ನಲ್ಲಿ ಬಿ.ಟೆಕ್ ಪ್ರಥಮ ದರ್ಜೆ ವಿದ್ಯಾರ್ಹತೆಯಾಗಿದೆ. ಆಸಕ್ತರು ಕಾಲೇಜು ಕಚೇರಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ವಿವರಗಳಿಗೆ 0467 2211400, 9496690222 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಭದ್ರತಾ ಸಿಬ್ಬಂದಿ ನೇಮಕಾತಿ

ಕಾಸರಗೋಡು: ಚಟ್ಟಂಚಾಲ್ ಎಫ್‌ಎಚ್‌ಸಿ ಆಸ್ಪತ್ರೆಯಲ್ಲಿ ಸೆಕ್ಯುರಿಟಿ ಗಾರ್ಡ್ ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. 50 ವರ್ಷ ಮೀರದ ನಿವೃತ್ತ ಸೈನಿಕರು ಅರ್ಜಿ ಸಲ್ಲಿಸಬಹುದು. ಆಸಕ್ತ ಅಭ್ಯರ್ಥಿಗಳು ಕಾಸರಗೋಡು ಸೈನಿಕ ಕಲ್ಯಾಣ ಕಚೇರಿಯಲ್ಲಿ ನೋಂದಾಯಿಸಲಾದ ಕಾರ್ಡ್‌ನ ಪ್ರತಿ ಮತ್ತು ನಿವೃತ್ತ ಸೈನಿಕರ ಗುರುತಿನ ಚೀಟಿಯ ಪ್ರತಿಯೊಂದಿಗೆ ಜೂ.17ರಂದು ಕಾಸರಗೋಡು ಜಿಲ್ಲಾ ಸೈನಿಕ ಕಲ್ಯಾಣ ಕಚೇರಿಯಲ್ಲಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ 04994 256860 ಕರೆ ಮಾಡಬಹುದು.

ಉಪನ್ಯಾಸಕರ ಸಂದರ್ಶನ

ಕಾಸರಗೋಡು: ಪೆರಿಯದಲ್ಲಿರುವ ಕಾಸರಗೋಡು ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಉಪನ್ಯಾಸಕರ ನೇಮಕಾತಿಗಾಗಿ ಸಂದರ್ಶನವು ಜೂ.17ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿದೆ. ಸಂಬಂಧಿತ ವಿಷಯದಲ್ಲಿ ಕನಿಷ್ಠ ಶೇಕಡಾ 60 ಅಂಕಗಳೊಂದಿಗೆ ಇಂಜಿನಿಯರಿಂಗ್ ಪದವಿ ವಿದ್ಯಾರ್ಹತೆಯಾಗಿದೆ. ಹೆಚ್ಚಿನ ವಿವರಗಳಿಗೆ 0467 2234020 ಸಂಪರ್ಕಿಸಬಹುದು.

ಕಾಸರಗೋಡಿನಲ್ಲಿ ವಿಶ್ವ ರಕ್ತದಾನಿಗಳ ದಿನಾಚರಣೆಯ ಜಿಲ್ಲಾ ಮಟ್ಟದ ಉದ್ಘಾಟನೆ | ರಕ್ತದಾನಿಗಳಿಗೆ ಗೌರವ

ಅತಿ ಹೆಚ್ಚು ಬಾರಿ ರಕ್ತದಾನ ಮಾಡಿದ 16 ದಾನಿಗಳಿಗೆ ಸನ್ಮಾನ

ಕಾಸರಗೋಡು: ವಿಶ್ವ ರಕ್ತದಾನಿಗಳ ದಿನಾಚರಣೆಯ ಅಂಗವಾಗಿ ಕಾಸರಗೋಡು ಜಿಲ್ಲಾ ಮಟ್ಟದ ಉದ್ಘಾಟನೆ ಮತ್ತು ಸ್ವಯಂ ರಕ್ತದಾನ ಕಾರ್ಯಕ್ರಮವನ್ನು ಶುಕ್ರವಾರ ಆಯೋಜಿಸಲಾಗಿತ್ತು. ಕಾಸರಗೋಡು ಜಿಲ್ಲಾ ವೈದ್ಯಕೀಯ ಕಚೇರಿ (ಆರೋಗ್ಯ), ರಾಷ್ಟ್ರೀಯ ಆರೋಗ್ಯ ಮಿಷನ್, ಕಾಞಂಗಾಡಿನ ಜಿಲ್ಲಾಸ್ಪತ್ರೆ ರಕ್ತ ಕೇಂದ್ರ ಮತ್ತು ಕೇರಳ ರಾಜ್ಯ ಏಡ್ಸ್ ನಿಯಂತ್ರಣ ಸೊಸೈಟಿ ಇವುಗಳು ಜಂಟಿಯಾಗಿ ಜಿಲ್ಲಾಸ್ಪತ್ರೆಯ ಟೆಲಿಮೆಡಿಸಿನ್ ಸಭಾಂಗಣದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.



ಸಮಾರಂಭವನ್ನು ಜಿಲ್ಲಾ ಪಂಚಾಯತ್ ಅಧ್ಯಕ್ಷ ಸಾಬು ಅಬ್ರಹಾಂ ಉದ್ಘಾಟಿಸಿ, ರಕ್ತದಾನವು ಮಹಾದಾನಗಳಲ್ಲಿ ಒಂದಾಗಿದೆ. ಅಲ್ಲದೆ ಸ್ವಯಂಪ್ರೇರಿತವಾಗಿ ರಕ್ತದಾನ ನಡೆಸುವುದರಿಂದ ಇತರರಿಗೆ ಪ್ರೇರಣೆಯಾಗುತ್ತದೆ ಎಂದರು. ರಕ್ತದಾನವು ಮಾದರಿ ಮತ್ತು ಉತ್ತಮ ಕಾರ್ಯವಾಗಿದ್ದು, ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಭಾಗಿಗಳಾಗುವಂತೆ ಅವರು ಕರೆ ನೀಡಿದರು.

ಕಾಞಂಗಾಡು ನಗರಸಭಾ ಅಧ್ಯಕ್ಷ ವಿ.ವಿ.ರಮೇಶನ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ವೈದ್ಯಾಧಿಕಾರಿ (ಆರೋಗ್ಯ) ಡಾ.ಸಂತೋಷ್ ಬಿ. ಸಮಾರಂಭದಲ್ಲಿ ಮುಖ್ಯ ಭಾಷಣ ಮಾಡಿದರು. ಜಿಲ್ಲಾ ಕ್ಷಯರೋಗ ಅಧಿಕಾರಿ ಡಾ.ಆರತಿ ರಂಜಿತ್ ಅವರು ರಕ್ತದಾನಿಗಳ ದಿನದ ಸಂದೇಶ ನೀಡಿದರು.

ಕಾಞಂಗಾಡ್ ನಗರಸಭೆಯ ಆರೋಗ್ಯ ಸ್ಥಾಯೀ ಸಮಿತಿ ಅಧ್ಯಕ್ಷ ಮುಹಮ್ಮದ್ ಮುರಿಯನಾವಿ, ವಾರ್ಡ್ ಕೌನ್ಸಿಲರ್ ಎಂ.ಎ.ರೇಷ್ಮಾ, ಜಿಲ್ಲಾ ಆಸ್ಪತ್ರೆ ರಕ್ತ ಕೇಂದ್ರದ ವೈದ್ಯಾಧಿಕಾರಿಗಳಾದ ಡಾ.ರಿಜಿತ್ ಕೃಷ್ಣನ್, ಡಾ.ಬಿ.ಶಹರ್ಬಾನಾ, ಜಿಲ್ಲಾ ಆಸ್ಪತ್ರೆ ನರ್ಸಿಂಗ್ ಅಧೀಕ್ಷಕಿ ಸಿ. ಲಲಿತಾಂಬಿಕಾ, ಉಪ ಜಿಲ್ಲಾ ಶಿಕ್ಷಣ ಮಾಧ್ಯಮ ಅಧಿಕಾರಿ ಪಿ.ಪಿ.ಹಸೀಬ್ ಮುಂತಾದವರು ಮಾತನಾಡಿದರು. ಕಾಞಂಗಾಡಿನ ಜಿಲ್ಲಾ ಆಸ್ಪತ್ರೆಯ ಅಧೀಕ್ಷಕಿ ಡಾ.ಜೀಜಾ ಎಂ.ಪಿ. ಸ್ವಾಗತಿಸಿ, ಜಿಲ್ಲಾ ಶಿಕ್ಷಣ ಮಾಧ್ಯಮ ಅಧಿಕಾರಿ ಅಬ್ದುಲ್ ಲತೀಫ್ ಮಡತ್ತಿಲ್ ವಂದಿಸಿದರು. ನಂತರ ಏರ್ಪಡಿಸಲಾಗಿದ್ದ ಜಾಗೃತಿ ವಿಚಾರ ಸಂಕಿರಣದಲ್ಲಿ ಜಿಲ್ಲಾ ಆಸ್ಪತ್ರೆ ರಕ್ತ ಕೇಂದ್ರದ ವೈದ್ಯಾಧಿಕಾರಿ ಡಾ.ಅಂಗಿತಾ ಶಿಬು ರಾಬರ್ಟ್ ತರಗತಿ ನಡೆಸಿಕೊಟ್ಟರು. ಜಿಲ್ಲಾ ಆಸ್ಪತ್ರೆ ರಕ್ತ ಕೇಂದ್ರದಲ್ಲಿ ಅತೀ ಹೆಚ್ಚು ರಕ್ತದಾನ ಮಾಡಿದ 16 ಮಂದಿಯನ್ನು ಸಮಾರಂಭದಲ್ಲಿ ಗೌರವಿಸಿ ಸನ್ಮಾನಿಸಲಾಯಿತು. ಅವರಲ್ಲಿ ಆನಂದಾಶ್ರಮ ಒಂದಂಕುಳಂ ನಿವಾಸಿ ವಿ.ವಿಷ್ಣು ಪ್ರಸಾದ್ 36 ಬಾರಿ ರಕ್ತದಾನ ಮಾಡಿದ್ದಾರೆ. ಕೊಡಕ್ಕಾಡ್ ವೆಲ್ಲಾಚಲ್ ನಿವಾಸಿ ಎ.ಜಯಶ್ರೀ 21 ಬಾರಿ ರಕ್ತದಾನ ಮಾಡಿದ್ದಾರೆ. ರಕ್ತದಾನ ದಿನದ ಅಂಗವಾಗಿ ರಕ್ತ ಕೇಂದ್ರದ ನೇತೃತ್ವದಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು.

ರಕ್ತದಾನದ ಬಗ್ಗೆ ಅಜ್ಞಾನ, ಅನಗತ್ಯ ಭಯ ಬಿಟ್ಟುಬಿಡಿ

ರಕ್ತ ಗುಂಪುಗಳನ್ನು ಮೊದಲು ಗುರುತಿಸಿದ ವಿಜ್ಞಾನಿ ಕಾರ್ಲ್ ಲ್ಯಾಂಡ್‌ಸ್ಟೈನರ್ ಅವರ ಜನ್ಮದಿನದಂದು ರಕ್ತದಾನಿಗಳ ದಿನ ಹಮ್ಮಿಕೊಳ್ಳಲಾಗುತ್ತದೆ. ವಿಶ್ವ ರಕ್ತದಾನಿಗಳ ದಿನವನ್ನು 2005ರಲ್ಲಿ ಪ್ರಾರಂಭಿಸಲಾಯಿತು. 18 ರಿಂದ 65 ವರ್ಷ ವಯಸ್ಸಿನ ಯಾವುದೇ ಆರೋಗ್ಯವಂತ ವ್ಯಕ್ತಿ ರಕ್ತದಾನ ಮಾಡಬಹುದು ಎಂದು ಎಂದು ಜಿಲ್ಲಾ ವೈದ್ಯಾಧಿಕಾರಿ (ಆರೋಗ್ಯ) ಡಾ.ಸಂತೋಷ್ ಬಿ. ತಿಳಿಸಿದರು. ಹೆಚ್ಚಿನ ಜನರು ರಕ್ತದಾನ ನಡೆಸುವ ನಿಟ್ಟಿನಲ್ಲಿ ಪ್ರೋತ್ಸಾಹಿಸಲು ಮತ್ತು ಪ್ರಪಂಚದಾದ್ಯಂತ ರಕ್ತದಾನಿಗಳಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸಲು ಈ ದಿನವನ್ನು ಆಚರಿಸಲಾಗುತ್ತದೆ. ರಕ್ತದಾನದ ಬಗ್ಗೆ ಅಜ್ಞಾನ ಮತ್ತು ಅನಗತ್ಯ ಭಯಗಳನ್ನು ಬದಿಗಿಟ್ಟು ಇತರರಿಗೆ ಜೀವಿಸುವ ಹಿನ್ನೆಲೆಯಲ್ಲಿ ಅವಕಾಶ ಮಾಡಿಕೊಡಲು ಪ್ರತಿಯೊಬ್ಬರೂ ಸಹಕರಿಸಬೇಕು ಎಂದು ಈ ದಿನವು ನೆನಪಿಸುತ್ತದೆ. ಅವರ ದೇಹದ ತೂಕ 45ರಿಂದ 50 ಕಿಲೋಗಳಿಗಿಂತ ಕಡಿಮೆಯಿರಬಾರದು ಮತ್ತು ಅವರ ದೇಹದ ಉಷ್ಣತೆಯು ಸಾಮಾನ್ಯವಾಗಿರಬೇಕು. ರಕ್ತದಲ್ಲಿನ ಹಿಮೋಗ್ಲೋಬಿನ್ ಮಟ್ಟವು ಪ್ರತಿ ಡೆಸಿಲೀಟರ್‌ಗೆ 12.5 ಗ್ರಾಂಗಿಂತ ಕಡಿಮೆಯಿರಬಾರದು ಎಂದು ತಿಳಿಸಿದ್ದಾರೆ.

ಕಾಸರಗೋಡಿನಲ್ಲಿ ಆಹಾರ ಸುರಕ್ಷತಾ ದಿನಾಚರಣೆ, ಸೈಕ್ಲೋಥಾನ್‌ಗೆ ಚಾಲನೆ



ಕಾಸರಗೋಡು: ವಿಶ್ವ ಆರೋಗ್ಯ ಸಂಸ್ಥೆಯ ಆಶ್ರಯದಲ್ಲಿ ಸಮಸ್ಯೆಗಳಿಂದ ಪರಿಹಾರಗಳ ವರೆಗೆ ಎಂಬ ಧ್ಯೇಯವಾಕ್ಯದಡಿ ಆಯೋಜಿಸಲಾಗುತ್ತಿರುವ ವಿಶ್ವ ಆಹಾರ ಸುರಕ್ಷತಾ ದಿನವನ್ನು ಕಾಸರಗೋಡು ಜಿಲ್ಲಾ ಆಹಾರ ಸುರಕ್ಷತಾ ಇಲಾಖೆಯ ನೇತೃತ್ವದಲ್ಲಿ ಆಚರಿಸಲಾಯಿತು.

ಕಾಸರಗೋಡು ಪೆಡಲರ್ಸ್ ಕ್ಲಬ್ ಸಹಯೋಗದೊಂದಿಗೆ ಕಾಞಂಗಾಡಿನಲ್ಲಿ ನಡೆದ ಸೈಕ್ಲೋಥಾನ್‌ಗೆ ಕಾಞಂಗಾಡು ಕಂದಾಯ ವಿಭಾಗೀಯ ಅಧಿಕಾರಿ ಕೆ.ಆರ್.ಮನೋಜ್ ಚಾಲನೆ ನೀಡಿದರು. ಕಾಸರಗೋಡು ಕಲೆಕ್ಟರೇಟ್‌ನ ಮಿನಿ ಸಮ್ಮೇಳನ ಸಭಾಂಗಣದಲ್ಲಿ ವಿದ್ಯಾರ್ಥಿಗಳಿಗಾಗಿ ರಸಪ್ರಶ್ನೆ ಮತ್ತು ಚಿತ್ರಕಲಾ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

ಜಿಲ್ಲಾ ಯೋಜನಾ ಕಚೇರಿ ಸಭಾಂಗಣದಲ್ಲಿ ನಡೆದ ಶಿಗೆಲ್ಲೋಸಿಸ್ ಡಿಬೇಕಲ್ ಎಂಬ ವಿಷಯದ ಕುರಿತು ಹಮ್ಮಿಕೊಳ್ಳಲಾಗಿದ್ದ ಚರ್ಚೆ ಮತ್ತು ವಿಚಾರ ಸಂಕಿರಣವನ್ನು ಕಾಸರಗೋಡು ಜಿಲ್ಲಾ ಆಹಾರ ಸುರಕ್ಷತಾ ಸಹಾಯಕ ಆಯುಕ್ತ ಸಂಗೀತ್ ಎಸ್. ನಿರ್ವಹಿಸಿದರು. ಉಪ ಡಿಎಂಒ ಡಾ.ಅಜಯ್ ರಾಜನ್, ಸಿಟಿಸಿಆರ್‌ಐ ವಿಜ್ಞಾನಿ ಡಾ.ಹಿಮಾ ಜೋನ್, ನಿವೃತ್ತ ಆಹಾರ ಸುರಕ್ಷತಾ ಉಪ ಆಯುಕ್ತ ಪ್ರದೀಪ್ ಕುಮಾರ್ ವಿ.ಕೆ., ಕೇರಳ ಹೋಟೆಲ್ ಮತ್ತು ರೆಸ್ಟೋರೆಂಟ್ ಅಸೋಸಿಯೇಷನ್‌ನ ಕಾಸರಗೋಡು ಜಿಲ್ಲಾ ಕಾರ್ಯದರ್ಶಿ ಬಿಜು ಚುಳ್ಳಿಕ್ಕರ ಮತ್ತು ಬೇಕರ್ಸ್ ಅಸೋಸಿಯೇಷನ್‌ನ ಕಾಸರಗೋಡು ಜಿಲ್ಲಾ ಕಾರ್ಯದರ್ಶಿ ಅಜಿತ್ ಭಾಗವಹಿಸಿದ್ದರು. ರೂಕೋ ಯೋಜನೆಯ ಕುರಿತಾದ ವಿಚಾರ ಸಂಕಿರಣವನ್ನು ನೋಡಲ್ ಆಹಾರ ಸುರಕ್ಷತಾ ಅಧಿಕಾರಿ ಡಾ.ಆದಿತ್ಯನ್ ಪಿ.ಬಿ. ನಡೆಸಿಕೊಟ್ಟರು.

ನಗರ ಅರಣ್ಯ ಸಾರ್ವಜನಿಕರಿಗೆ ಮೂರು ತಿಂಗಳೊಳಗೆ ಮುಕ್ತ: ಡಿಸಿ



ಕಾಸರಗೋಡು: ಕಾಸರಗೋಡು ನಗರದಲ್ಲಿ ಪ್ರಕೃತಿ ಸ್ನೇಹಿ ಪ್ರವಾಸೋದ್ಯಮ ಅಭಿವೃದ್ಧಿಗೆ ಕೊಡುಗೆ ನೀಡುವ ಸಾಮಾಜಿಕ ಅರಣ್ಯ ಇಲಾಖೆಯ ನಗರ ಅರಣ್ಯವನ್ನು ಮೂರು ತಿಂಗಳೊಳಗೆ ಸಾರ್ವಜನಿಕರಿಗೆ ಮುಕ್ತಗೊಳಿಸಲಾಗುವುದು ಎಂದು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಹೇಳಿದ್ದಾರೆ.

ಕಾಸರಗೋಡು ನಗರ ಅರಣ್ಯ ಸೌಂದರ್ಯೀಕರಣ ಯೋಜನಾ ಪ್ರದೇಶಕ್ಕೆ ಶುಕ್ರವಾರ ಭೇಟಿ ನೀಡಿ ಪ್ರಗತಿ ಪರಿಶೀಲಿಸಿದ ಬಳಿಕ ಅವರು ಮಾತನಾಡಿದರು.

ನಗರದ ಪಳ್ಳಂ ಕಸಬಾ ಸೇತುವೆ ಬಳಿ 21 ಹೆಕ್ಟೇರ್ ಪ್ರದೇಶದಲ್ಲಿರುವ ಮ್ಯಾಂಗ್ರೋವ್ ಅರಣ್ಯ ನಗರ ಅರಣ್ಯವಾಗಿ ಅಭಿವೃದ್ಧಿಪಡಿಸಲಾಗಿದೆ. ನಗರ ಅರಣ್ಯವನ್ನು ಆದಷ್ಟು ಬೇಗ ಪೂರ್ತಿಗೊಳಿಸಿ ಪ್ರವಾಸಿ ತಾಣವನ್ನಾಗಿ ಮಾಡಬಹುದು ಎಂದು ವಲಯ ಅರಣ್ಯ ಅಧಿಕಾರಿ ಸಿ.ವಿ.ವಿನೋದ್ ಕುಮಾರ್ ಹೇಳಿದರು.

ನಗರಸಭೆ ಅಧ್ಯಕ್ಷೆ ಶಾಹಿನಾ ಸಲೀಂ, ಉಪಾಧ್ಯಕ್ಷ ಕೆ.ಎಂ.ಹನೀಫ್, ಆರೋಗ್ಯ ಸ್ಥಾಯೀ ಸಮಿತಿ ಅಧ್ಯಕ್ಷೆ ಮೆಹರುನ್ನೀಸಾ ಹಮೀದ್, ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷೆ ಸಮೀನಾ ಮುಜೀಬ್, ಲೋಕೋಪಯೋಗಿ ಸ್ಥಾಯೀ ಸಮಿತಿ ಅಧ್ಯಕ್ಷ ಜಾಫರ್ ಕಮಾಲ್, ಕ್ಷೇಮಕಾರ್ಯ ಸ್ಥಾಯೀ ಸಮಿತಿ ಅಧ್ಯಕ್ಷ ಹಮೀದ್ ಬಾದ್ರ, ನಗರಸಭೆ ಕಾರ್ಯದರ್ಶಿ ಕೆ.ಶಾಜು, ಕಡಪ್ಪುರ ದಕ್ಷಿಣ ವಾರ್ಡ್ ಸದಸ್ಯೆ ರಂಜಿಶಾ, ತಾಲೂಕು ವಿಶೇಷ ಅಧಿಕಾರಿ ಉಮ್ಮರ್ ಫಾರೂಕ್, ಕಿರು ನೀರಾವರಿ ಇಲಾಖೆ ಕಾರ್ಯಪಾಲಕ ಇಂಜಿನಿಯರ್ ಇ.ಕೆ. ಅರ್ಜುನನ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳಾದ ಎ.ಅನೂಪ್, ನಿವ್ಯಾ, ಶುಚಿತ್ವ ಮಿಷನ್ ಸಂಯೋಜಕ ಪಿ.ಜಯನ್ ಮತ್ತಿತರರು ಇದ್ದರು.

ಸರ್ಕಾರಿ ನೌಕರರಿಗೆ ಭಾರತ ಜನಗಣತಿ 2027ರ ರಸಪ್ರಶ್ನೆ ಸ್ಪರ್ಧೆ




ಕಾಸರಗೋಡು: ಭಾರತ ಜನಗಣತಿ 2027ರ ಭಾಗವಾಗಿ ಜಿಲ್ಲಾಡಳಿತ ಮತ್ತು ಜಿಲ್ಲಾ ಮಾಹಿತಿ ಕಚೇರಿ ಆಶ್ರಯದಲ್ಲಿ ಕಾಸರಗೋಡು ಜಿಲ್ಲೆಯ ಸರಕಾರಿ ನೌಕರರಿಗಾಗಿ ಶುಕ್ರವಾರ ರಸಪ್ರಶ್ನೆ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

ವಿದ್ಯಾನಗರ ಸಿವಿಲ್ ಸ್ಟೇಷನ್‌ನ ಕಲೆಕ್ಟರೇಟ್ ಮಿನಿ ಸಮ್ಮೇಳನ ಸಭಾಂಗಣದಲ್ಲಿ ನಡೆದ ಈ ಸ್ಪರ್ಧೆಯನ್ನು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಉದ್ಘಾಟಿಸಿದರು.

ಜಿಲ್ಲೆಯ ವಿವಿಧ ಕಚೇರಿಗಳ ನೌಕರರು ಭಾಗವಹಿಸಿದ್ದ ಸ್ಪರ್ಧೆಯಲ್ಲಿ ಕಾಸರಗೋಡು ಆರ್‌ಡಿಒ ಕಚೇರಿಯ ಗುಮಾಸ್ತೆ ಟಿ.ವಿ. ವೃಂದಾ ಪ್ರಥಮ ಸ್ಥಾನ ಮತ್ತು ಕಲೆಕ್ಟರೇಟ್ ಕಂದಾಯ ಇಲಾಖೆ ಕಚೇರಿ ಪರಿಚಾರಕಿ ಟಿ.ವಿ.ಬೀನಾ ಎರಡನೇ ಸ್ಥಾನ ಪಡೆದರು. ಜನಗಣತಿ ಜಿಲ್ಲಾ ಮಟ್ಟದ ಮಾಸ್ಟರ್ ತರಬೇತುದಾರರಾದ ರಾಜ್‌ಕುಮಾರ್ ಮತ್ತು ಡಾ.ಪಿ.ಎ.ಜಿಶಾ ರಸಪ್ರಶ್ನೆ ಸ್ಪರ್ಧೆಯನ್ನು ಮುನ್ನಡೆಸಿದರು.

ಸ್ಪರ್ಧಾ ವಿಜೇತರಿಗೆ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಬಹುಮಾನಗಳನ್ನು ವಿತರಿಸಿದರು. ಎಡಿಎಂ ಕೆ.ವಿ. ಶ್ರುತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಮಾಹಿತಿ ಅಧಿಕಾರಿ ಎಂ. ಮಧುಸೂದನನ್, ಸಹಾಯಕ ಸಂಪಾದಕಿ ಎ.ಪಿ.ದಿಲ್ನಾ, ಸಹಾಯಕ ಮಾಹಿತಿ ಅಧಿಕಾರಿ ಎಸ್. ಚಿಲಂಕಾ, ಕಲೆಕ್ಟರೇಟ್‌ನ ಜನಗಣತಿಯ ಉಸ್ತುವಾರಿ ಅಧಿಕಾರಿಗಳು ಮತ್ತು ವಿವಿಧ ಇಲಾಖೆಗಳ ನೌಕರರು ಪಾಲ್ಗೊಂಡಿದ್ದರು.

ಕೆಸರಿನಿಂದ ತುಂಬಿದೆ ಹೊಸಂಗಡಿ ರೈಲ್ವೆಗೇಟ್ ಬಸ್ ತಂಗುದಾಣ ಪರಿಸರ



ಮಂಜೇಶ್ವರ: ಹೊಸಂಗಡಿ ಪೇಟೆಯ ರಾಷ್ಟ್ರೀಯ ಹೆದ್ದಾರಿಯ ಸರ್ವೀಸ್ ರಸ್ತೆ ಸಮೀಪದ ರೈಲ್ವೆ ಗೇಟ್ ಬಳಿಯ ಬಸ್ ತಂಗುದಾಣ ಹಾಗೂ ಆಟೋರಿಕ್ಷಾ ನಿಲ್ದಾಣವು ಕೆಸರಿನಿಂದ ಶೋಚನೀಯಾವಸ್ಥೆಗೆ ತಲುಪಿದೆ. ಈ ಹಿನ್ನೆಲೆಯಲ್ಲಿ ಪ್ರಯಾಣಿಕರು ಸೇರಿದಂತೆ ಸಾರ್ವಜನಿಕರು ಅಪಾರ ಸಮಸ್ಯೆ ಎದುರಿಸುತ್ತಿದ್ದಾರೆ. ಈ ಭಾಗದಲ್ಲಿ ದಿನನಿತ್ಯ ಅಪಾರ ಸಂಖ್ಯೆಯ ಪ್ರಯಾಣಿಕರು ಬಂದು ಹೋಗುತ್ತಿದ್ದು, ಅವರೆಲ್ಲರೂ ಸಂಕಷ್ಟಮಯ ಸ್ಥಿತಿ ಅನುಭವಿಸುವಂತಾಗಿದೆ.

ಈ ಪರಿಸರವನ್ನು ಬೇಸಿಗೆಯಲ್ಲಿ ಮಂಜೇಶ್ವರ ಗ್ರಾಮ ಪಂಚಾಯತ್ ನೇತೃತ್ವದಲ್ಲಿ ಮಣ್ಣು ಹಾಕಿ ಸಮತಟ್ಟುಗೊಳಿಸಲಾಗಿತ್ತು. ಇದರಿಂದಾಗಿ ಆಟೋರಿಕ್ಷಾ ನಿಲ್ದಾಣ ಹಾಗೂ ಪರಿಸರದ ಗೂಡಂಗಡಿ ವ್ಯಾಪಾರಸ್ಥರಿಗೆ ನೆಮ್ಮದಿಯನ್ನುಂಟು ಮಾಡಿತ್ತು. ಆದರೆ ಇದೀಗ ಮಳೆಗೆ ಈ ಪರಿಸರವು ಪೂರ್ತಿ ಕೆಸರಿನಿಂದ ಆವೃತಗೊಂಡು ಜನರಿಗೆ ನಡೆದಾಡಲು ಕೂಡಾ ಸಾಧ್ಯವಿಲ್ಲದ ಪರಿಸ್ಥಿತಿ ತಲೆದೋರಿದೆ.


ಮಾತ್ರವಲ್ಲದೆ ಜನರು ನಡೆದಾಡುವ ವೇಳೆ ಚಪ್ಪಲಿ ಹೂತು ಹೋಗುವುದು, ಜಾರಿ ಬೀಳುವುದು, ಬಟ್ಟೆಯಲ್ಲಿ ಕೊಳೆ ಉಂಟಾಗುತ್ತಿರುವ ಘಟನೆಗಳು ಸಾಮಾನ್ಯವಾಗಿವೆ ಸ್ಥಳೀಯರು ತಿಳಿಸಿದ್ದಾರೆ. ಹೊಸಂಗಡಿ ರೈಲ್ವೆ ಗೇಟ್ ಒಳ ಪ್ರವೇಶಿಸಿ ಬಸ್‌ಗಾಗಿ ಕಾಯುವವರು ಕೆಸರಿನಲ್ಲಿ ನಿಲ್ಲುವಂತಹ ದುರವಸ್ಥೆ ಉಂಟಾಗಿದೆ.

ಸಮಸ್ಯೆಗೆ ಮುಕ್ತಿ ನೀಡಲು ಆಗ್ರಹ

ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿ ಪ್ರಸ್ತುತ ಪರಿಸರದಲ್ಲಿ ಜಲ್ಲಿ ಹುಡಿಯಾದರೂ ಹಾಕಿ ಕೆಸರಿನಿಂದ ತಲೆದೋರಿದ ಶೋಚನೀಯಾವಸ್ಥೆಗೆ ಮುಕ್ತಿ ನೀಡಬೇಕೆಂದು ಸಾರ್ವಜನಿಕ ವಲಯ ಒತ್ತಾಯಿಸಿದೆ.

ವಿದ್ಯುತ್ ಸಮಸ್ಯೆ ಪರಿಹರಿಸಲು ಕ್ಷೇತ್ರ ಸಮಿತಿ ಸಕ್ರಿಯ: ಸಚಿವ ಸನ್ನಿ ಜೋಸೆಫ್

ಕಾಸರಗೋಡು: ಮಳೆಗಾಲದಲ್ಲಿ ವಿದ್ಯುತ್ ಕಡಿತ, ವೋಲ್ಟೇಜ್ ಕೊರತೆ ಮತ್ತು ಇನ್ನಿತರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಜನರ ದೂರುಗಳನ್ನು ತ್ವರಿತವಾಗಿ ಪರಿಹರಿಸಲು ಶಾಸಕರ ನೇತೃತ್ವದ ಕ್ಷೇತ್ರ ಮಟ್ಟದ ಸಮಿತಿಗಳನ್ನು ಸಕ್ರಿಯಗೊಳಿಸಬೇಕೆಂದು ಕೇರಳ ವಿದ್ಯುತ್ ಖಾತೆ ಸಚಿವ, ವಕೀಲ ಸನ್ನಿ ಜೋಸೆಫ್ ಹೇಳಿದ್ದಾರೆ.



ಕಾಸರಗೋಡು, ಕಣ್ಣೂರು ಮತ್ತು ವಯನಾಡು ಜಿಲ್ಲೆಗಳನ್ನು ಒಳಗೊಂಡಿರುವ ಉತ್ತರ ಮಲಬಾರ್ ಪ್ರದೇಶದಲ್ಲಿ ಕೆಎಸ್‌ಇಬಿಯ ಚಟುವಟಿಕೆ ಪರಿಶೀಲಿಸಲು ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ ಸಭೆಯಲ್ಲಿ ಅವರು ಮಾತನಾಡಿದರು.

ಜನರು ದೂರವಾಣಿ ಮೂಲಕ ತಿಳಿಸುವ ದೂರುಗಳನ್ನು ಪರಿಹರಿಸುವಲ್ಲಿ ಅಧಿಕಾರಿಗಳು ಹೆಚ್ಚು ಜಾಗರೂಕರಾಗಿರಬೇಕು. ಹಗಲಿನಲ್ಲಿ ಬ್ಯಾಟರಿಗಳಲ್ಲಿ ಸೌರಶಕ್ತಿ ಸಂಗ್ರಹಿಸಿ ರಾತ್ರಿಯ ಪೀಕ್ ಅವರ್‌ನಲ್ಲಿ ವಿತರಿಸುವ ಬ್ಯಾಟರಿ ಎನರ್ಜಿ ಸ್ಟೋರೇಜ್ ಸಿಸ್ಟಮ್ (ಬಿಇಎಸ್) ಯೋಜನೆಯಡಿ ಮುಂದಿನ ಮಾರ್ಚ್ ಮೊದಲು ಮೂರು ಯೋಜನೆಗಳನ್ನು ಕಾರ್ಯಾರಂಭ ಮಾಡಲಾಗುವುದು ಎಂದರು.

ಕೇರಳದ ಮೊದಲ ಬಿಇಎಸ್ ಯೋಜನೆ ಡಿಸೆಂಬರ್‌ನಲ್ಲಿ ಕಾಸರಗೋಡಿನ ಮೈಲಾಟ್ಟಿಯಲ್ಲಿ ಕಾರ್ಯಾರಂಭಗೊಳ್ಳಲಿದೆ. ಈ ಯೋಜನೆ ಮೂಲಕ ನಾಲ್ಕು ಗಂಟೆಗಳ ರಾತ್ರಿ ವಿದ್ಯುತ್ ಪೂರೈಕೆಗಾಗಿ 125 ಮೆಗಾವ್ಯಾಟ್ ಉತ್ಪಾದಿಸಲಾಗುವುದು. ಕಣ್ಣೂರಿನ ಶ್ರೀಕಂಠಪುರಂ ಯೋಜನೆಯು 160 ಮೆಗಾವ್ಯಾಟ್ ಮತ್ತು ಕಾಸರಗೋಡಿನ ಮುಳ್ಳೇರಿಯ ಯೋಜನೆಯು 60 ಮೆಗಾವ್ಯಾಟ್ ವಿದ್ಯುತ್ ಸಾಮರ್ಥ್ಯವನ್ನು ಹೊಂದಿದೆ. ಸರಕಾರವು ಭೂಮಿಯನ್ನು ಮಾತ್ರ ಒದಗಿಸುವ ಯೋಜನೆ ಇದಾಗಿದ್ದು, ಖಾಸಗಿ ಕಂಪೆನಿಯೊಂದು ಸೌರಶಕ್ತಿ ಸಂಗ್ರಹಿಸಿ ರಾತ್ರಿ ನಾಲ್ಕು ಗಂಟೆಗಳ ಕಾಲ ವಿತರಿಸುವ ಜವಾಬ್ದಾರಿ ಹೊಂದಿದೆ. ಇದರಿಂದಾಗಿ ಸರಕಾರಕ್ಕೆ ಪ್ರತಿ ಯೂನಿಟ್‌ಗೆ ಕೇವಲ 7 ರೂ. ಮಾತ್ರ ಖರ್ಚಾಗುತ್ತದೆ. ಇದೇ ವೇಳೆ ಕಾಸರಗೋಡಿನಲ್ಲಿ ಕಡಿಮೆ ಸಬ್‌ಸ್ಟೇಷನ್‌ಗಳಿವೆ. ಬೋವಿಕ್ಕಾನದಲ್ಲಿ ವಿದ್ಯುತ್ ಸೆಕ್ಷನ್ ಕಚೇರಿಯನ್ನು ಸ್ಥಾಪಿಸಬೇಕೆಂದು ಉದುಮ ಶಾಸಕ ಕೆ.ನೀಲಕಂಠನ್ ಸಭೆಯಲ್ಲಿ ಒತ್ತಾಯಿಸಿದರು.

ಶಾಸಕರಾದ ಕೆ.ವಿ. ಸುಮೇಶ್, ವಿ. ಕುಂಞಿಕೃಷ್ಣನ್, ವಯನಾಡು ಜಿ.ಪಂ. ಅಧ್ಯಕ್ಷೆ ಚಂದ್ರಿಕಾ ಕೃಷ್ಣನ್, ಕೆಎಸ್‌ಇಬಿ ಉತ್ತರ ಮಲಬಾರ್ ವಲಯದ ಮುಖ್ಯ ಇಂಜಿನಿಯರ್ ಟಿ.ಎಸ್.ಜಯಶ್ರೀ ಇದ್ದರು.

ಶ್ರೀ ಅನಂತಪುರ ಕ್ಷೇತ್ರ ರಕ್ಷಾ ಸಮಿತಿ ವತಿಯಿಂದ ಎಡನೀರು ಶ್ರೀ ಭೇಟಿ



ಕಾಸರಗೋಡು: ಕುಂಬಳೆ ಸಮೀಪದ ಅನಂತಪುರ ಕ್ಷೇತ್ರದ ರಕ್ಷಾ ಸಮಿತಿಯ ಅಧ್ಯಕ್ಷರಾದ ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು ಅವರ ನೇತೃತ್ವದಲ್ಲಿ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಯವರನ್ನು ಮತ್ತು ಉದುಮ ಶಾಸಕ ಕೆ.ನೀಲಕಂಠನ್ ಅವರನ್ನು ಎಡನೀರು ಮಠದಲ್ಲಿ ಸಂದರ್ಶಿಸಲಾಯಿತು.

ಅನಂತಪುರ ಕೈಗಾರಿಕಾ ಪ್ರದೇಶದಿಂದ (ಇಂಡಸ್ಟ್ರಿಯಲ್ ಪಾರ್ಕ್) ಹೊರಬರುತ್ತಿರುವ ತ್ಯಾಜ್ಯ ನೀರು ಮತ್ತು ದುರ್ವಾಸನೆಯ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ಸಮಿತಿಯ ಪದಾಧಿಕಾರಿಗಳಾದ ಎಸ್.ಪಿ.ಶಾಜಿ, ಬಿ.ವಿಕ್ರಂ ಪೈ ಕುಂಬಳೆ, ಸುನೀಲ್ ಅನಂತಪುರ, ಜಯಂತ ಪಾಟಾಳಿ ಪೆರ್ಣೆ, ಪುತ್ತಿಗೆ ಗ್ರಾ.ಪಂ. ಸದಸ್ಯ ಸತೀಶ್ ಪೆರ್ಣೆ, ರಾಜನ್ ಮುಳಿಯಾರು, ಸಂದೀಪ್ ಗಟ್ಟಿ ದೇವಿನಗರ, ಅವಿನಾಶ್ ಕಾರಂತ ನಾಯ್ಕಾಪು, ಗಣೇಶ್ ಮಾವಿನಕಟ್ಟೆ, ತಿರುಮಲೇಶ್ ಪೆರ್ಣೆ ಇದ್ದರು.

ಆರೋಗ್ಯ ಇಲಾಖೆಯಿಂದ ವೈದ್ಯರ ನೇಮಕಾತಿ

ಕಾಸರಗೋಡು: ಜಿಲ್ಲೆಯ ಆರೋಗ್ಯ ಇಲಾಖೆಯ ಅಧೀನದಲ್ಲಿರುವ ಸಂಸ್ಥೆಗಳಲ್ಲಿ ತಾತ್ಕಾಲಿಕ ಆಧಾರದ ಮೇಲೆ ವೈದ್ಯರ ನೇಮಕಾತಿಗಾಗಿ ಸಂದರ್ಶನವು ಪ್ರತಿ ತಿಂಗಳ ಎರಡನೇ ಮತ್ತು ನಾಲ್ಕನೇ ಸೋಮವಾರದಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯ ವರೆಗೆ ಕಾಞಂಗಾಡು ಚೆಮ್ಮಟ್ಟಂವಯಲ್‌ನಲ್ಲಿರುವ ಜಿಲ್ಲಾ ವೈದ್ಯಾಧಿಕಾರಿಗಳ ಕಚೇರಿಯಲ್ಲಿ ನಡೆಯಲಿದೆ. ಎಂಬಿಬಿಎಸ್, ಟಿಸಿಎಂಸಿ ನೋಂದಣಿ ವಿದ್ಯಾರ್ಹತೆಯಾಗಿದೆ. ಹೆಚ್ಚಿನ ವಿವರಗಳಿಗೆ 0467 2203118 ಕರೆ ಮಾಡಬಹುದು.

ಆಟೋರಿಕ್ಷಾ ಬಾಡಿಗೆ ದರ ಏರಿಸಲು, ಸಬ್ಸಿಡಿ ದರದಲ್ಲಿ ಪೆಟ್ರೋಲ್ ಉತ್ಪನ್ನ ನೀಡಲು ಆಗ್ರಹ

ವಿವಿಧ ಬೇಡಿಕೆ ಮುಂದಿರಿಸಿ ಬಿಎಂಎಸ್ ಪ್ರತಿಭಟನೆ

ಕಾಸರಗೋಡು: ವಿವಿಧ ಬೇಡಿಕೆಗಳನ್ನು ಮುಂದಿರಿಸಿ ಆಟೋರಿಕ್ಷಾ ಮಜ್ದೂರ್ ಸಂಘ (ಬಿಎಂಎಸ್)ದ ಕಾಸರಗೋಡು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಶುಕ್ರವಾರ ಕಾಸರಗೋಡು ತಾಲೂಕು ಕಚೇರಿಗೆ ಬೃಹತ್ ಪ್ರತಿಭಟನಾ ಮೆರವಣಿಗೆ ಮತ್ತು ಧರಣಿ ಸತ್ಯಾಗ್ರಹವನ್ನು ಆಯೋಜಿಸಲಾಗಿತ್ತು.



ಆಟೋರಿಕ್ಷಾಗಳ ಬಾಡಿಗೆ ದರವನ್ನು ಏರಿಸಬೇಕು, ಆಟೋರಿಕ್ಷಾಗಳಿಗೆ ಸಬ್ಸಿಡಿ ದರದಲ್ಲಿ ಪೆಟ್ರೋಲ್ ಉತ್ಪನ್ನಗಳನ್ನು ವಿತರಿಸಬೇಕು, ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಕೇರಳ ಸರಕಾರವು ವಿಧಿಸಿರುವ ಹೆಚ್ಚಿನ ತೆರಿಗೆಯನ್ನು ಕೂಡಲೇ ಇಳಿಕೆ ಮಾಡಬೇಕು ಮೊದಲಾದ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಯಿತು.

ಆಟೋರಿಕ್ಷಾ ಮಜ್ದೂರ್ ಸಂಘದ ಜಿಲ್ಲಾ ಕಾರ್ಯದರ್ಶಿ ಭರತನ್ ಕಲ್ಯಾಣ್ ರೋಡ್ ಪ್ರತಿಭಟನೆಯನ್ನು ಉದ್ಘಾಟಿಸಿದರು. ಯೂನಿಯನ್‌ನ ಜಿಲ್ಲಾಧ್ಯಕ್ಷ ಶಿವರಾಮನ್ ಧರಣಿ ಸತ್ಯಾಗ್ರಹದ ಅಧ್ಯಕ್ಷತೆ ವಹಿಸಿದ್ದರು. ಬಿಎಂಎಸ್ ಜಿಲ್ಲಾ ಜೊತೆ ಕಾರ್ಯದರ್ಶಿ ಭಾಸ್ಕರನ್ ಪೊಯಿನಾಚಿ, ಕಾಸರಗೋಡು ಪ್ರಾದೇಶಿಕ ಕಾರ್ಯದರ್ಶಿ ಬಾಬುಮೋನ್ ಚೆಂಗಳ, ಆಟೋರಿಕ್ಷಾ ಮಜ್ದೂರ್ ಸಂಘದ ಜಿಲ್ಲಾ ಉಪಾಧ್ಯಕ್ಷ ಎ.ಕೇಶವ, ಎಸ್.ಕೆ.ಉಮೇಶ್, ದಿವಾಕರ ರೈ ಕುಂಬಳೆ, ಕಮಲಾಕ್ಷ ಉಪ್ಪಳ, ಶ್ರೀಧರ ಹೊಸಂಗಡಿ, ಆಟೋರಿಕ್ಷಾ ಮಜ್ದೂರ್ ಸಂಘದ ಜಿಲ್ಲಾ ಕೋಶಾಧಿಕಾರಿ ವಿಶ್ವನಾಥ ಶೆಟ್ಟಿ ಮಾತನಾಡಿದರು. ಕೆ.ವಿ.ಬಾಬು ಸ್ವಾಗತಿಸಿ, ಕುಂಞಿಕಣ್ಣನ್ ಅರಯಲಿಂಗಲ್ ಧನ್ಯವಾದವಿತ್ತರು.

ಹೊಸಂಗಡಿ - ಆನೆಕಲ್ಲು ಮಧ್ಯೆ ರಸ್ತೆಗೆ ಬಾಗಿರುವ ಮರಗಳ ರೆಂಬೆ-ಕೊಂಬೆ

ಅಪಾಯಕಾರಿ ಮರ ತೆರವುಗೊಳಿಸಲು ಆಗ್ರಹ

ಮಂಜೇಶ್ವರ: ಹೊಸಂಗಡಿಯಿಂದ ಆನೆಕಲ್ಲಿಗೆ ತೆರಳುವ ರಸ್ತೆಯ ಇಕ್ಕೆಲಗಳಲ್ಲಿ ಭಾರೀ ಸಂಖ್ಯೆಯಲ್ಲಿ ಮರಗಳ ರೆಂಬೆ ಕೊಂಬೆಗಳು ರಸ್ತೆಗೇ ಬಾಗಿಕೊಂಡು ಆತಂಕಕ್ಕೆ ಕಾರಣವಾಗಿದೆ. ಪ್ರಬಲವಾದ ಮಳೆ ಗಾಳಿಗೆ ಈ ಮರಗಳು ಧರಾಶಾಹಿಯಾಗುವ ಭೀತಿ ವಾಹನ ಸವಾರರನ್ನು ಕಾಡುತ್ತಿದೆ.



ಮಳೆಗಾಲ ಬಂತೆಂದರೆ ಈ ರಸ್ತೆಯಲ್ಲಿ ಅಪಾಯಕಾರಿ ಮರಗಳಿಂದ ದಿನನಿತ್ಯ ಆತಂಕದ ವಾತಾವರಣ ಉಂಟಾಗುತ್ತಿದೆ. ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿರುವ ಈ ರಸ್ತೆಯು ಕರ್ನಾಟಕಕ್ಕೂ ಸಂಪರ್ಕ ಬೆಸೆದಿದೆ. ದಿನಂಪ್ರತಿ ನೂರಾರು ವಾಹನಗಳು ಹೊಸಂಗಡಿ – ಆನೆಕಲ್ಲು ರೂಟ್‌ನಲ್ಲಿ ಸಂಚರಿಸುತ್ತಿರುತ್ತವೆ.

ಪ್ರಸ್ತುತ ರಸ್ತೆಯ ಹೊಸಂಗಡಿ, ಮಜೀರ್‌ಪಳ್ಳ ಸಹಿತ ಆನೆಕಲ್ಲು ತನಕ ವಿವಿಧ ಕಡೆಗಳಲ್ಲಿ ಅಕೇಶಿಯ ಸೇರಿದಂತೆ ವಿವಿಧ ಮರಗಳು ಎತ್ತರದ ಸ್ಥಳದಲ್ಲಿದ್ದು ಮುರಿದು ಬೀಳುವ ಸ್ಥಿತಿಯಲ್ಲಿ ರಸ್ತೆಗೆ ಬಾಗಿನಿಂತಿದೆ. ಈ ಹಿನ್ನೆಲೆಯಲ್ಲಿ ಪ್ರಮುಖವಾಗಿ ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳ ಚಾಲಕರು ಅತೀ ಹೆಚ್ಚು ಭೀತಿಯಿಂದ ತೆರಳುವಂತಾಗಿದೆ.

ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ ಅಪಾಯದ ಭೀತಿ ಇರುವ ಮರ ಹಾಗೂ ರೆಂಬೆ ಕೊಂಬೆಗಳನ್ನು ತೆರವುಗೊಳಿಸದೆ ಇರುವುದು ಮುಂದಿನ ದಿನಗಳಲ್ಲಿ ಅನಾಹುತಕ್ಕೆ ಕಾರಣವಾಗಬಹುದೆಂದು ಸಾರ್ವಜನಿಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇನ್ನಾದರೂ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ರಸ್ತೆಗೆ ಬಾಗಿಕೊಂಡಿರುವ ಹಾಗೂ ಕುಸಿದು ಬೀಳಲು ಸಿದ್ಧವಾಗಿರುವ ಮರಗಳನ್ನು ಕೂಡಲೇ ತೆರವುಗೊಳಿಸಿ ಜನರ ಸುರಕ್ಷತೆಯನ್ನು ಕಾಪಾಡಬೇಕೆಂದು ಕೇರಳ ವ್ಯಾಪಾರಿ ವ್ಯವಸಾಯಿ ಏಕೋಪನಾ ಸಮಿತಿಯ ಮಂಜೇಶ್ವರ ಘಟಕ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳು ಆಗ್ರಹಿಸಿವೆ.

ಸುತ್ತ ಮುತ್ತ

ಬೆಳ್ಳೆ ಕಟ್ಟಿಂಗೇರಿ ಸಾರ್ವಜನಿಕ ಗಣೇಶೋತ್ಸವ ಸಮಿತಿ : ಅಧ್ಯಕ್ಷರಾಗಿ ಸುಜಾತ ಆಯ್ಕೆ

ಶಿರ್ವ: ಬೆಳ್ಳೆ ಕಟ್ಟಿಂಗೇರಿ ಸಾರ್ವಜನಿಕ ಗಣೇಶೋತ್ಸವ ಸಮಿತಿಯ ನೂತನ ಅಧ್ಯಕ್ಷರಾಗಿ ಸುಜಾತ ಎಸ್. ಸುವರ್ಣ ಆಯ್ಕೆಯಾಗಿದ್ದಾರೆ.



ಇವರು ಬೆಳ್ಳೆ ಗ್ರಾ.ಪಂ. ಹಾಗೂ ಉಡುಪಿ ತಾಲೂಕು ಪಂಚಾಯತ್ ಮಾಜಿ ಸದಸ್ಯೆಯಾಗಿದ್ದಾರೆ. ಬೆಳ್ಳೆ ಸಿ.ಎ ಬ್ಯಾಂಕ್ ನಿರ್ದೇಶಕಿಯಾಗಿ ಸೇವೆ ಸಲ್ಲಿಸಿದ್ದು ಪ್ರಸ್ತುತ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಟ್ಟಿಂಗೇರಿ ವಲಯದ ಅಧ್ಯಕ್ಷೆ ಹಾಗೂ ಜನಜಾಗೃತಿ ವೇದಿಕೆ ಶಿರ್ವ ವಲಯ ಅಧ್ಯಕ್ಷೆಯಾಗಿದ್ದಾರೆ. ಇತರ ಪದಾಧಿಕಾರಿಗಳುಳ: ಪ್ರಧಾನ ಕಾರ್ಯದರ್ಶಿ– ಸುಧಾಕರ ಪೂಜಾರಿ, ಜೊತೆ ಕಾರ್ಯದರ್ಶಿ–ಕರುಣಾಕರ ಶೆಟ್ಟಿ, ಕೋಶಾಧಿಕಾರಿ– ರಾಜೇಂದ್ರ ಶೆಟ್ಟಿ, ಜೊತೆ ಕೋಶಾಧಿಕಾರಿ – ಜಯಕರ, ಸಾಂಸ್ಕೃತಿಕ ಕಾರ್ಯದರ್ಶಿ– ದಿವ್ಯಾ ಭಂಡಾರಿ ಆಯ್ಕೆಗೊಂಡಿದ್ದಾರೆ.

ಕಾಪು ತಾ.ಕೃಷಿಕ ಸಮಾಜ ಚುನಾವಣೆ: ನಾಮಪತ್ರ ಸಲ್ಲಿಕೆಗೆ ಅವಕಾಶ

ಉಡುಪಿ: ಕರ್ನಾಟಕ ಪ್ರದೇಶ ಕೃಷಿಕ ಸಮಾಜದ 5 ವರ್ಷಗಳ ಅವಧಿಗೆ ಕಾಪು ತಾಲೂಕು ಮಟ್ಟದ ಕೃಷಿಕ ಸಮಾಜದ ಚುನಾವಣೆಯನ್ನು, ಜುಲೈ 11 ರಂದು ರೈತ ಸಂಪರ್ಕ ಕೇಂದ್ರ, ಕಾಪು ತಾಲೂಕು ಇಲ್ಲಿ ಬೆಳಗ್ಗೆ 8 ರಿಂದ ಅಪರಾಹ್ನ 3ಗಂಟೆಯ ವರೆಗೆ ನಿಗದಿಪಡಿಸಲಾಗಿದೆ. ಸದರಿ ಚುನಾವಣೆಗೆ ನಾಮಪತ್ರ ಸಲ್ಲಿಸುವ ಉಮೇದುದಾರರಿಗೆ ಜೂನ್ 30 ರಿಂದ ಕೃಷಿ ಅಧಿಕಾರಿಯವರ ಕಚೇರಿ, ರೈತ ಸಂಪರ್ಕ ಕೇಂದ್ರ, ಕಾಪು ಇಲ್ಲಿ ನಾಮಪತ್ರ ವಿತರಿಸಲಾಗುವುದು. ಆಕಾಂಕ್ಷಿಗಳು ಚುನಾವಣಾಧಿಕಾರಿಗಳಿಗೆ ಅರ್ಜಿ ಮೂಲಕ ರೂ. 250 ಗಳನ್ನು ಠೇವಣಿಯಾಗಿ ಪಾವತಿಸಿದ ಮೂಲ ರಶೀದಿ ಹಾಗೂ ಸಂಬಂಧಿಸಿದ ತಹಶೀಲ್ದಾರರಿಂದ ದೃಢೀಕೃತ ಪಹಣಿ ಪತ್ರಿಯೊಂದಿಗೆ ನಾಮಪತ್ರ ಸಲ್ಲಿಸಲು ಜು.4 ರ ಬೆಳಗ್ಗೆ 11 ರಿಂದ ಸಂಜೆ 5 ವರೆಗೆ ಅವಕಾಶವಿರುತ್ತದೆ ಎಂದು ಕಾಪು ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಮುಖ್ಯಮಂತ್ರಿ ಆರೋಗ್ಯ ವಿಮಾ ಕಾರ್ಡ್ ನವೀಕರಣಕ್ಕೆ ಸೂಚನೆ

ಉಡುಪಿ: ಉಡುಪಿ ನಗರಸಭಾ ವ್ಯಾಪ್ತಿಯಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಟುಂಬದ ಸದಸ್ಯರಿಗೆ ವಿತರಿಸಲಾದ ಮುಖ್ಯಮಂತ್ರಿ ಆರೋಗ್ಯ ವಿಮಾ ಕಾರ್ಡ್ ಅನ್ನು ಪ್ರತೀ ವರ್ಷದಂತೆ ಈ ವರ್ಷವೂ ನವೀಕರಿಸಲಾಗುತ್ತಿದೆ. ಕಾರ್ಡ್ ಹೊಂದಿರುವ ಕುಟುಂಬದ ಯಾವುದಾದರೂ ಸದಸ್ಯರು ತಮ್ಮ ಕುಟುಂಬದ ಎಲ್ಲಾ ಸದಸ್ಯರ ಬಗ್ಗೆ ಮುಚ್ಚಳಿಕೆ ಪತ್ರ ಹಾಗೂ ಹಳೆ ಆರೋಗ್ಯ ಕಾರ್ಡ್ ಪ್ರತಿಯೊಂದಿಗೆ ಜುಲೈ 1 ರ ಒಳಗಾಗಿ ಉಡುಪಿ ನಗರಸಭಾ ಕಚೇರಿಗೆ ಹಾಜರಾಗಿ ದಾಖಲೆ ಸಲ್ಲಿಸಬೇಕು. ದಾಖಲೆ ಸಲ್ಲಿಸಿದವರ ಕಾರ್ಡ್ ಮಾತ್ರ ನವೀಕರಿಸಲಾಗುವುದು ನಗರಸಭೆ ಪೌರಾಯುಕ್ತರ ಕಚೇರಿ ಪ್ರಕಟಣೆ ತಿಳಿಸಿದೆ.

ಮೊದಲನೇ ಪುಟದಿಂದ

ಕಡಲ್ಕೊರೆತ ಭೀತಿ!

ಮೀನುಗಾರರು ಹಾಗೂ ಸ್ಥಳೀಯ ನಿವಾಸಿಗಳು ಹಲವು ವರ್ಷಗಳಿಂದ ಶಾಶ್ವತ ರಕ್ಷಣಾ ಕಾಮಗಾರಿಗೆ ಒತ್ತಾಯಿಸುತ್ತಿದ್ದರೂ ಸಮಸ್ಯೆಗೆ ಸಂಪೂರ್ಣ ಪರಿಹಾರ ದೊರೆತಿಲ್ಲ. ಚಿತ್ರಾಪುರ , ಪಣಂಬೂರು ಭಾಗಗಳಲ್ಲಿ ಕಡಲ್ಕೊರೆತ ತಡೆಯಲು ಬೃಹತ್ ಕಲ್ಲುಗಳನ್ನು ಹಾಕಿ ಕರಾವಳಿ ಸಂರಕ್ಷಣಾ ಕಾಮಗಾರಿ ಕೈಗೊಳ್ಳಲಾಗಿದೆ. ಆದರೆ ಸಮುದ್ರದ ಅಲೆಗಳ ದಿಕ್ಕು ಮತ್ತು ಪ್ರವಾಹದಲ್ಲಿ ಉಂಟಾಗಿರುವ ಬದಲಾವಣೆಯಿಂದ ಮೀನಕಳಿಯ ಹಾಗೂ ಬೈಕಂಪಾಡಿ ಭಾಗಗಳಲ್ಲಿ ಕಡಲ್ಕೊರೆತ ಹೆಚ್ಚಾಗಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ಒಂದು ಭಾಗದಲ್ಲಿ ಕೈಗೊಂಡ ಕಾಮಗಾರಿಯ ಪರಿಣಾಮ ಮತ್ತೊಂದು ಭಾಗದಲ್ಲಿ ಗೋಚರಿಸುತ್ತಿರುವುದರಿಂದ ಸಂಪೂರ್ಣ ಕರಾವಳಿ ಒಳಗೊಂಡ ವೈಜ್ಞಾನಿಕ ಅಧ್ಯಯನ ಅಗತ್ಯವಾಗಿದೆ ಎಂಬ ಮಾತುಗಳು ಕೇಳಿಬರುತ್ತಿವೆ.

ಅಪಾಯಕಾರಿ ಕಟ್ಟಡ

ಶುಕ್ರವಾರ ಕಟ್ಟಡದ ಮಾಲಕರು, ಪೊಲೀಸರು, ಸ್ಥಳೀಯಾಡಳಿತ ನಗರಸಭೆಯ ಅಧಿಕಾರಿಗಳ ಸಮ್ಮುಖದಲ್ಲಿ ಕಟ್ಟಡವನ್ನು ನೆಲಸಮ ಮಾಡುವ ಕಾಮಗಾರಿ ಕೈಗೊಳ್ಳಲಾಗಿದೆ. ಸಂಚಾರ ಠಾಣೆಯ ಪೊಲೀಸರು ರಸ್ತೆಯ ಸುಗಮ ವಾಹನಗಳ ಸಂಚಾರಕ್ಕೆ ಸಹಕರಿಸಿದ್ದಾರೆ.

ಫ್ಲೆಕ್ಸ್ ತೆರವು

ಅಧಿಕಾರಿಗಳು ಹೊಣೆ

ಔಸಾರ್ವಜನಿಕರ ಸುರಕ್ಷತೆ ಮತ್ತು ಸಂಭವನೀಯ ಅಪಘಾತಗಳನ್ನು ತಡೆಗಟ್ಟುವ ಉದ್ದೇಶದಿಂದ, ದಕ್ಷಿಣ ಕನ್ನಡ ಜಿಲ್ಲೆ ವ್ಯಾಪ್ತಿಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಗ್ರಾಮ ಪಂಚಾಯತ್ ರಸ್ತೆಗಳಲ್ಲಿ ವಿಶೇಷವಾಗಿ ಡಿವೈಡರ್‌ಗಳಿಗೆ ಅಳವಡಿಸಿರುವ ಅಪಾಯಕಾರಿ, ಅನಧಿಕೃತ ಎಲ್ಲಾ ಫ್ಲೆಕ್ಸ್, ಬ್ಯಾನರ್ ಹಾಗೂ ಬಂಟಿಂಗ್‌ಗಳನ್ನು ಮೊದಲ ಆದ್ಯತೆ ಮೇರೆಗೆ ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕು ಹಾಗೂ ಕೈಗೊಂಡ ಕ್ರಮಗಳ ಕುರಿತು ಛಾಯಾಚಿತ್ರ ಸಹಿತ ವರದಿಯನ್ನು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರಕ್ಕೆ ಸಲ್ಲಿಸಬೇಕು. ಈ ಆದೇಶದ ಅನುಷ್ಠಾನದಲ್ಲಿ ಯಾವುದೇ ರೀತಿಯ ನಿರ್ಲಕ್ಷ್ಯ ಅಥವಾ ವಿಳಂಬ ಕಂಡುಬಂದಲ್ಲಿ ಅಥವಾ ಅಪಘಾತ, ಅವಘಡ ಸಂಭವಿಸಿದಲ್ಲಿ, ಸಂಬಂಧಪಟ್ಟ ಅಧಿಕಾರಿಗಳನ್ನೆ ನೇರ ಹೊಣೆಗಾರರನ್ನಾಗಿಸಿ, ವಿಪತ್ತು ನಿರ್ವಹಣಾ ಕಾಯ್ದೆಯಡಿ ಹಾಗೂ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆಟ ಎಂದು ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.

ಕುಂದಾಪುರ ಉಪ ವಿಭಾಗಾಧಿಕಾರಿಗಳ ಉಪಸ್ಥಿತಿಯಲ್ಲಿ ಬೈಂದೂರು ತಾ.ಅಧಿಕಾರಿಗಳ ಸಭೆಯಲ್ಲಿ ಗಂಟಿಹೊಳೆ

ಬಾಕಿ ಇರುವ ಕಡತಗಳ ತ್ವರಿತ ವಿಲೇವಾರಿ ಮಾಡಲು ಸೂಚನೆ

ಬೈಂದೂರು: ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿ ಕಂದಾಯ, ಸರ್ವೇ ಹಾಗೂ ಅರಣ್ಯ ಇಲಾಖೆ ಸಹಿತ ಇನ್ನಿತರ ಇಲಾಖೆಗಳ ಹಂತದಲ್ಲಿ ಹಲವು ಸಮಯಗಳಿಂದ ಬಾಕಿ ಇರುವ ಕಡತಗಳ ವಿಲೇವಾರಿ ಕುರಿತು ಕುಂದಾಪುರ ಉಪ ವಿಭಾಗಾಧಿಕಾರಿಗಳ ಉಪಸ್ಥಿತಿಯಲ್ಲಿ ಬೈಂದೂರು ತಾಲೂಕು ಕಚೇರಿ ಕೋರ್ಟ್ ಹಾಲ್‌ನಲ್ಲಿ ಶಾಸಕ ಗುರುರಾಜ್ ಗಂಟಿಹೊಳೆ ಜಿಲ್ಲಾ, ತಾಲೂಕು ಮಟ್ಟದ ಅಧಿಕಾರಿಗಳ ಸಭೆ ನಡೆಸಿ ಇಲಾಖೆಗಳ ವಿವಿಧ ವಿಭಾಗಗಳಲ್ಲಿ ಹಲವು ತಿಂಗಳಿಂದ ಬಾಕಿ ಇರುವ ಕಡತಗಳ ತ್ವರಿತ ವಿಲೇವಾರಿ ಮಾಡಲು ಸೂಚನೆ ನೀಡಿದರು.



ಅರ್ಜಿಗಳ ತಂತ್ರಾಂಶದಲ್ಲಿ ಅಳವಡಿಸಿ

ಬೈಂದೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 179 ಅರ್ಜಿಗಳು ಬಗರ್ ಹುಕುಂ ತಂತ್ರಾಂಶದಲ್ಲಿ ಸೇರಿಸಲು ಬಾಕಿ ಇದ್ದು ಇದರಿಂದ ಅರ್ಹ ಫಲಾನುಭವಿಗಳು ಯೋಜನೆಯ ಸೌಲಭ್ಯದಿಂದ ವಂಚಿತರಾಗುತ್ತಿರುವ ಕಾರಣ ಸದರಿ ಅರ್ಜಿಗಳ ತಂತ್ರಾಂಶದಲ್ಲಿ ಅಳವಡಿಸಲು ತಹಶೀಲ್ದಾರರಿಗೆ ಸೂಚನೆ ನೀಡಿದರು.

ಕೊಲ್ಲೂರು ಗ್ರಾಮದ 121 ಹಾಗೂ 156 ಸರ್ವೇ ನಂಬ್ರಗಳಲ್ಲಿ ಕಂದಾಯ ಹಾಗೂ ಅರಣ್ಯ ಭೂಮಿಯ ಗಡಿ ರೇಖೆಯ ಕುರಿತು ಗೊಂದಲ ಇರುವ ಕಾರಣ ಈ ಹಿಂದೆ ಜಂಟಿ ಸರ್ವೇ ನಡೆಸಲು ಸೂಚನೆ ನೀಡಲಾಗಿತ್ತು. ಆದರೆ ಅರಣ್ಯ ಕಾರ್ಯಪಡೆಯ ವರದಿ ಬರಲು ಬಾಕಿ ಇರುವುದರಿಂದ ಸದರಿ ವರದಿ ಬಂದ ತಕ್ಷಣ ಜಂಟಿ ಸರ್ವೇ ಕೈಗೊಂಡು ಆ ಭಾಗದಲ್ಲಿ ಆರೋಗ್ಯ ಇಲಾಖೆಗೆ ಜಾಗ ಮಂಜೂರು ಮಾಡಲು, 94ಸಿ ಹಾಗೂ ಅಕ್ರಮ ಸಕ್ರಮ ಅರ್ಜಿಗಳ ವಿಲೇವಾರಿಗೆ ಕ್ರಮಕ್ಕೆ ಸೂಚನೆ ನೀಡಿದರು.

ಅರ್ಜಿಗಳ ವಿಲೇವಾರಿ ಮಾಡಿ

ಬೈಂದೂರು ಹಾಗೂ ಕುಂದಾಪುರ ತಾಲೂಕು ಕಚೇರಿಯಲ್ಲಿ ಆರ್‌ಆರ್‌ಟಿ ತಿದ್ದುಪಡಿಗೆ ಸಂಬಂಧಿಸಿದಂತೆ 516 ಕಡತಗಳಿದ್ದು, ಒಂದು ವರ್ಷ ಮೇಲ್ಪಟ್ಟು ಸಾಕಷ್ಟು ಅರ್ಜಿಗಳೂ ಇರುವುದನ್ನು ಗಮನಿಸಿದ ಶಾಸಕರು, ತಾಲೂಕು ಕಚೇರಿ ಸಿಬ್ಬಂದಿಗಳನ್ನು ತರಾಟೆಗೆ ತೆಗೆದು ಕೊಂಡರು ಮತ್ತು ಕೂಡಲೇ ಸದ್ರಿ ಅರ್ಜಿಗಳ ವಿಲೇವಾರಿಗೆ ಸೂಚನೆ ನೀಡಿದರು.

ಜಂಟಿ ಸರ್ವೇಗೆ ಕ್ರಮ ವಹಿಸಲು ತಾಕೀತು

ಕ್ಷೇತ್ರ ವ್ಯಾಪ್ತಿಯಲ್ಲಿ ಆರೋಗ್ಯ ಕೇಂದ್ರ ಕಟ್ಟಡಗಳು, ಸ್ಮಶಾನ ಭೂಮಿ, ಅಂಗನವಾಡಿ ಕಟ್ಟಡಗಳು, ಗ್ರಾಮ ಪಂಚಾಯತ್ ಕಟ್ಟಡಗಳು, ಬಿಎಸ್‌ಎನ್‌ಎಲ್ ಟವರ್, ಸೇರಿದಂತೆ ಇನ್ನಿತರ ಸಾರ್ವಜನಿಕ ಉದ್ದೇಶಕ್ಕಾಗಿ ಜಾಗ ಕಾಯ್ದಿರಿಸಲು ಸುಮಾರು 30 ವಿವಿಧ ಪ್ರಸ್ತಾವನೆಗಳು ಇದ್ದು, ಈ ಎಲ್ಲಾ ಪ್ರಸ್ತಾವನೆ ಯಾವುದೇ ವಿಳಂಬ ಮಾಡದೇ ಜಿಲ್ಲಾಧಿಕಾರಿ ಹಂತಕ್ಕೆ ಕಳುಹಿಸಲು ಸೂಚನೆ ನೀಡಿದರು. ಕ್ಷೇತ್ರದ ಹಲವು ಕಡೆ ಡೀಮ್ಡ್ ಫಾರೆಸ್ಟ್ ಪ್ರದೇಶಗಳಲ್ಲಿ ಕಂದಾಯ ಹಾಗೂ ಅರಣ್ಯ ಇಲಾಖೆ ಜಂಟಿ ಸರ್ವೆ ನಡೆಸಿ ವರದಿ ನೀಡಲು ವಿಳಂಬ ಮಾಡುತ್ತಿರುವ ಕಾರಣ ಸಾವಿರಾರು 94ಸಿ ಹಾಗೂ ಅಕ್ರಮ ಸಕ್ರಮ ಅರ್ಜಿಗಳನ್ನು ಮಂಜೂರು ಮಾಡ ಲಾಗುತ್ತಿಲ್ಲ, ಗೋಳಿಹೊಳೆ ಹಾಗೂ ಹಳ್ಳಿಹೊಳೆ ಭಾಗಗಳಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಸಾರ್ವಜನಿಕರಿಂದ ಬಂದ ಜಂಟಿ ಸರ್ವೇ ಬೇಡಿಕೆಗೆ ಇಲಾಖೆ ಇನ್ನೂ ಕ್ರಮವಹಿಸಿಲ್ಲದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಶಾಸಕರು, ಕೂಡಲೇ ಜಂಟಿ ಸರ್ವೇಗೆ ಕ್ರಮ ವಹಿಸಲು ತಾಕೀತು ಮಾಡಿದರು

> **ಪ್ರಕ್ರಿಯೆ ಚುರುಕುಗೊಳಿಸಿ**
> ಜಡ್ಕಲ್, ಮುದೂರು ಗ್ರಾಮಗಳಲ್ಲಿ ಪ್ಲಾಟಿಂಗ್ ಸಮಸ್ಯೆಯಿಂದ ಭೂಪರಿವರ್ತನೆ, ವಿಭಾಗ ಪತ್ರಗಳು ಆಗದೇ ಜನಸಾಮಾನ್ಯರು ತೊಂದರೆ ಅನುಭವಿಸುತ್ತಿದ್ದು, ಪ್ಲಾಟಿಂಗ್ ಸಮಸ್ಯೆ ನಿವಾರಣೆ ಸಂಬಂಧ ಈಗಾಗಲೇ ಪ್ರಾರಂಭಿಸಿದ ಪ್ರಕ್ರಿಯೆ ಚುರುಕುಗೊಳಿಸಲು ಸರ್ವೇ ಇಲಾಖೆ ಅಧಿಕಾರಿಗಳಿಗೆ ಶಾಸಕರು ಸೂಚನೆ ನೀಡಿದರು.

ಕಳೆದೆರಡು ವರ್ಷಗಳಿಂದ ರಾಜ್ಯದಲ್ಲಿ 108 ಆ್ಯಂಬುಲೆನ್ಸ್ ಸೇವೆ ಸಮರ್ಪಕ ನಿರ್ವಹಣೆ ಇಲ್ಲದೇ ಸೊರಗುತ್ತಿದೆ. ಅದರಲ್ಲೂ ಉಡುಪಿ ಜಿಲ್ಲೆಯಲ್ಲಿ ಚಾಲಕರ ಕೊರತೆ ಮತ್ತು ಸಿಬ್ಬಂದಿಗಳ ರಾಜೀನಾಮೆ ಕಾರಣದಿಂದ ಜಿಲ್ಲೆಯಲ್ಲಿ ಸಿಬ್ಬಂದಿ ಕೊರತೆ ಇದೆ. ಬೈಂದೂರು ಕ್ಷೇತ್ರವು ಅತೀ ಹೆಚ್ಚಿನ ಗ್ರಾಮೀಣ ಪ್ರದೇಶ ಇರುವುದರಿಂದ ಹೆಚ್ಚು ಹೊಡೆತ ಬೀಳುತ್ತಿದೆ. ಈ ಕಾರಣದಿಂದಲೇ ಕಳೆದ ಬಾರಿ ಡಿಸೆಂಬರ್‌ನಲ್ಲಿ ನಡೆದ ಚಳಿಗಾಲದ ಬೆಳಗಾವಿ ಅಧಿವೇಶನ , ಅದರ ಹಿಂದಿನ ಅಧಿವೇಶನದಲ್ಲೂ ಅಸಮರ್ಪಕ ಆಂಬುಲೆನ್ಸ್ ಸೇವೆಗಳ ಬಗ್ಗೆ ಸದನದ ಗಮನ ಸೆಳೆದಿದ್ದೇನೆ ಎಂದರು.

ಕುಂದಾಪುರ ಉಪ ವಿಭಾಗಾಧಿಕಾರಿ, ಭೂದಾಖಲೆಗಳ ಜಿಲ್ಲಾ ಉಪನಿರ್ದೇಶಕರು, ಕುಂದಾಪುರ, ಬೈಂದೂರು ತಹಶೀಲ್ದಾರರು, ಭೂದಾಖಲೆಗಳ ಸಹಾಯಕ ನಿರ್ದೇಶಕರು, ವಲಯ ಅರಣ್ಯ ಅಧಿಕಾರಿಗಳು, ತಾ.ಆರೋಗ್ಯ ಅಧಿಕಾರಿ, ಬೈಂದೂರು, ವಂಡ್ಸೆಹೋಬಳಿ ಉಪ ತಹಶೀಲ್ದಾರರು, ಕಂದಾಯ ನಿರೀಕ್ಷಕರು, ಗ್ರಾಮ ಆಡಳಿತಾಧಿಕಾರಿಗಳು ಉಪಸ್ಥಿತರಿದ್ದರು.

ಶ್ರೀ ಅದಮಾರು ಮಠದ ಆಶ್ರಯದಲ್ಲಿ ವನಮಹೋತ್ಸವ ಕಾರ್ಯಕ್ರಮ

ಪ್ರತಿಯೊಬ್ಬರೂ ಒಂದು ಗಿಡ ನೆಟ್ಟು ಪೋಷಿಸಬೇಕು

ಪಡುಬಿದ್ರಿ : ಪೂರ್ಣಪ್ರಜ್ಞ ಶಿಕ್ಷಣ ಸಂಸ್ಥೆಗಳು ಪರಿಸರ ರಕ್ಷಣೆಯಲ್ಲಿ ಪೂರ್ಣವಾಗಿ ತೊಡಗಿಸಿಕೊಳ್ಳಬೇಕು. ಪ್ರತಿಯೊಬ್ಬರೂ ಗಿಡ ನೆಡಬೇಕು ಎಂದು ಶ್ರೀ ಅದಮಾರು ಮಠ ಶಿಕ್ಷಣ ಮಂಡಳಿ ಅಧ್ಯಕ್ಷರು, ಉಡುಪಿ ಶ್ರೀ ಅದಮಾರು ಮಠದ ಕಿರಿಯ ಶ್ರೀವರ್ಯರಾದ ಶ್ರೀ ಈಶಪ್ರಿಯ ತೀರ್ಥ ಶ್ರೀಪಾದರು ಹೇಳಿದ್ದಾರೆ.



ಶ್ರೀಗಳವರು ಶುಕ್ರವಾರ ಶ್ರೀ ಅದಮಾರು ಮಠದ ಆಶ್ರಯದಲ್ಲಿ ನಡೆದ ವನಮಹೋತ್ಸವ ಕಾರ್ಯಕ್ರಮವನ್ನು ನೆರವೇರಿಸಿ ಬಳಿಕ ಅದಮಾರು ಪೂರ್ಣಪ್ರಜ ಪದವಿ ಪೂರ್ವ ಕಾಲೇಜಿನ ವಾಸುದೇವ ಸಭಾಂಗಣದಲ್ಲಿ ನಡೆದ ಸಮಾರಂಭವನ್ನು ಉದ್ದೇಶಿಸಿ ಆಶೀರ್ವಚನ ನೀಡಿದರು.

ಮಾಜಿ ಸಚಿವ ವಿನಯ್ ಕುಮಾರ್ ಸೊರಕೆ ಮಾತನಾಡಿ, ಪ್ರತಿಯೊಬ್ಬ ವಿದ್ಯಾರ್ಥಿ ಕನಿಷ್ಠ ಒಂದು ಗಿಡ ನೆಟ್ಟು ಪೋಷಿಸಿ ನಮ್ಮ ಉಸಿರಾಟದ ಜೀವಾಮೃತವಾದ ಆಮ್ಲಜನಕದ ವಾರೀಸುದಾರರಾಗಿರಿ ಎಂದರು.

ಸಂಪನ್ಮೂಲ ವ್ಯಕ್ತಿಯಾಗಿದ್ದ ಧರ್ಮಸ್ಥಳದ ಕೃಷಿ ತಜ್ಞರಾದ ಶ್ಯಾಮ್ ಕೆ. ಭಟ್ ನಿಡ್ಲೆ ಅವರು ಕೃಷಿ ಮತ್ತು ಪರಿಸರದ ಬಗ್ಗೆ ಮಾಹಿತಿ ನೀಡಿ, ಎಐ ಮೂಲಕ ಆಹಾರ, ಪರಿಸರ ಬೆಳೆಸಲು ಅಸಾಧ್ಯವಾಗಿದೆ. ಬೇಸಾಯ–ಪರಿಸರ ಜೀವನ ಇದುವೇ ಪಾಠವಾಗಿದ್ದು, ಬಿಎಸ್‌ಸಿ ಎಗ್ರಿಕಲ್ಚರ್, ಹಾಟಿ ಕಲ್ಚರ್, ಫಾರೆಸ್ಟ್ರಿ ವಿಭಾಗದಲ್ಲಿ ಶಿಕ್ಷಣಕ್ಕೂ ಅವಕಾಶ ಇದ್ದು, ಕೃಷಿ ವಿಜ್ಞಾನಿಗಳಾಗಿರಿ ಎಂದರು.

> **ಪರಿಸರ ಸಂರಕ್ಷಣೆ ನಮ್ಮಿಂದ ಆಗಲಿ**
> ಒಂದು ವೃಕ್ಷ ನೆಟ್ಟು ಪೋಷಿಸಿದಲ್ಲಿ ಹತ್ತು ಮಕ್ಕಳನ್ನು ಪಡೆದ ಫಲ ನಮ್ಮದಾಗಲಿದೆ. ಅದೇ ರೀತಿಯಾಗಿ ಕೃಷಿಯ ಬಗ್ಗೆ ವಿಶೇಷ ಒಲವು ನಿಮ್ಮನ್ನು ರಕ್ಷಣೆ ಮಾಡುತ್ತದೆ. ಆ ನಿಟ್ಟಿನಲ್ಲಿ ಗಿಡ ನೆಟ್ಟು ಚಪ್ಪಾಳೆ ತಟ್ಟಿ ಹೋಗುವ ಕಾರ್ಯಕ್ರಮ ಇದಾಗದೇ ದೇಶಕ್ಕೆ ಹೆಮ್ಮೆಯ ಸಂಪತ್ತನ್ನು ನೀಡುವ ಚಿಂತನೆಯುಳ್ಳ ಪರಿಸರ ಸಂರಕ್ಷಣೆ ನಮ್ಮಿಂದ ಆಗಬೇಕಿದೆ.
> ● ಅದಮಾರು ಶ್ರೀ

ಕೃಷಿ ಸಾಧಕರಾದ ಸುಬ್ರಹ್ಮಣ್ಯ ಆಚಾರ್, ಸುರೇಶ್ ಶೆಟ್ಟಿ ಬರ್ಪಾಣಿ, ರಾಘು ಪೂಜಾರಿ ಅವರನ್ನು ಗೌರವ ಮಂತ್ರಾಕ್ಷತೆ ನೀಡಿ ಗೌರವಿಸಲಾಯಿತು.

ವೇದಿಕೆಯಲ್ಲಿ ಪಡುಬಿದ್ರಿ ವಲಯ ಅರಣ್ಯಾಧಿಕಾರಿ ಮಲ್ಲಿಕಾರ್ಜುನ, ವೆಂಕಟೇಶ್ ಮಯ್ಯ, ಕಾಲೇಜು ಪ್ರಾಂಶುಪಾಲರಾದ ಸಂಜೀವ ನಾಯ್ಕ್, ಕನ್ನಡ ಮಾಧ್ಯಮ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಕಾಂತ್ ರಾವ್, ಆಂಗ್ಲ ಮಾಧ್ಯಮ ಶಾಲೆಯ ಮುಖ್ಯೋಪಾಧ್ಯಾಯರಾದ ಕಾಂತಿ ಭಟ್ ಮೊದಲಾದವರು ಉಪಸ್ಥಿತರಿದ್ದರು.

ವಿದ್ಯಾರ್ಥಿನಿ ಭೂಮಿಕಾ ಪ್ರಾರ್ಥಿಸಿ, ಶ್ರೀ ಅದಮಾರು ಮಠದ ಆಡಳಿತಾಧಿಕಾರಿ ಗೋವಿಂದರಾಜು ಸ್ವಾಗತಿಸಿದರು. ಕಾಲೇಜು ಉಪನ್ಯಾಸಕರಾದ ಡಾ. ಜಯಶಂಕರ ಕಂಗಣ್ಣಾರು ವಂದಿಸಿದರು. ಶ್ರೀ ಅದಮಾರು ಮಠದ ವೇದ ಪಾಠದ ಗುರುಗಳಾದ ಜ್ಞಾನೇಶ್ವರ ಕಾರ್ಯಕ್ರಮ ನಿರೂಪಿಸಿದರು.

ಕೋಡಿಯಲ್ಲಿ 'ಹಸಿರು ಹೆಜ್ಜೆ' ಅಭಿಯಾನಕ್ಕೆ ಚಾಲನೆ

ಗ್ರಾಮ ಗ್ರಾಮಗಳಲ್ಲಿ ಹಸಿರು ಅಭಿಯಾನ ಮೇಳೈಸಲಿ

ಕೋಟ: ದೇಶದೆಲ್ಲೆಡೆ ತಾಪಮಾನ ಹೆಚ್ಚುತ್ತಿದೆ, ಕಾಡೆಲ್ಲ ನಾಡಾಗಿ ಪರಿವರ್ತನೆಗೊಂಡಿದೆ ಇದರಿಂದ ಸಾಕಷ್ಟು ಸಮಸ್ಯೆಗಳನ್ನು ಈಗಾಲೇ ಎದುರಿಸುತ್ತಿದ್ದೇವೆ ಈ ದಿಸೆಯಲ್ಲಿ ಪಂಚವರ್ಣ ಈ ಹಸಿರು ಹೆಜ್ಜೆ ಗ್ರಾಮೀಣ ಭಾಗಗಳಲ್ಲಿ ಮೇಳೈಸಿಕೊಂಡಿದೆ ಎಂದು ಕೋಡಿ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ರವೀಂದ್ರ ರಾವ್ ಅಭಿಪ್ರಾಯಪಟ್ಟರು.



ಶುಕ್ರವಾರ ಕೋಡಿ ಗ್ರಾ.ಪಂ.ನೇತೃತ್ವದಲ್ಲಿ ಕೋಟದ ಪಂಚವರ್ಣ ಸಂಘಟನೆ, ಗೀತಾನಂದ ಫೌಂಡೇಶನ್ ಮಣೂರು ಮಾರ್ಗದರ್ಶನದಲ್ಲಿ ಶಿಶು ಅಭಿವೃದ್ಧಿ ಯೋಜನೆ ಬ್ರಹ್ಮಾವರ, ಸಂಜೀವಿನಿ ಒಕ್ಕೂಟ ಕೋಡಿ ಪಂಚಾಯತ್, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತರ ಸಹಯೋಗದೊಂದಿಗೆ 3ನೇ ವರ್ಷದ ಹಸಿರುಹೆಜ್ಜೆಅಭಿಯಾನಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಹಸಿರು ಹೆಜ್ಜೆ ಕಾರ್ಯಕ್ರಮದ ಸಂಯೋಜಕ ಪಂಚವರ್ಣದ ರವೀಂದ್ರ ಕೋಟ ಕಾರ್ಯಕ್ರಮದ ರೂಪುರೇಷೆಗಳನ್ನು ಸಭೆಗೆ ತಿಳಿಸಿದರು.

ಮಕ್ಕಳಿಂದ ಗಿಡ ನಾಟಿ

ಕೋಡಿ ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಂದ ಗಿಡವನ್ನು ನೆಡಲಾಯಿತು. ಇದೇ ವೇಳೆ ಪಿಡಿಒ ರವೀಂದ್ರ ರಾವ್ ಪ್ರತಿಜ್ಞಾವಿಧಿಯನ್ನು ಮಕ್ಕಳಿಗೆ ನೆರೆದಿದ್ದವರಿಗೆ ಭೋದಿಸಿದರು.

ಕಾರ್ಯಕ್ರಮದಲ್ಲಿ ಪಂಚವರ್ಣ ಯುವಕ ಮಂಡಲದ ಸ್ಥಾಪಕಾಧ್ಯಕ್ಷ ಶೇವಧಿ ಸುರೇಶ್ ಗಾಣಿಗ, ಪಂಚವರ್ಣ ಮಹಿಳಾ ಮಂಡಲದ ಅಧ್ಯಕ್ಷೆ ಲಲಿತಾ ಪೂಜಾರಿ, ಸದಸ್ಯ ಕೇಶವ ಆಚಾರ್, ಕೋಡಿ ಪಂಚಾಯತ್ ಮಾಜಿ ಅಧ್ಯಕ್ಷರುಗಳಾದ ಪ್ರಭಾಕರ್ ಮೆಂಡನ್, ಗೀತಾ ಖಾರ್ವಿ, ಮಾಜಿ ಸದಸ್ಯರಾದ ಅಂತೋನಿ ಡಿಸೋಜ, ಕೃಷ್ಣ ಪೂಜಾರಿ ಪಿ.ಸತೀಶ್ ಕುಂದರ್, ಸಂಜೀವಿನಿ ಒಕ್ಕೂಟದ ಅಧ್ಯಕ್ಷೆ ಪೂರ್ಣಿಮಾ,ಎಂಬಿಕೆ ಅನಿತಾ, ಅಂಗನವಾಡಿ ಕಾರ್ಯಕರ್ತೆಯರಾದ ಯಮುನಾ ಎಲ್. ಕುಂದರ್, ಕೋಡಿಕನ್ಯಾನ ಪ್ರೀತಿ ಎಸ್, ಕೋಡಿ ಲೀಲಾವತಿ, ಕೋಡಿತಲೆ ನಿರೋಷ, ಕೋಡಿ ಶಾಲಾ ಮುಖ್ಯ ಶಿಕ್ಷಕಿ ಸಂಪಾ ಟೀಚರ್ ಮೊದಲಾದವರಿದ್ದರು.

> **ಅಭಿಯಾನದಿಂದ ಪರಿಸರ ಸಮತೋಲನ**
> ವಾತಾವರಣದ ವ್ಯತ್ಯಾಸ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ ಇದರ ಪರಿಣಾಮ ದಿಂದ ಬಿಸಿ ಗಾಳಿ, ಮಳೆ ಪ್ರಮಾಣ ಕಡಿತಗೊಂಡಿದೆ ಹೀಗಿರುವಾಗ ಪ್ರತಿ ಗ್ರಾಮ ವ್ಯಾಪ್ತಿಯಲ್ಲಿ ಹಸಿರು ಅಭಿಯಾನ ಕೈಗೊಂಡರೆ ಪರಿಸರ ಮತ್ತೆ ಸಮತೋಲನ ಕಾಣಲಿದೆ ಇದರಿಂದ ಮುಂದಿನ ಜನಾಂಗಕ್ಕೆ ಅನುಕೂಲಕರ ವಾತಾವರಣ ನಿರ್ಮಾಣವಾಗಲಿದೆ.
> ● ರವೀಂದ್ರ ರಾವ್

ವಿದ್ಯಾರ್ಥಿಗಳು ವೃತ್ತಿಯ ಜೊತೆ ಪ್ರವೃತ್ತಿಯನ್ನು ಮೈಗೂಡಿಸಿಕೊಳ್ಳಬೇಕು: ಕೃಷ್ಣಮೂರ್ತಿ ಡಿ.ಬಿ.



ಕುಂದಾಪುರ: ವಿದ್ಯಾರ್ಥಿಗಳು ವೃತ್ತಿಯ ಜೊತೆಗೆ ಪ್ರವೃತ್ತಿಯನ್ನು ಮೈಗೂಡಿಸಿಕೊಳ್ಳಬೇಕು. ಆಮುಖೇನ ಸಮಾಜ ಸೇವೆಗೆ ಮುಂದಾಗಬೇಕು. ಸೇವೆಗೆ ಅಗತ್ಯವಿರುವುದು ಒಳ್ಳೆಯ ಮನಸ್ಸೇ ಹೊರತು ಹಣವಲ್ಲ, ಹಣವಿಲ್ಲದೆ ಸಹಾಯ ಮಾಡುವುದೇ ಜೀವನದ ಮೌಲ್ಯ ಎಂದು ಕುಂದಾಪುರದ ಆರ್. ಎನ್. ಶೆಟ್ಟಿ ಪದವಿ ಪೂರ್ವ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಕೃಷ್ಣಮೂರ್ತಿ ಡಿ.ಬಿ. ಹೇಳಿದ್ದಾರೆ.

ಕುಂದಾಪುರದ ಡಾ.ಬಿ.ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿ ಕ್ಷೇಮಪಾಲನಾ ಸಮಿತಿ ಆಯೋಜಿಸಿದ ಜೀವನ ಮೌಲ್ಯ ಉಪನ್ಯಾಸ ಮಾಲಿಕೆ 10ರಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಮಾನವೀಯತೆ, ಸಮಯಪ್ರಜ್ಞೆ, ಪ್ರಾಮಾಣಿಕತೆ ಮುಂತಾದ ಗುಣಮೌಲ್ಯಗಳನ್ನು ಬೆಳೆಸಿಕೊಳ್ಳಿ ಎಂದು ಅವರು ಕರೆ ನೀಡಿದರು.

- ಕುಂದಾಪುರದ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಾರ್ಯಕ್ರಮ ಆಯೋಜನೆ
- ಜೀವನ ಮೌಲ್ಯ ಉಪನ್ಯಾಸ ಮಾಲಿಕೆ 10
- ವಿದ್ಯಾರ್ಥಿಗಳು ಸಮಾಜ ಸೇವೆಗೆ ಮುಂದಾಗಲು ಕರೆ

ಕಾಲೇಜಿನ ಪ್ರಾಂಶುಪಾಲ ಪ್ರೊ. ಡಾ. ಕೆ. ಉಮೇಶ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಉಪ ಪ್ರಾಂಶುಪಾಲ ಡಾ. ಚೇತನ ಶೆಟಿ ಕೋವಾಡಿ, ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ ರೇಷ್ಮಾ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಾದ ತ್ರಿಷಾ ಸ್ವಾಗತಿಸಿದರು. ಮಾನ್ಯ ಪ್ರಾರ್ಥಿಸಿ, ಸಾಕ್ಷಿ ಅತಿಥಿಗಳನ್ನು ಪರಿಚಯಿಸಿದರು. ನಿಶಾ ವಂದಿಸಿ, ರಮಿತಾ ಕಾರ್ಯಕ್ರಮ ನಿರೂಪಿಸಿದರು.

ತೆಂಗಿನಕಾಯಿ ಬಿದ್ದು ಮೃತಪಟ್ಟ ದಕ್ಷ್ ಮನೆಗೆ ಶಾಸಕ ಯಶ್‌ಪಾಲ್ ಭೇಟಿ, ಸಾಂತ್ವನ



ಉಡುಪಿ: ಬ್ರಹ್ಮಾವರ ತಾಲೂಕಿನ ಚಾಂತಾರು ಗ್ರಾಮದ ಹೆರಂಜೆಯಲ್ಲಿ ತೆಂಗಿನ ಕಾಯಿ ಬಿದ್ದು 1.5 ವರ್ಷದ ಮಗು ದಕ್ಷ್ ಮೃತಪಟ್ಟ ಹಿನ್ನೆಲೆಯಲ್ಲಿ ಅವರ ಮನೆಗೆ ಶಾಸಕ ಯಶ್‌ಪಾಲ್ ಸುವರ್ಣ ಕಂದಾಯ ಇಲಾಖೆ ಅಧಿಕಾರಿಗಳು, ಸ್ಥಳೀಯ ಮುಖಂಡರೊಂದಿಗೆ ಭೇಟಿ ನೀಡಿ ಸಾಂತ್ವನ ಹೇಳಿದರು.

ಘಟನೆ ಬಗ್ಗೆ ಮಾಹಿತಿ ಪಡೆದ ಶಾಸಕರು, ಘಟನೆ ಬಗ್ಗೆ ತಕ್ಷಣ ಸರ್ಕಾರಕ್ಕೆ ವರದಿ ಮಾಡುವಂತೆ ಕಂದಾಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿ, ಸರಕಾರದ ಮೂಲಕ ಗರಿಷ್ಠ ಪರಿಹಾರಕ್ಕೆ ಪ್ರಯತ್ನಿಸುವುದಾಗಿ ಹೇಳಿದ್ದಾರೆ.

ಘಟನೆ ನಡೆದ ಸ್ಥಳಕ್ಕೆ ಸೂಕ್ತ ರಸ್ತೆ ಸಂಪರ್ಕ ಬಗ್ಗೆ ಸ್ಥಳೀಯರ ಮನವಿಗೆ ಸ್ಪಂದಿಸಿದ ಶಾಸಕರು ರಸ್ತೆ ಸಂಪರ್ಕ ಜಾಗದ ಮಾಲೀಕರು ರಸ್ತೆಗೆ ಅವಕಾಶ ಕಲ್ಪಿಸಿದಲ್ಲಿ ರಸ್ತೆ ಕಾಮಗಾರಿಗೆ ಆದ್ಯತೆ ಮೇರೆಗೆ ಅನುದಾನ ಒದಗಿಸುವ ಭರವಸೆ ನೀಡಿದರು. ಮೃತ ಮಗುವಿನ ತಂದೆ ಪ್ರಶಾಂತ್ ಪೂಜಾರಿ, ತಾಯಿ ಸುಚಿತ್ರ – ಕುಟುಂಬಸ್ಥರಿಗೆ ಸಂತೈಸಿ, ವೈಯುಕ್ತಿಕ ನೆಲೆಯಲ್ಲಿ ಪರಿಹಾರ ಧನ ನೀಡಿದರು.

ಈ ಸಂದರ್ಭ ಬ್ರಹ್ಮಾವರ ಬಿಲ್ಲವ ಸಮಾಜ ಸೇವಾ ಸಂಘದ ಅಧ್ಯಕ್ಷರಾದ ಬಿ.ಎನ್. ಶಂಕರ್ ಪೂಜಾರಿ, ಪಕ್ಷದ ಪ್ರಮುಖರಾದ ಮಹೇಶ್ ಕೋಟ್ಯಾನ್, ಪ್ರಥ್ವಿರಾಜ್ ಶೆಟ್ಟಿ ಬಿಲ್ಲಾಡಿ , ಸುಶಾಂತ್ ಪೂಜಾರಿ, ರಾಜು ಪೂಜಾರಿ ಉಪ್ಪೂರು, ನಿತ್ಯಾನಂದ ಪೂಜಾರಿ ಚಾಂತಾರು, ಗೌತಮ್ ಅಗ್ರಹಾರ, ಮಹೇಂದ್ರ ನೀಲವರ, ಮಿಥುನ್ ಅಮೀನ್, ಗಿರಿಧರ್ ಚಾಂತಾರು, ಸಂತೋಷ್ ಜತ್ತನ್, ಉದಯ್ ಕಾಮತ್, ದಿನೇಶ್ ಚಾಂತರು, ಪ್ರೇಮಾ ಶೆಟ್ಟಿ, ಅಶೋಕ್ ಹೇರೂರು, ಹೇಮಾ ಅಶೋಕ್, ರಮ್ಯಾ ಉಪ್ಪುರು, ಅಶೋಕ್ ಅಮೀನ್, ಶೋಭಾ ಪೂಜಾರಿ ಹಂದಾಡಿ, ಬೇಬಿ ಚಾಂತಾರು, ರೇವತಿ, ಶೈಲಜಾ ಹೇರೂರು, ಕಂದಾಯ ಇಲಾಖೆ ಅಧಿಕಾರಿ ರಾಜು, ಪಂ. ಅಭಿವೃದ್ಧಿ ಅಧಿಕಾರಿ ಮೀರಾ, ಗ್ರಾಮ ಆಡಳಿತ ಅಧಿಕಾರಿ ಮತ್ತಿತರರಿದ್ದರು.



ಉಡುಪಿ ನಗರಸಭೆಯ ಕೊಡವೂರು ವಾರ್ಡ್‌ನ ಪಾಳೇಕಟ್ಟೆ ಬಾಚನಬೈಲಿನಲ್ಲಿ ಸ್ಥಳೀಯ ಮಾಜಿ ನಗರಸಭಾ ಸದಸ್ಯ ವಿಜಯ ಕೊಡವೂರ್ ನೇತೃತ್ವ ಮತ್ತು ಮುತುವರ್ಜಿಯಲ್ಲಿ ಸಾರ್ವಜನಿಕರು ಶ್ರಮದಾನದ ಮೂಲಕ ತಮ್ಮ 30ನೇ ರಸ್ತೆ ನಿರ್ಮಿಸಿದ್ದಾರೆ.ಅನುದಾನದ ಕೊರತೆ , ಆಡಳಿತಾತ್ಮಕ ಪ್ರಕ್ರಿಯೆಗಳಿಗೆ ಕಾಯುತ್ತಾ ಕೂರದೆ, ಜನಪ್ರತಿನಿಧಿಗಳು, ಸಾರ್ವಜನಿಕರು ಒಟ್ಟಾಗಿ ಕೈಜೋಡಿ ಸಿದರೆ ಎಂತಹ ಮಹತ್ತರ ಬದಲಾವಣೆ ತರಬಹುದೆಂಬುದಕ್ಕೆ ಈ ಜಂಟಿ ಪ್ರಯತ್ನ ಅತ್ಯುತ್ತಮಸಾಕ್ಷಿ.

ಜೂ.16: ಅಖಂಡ ಭಜನಾ ಮಹೋತ್ಸವ ಸಮಾಪನ

ಕುಂದಾಪುರ: ಗಂಗೊಳ್ಳಿಯ ಮಲ್ಯರಮಠ ಶ್ರೀ ವೆಂಕಟರಮಣ ದೇವಳದಲ್ಲಿ ಪುರುಷೋತ್ತಮ ಮಾಸದ ಅಂಗವಾಗಿ ಹಮ್ಮಿಕೊಂಡಿರುವ ಮಾಸಾವಧಿ ಅಖಂಡ ಭಜನಾ ಮಹೋತ್ಸವ ಯಶಸ್ವಿ 26 ದಿನಗಳ ಪೂರೈಸಿದ್ದು, ಜೂ.16ರಂದು ದೀಪ ವಿಸರ್ಜನೆಯೊಂದಿಗೆ ಸಮಾಪನಗೊಳ್ಳಲಿದೆ. ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶ ಶ್ರೀಮದ್ ವಿದ್ಯಾಧೀಶ ತೀರ್ಥ ಶ್ರೀಪಾದವಡೇರಸ್ವಾಮೀಜಿ ಮೇ 17ರಂದು ಚಾಲನೆ ನೀಡಿದ್ದರು. ಮಹೋತ್ಸವದಲ್ಲಿ ರಾಜ್ಯ– ಹೊರರಾಜ್ಯಗಳಿಂದ ವಿವಿಧ ಭಜನಾ ಮಂಡಳಿಗಳು, ಕಲಾವಿದರು ಆಗಮಿಸಿ ಭಜನಾ ಸೇವೆ ಸಮರ್ಪಿಸಿದ್ದಾರೆ. ಜೂ.15ರಂದು ಸಂಜೆ 5 ಗಂಟೆಗೆ ನಗರ ಭಜನೆ, ರಾತ್ರಿ ವಿಶೇಷ ಪೂಜೆ, ಪ್ರಸಾದ ವಿತರಣೆ ಮೊದಲಾದ ಕಾರ್ಯಕ್ರಮ ನಡೆಯಲಿದೆ.



ಕೆಮುಂಡೇಲು ತಿರುವಿನಲ್ಲಿ ನಿರ್ಮಿಸಲಾದ ಸ್ವಾಗತ ಗೋಪುರ ಉದ್ಘಾಟನೆ | ಅದಮಾರು ಶ್ರೀ ಆಶೀರ್ವಚನ

ಭಕ್ತರಿಂದ ನಿರ್ಮಾಣವಾದ ಗೋಪುರ ಅಧ್ಯಾತ್ಮದ ಅಪೂರ್ವ ಸಂದೇಶ ಬಿತ್ತರಿಸುತ್ತದೆ

ಪಡುಬಿದ್ರಿ: ಮನಃಕಾರಕನಾದ ರುದ್ರದೇವರ ಸನ್ನಿಧಿಗೆ ತೆರಳುವ ಪಥದಲ್ಲಿ ಪಾಂಡುರಂಗನ ಭಕ್ತರಿಂದ ನಿರ್ಮಾಣವಾದ ಸ್ವಾಗತ ಗೋಪುರವು ಒಂದು ಅಧ್ಯಾತ್ಮದ ಅಪೂರ್ವ ಸಂದೇಶ ಬಿತ್ತರಿಸುತ್ತದೆ ಎಂದು ಅದಮಾರು ಮಠದ ಕಿರಿಯ ಯತಿಗಳಾದ ಶ್ರೀ ಈಶಪ್ರಿಯ ತೀರ್ಥರು ಹೇಳಿದ್ದಾರೆ.



ಶ್ರೀ ಪಾಂಡುರಂಗ ಭಜನಾ ಮಂಡಳಿ ಕೆಮುಂಡೇಲು ಇದರ ಸ್ಥಾಪನೆಯ 63ನೇ ವರ್ಷದ ಸಂಭ್ರಮಾಚರಣೆ 'ಷಷ್ಟ್ಯಬ್ದ'ದ ಸವಿನೆನಪಿಗಾಗಿ ಎಲ್ಲೂರು ಶ್ರೀ ವಿಶ್ವೇಶ್ವರ ದೇವಳಕ್ಕೆ ಕೆಮುಂಡೇಲು ತಿರುವಿನಲ್ಲಿ ನಿರ್ಮಿಸಲಾದ ಸ್ವಾಗತ ಗೋಪುರವನ್ನು ಅದಮಾರು ಮಠದ ಕಿರಿಯ ಯತಿಗಳಾದ ಶ್ರೀ ಈಶಪ್ರಿಯ ತೀರ್ಥರು ಹಾಗೂ ಚಿತ್ರಾಪುರ ಮಠಾಧೀಶರಾದ ಶ್ರೀ ವಿದ್ಯೇಂದ್ರತೀರ್ಥರು ಭಜನಾ ಮಂಡಳಿಯ ಪದಾಧಿಕಾರಗಳು, ಗ್ರಾಮಸ್ಥರು ಹಾಗೂ ಗಣ್ಯರ ಸಮಕ್ಷಮದಲ್ಲಿ ಉದ್ಘಾಟಿಸಿದರು.

ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಶಾಸಕ ಸುರೇಶ ಶೆಟ್ಟಿ ಗುರ್ಮೆ ಮಾತನಾಡಿದರು. ಅಧ್ಯಕ್ಷತೆಯನ್ನು ಎಲ್ಲೂರು ದೇವಳದ ಪವಿತ್ರಪಾಣಿ ಕೆ.ಎಲ್.ಕುಂಡಂತಾಯ ವಹಿಸಿದ್ದರು. ನಿವೃತ್ತ ಪ್ರಾಂಶುಪಾಲರಾದ ಸುದರ್ಶನ್ ವೈ.ಎಸ್., ಮುದರಂಗಡಿ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಡೇವಿಡ್ ಡಿಸೋಜಾ, ಕುಂಜೂರು ದೇವಳದ ಅರ್ಚಕ ಚಕ್ರಪಾಣಿ ಉಡುವ, ಎಲ್ಲೂರು ಶ್ರೀವಿಶ್ವೇಶ್ವರ ದೇವಸ್ಥಾನ ಮೊಕ್ತೇಸರ ಅರುಣಾಕರ ಶೆಟ್ಟಿ ಪ್ರಮುಖರಾದ ಗುರುಗುಂಡಿ ಕೇಶವ ಆಚಾರ್ಯ, ಕರುಣಾಕರ ಪೂಜಾರಿ, ವಿಧಿತ್ ಕರ್ನಿರೆ, ವಿರೇಂದ್ರ ಹೆಗ್ಗಡೆ ದಳಂತ್ರೆ, ಸಂತೋಷ್ ಶೆಟ್ಟಿ ಬರ್ಪಾಣಿ, ಶ್ರೀಪತಿ ಆಚಾರ್ಯ, ಉಷಾ ದಯಾನಂದ್, ದಯಾನಂದ ಶೆಟ್ಟಿಗಾರ್, ವೈ. ಯಶವಂತ ಶೆಟ್ಟಿ ವಿಮಲ ದೇವಾಡಿಗ, ಶ್ರೀ ಪಾಂಡುರಂಗ ಭಜನಾ ಮಂಡಳಿ ಅಧ್ಯಕ್ಷ ಚಂದ್ರಶೇಖರ್ ಶೆಟ್ಟಿಗಾರ್, ನಾಗೇಶ ಪಾಂಡ್ಯಾರ್ ಮುಂತಾದ ಗಣ್ಯರು ಉಪಸ್ಥಿತರಿದ್ದರು.

> **ಸಾರ್ಥಕ ಕೆಲಸ**
> ಎಲ್ಲೂರಿನ ಮಹತೋಭಾರ ಶ್ರೀ ವಿಶ್ವೇಶ್ವರ ದೇವರ ಸನ್ನಿಧಿ ತಲುಪಲು ಹಲವು ದಾರಿ ಗಳಿದ್ದರೂ ಈಗ ನಿರ್ಮಾಣವಾದ ಸ್ವಾಗತ ಗೋಪುರವು ಮೊದಲನೇಯದ್ದಾಗಿದ, ಪಾಂಡುರಂಗ ಭಜನಾ ಮಂಡಳಿ ಸಾರ್ಥಕ ಕೆಲಸ ಮಾಡಿದೆ.
> ● ಸುರೇಶ್ ಶೆಟ್ಟಿ ಗುರ್ಮೆ, ಶಾಸಕರು

ಪುತ್ತಿಗೆ ಮಠದ ದಿವಾನರಾಗಿದ್ದ ನಾಗರಾಜ ಆಚಾರ್ಯ ಅವರು ಗೋಪುರ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಭಜನಾ ಮಂಡಳಿಯ ಕಾರ್ಯದರ್ಶಿ ಕೃಷ್ಣಾನಂದ ರಾವ್ ಸ್ವಾಗತಿಸಿದರು. ಹರೀಶ್ ಕೋಟ್ಯಾನ್ ಉಳ್ಳೂರು ಕಾರ್ಯಕ್ರಮ ನಿರ್ವಹಿಸಿದರು. ರಾಘವೇಂದ್ರ ರಾವ್ ವಂದಿಸಿದರು. ಗೋಪುರ ಉದ್ಘಾಟನೆಯ ಬಳಿಕ ಮಠಾಧೀಶರು ನಿರ್ಮಾಣ ಕಾರ್ಯ ನಿರ್ವಹಿಸಿದವರನ್ನು ಗೌರವಿಸಿದರು.